ಪ್ರಜಾವಾ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂಡ್ಯ ಜಿಲ್ಲೆಯ ಮೇಲುಕೋಟೆ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ ಬುಧವಾರ ನಡೆಯಿತು

ಸರಳವಾಗಿ ನಡೆದ ವೈರಮುಡಿ ಉತ್ಸವ

ಪ್ರಜಾವಾಣಿ ವಾರ್ತೆ

ಮೇಲುಕೋಟೆ: ಐತಿಹಾಸಿಕ ಮೇಲುಕೋಟೆ ಕ್ಷೇತ್ರದಲ್ಲಿ ಬುಧವಾರ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ ಕೋವಿಡ್‌–19ರ ಕಾರಣಕ್ಕೆ ಸರಳವಾಗಿ ನೆರವೇರಿತು.

ವೈರಮುಡಿ ಮೆರವಣಿಗೆ ಸಾಗುವ ರಾಜಬೀದಿ ದೀಪಾಲಂಕಾರ, ಹೂವಿನ ಅಲಂಕಾರದಿಂದ ಕಂಗೊಳಿಸುತ್ತಿದ್ದರೂ ಭಕ್ತರ ಕೊರತೆ ಕಾಣುತ್ತಿತ್ತು. ಹೊರಜಿಲ್ಲೆ, ಹೊರರಾಜ್ಯಗಳ ಭಕ್ತರ ಪ್ರವೇಶ ನಿಷೇಧಿಸಲಾಗಿತ್ತು.

ಗಂಡುಭೇರುಂಡ ಸ್ವರೂಪಿ ಚಂದ್ರಪ್ರಭೆ ಪ್ರಭಾವಳಿ ಮಧ್ಯದಲ್ಲಿ ಅಲಂಕಾರಸ್ವರೂಪಿಯಾಗಿದ್ದ ಚೆಲುವನಾರಾಯಣಸ್ವಾಮಿ ದೇವಾಲಯದಿಂದ ಹೊರಕ್ಕೆ ಬರುತ್ತಿದ್ದಂತೆ ಜಯಘೋಷ ಮೊಳಗಿತು. ರಾಮಾನುಜಾಚಾರ್ಯರ ಸನ್ನಿಧಿಯಲ್ಲಿ ಪ್ರಥಮ ಪೂಜೆ ಸಲ್ಲಿಸಿದ ನಂತರ ವೈರಮುಡಿ ಉತ್ಸವಕ್ಕೆ ಚಾಲನೆ ನಿಡಲಾಯಿತು. ಗರುಡದೇವನ ಮೆರವಣಿಗೆಯ ನಂತರ ವೈರಮುಡಿ ಬ್ರಹ್ಮೋತ್ಸವ ಆರಂಭವಾಯಿತು.

ಕಟ್ಟಡ ನಿರ್ಮಾಣದ ವಿಷಯ ಬಂದರೆ,
ಪೈಪ್ ಒಂದೇ ಫಿನೋಲೆಕ್ಸ್

ಕೊಳಾಯಿ ಮತ್ತು ನೈರ್ಮಲ್ಯ ವ್ಯವಸ್ಥೆಗಳ ಪೈಪ್ ಮತ್ತು ಫಿಟ್ಟಿಂಗ್ಸ

CPVC | ASTM | HEAVY PLUMBING | SWR | SEWERAGE
40 ವರ್ಷಗಳು ಫಿನೋಲೆಕ್ಸ್ ಪೈಪ್ಸ್
ಪರಿಣಿತರಿಂದ ಮಾಡಲ್ಪಟ್ಟಿದೆ
ಕಚ್ಚಾ ವಸ್ತುಗಳಿಂದ ಪೈಪ್ ಮಾಡುವ ಕೊನೆಯ ಹಂತದವರೆಗೆ ಸ್ವಂತ ಕಾರ್ಖಾನೆಗಳಲ್ಲೇ ಸಂಪೂರ್ಣ ಗುಣಮಟ್ಟ ಖಾತ್ರಿಗೊಳಿಸುವ ಭಾರತದ ಏಕಮಾತ್ರ ಪೈಪ್ ಕಂಪನಿ
ಉತ್ಕೃಷ್ಟತೆಯಿಂದ ಮಾಡಲ್ಪಟ್ಟಿದೆ
ಸುರಕ್ಷಿತ ಹಾಗು ಪರಿಸರ ಸಂರಕ್ಷಣೆ ಕಾಳಜಿ ಹೊಂದಿರುವ, ಜಾಗತಿಕವಾಗಿ ಪ್ರಮಾಣೀಕೃತ ತಯಾರಿಕಾ ವಿಧಾನಗಳು
ಸುಧೀರ್ಘ ಬಾಳಿಕೆಗಾಗಿ ಮಾಡಲಾಗಿದೆ
ನಮ್ಮ ಎಲ್ಲ ಗ್ರಾಹಕರು,ಪಾಲುದಾರರು ಹಾಗೂ ವಿತರಕರ ಜೊತೆ ನಿರಂತರ ಮತ್ತು ಶಾಶ್ವತ ಸಂಬಂಧಗಳನ್ನು ಬೆಳೆಸುವುದು
ಪ್ರಾಮಾಣಿಕವಾಗಿ ಮಾಡಲ್ಪಟ್ಟಿದೆ
CSR
ಪ್ರಶಸ್ತಿ ವಿಜೇತ ಸಾಮಾಜಿಕ ಕಳಕಳಿ ಹೊಂದಿರುವ ಉಪಕ್ರಮಗಳು ಮತ್ತು ಕಾರ್ಯಕ್ರಮಗಳಿಂದ ಸುಸ್ಥಿರ ಭವಿಷ್ಯವನ್ನು ನಿರ್ಮಿಸುವುದು
ಹೆಚ್ಚಿನ ಮಾಹಿತಿಗಾಗಿ ನಮ್ಮ ಉಚಿತ ಸಹಾಯವಾಣಿ ನಂಬರಿಗೆ ಕರೆ ಮಾಡಿ.
1800 200 3466
www.finolexpipes.com
DEALERS : BENGALURU: A.B.E AGENCIES - +91 9972302573, C.P.RAJAPPA SON & CO - +91 9844006650, KAVERI PIPES- +91 9845427036, PIPE SYNDICATE - +91 7899802970, SHRI BALAJI DISTRIBUTORS - +91 9900744775. CHICKBALLAPURA: GOKUL AGENCIES- +91 9880281069. KOLAR: SRI CHOWDESHWARI ENTERPRISES - +91 9964185207. RAMANAGAR: SAPTHAGIRI ENTERPRISES-+919844546047. TUMKUR: GURU ENTERPRISES+919448093767

ವರ್ಷದ ಬಳಿಕ ಪೆಟ್ರೋಲ್, ಡೀಸೆಲ್ ದರ ಕೊಂಚ ಇಳಿಕೆ

ನವದೆಹಲಿ (ಪಿಟಿಐ): ಒಂದು ವರ್ಷದ ಬಳಿಕ ದೇಶದಾದ್ಯಂತ ಪೆಟ್ರೋಲ್, ಡೀಸೆಲ್ ದರದಲ್ಲಿ ಇಳಿಕೆ ಆಗಿದೆ. ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಬುಧವಾರ ಪೆಟ್ರೋಲ್ ದರವನ್ನು 18 ಪೈಸೆ, ಡೀಸೆಲ್ ದರವನ್ನು 17 ಪೈಸೆಯಷ್ಟು ಇಳಿಕೆ ಮಾಡಿವೆ. ಈ ಹಿಂದೆ 2020ರ ಮಾರ್ಚ್ 16ರಂದು ಇಂಧನ ದರದಲ್ಲಿ ಇಳಿಕೆ ಆಗಿತ್ತು.

ದೆಹಲಿಯಲ್ಲಿ ಲೀಟರ್ ಪೆಟ್ರೋಲ್ ದರ ₹ 90.99ಕ್ಕೆ ಮತ್ತು ಡೀಸೆಲ್ ದರ ₹ 81.30ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಲೀಟರ್ ಪೆಟ್ರೋಲ್ ದರ ₹ 94.04ಕ್ಕೆ, ಡೀಸೆಲ್ ದರ ₹ 86.21ಕ್ಕೆ ತಲುಪಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹ 97.40ಕ್ಕೆ, ಡೀಸೆಲ್ ದರ ₹ 88.42ಕ್ಕೆ ತಗ್ಗಿದೆ.

ರಾಜಸ್ಥಾನ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ಕೆಲವು ಭಾಗಗಳಲ್ಲಿ ಪೆಟ್ರೋಲ್ ದರವು ಕಳೆದ ತಿಂಗಳು ಲೀಟರಿಗೆ ₹ 100ರ ಗಡಿ ದಾಟಿತ್ತು. ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಚುನಾವಣೆ ಘೋಷಣೆಯಾದ ಬಳಿಕ ಫೆಬ್ರುವರಿ ತಿಂಗಳ ಅಂತ್ಯದಿಂದ ಮಾರ್ಚ್ 23ರವರೆಗೂ ಇಂಧನ ದರದಲ್ಲಿ ಯಾವುದೇ ವ್ಯತ್ಯಾಸ ಆಗಿರಲಿಲ್ಲ.

ಮಂಡ್ಯ ಹಲ್ಲೆಗೆರೆಯ ಡಾ.ವಿವೇಕ್ ಮೂರ್ತಿ ಸರ್ಜನ್ ಜನರಲ್

ವಾಷಿಂಗ್ಟನ್ (ಪಿಟಿಐ): ಭಾರತ–ಅಮೆರಿಕನ್ ತಜ್ಞ ವೈದ್ಯ ವಿವೇಕ್ ಮೂರ್ತಿ ಅವರನ್ನು ಅಧ್ಯಕ್ಷ ಜೋ ಬೈಡನ್ ಅವರ ಸರ್ಜನ್ ಜನರಲ್ ಹುದ್ದೆಗೆ ನೇಮಕ ಮಾಡಿರುವುದಕ್ಕೆ ಸೆನೆಟ್ ಅನುಮೋದನೆ ನೀಡಿದೆ.

45 ವರ್ಷದ ಡಾ. ಮೂರ್ತಿ ಅವರು ಅಮೆರಿಕದ ಸರ್ಜನ್ ಜನರಲ್ ಹುದ್ದೆಯನ್ನು ಅಲಂಕರಿಸುತ್ತಿರುವುದು ಇದು ಎರಡನೇ ಬಾರಿಯಾಗಿದೆ. 2013ರಲ್ಲಿ ಅಮೆರಿಕ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಅವರು ವಿವೇಕ್ ಮೂರ್ತಿ ಅವರನ್ನು ಸರ್ಜನ್ ಜನರಲ್ ಹುದ್ದೆಗೆ ನೇಮಿಸಿಕೊಂಡಿದ್ದರು. ಆಗ ಮೂರ್ತಿ ಅವರಿಗೆ ಕೇವಲ 37 ವರ್ಷಗಳಾಗಿದ್ದವು. ಈ ಹುದ್ದೆಯನ್ನು ಅಲಂಕರಿಸಿದ್ದ ಅತ್ಯಂತ ಕಿರಿಯ ವಯಸ್ಸಿನ ವೈದ್ಯ ಎನ್ನುವ ಹಿರಿಮೆಗೂ ಪಾತ್ರರಾಗಿದ್ದರು. ಆದರೆ, ಟ್ರಂಪ್ ಆಡಳಿತದಲ್ಲಿ ಈ ಹುದ್ದೆಯನ್ನು ತೊರೆದಿದ್ದರು.

ಮೂರ್ತಿ ಅವರ ನಾಮನಿರ್ದೇಶನವನ್ನು ಸೆನೆಟ್ 57– 43 ಮತಗಳ ಮೂಲಕ ಅನುಮೋದಿಸಿತು.

ಮಂಡ್ಯ ಜಿಲ್ಲೆಯ ಹಲ್ಲೆಗೆರೆ ಮೂಲದ ಡಾ.ವಿವೇಕ್ ಮೂರ್ತಿ, ‘ಡಾಕ್ಟರ್ಸ್ ಫಾರ್ ಅಮೆರಿಕ’ ಎನ್ನುವ ಸಂಸ್ಥೆಯನ್ನು ಅಮೆರಿಕದಲ್ಲಿ ಆರಂಭಿಸಿದ್ದಾರೆ. ಈ ಸಂಸ್ಥೆಯಲ್ಲಿ 18 ಸಾವಿರ ತಜ್ಞ ವೈದ್ಯರು ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ಸದಸ್ಯರಾಗಿದ್ದಾರೆ. ಕೈಗೆಟಕುವ ದರದಲ್ಲಿ ಆರೋಗ್ಯ ಸೇವೆ ಒದಗಿಸುವುದು ಈ ಸಂಸ್ಥೆಯ ಉದ್ದೇಶವಾಗಿದೆ.

ಪ್ರಚೋದನಕಾರಿ ಹೇಳಿಕೆ: ರಾಕೇಶ್ ಟಿಕಾಯತ್ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ/ಹಾವೇರಿ: ರೈತರ ಮಹಾ ಪಂಚಾಯತ್‌ನಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇಲೆ ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ ವಿರುದ್ಧ ಶಿವಮೊಗ್ಗ ಮತ್ತು ಹಾವೇರಿಯಲ್ಲಿ ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಕೇಂದ್ರ ಸರ್ಕಾರ ಜಾರಿಗೆ ತಂದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರಾಜ್ಯದ ರೈತರು ಬೆಂಗಳೂರಿಗೆ ದಿಗ್ಬಂಧನ ಹಾಕಬೇಕು. ಟ್ರ್ಯಾಕ್ಟರ್‌ಗಳನ್ನೇ ಅಸ್ತ್ರವಾಗಿ ಬಳಸಬೇಕು’ ಎಂದು ಟಿಕಾಯತ್ ಅವರು ನೀಡಿದ್ದ ಹೇಳಿಕೆ ಆಧರಿಸಿ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಶಿವಮೊಗ್ಗದ ಬಿ.ಎಚ್.ರಸ್ತೆಯ ಸೈನ್ಸ್ ಮೈದಾನದಲ್ಲಿ ಮಾರ್ಚ್ 20ರಂದು

ರಾಕೇಶ್ ಟಿಕಾಯತ್

ಹಾಗೂ ಹಾವೇರಿಯ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಮಾರ್ಚ್ 21ರಂದು ‘ರೈತ ಮಹಾ ಪಂಚಾಯತ್’ ನಡೆದಿತ್ತು.

‘ಇದು ಪ್ರಜಾಪ್ರಭುತ್ವ ಮತ್ತು ಸಂವಿಧಾನ ವಿರೋಧಿ ಕ್ರಮ. ಇಂತಹ ಹೇಳಿಕೆಗಳು ಚಳವಳಿಯ ಒಂದು ಭಾಗ. ಅವರ ಭಾಷಣದಲ್ಲಿ ಸಂವಿಧಾನಕ್ಕೆ ವಿರುದ್ಧವಾದ ಯಾವ ಅಂಶಗಳೂ ಇಲ್ಲ. ಬಿಜೆಪಿ ಭಿನ್ನಧ್ವನಿ ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಈ ಪ್ರಕರಣ ಉದಾಹರಣೆ’ ಎಂದು ಶಿವಮೊಗ್ಗದ ಮಹಾ ಪಂಚಾಯತ್ ಸಂಘಟಕರಾದ ಕೆ.ಎಲ್.ಅಶೋಕ್, ಕೆ.ಪಿ.ಶ್ರೀಪಾಲ್, ಎಂ.ಶ್ರೀಕಾಂತ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಚಳವಳಿ ಮಾಡುವವರಿಗೆ ಪ್ರಕರಣಗಳು ಹೊಸದೇನಲ್ಲ. ಟಿಕಾಯತ್ ಉದ್ವಿಗ್ನಕಾರಿ ಭಾಷಣ ಮಾಡಿಲ್ಲ. ರೈತರ ಹೋರಾಟವನ್ನು ಹತ್ತಿಕ್ಕಲು ಸರ್ಕಾರ ಹುನ್ನಾರ ನಡೆಸಿದೆ. ಪೊಲೀಸರ ವರ್ತನೆಯನ್ನು ಜಿಲ್ಲಾ ರೈತ ಸಂಘದಿಂದ ಖಂಡಿಸುತ್ತೇವೆ’ ಎಂದು ರೈತ ಸಂಘದ ಹಾವೇರಿ ಜಿಲ್ಲಾ ಘಟಕದ ಅಧ್ಯಕ್ಷ ರಾಮಣ್ಣ ಕೆಂಚಳ್ಳೇರ ಪ್ರತಿಕ್ರಿಯಿಸಿದ್ದಾರೆ.

‘ಸರ್ಕಾರ ಈ ರೀತಿಯ ತಂತ್ರಗಳಿಂದ ರೈತರ ಹೋರಾಟವನ್ನು ಮಣಿಸಲು ಸಾಧ್ಯವಿಲ್ಲ. ಇದೇ 26ರಂದು ರಾಜ್ಯದಾದ್ಯಂತ ಬೃಹತ್ ಪ್ರತಿಭಟನೆ ನಡೆಸುತ್ತೇವೆ’ ಎಂದು ಹಾವೇರಿ ಜಿಲ್ಲೆಯ ರೈತ ಮುಖಂಡರಾದ ಮಲ್ಲಿಕಾರ್ಜುನ ಬಳ್ಳಾರಿ, ಮಾಲತೇಶ ಪೂಜಾರ ತಿಳಿಸಿದ್ದಾರೆ.

ಪ್ರಕರಣ ಹಿಂಪಡೆಯಲು ಒತ್ತಾಯ

ಬೆಂಗಳೂರು: ರಾಕೇಶ್ ಟಿಕಾಯತ್ ಅವರ ವಿರುದ್ಧ ರಾಜ್ಯದ ವಿವಿಧೆಡೆ ದಾಖಲಿಸಿರುವ ಪ್ರಕರಣಗಳನ್ನು ತಕ್ಷಣ ಹಿಂಪಡೆಯುವಂತೆ ರೈತ ಸಂಘಟನೆಗಳ ಮುಖಂಡರು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದ್ದಾರೆ. ಗೃಹ ಸಚಿವರಿಗೆ ಬುಧವಾರ ಬಹಿರಂಗ ಪತ್ರ ಬರೆದಿರುವ ರೈತ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ಕೆ.ಟಿ. ಗಂಗಾಧರ್, ಎಚ್.ಆರ್. ಬಸವರಾಜಪ್ಪ, ವೀರಸಂಗಯ್ಯ, ಚಾಮರಸ ಮಾಲಿಪಾಟೀಲ, ಕುರುಬೂರು ಶಾಂತಕುಮಾರ್, ಬಡಗಲಪುರ ನಾಗೇಂದ್ರ ಮತ್ತು ಕೋಡಿಹಳ್ಳಿ ಚಂದ್ರಶೇಖರ್ ಅವರು ಈ ಕುರಿತು ಆಗ್ರಹಿಸಿದ್ದಾರೆ.

ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಭ್ರಷ್ಟಾಚಾರ ಆರೋಪ

ಸರ್ಕಾರದಿಂದ ವರದಿ ಕೇಳಿ: ರಾಜ್ಯಪಾಲರಿಗೆ ಮನವಿ

ಪ್ರಜಾವಾಣಿ ವಾರ್ತೆ

ಮುಂಬೈ: ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದಿಂದ ವರದಿ ಕೇಳುವಂತೆ ಕೋರಿ ಬಿಜೆಪಿ ನಿಯೋಗ ರಾಜ್ಯಪಾಲ ಭಗತ್‌ಸಿಂಗ್ ಕೋಶಿಯಾರಿ ಅವರಿಗೆ ಬುಧವಾರ ಮನವಿ ಸಲ್ಲಿಸಿತು.

ಇದರೊಂದಿಗೆ ಗೃಹ ಸಚಿವ ದೇಶಮುಖ್ ವಿರುದ್ಧದ ಆರೋಪ ಕೇಳಿ ಬಂದ ನಂತರ ಮಹಾರಾಷ್ಟ್ರ ರಾಜ್ಯ ರಾಜಕಾರಣದಲ್ಲಿ ನಡೆದಿರುವ ಜಟಾಪಟಿ ಮತ್ತೊಂದು ಮಜಲು ತಲುಪಿತು.

‘ಸಚಿವ ದೇಶಮುಖ್ ವಿರುದ್ಧದ ಆರೋಪದ ಬಗ್ಗೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಈಗಲೂ ಮೌನ ಮುರಿಯುತ್ತಿಲ್ಲ. ಪೊಲೀಸ್ ಅಧಿಕಾರಿಗಳ ವರ್ಗಾವಣೆ ಕುರಿತ ಆರೋಪಗಳ ಬಗ್ಗೆಯೂ ಅವರು ತುಟಿ ಬಿಚ್ಚುತ್ತಿಲ್ಲ. ಹೀಗಾಗಿ ಈ ಎಲ್ಲ ವಿಷಯಗಳ ಕುರಿತು ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಸೂಚಿಸುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದೇವೆ’ ಎಂದು ನಿಯೋಗದ ನೇತೃತ್ವ ವಹಿಸಿದ್ದ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿರುವ ಬಿಜೆಪಿ ಮುಖಂಡ ದೇವೇಂದ್ರ ಫಡಣವೀಸ್ ಹೇಳಿದರು.

ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿಯಿಂದಲೂ ಒಂದು ಹೇಳಿಕೆ ಇಲ್ಲ. ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರು ದೇಶಮುಖ್ ಅವರನ್ನು ಸಮರ್ಥಿಸಿಕೊಳ್ಳುತ್ತಾರೆ’ ಎಂದರು.

‘ಯಾರನ್ನು ರಕ್ಷಿಸುವ ಪ್ರಯತ್ನ ನಡೆದಿದೆ ಎಂಬ ಬಗ್ಗೆ ಮೈತ್ರಿಪಕ್ಷಗಳ ಮುಖಂಡರು ರಾಜ್ಯದ ಜನತೆಗೆ ತಿಳಿಸಬೇಕು. ಈ ಕಾರ್ಯದಲ್ಲಿ ತನಗಾಗುತ್ತಿರುವ ಲಾಭ ಏನು ಎಂಬುದನ್ನು ಕಾಂಗ್ರೆಸ್ ಬಹಿರಂಗಪಡಿಸಬೇಕು’ ಎಂದೂ ವಾಗ್ದಾಳಿ ನಡೆಸಿದರು.

‘ಈ ಎಲ್ಲ ವಿಷಯಗಳು ಸೇರಿದಂತೆ ಒಟ್ಟು 100 ಅಂಶಗಳನ್ನು ಒಳಗೊಂಡ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿದ್ದೇವೆ’ ಎಂದರು. ‘ಈ ಭ್ರಷ್ಟಾಚಾರದಲ್ಲಿ ಮೈತ್ರಿಪಕ್ಷಗಳಾದ ಶಿವಸೇನಾ, ಎನ್‌ಸಿಪಿ ಹಾಗೂ ಕಾಂಗ್ರೆಸ್ ಪಕ್ಷಗಳು ಕೈಜೋಡಿಸಿವೆ. ಇದು ಮಹಾ ವಸೂಲಿ ಸರ್ಕಾರ್’ ಎಂದು ಟೀಕಿಸಿದರು.

‘ಕೋವಿಡ್ ನಿರ್ವಹಣೆ ವಿಷಯದಲ್ಲಿಯೂ ಮಹಾವಿಕಾಸ್ ಆಘಾಡಿ (ಎಂವಿಎ) ಸರ್ಕಾರ ವಿಫಲವಾಗಿದೆ. ಈಗ ಮತ್ತೆ ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳಲ್ಲಿ ಏಕೆ ಹೆಚ್ಚಳ ಕಾಣುತ್ತಿದ್ದೇವೆ’ ಎಂದು ಫಡಣವೀಸ್ ಪ್ರಶ್ನಿಸಿದರು.

ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ನೇತೃತ್ವದ ಬಿಜೆಪಿ ಮುಖಂಡರ ನಿಯೋಗ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರಿಗೆ ಮುಂಬೈನಲ್ಲಿ ಬುಧವಾರ ಮನವಿ ಪತ್ರ ಸಲ್ಲಿಸಿತು —ಪಿಟಿಐ ಚಿತ್ರ

ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧದ ಭ್ರಷ್ಟಾಚಾರ ಆರೋಪ ಕುರಿತಂತೆ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಿದರೆ ಸತ್ಯಾಂಶ ಹೊರ ಬರಲಿದೆ

ನಾನಾ ಪಾಟೋಲೆ, ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ

ಸರ್ಕಾರ ಅಸ್ಥಿರಗೊಳಿಸುವ ಯತ್ನ: ಎಂವಿಎ ಟೀಕೆ

‘ಬಿಜೆಪಿಯು ಕೇಂದ್ರದ ಗುಪ್ತಚರ ಸಂಸ್ಥೆಗಳನ್ನು ಬಳಸಿಕೊಂಡು ಐಎಎಸ್, ಐಪಿಎಸ್ ಅಧಿಕಾರಿಗಳ ಮೇಲೆ ಒತ್ತಡ ಹೇರುವ ಪಿತೂರಿ ನಡೆಸುತ್ತಿದೆ’ ಎಂದು ಮಹಾವಿಕಾಸ್ ಆಘಾಡಿ ತಿರುಗೇಟು ನೀಡಿದೆ.

‘ಎಲ್ಲ ರೀತಿಯ ಕುತಂತ್ರಗಳನ್ನು ಬಳಸಿ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಯತ್ನಿಸುತ್ತಿದೆ’ ಎಂದು ಶಿವಸೇನಾ ಮುಖ್ಯ ವಕ್ತಾರ ಹಾಗೂ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಟೀಕಿಸಿದರು.

ಸಂಪುಟ ಸಹೋದ್ಯೋಗಿ ವಿರುದ್ಧದ ಆರೋಪಗಳ ಬಗ್ಗೆ ಮುಖ್ಯಮಂತ್ರಿ ಮಾತನಾಡುತ್ತಿಲ್ಲ ಎಂಬ ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿದ ಅವರು, ‘ಯಾವುದೇ ವಿಷಯ ಕುರಿತು ಪ್ರತಿಕ್ರಿಯೆ ನೀಡಬೇಕೋ, ಮೌನವಾಗಿರಬೇಕು ಎಂಬುದು ಮುಖ್ಯಮಂತ್ರಿಯ ವಿಶೇಷಾಧಿಕಾರ’ ಎಂದರು.

‘ತಮ್ಮ ವಿರುದ್ಧ ಎಷ್ಟೆಲ್ಲಾ ಟೀಕೆಗಳು ಕೇಳಿ ಬಂದರೂ ಈ ಹಿಂದಿನ ಪ್ರಧಾನಿ ಮನಮೋಹನ್ ಸಿಂಗ್ ಒಂದು ಶಬ್ದವನ್ನೂ ಆಡಲಿಲ್ಲ. ಆದರೆ, ಈಗ ನಾವು ವಾಚಾಳಿ ಪ್ರಧಾನಿಯನ್ನು ಹೊಂದಿದ್ದೇವೆ. ಈಗಿನ ಪ್ರಧಾನಿ ದೇಶವನ್ನು ಎಂಥ ಅಧೋಗತಿಗೆ ಇಳಿಸಿದ್ದಾರೆ ಎಂಬುದನ್ನು ಎಲ್ಲರೂ ನೋಡುತ್ತಿದ್ದಾರೆ’ ಎಂದೂ ವಾಗ್ದಾಳಿ ನಡೆಸಿದರು.

ಪೊಲೀಸ್ ಇಲಾಖೆಯಲ್ಲಿ ಭಾರಿ ವರ್ಗಾವಣೆ

ಮುಂಬೈ: ವಿವಿಧ ವಿಷಯಗಳಿಗಾಗಿ ಮಹಾರಾಷ್ಟ್ರದಲ್ಲಿ ರಾಜಕೀಯ ವಾಗ್ಯುದ್ಧ ಮುಂದುವರಿದಿರುವ ನಡುವೆಯೇ, ಮುಂಬೈ ಪೊಲೀಸ್ ಇಲಾಖೆಯಲ್ಲಿ ಭಾರಿ ಪ್ರಮಾಣದ ವರ್ಗಾವಣೆ ನಡೆದಿದೆ.

ಸಿಐಡಿ (ಕ್ರೈಂ ಬ್ರ್ಯಾಂಚ್)ಯ 65 ಹಿರಿಯ ಅಧಿಕಾರಿಗಳು ಸೇರಿದಂತೆ 86 ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಇದು ಇತ್ತೀಚಿನ ದಿನಗಳಲ್ಲಿ ಪೊಲೀಸ್ ಆಡಳಿತ ವ್ಯವಸ್ಥೆಯಲ್ಲಿ ಭಾರಿ ಬದಲಾವಣೆ ಎನ್ನಲಾಗುತ್ತಿದೆ.

ಮುಂಬೈ ಪೊಲೀಸರನ್ನು ‘ಸ್ಕಾಟ್‌ಲ್ಯಾಂಡ್ ಯಾರ್ಡ್’ ಪೊಲೀಸರಿಗೆ ಹೋಲಿಸಲಾಗುತ್ತದೆ. ಆದರೆ, ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕಗಳಿದ್ದ ವಾಹನ ಪ್ರಕರಣದಲ್ಲಿ ಎಪಿಐ ಸಚಿನ್ ವಾಜೆ ಅವರ ಹೆಸರು ಕೇಳಿ ಬಂದ ನಂತರ ಮುಂಬೈ ಪೊಲೀಸ್ ವರ್ಚಸ್ಸಿಗೆ ಕಳಂಕ ಅಂಟಿಕೊಂಡಿತು.

ಉದ್ಯಮಿ ಮನಸುಖ್ ಹಿರೇನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ವಾಜೆ ಅವರನ್ನು ತಮ್ಮ ವಶಕ್ಕೆ ನೀಡುವಂತೆ ಮಹಾರಾಷ್ಟ್ರದ ಎಟಿಎಸ್ ಕೋರಿದೆ. ಸ್ಫೋಟಕ ವಸ್ತುಗಳ ಪತ್ತೆ ಪ್ರಕರಣಕ್ಕೆ ಸಂಬಂಧಿಸಿ ವಾಜೆ ಅವರನ್ನು ಈಗಾಗಲೇ ಎನ್‌ಐಎ ಬಂಧಿಸಿದೆ.

ಮಹಾರಾಷ್ಟ್ರ ಗೃಹ ಸಚಿವರ ವಿರುದ್ಧ ತನಿಖೆ: ಅರ್ಜಿ ವಾಪಸ್

ನವದೆಹಲಿ (ಪಿಟಿಐ): ಭ್ರಷ್ಟಾಚಾರದಲ್ಲಿ ತೊಡಗಿರುವ ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧ ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ಹಿರಿಯ ಐಪಿಎಸ್ ಅಧಿಕಾರಿ ಪರಮ್ ಬೀರ್ ಸಿಂಗ್ ವಾಪಸ್ ಪಡೆದಿದ್ದಾರೆ.

ಪ್ರತಿ ತಿಂಗಳು ₹100 ಕೋಟಿ ರೂಪಾಯಿ ಸಂಗ್ರಹಿಸಿ ಕೊಡಬೇಕು ಎಂದು ಅನಿಲ್ ದೇಶಮುಖ್ ಅವರು ಪೊಲೀಸರಿಗೆ ಸೂಚಿಸಿದ್ದಾರೆ ಎಂದು ಪರಮ್ ಬೀರ್ ಸಿಂಗ್ ಆರೋಪಿಸಿದ್ದರು.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಆರ್.ಎಸ್. ರೆಡ್ಡಿ ಅವರನ್ನೊಳಗೊಂಡ ಪೀಠವು ಅರ್ಜಿ ವಾಪಸ್ ಪಡೆಯಲು ಅನುಮತಿ ನೀಡಿತು. ‘ಅರ್ಜಿದಾರರ ಆರೋಪಗಳು ಗಂಭೀರವಾಗಿವೆ ಎನ್ನುವುದರಲ್ಲಿ ಯಾವುದೇ ರೀತಿಯ ಸಂಶಯಗಳು ಇಲ್ಲ. ಆದರೆ, ಮೊದಲು ಬಾಂಬೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಬೇಕು’ ಎಂದು ಪೀಠ ಹೇಳಿತು. ‘ಬುಧವಾರವೇ (ಮಾ.24) ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗುವುದು’ ಎಂದು ಸಿಂಗ್ ಪರ ವಕೀಲ ಮುಕುಲ್ ರೋಹಟಗಿ ತಿಳಿಸಿದರು.

ಮುಂಬೈ ಪೊಲೀಸ್ ಕಮಿಷನರ್ ಹುದ್ದೆಯಿಂದ ವರ್ಗಾವಣೆ ಮಾಡಿರುವ ಆದೇಶವನ್ನು ಸಹ ರದ್ದುಪಡಿಸಬೇಕು ಎಂದು ಸಿಂಗ್ ಅರ್ಜಿಯಲ್ಲಿ ಕೋರಿದ್ದರು. ಈ ಆದೇಶ ಕಾನೂನುಬಾಹಿರವಾಗಿದೆ ಎಂದು ಅವರು ಪ್ರತಿಪಾದಿಸಿದ್ದರು.

ಸಿ.ಡಿ ಪ್ರಕರಣ: ಆರೋಪಿತನ ಪತ್ನಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ಹೊತ್ತಿರುವ ವ್ಯಕ್ತಿಯೊಬ್ಬರ ಪತ್ನಿಯನ್ನು ಎಸ್‌ಐಟಿ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತುಮಕೂರಿನ ವ್ಯಕ್ತಿಯೊಬ್ಬರ ಹೆಸರು ಸಿ.ಡಿ ಪ್ರಕರಣದಲ್ಲಿ ಕೇಳಿಬಂದಿತ್ತು. ಖಾಸಗಿ ಸುದ್ದಿವಾಹಿನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವರು ಬಳಿಕ ಕೆಲಸ ತೊರೆದಿದ್ದರು. ಹಲವು ರಾಜಕೀಯ ನಾಯಕರ ಜೊತೆಗೂ ಆ ವ್ಯಕ್ತಿ ಸಂಪರ್ಕ ಹೊಂದಿದ್ದರು. ಸಿ.ಡಿ ಬಿಡುಗಡೆಯಲ್ಲಿ ಈ ವ್ಯಕ್ತಿಯೇ ಪ್ರಮುಖ ಪಾತ್ರ ವಹಿಸಿರುವ ಆರೋಪವೂ ಕೇಳಿಬಂದಿತ್ತು.

ಪ್ರಕರಣದ ನಂತರ ಈ ವ್ಯಕ್ತಿ ನಾಪತ್ತೆಯಾಗಿದ್ದರು. ಇತ್ತೀಚೆಗಷ್ಟೇ ವಿಡಿಯೊ ಮೂಲಕ ಪ್ರತಿಕ್ರಿಯಿಸಿ, ಮತ್ತೆ ಕಣ್ಮರೆಯಾಗಿದ್ದರು. ತನಿಖೆ ಚುರುಕುಗೊಳಿಸಿದ್ದ ಎಸ್‌ಐಟಿ ಅಧಿಕಾರಿಗಳು ವ್ಯಕ್ತಿಯ ಕುಟುಂಬದ ಜಾಡು ಬೆನ್ನತ್ತಿದ್ದರು. ತುಮಕೂರು ಜಿಲ್ಲೆಯಲ್ಲಿರುವ ಆ ವ್ಯಕ್ತಿಯ ಪತ್ನಿಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಿದ್ದರು.

ಪ್ರಕರಣ ಸಂಬಂಧ ಮಾಹಿತಿ ನೀಡುವ ಸಲುವಾಗಿ ಬಸವನಗುಡಿ ಮಹಿಳಾ ಠಾಣೆಗೆ ಬರುವಂತೆ ಸೂಚಿಸಿದ್ದರು. ಆದರೆ, ಹಲವು ಕಾರಣಗಳನ್ನು ನೀಡಿ ಮಹಿಳೆ ವಿಚಾರಣೆಗೆ ಎರಡು ಬಾರಿಯೂ ವಿಚಾರಣೆಗೆ ಬಂದಿರಲಿಲ್ಲ.

ಮೂರನೇ ಬಾರಿ ನೀಡಿದ್ದ ನೋಟಿಸ್‌ಗೂ ಅವರು ಉತ್ತರಿಸಿರಲಿಲ್ಲ. ಹಾಗಾಗಿ, ಎಸ್‌ಐಟಿ ಅಧಿಕಾರಿಗಳ ತಂಡ ಮಹಿಳೆ ಇರುವ ಸ್ಥಳಕ್ಕೇ ತೆರಳಿ, ಅವರನ್ನು ವಶಕ್ಕೆ ಪಡೆದಿದ್ದಾರೆ. ಪ್ರಕರಣ ಸಂಬಂಧ ಅವರನ್ನು ವಿಚಾರಣೆಗೆ ಒಳಪಡಿಸಿರುವುದಾಗಿ ಎಸ್‌ಐಟಿ ಮೂಲಗಳು ತಿಳಿಸಿವೆ.

ಕೋವಿಡ್ ನಿಯಮಗಳ ಉಲ್ಲಂಘನೆ, ಕ್ರಮಕ್ಕೆ ಪೋಷಕರ ಆಗ್ರಹ

ಮಕ್ಕಳನ್ನು ಒಂದೆಡೆ ಕೂರಿಸಿ ಬೋಧನೆ

ಪ್ರಜಾವಾಣಿ ವಾರ್ತೆ

ಕೊಪ್ಪ (ಮಂಡ್ಯ ಜಿಲ್ಲೆ): ಸಮೀಪದ ಮೂಡಲದೊಡ್ಡಿ ಗ್ರಾಮದ ವೆಂಕಟೇಶ್ವರ ವಿದ್ಯಾನಿಕೇತನ ಶಾಲೆಯ ಎಲ್‌ಕೆಜಿ, ಯುಕೆಜಿ ಹಾಗೂ 1ರಿಂದ 5ನೇ ತರಗತಿ ವಿದ್ಯಾರ್ಥಿಗಳನ್ನು ಚಿಕ್ಕದೊಡ್ಡಿ ಗ್ರಾಮದ ಸಮುದಾಯ ಭವನದಲ್ಲಿ ಒಂದೇ ಕಡೆ ಕೂರಿಸಿ, ಅಂತರ ಕಾಯ್ದುಕೊಳ್ಳದೆ ಪಾಠ ಮಾಡಲಾಗುತ್ತಿದೆ ಎಂದು ಪೋಷಕರು ಆರೋಪಿಸಿದ್ದಾರೆ.

‘ಶಿಕ್ಷಕರು, ಆಡಳಿತ ಮಂಡಳಿ ಸದಸ್ಯರು ಕೋವಿಡ್ ನಿಯಮಗಳನ್ನು ಗಾಳಿಗೆ ತೂರಿ ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಪೋಷಕರಿಂದ ಬಲವಂತವಾಗಿ ಶುಲ್ಕ ವಸೂಲಿ ಮಾಡಲಾಗಿದೆ. ನಿಯಮ ಉಲ್ಲಂಘಿಸಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ನೋಟಿಸ್ ಜಾರಿ: ‘ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿದ್ದೇನೆ. ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ ಅವರಿಂದ ಮಾಹಿತಿ ಪಡೆದಿದ್ದೇನೆ. ಶಾಲೆಯ ಆಡಳಿತ ಮಂಡಳಿಗೆ ನೋಟಿಸ್ ಜಾರಿ ಮಾಡಿದ್ದು, ಪ್ರತಿಕ್ರಿಯೆ ನೀಡಿದ ನಂತರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು’ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಆರ್. ರಘುನಂದನ್ ತಿಳಿಸಿದರು.

ಕೊಪ್ಪ ಸಮೀಪದ ಚಿಕ್ಕದೊಡ್ಡಿ ಸಮುದಾಯ ಭವನದಲ್ಲಿ ವೆಂಕಟೇಶ್ವರ ವಿದ್ಯಾನಿಕೇತನ ಶಾಲೆಯ ಎಲ್‌ಕೆಜಿ, ಯುಕೆಜಿ ಹಾಗೂ 1ರಿಂದ 5ನೇ ತರಗತಿ ಮಕ್ಕಳನ್ನು ಒಂದೇ ಕಡೆ ಕೂರಿಸಿ ಪಾಠ ಮಾಡಲಾಯಿತು

ಗುರುವಾರ, ಮಾರ್ಚ್ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 84 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಂದರ್ಶನವನ್ನು ಎದುರಿಸುವ ಮೊದಲು ಸರಳ ಹಾಗೂ ಸುಲಭ ಇಂಗ್ಲಿಷ್ ಸಂವಹನವನ್ನು ರೂಢಿಸಿಕೊಳ್ಳುವುದು ಅವಶ್ಯ

ಸಿ.ಡಿ. ಗದ್ದಲ : ಅಧಿವೇಶನ 5 ದಿನ ಮೊಟಕು 5

ವೈಜ್ಞಾನಿಕ ಅಂಶ ಅಲ್ಲಗಳೆದರೆ ಪ್ರತಿಭಟನೆ 4

ಸೆನ್ಸೆಕ್ಸ್	ನಿಫ್ಟಿ	₹/$
49,180	14,549	72.55

225 ಶಾಸಕರ ‘ಶೀಲ’ ಶಂಕಿಸಿದ ಸುಧಾಕರ್? • ಸಿ.ಎಂ, ಸಭಾಧ್ಯಕ್ಷರಿಗೆ ದೂರು

‘ಏಕ ಪತ್ನಿ ವ್ರತಸ್ಥ’: ಬಿರುಗಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೆ.ಆರ್. ರಮೇಶ್‌ಕುಮಾರ್, ವಿ.ಮುನಿಯಪ್ಪ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರು ಸತ್ಯ ಹರಿಶ್ಚಂದ್ರರಾ? ಇವರೆಲ್ಲಾ ಏಕಪತ್ನಿ ವ್ರತ ಮಾಡ್ತಾರಾ? ನಾನೂ ಸೇರಿ 225 ಶಾಸಕರ ವೈಯಕ್ತಿಕ ಜೀವನದ ಬಗ್ಗೆ ತನಿಖೆ ಆಗಲಿ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ನೀಡಿದ ಹೇಳಿಕೆ ರಾಜಕೀಯ ಬಿರುಗಾಳಿ ಎಬ್ಬಿಸಿದೆ.

ಈ ಬೆನ್ನಲ್ಲೇ ಎಚ್ಚೆತ್ತ ಸುಧಾಕರ್ ಸಂಜೆ ಸರಣಿ ಟ್ವೀಟ್ ಮಾಡಿ, ‘ಆರು ಸಚಿವರ ವಿರುದ್ಧ ನಿರಂತರ ತೇಜೋವಧೆಯಿಂದ ನಮಗಾದ ಅಪಮಾನ, ನೋವು ಯಾರಿಗೂ ಅರಿವಾಗಲಿಲ್ಲ. ನಾನು ನೀಡಿರುವ ಹೇಳಿಕೆಯನ್ನು ಶಬ್ದಶಃ ಅರ್ಥೈಸದೇ ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ’ ಎಂದು ಹೇಳಿದ್ದಾರೆ.

ಸುಧಾಕರ್ ಹೇಳಿಕೆ ಮಧ್ಯಾಹ್ನ ಸದ್ದು ಮಾಡುತ್ತಿದ್ದಂತೆ, ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ ವಿರೋಧ ಪಕ್ಷಗಳ ಸದಸ್ಯರು ಸುಧಾಕರ್ ರಾಜೀನಾಮೆಗೂ ಆಗ್ರಹಿಸಿದರು. ಈ ಸಂಬಂಧ ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ದೂರು ನೀಡಿದ ಕಾಂಗ್ರೆಸ್, ಕ್ರಮಕೈಗೊಳ್ಳಲು ಆಗ್ರಹಿಸಿದೆ.

> **ಸುಧಾಕರ್ ನುಡಿಮುತ್ತುಗಳನ್ನು ಇಡೀ ರಾಜ್ಯಕ್ಕೆ ಕೊಟ್ಟಿದ್ದಾರೆ. ಅದರ ಬಗ್ಗೆ ಸದನದಲ್ಲಿ ಚರ್ಚೆ ನಡೆಯಲಿ. ನನಗಿರುವುದು ಒಬ್ಬಳೇ ಹೆಂಡತಿ, ಒಂದೇ ಸಂಸಾರ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

> **ಇವರದು ‘ಗಿಲ್ಟಿ ಮೈಂಡ್’, ಸ್ಟುಪಿಡ್ ಹೇಳಿಕೆ. ಎಲ್ಲರೂ ಏಕ ಪತ್ನಿ ವ್ರತಸ್ಥರೇ, ಇಬ್ಬರನ್ನು ಮದುವೆ ಆಗಲು ಕಾನೂನಿನಲ್ಲಿ ಅವಕಾಶ ಇಲ್ಲ**
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

ಬುಧವಾರ ಬೆಳಿಗ್ಗೆ ಕಲಾಪ ಆರಂಭವಾಗುತ್ತಿದ್ದಂತೆ, ರಮೇಶ ಜಾರಕಿಹೊಳಿ ಸಿ.ಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಧರಣಿ ಮುಂದುವರಿಸಿದರು. ಭೋಜನ ವಿರಾಮದ ಬಳಿಕ ಸುಧಾಕರ್ ಹೇಳಿಕೆ ಪ್ರಸ್ತಾಪಿಸಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಸುಧಾಕರ್ ಅವರನ್ನು ಸಮರ್ಥಿಸಿದ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, ‘ಸಚಿವರು ಹೊರಗೆ ಮಾಧ್ಯಮದ ಬಳಿ ಮಾತನಾಡಿದ್ದಾರೆ. ಅವರು ಯಾವ ಸಂದರ್ಭ ಮತ್ತು ಅರ್ಥದಲ್ಲಿ ಮಾತನಾಡಿದ್ದಾರೆ ಎಂಬುದನ್ನು ಪರಿಶೀಲಿಸಬೇಕು. ಸದನದಲ್ಲಿ ನೀವು ಕೂಡ ಸಚಿವರ ಚಾರಿತ್ರ್ಯಕ್ಕೆ ಧಕ್ಕೆ ಬರುವಂತೆ ಮಾತನಾಡಲಿಲ್ಲವೇ’ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಮಾತನಾಡಿ, ‘ಸುಧಾಕರ್ ಬೇಜವಾಬ್ದಾರಿಯ ಹೇಳಿಕೆ ನೀಡಿದ್ದಾರೆ. ನನ್ನ, ಕೆ.ಆರ್. ರಮೇಶ್‌ಕುಮಾರ್, ಕುಮಾರಸ್ವಾಮಿ ಮತ್ತು ಡಿ.ಕೆ.ಶಿವಕುಮಾರ್ ಅವರ ಹೆಸರುಗಳನ್ನು ಪ್ರಸ್ತಾಪಿಸಿದ್ದಾರೆ. 225 ಶಾಸಕರು ಸತ್ಯ ಹರಿಶ್ಚಂದ್ರರಲ್ಲ ಎಂದಿದ್ದಾರೆ. ಇದು ಅವರ ಅಪರಾಧಿ ಪ್ರಜ್ಞೆಗೆ ಸಾಕ್ಷಿ’ ಎಂದು ಗುಡುಗಿದರು.

‘ಮುಖ್ಯಮಂತ್ರಿ ಸೇರಿ ಎಲ್ಲರ ಬಗ್ಗೆಯೂ ತನಿಖೆ ನಡೆಯಲಿ. ಈ ರೀತಿ ಹೇಳಿಕೆ ನೀಡಿದ ಸುಧಾಕರ್ ರಾಜೀನಾಮೆ ನೀಡಬೇಕು. ಇವರ ಪ್ರಕಾರ ಎಲ್ಲ ಶಾಸಕರೂ ವ್ಯಭಿಚಾರಿಗಳಾ? ಮಂತ್ರಿಯ ಹೇಳಿಕೆಯನ್ನು ನೀವೇಕೆ ಸಮರ್ಥಿಸಿಕೊಳ್ಳುತ್ತೀರಿ’ ಎಂದು ಬಸವರಾಜ ಬೊಮ್ಮಾಯಿ ವಿರುದ್ಧ ಗರಂ ಆದ ಸಿದ್ದರಾಮಯ್ಯ, ‘ಇದು ವ್ಯಭಿಚಾರಿಗಳ ಸರ್ಕಾರ’ ಎಂದು ಕಿಡಿಕಾರಿದರು.

ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆ, ‘ನಾನು 32 ಕ್ಕೂ ಹೆಚ್ಚು ವರ್ಷಗಳಿಂದ ಸದನದಲ್ಲಿದ್ದೇನೆ. ಹಿಂದೆಂದೂ ಯಾರೂ ಈ ರೀತಿ ಮಾತನಾಡಿರಲಿಲ್ಲ. ಇಲ್ಲಿ ಮಹಿಳೆಯರು ಇದ್ದಾರೆ. ಸಾರಾಸಗಟು ಹೀಗೆ ಮಾತನಾಡಿದರೆ ಹೇಗೆ. ಇದರಿಂದ ನನಗೆ ನೋವಾಗಿದೆ’ ಎಂದರು.

5ನೇ ಪುಟ ನೋಡಿ
ಇನ್ನೊಂದು ಸುದ್ದಿ 3B

ಸಚಿವ ಸುಧಾಕರ್ ಹೇಳಿದ್ದೇನು

‘ತಾವು ಮರ್ಯಾದಾ ಪುರುಷೋತ್ತಮರು, ಶ್ರೀರಾಮಚಂದ್ರರು ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಮಾತಾಡ್ತಾ ಇದ್ದಾರೆ. ಇವರಿಗೆ ಸವಾಲು ಹಾಕುತ್ತೇನೆ. 225 ಶಾಸಕರ ಬಗ್ಗೆ ತನಿಖೆ ಆಗಲಿ, ನಿಮ್ಮ ನಿಮ್ಮ ಜೀವನದಲ್ಲಿ (ನಾನೂ ಸೇರಿದಂತೆ) ಯಾರು ಅನೈತಿಕ ಸಂಬಂಧ ಇಟ್ಟುಕೊಂಡಿಲ್ಲ ಎನ್ನುವುದನ್ನು ಸಾಬೀತು ಮಾಡಲಿ’ ಎಂದು ಸುಧಾಕರ್ ಸವಾಲು ಹಾಕಿದರು.

‘ಆಗ ಯಾರ ಚರಿತ್ರೆ ಏನು ಎಂಬುದು ಗೊತ್ತಾಗುತ್ತದೆ. ಯಾರ್‍ಯಾರು ಮುಖ್ಯಮಂತ್ರಿ ಆಗಿದ್ದಾಗ ಏನು ಮಾಡಿದ್ದರು. ಅವರ ವೈಯಕ್ತಿಕ ಜೀವನಗಳಲ್ಲಿ ಏನಿತ್ತು ಎಂಬುದು ತನಿಖೆ ಆಗಲಿ. ನೈತಿಕತೆ, ಮೌಲ್ಯದ ಪ್ರಶ್ನೆ ತಾನೆ, ಎಲ್ಲ ಶಾಸಕರು, ಸಚಿವರು, ವಿರೋಧ ಪಕ್ಷಗಳ ನಾಯಕರ ಬಗ್ಗೆ ತನಿಖೆ ಆಗಲಿ. ಯಾರಿಗೆ ಅನೈತಿಕ ಸಂಬಂಧ ಇದೆ. ವಿವಾಹೇತರ ಸಂಬಂಧ ಇದೆ ಎಂಬುದು ಹೊರಬರಲಿ ಎಂದು ಸವಾಲು ಹಾಕುತ್ತೇನೆ’ ಎಂದು ಹೇಳಿದರು.

ಸಿಜೆಐ: ಎನ್.ವಿ.ರಮಣ ಹೆಸರು ಶಿಫಾರಸು

ಎನ್.ವಿ.ರಮಣ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ಹಿರಿಯ ನ್ಯಾಯಮೂರ್ತಿ ಎನ್.ವಿ.ರಮಣ ಅವರ ಹೆಸರನ್ನು ಶಿಫಾರಸು ಮಾಡಿ ಸಿಜೆಐ ಎಸ್.ಎ. ಬೊಬ್ಡೆ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ರಮಣ ಅವರ ಅಧಿಕಾರಾವಧಿ 2022 ರ ಆಗಸ್ಟ್ 26 ರವರೆಗೆ ಇರಲಿದೆ.

‘ಸಾಲ ಮಾಡಿ ತುಪ್ಪ ತಿಂದಿಲ್ಲ’

ಕಳೆದ ತ್ರೈಮಾಸಿಕದಲ್ಲಿ ಆರ್ಥಿಕ ಪರಿಸ್ಥಿತಿ ಚೇತರಿಕೆ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ಸಾಲ ಮಾಡಿ ತುಪ್ಪ ತಿಂದಿಲ್ಲ ಅಥವಾ ಮೋಜಿಗಾಗಿ, ಔತಣ ನಡೆಸಲು ಸಾಲದ ಹಣ ಬಳಸಿಲ್ಲ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರೋಧ ಪಕ್ಷಗಳಿಗೆ ತಿರುಗೇಟು ನೀಡಿದರು.

ಉಭಯ ಸದನಗಳಲ್ಲಿ ಬಜೆಟ್ ಮೇಲೆ ನಡೆದ ಚರ್ಚೆಗೆ ಬುಧವಾರ ಉತ್ತರ ನೀಡಿದ ಅವರು, ‘ಸಮೃದ್ಧಿಯ ಸಂದರ್ಭಗಳಲ್ಲೇ ಹಿಂದಿನ ಸರ್ಕಾರಗಳು ಸಾಲ ಮಾಡಿದ್ದವು. ಕೋವಿಡ್ ಸಾಂಕ್ರಾಮಿಕ ಸಂಕಷ್ಟ, ಇತಿಹಾಸ ಕಂಡರಿಯದ ಮಳೆ ಮತ್ತು ಪ್ರವಾಹದಿಂದ ಉಂಟಾದ ಪರಿಸ್ಥಿತಿಯಲ್ಲಿ ನಾವು ಸಾಲ ಮಾಡದೇ ಅಭಿವೃದ್ಧಿ ಮಾಡುವುದು ಹೇಗೆ ಸಾಧ್ಯ? ಆರ್ಥಿಕ ಚೈತನ್ಯ ನೀಡಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

‘ಕೊರೊನಾ ಸಾಂಕ್ರಾಮಿಕ ವಿಶ್ವವ್ಯಾಪಿಯಾಗಿ ಬಂದೆರಗಿದಾಗ ದಿಢೀರ್ ಪರಿಹಾರ ನೀಡಲು ಸರ್ಕಾರದ ಬಳಿ ಯಾವುದೇ ಮಂತ್ರ ದಂಡ ಇರುವುದಿಲ್ಲ ಅಥವಾ ಸರ್ಕಾರದ ಬೊಕ್ಕಸ ಅಕ್ಷಯಪಾತ್ರೆಯೇನೂ ಅಲ್ಲ’ ಎಂದು ಹೇಳಿದರು.

5ನೇ ಪುಟ ನೋಡಿ

ಅಂಬೇಡ್ಕರ್, ಆದಿಜಾಂಬವ ನಿಗಮಕ್ಕೆ ತಲಾ ₹150 ಕೋಟಿ

ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಆದಿಜಾಂಬವ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿಯಾಗಿ ತಲಾ ₹150 ಕೋಟಿ ಒದಗಿಸುವುದಾಗಿ ಮುಖ್ಯಮಂತ್ರಿ ಪ್ರಕಟಿಸಿದರು.

2020-21ನೇ ಸಾಲಿನ ಬಜೆಟ್‌ನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಗೆ (ಎಸ್‌ಸಿಪಿ–ಟಿಎಸ್‌ಪಿ) ₹27,700 ಕೋಟಿ ಮೀಸಲಿಡಲಾಗಿತ್ತು. ಈ ಸಾಲಿನಲ್ಲಿ ₹26,005 ಕೋಟಿ ಅನುದಾನ ಒದಗಿಸಲಾಗಿದೆ. ಇದು ಕಾಯ್ದೆ ನಿಗದಿಪಡಿಸಿರುವ ಶೇಕಡ 24.1ರ ಬದಲಾಗಿ 24.23 ಆಗಿರುತ್ತದೆ. ಆದರೂ ಈ ಮೊತ್ತವನ್ನು ಕಳೆದ ಸಾಲಿನ ಮಟ್ಟಕ್ಕೆ ತರಲಾಗುವುದು ಎಂದು ಅವರು ಭರವಸೆ ನೀಡಿದರು.

‘ಮಹದಾಯಿ- ರಾಜಿ ಪ್ರಶ್ನೆಯೇ ಇಲ್ಲ’

ಪ್ರಜಾವಾಣಿ ವಾರ್ತೆ

ಪಣಜಿ: ‘ಮಹದಾಯಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ರಾಜಿ ಆಗುವ ಪ್ರಶ್ನೆಯೇ ಇಲ್ಲ’ ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಬುಧವಾರ ಹೇಳಿದರು.

ಬಜೆಟ್ ಮೇಲಿನ ಚರ್ಚೆ ವೇಳೆ ಈ ವಿಷಯ ಪ್ರಸ್ತಾಪಿಸಿದ ಅವರು, ‘ನ್ಯಾಯಯುತವಾಗಿ ರಾಜ್ಯಕ್ಕೆ ಸಿಗಬೇಕಾದ ನದಿ ನೀರು ಪಡೆಯಲು ಗೋವಾ ಹೋರಾಡುವುದು. ನ್ಯಾಯಾಂಗ ಹೋರಾಟದ ಮೂಲಕ ತನ್ನ ಪಾಲಿನ ನೀರಿನ ಮೇಲಿನ ಹಕ್ಕನ್ನು ಸ್ಥಾಪಿಸಲಿದೆ’ ಎಂದರು.

ನಿತೀಶ್ ಕ್ಷಮೆ ಕೇಳುವವರೆಗೆ ಕಲಾಪಕ್ಕೆ ಗೈರು: ತೇಜಸ್ವಿ ಯಾದವ್

ಪ್ರಜಾವಾಣಿ ವಾರ್ತೆ

ಪಟ್ನಾ: ‘ಬಿಹಾರ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಶಾಸಕರನ್ನು ನಿಂದಿಸಿ, ಅವರ ಮೇಲೆ ಹಲ್ಲೆ ನಡೆಸಿರುವ ಘಟನೆ ಕುರಿತಂತೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಉಳಿದ ಅವಧಿಗೆ ವಿರೋಧ ಪಕ್ಷಗಳು ವಿಧಾನಸಭೆ ಕಲಾಪಕ್ಕೆ ಹಾಜರಾಗುವುದಿಲ್ಲ’ ಎಂದು ವಿರೋಧ ಪಕ್ಷದ ಮುಖಂಡ ತೇಜಸ್ವಿ ಯಾದವ್ ಬುಧವಾರ ಹೇಳಿದ್ದಾರೆ.

ಆರ್‌ಜೆಡಿ, ಕಾಂಗ್ರೆಸ್ ಹಾಗೂ ಎಡಪಕ್ಷಗಳು ಬಿಹಾರದಲ್ಲಿ ವಿರೋಧ ಪಕ್ಷಗಳಾಗಿವೆ.

‘ಬಿಹಾರ ವಿಶೇಷ ಸಶಸ್ತ್ರ ಪೊಲೀಸ್ ಕಾಯ್ದೆ–2021’ ಮಸೂದೆಯನ್ನು ಮಂಗಳವಾರ ವಿಧಾನಸಭೆಯಲ್ಲಿ ಸರ್ಕಾರ ಮಂಡಿಸಿತ್ತು. ಈ ಮಸೂದೆಯನ್ನು ವಿರೋಧಿಸಿ ಪ್ರತಿಭಟನೆಗಿಳಿದಿದ್ದ ಆರ್‌ಜೆಡಿ, ಕಾಂಗ್ರೆಸ್‌ನ ಶಾಸಕರನ್ನು ಸದನದಿಂದ ಹೊರ ಹಾಕುವಂತೆ ಮಾರ್ಷಲ್‌ಗಳಿಗೆ ಸೂಚಿಸಲಾಯಿತು. ಆಗ, ಮಾರ್ಷಲ್‌ಗಳೊಂದಿಗೆ ನಡೆದ ಜಟಾಪಟಿ ವೇಳೆ ಉಭಯ ಪಕ್ಷಗಳ ಕೆಲವು ಶಾಸಕರಿಗೆ ಗಾಯಗಳಾಗಿದ್ದವು.

ಮಿಸಳ್ ಹಾಪ್ಚಾ

ರತಿ ಮನ್ಮಥರ ನಡುವೆ

ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ

ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ- ಪಿಯುಸಿ

ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–7

ಇಂದಿನ ಪಾಡ್‌ಕಾಸ್ಟ್ ವಿಶೇಷ

ಆಟ-ನೋಟ ವನಿತಾ ಧ್ವನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕಳ್ಳಸಾಗಣೆಗೆ ‘ಇಸ್ಕಾನ್’ ಹೆಸರಿನ ದಾಖಲೆ ಬಳಕೆ

ಕಾಳಸಂತೆಗೆ ಪಡಿತರ ಅಕ್ಕಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಆದ್ಯತಾ ವಲಯದ ಕುಟುಂಬಗಳಿಗೆ(ಬಿಪಿಎಲ್) ವಿತರಿಸಲು ಸರ್ಕಾರ ಪೂರೈಸುತ್ತಿರುವ ಪಡಿತರ ಅಕ್ಕಿ ನಗರದಲ್ಲಿರುವ ಕರ್ನಾಟಕ ಆಹಾರ ಪೂರೈಕೆ ನಿಗಮದ (ಕೆಎಫ್‌ಸಿಎಸ್‌ಸಿ) ಉಗ್ರಾಣಗಳಿಂದ ‘ಪಾಲಿಶ್’ ನೆಪದಲ್ಲಿ ಬಂಗಾರಪೇಟೆಯ ಅಕ್ಕಿ ಗಿರಣಿಗಳ ಮೂಲಕ ನೇರವಾಗಿ ಕಾಳಸಂತೆಗೆ ತಲುಪುತ್ತಿರುವುದು ಪತ್ತೆಯಾಗಿದೆ.

ಮಾರ್ಚ್ 16ರಂದು ಕೆ.ಆರ್. ಪುರ ಸಮೀಪದ ಕೆಎಫ್‌ಸಿಎಸ್‌ಸಿ ಉಗ್ರಾಣದಿಂದ ಪಡಿತರ ಅಕ್ಕಿ ಚೀಲಗಳನ್ನು ತುಂಬಿಸಿಕೊಂಡು ಬಂಗಾರಪೇಟೆಗೆ ಹೋಗುತ್ತಿದ್ದ ‘ಕೆಎ–40 6668’ ನೋಂದಣಿ ಸಂಖ್ಯೆಯ ಐಷರ್ ಲಾರಿಯನ್ನು ಕೋಲಾರದ ಗಾಜಲದಿನ್ನೆಯಲ್ಲಿ ವಶಕ್ಕೆ ಪಡೆಯಲಾಗಿತ್ತು. ಅದರಲ್ಲಿ 240 ಅಕ್ಕಿ ಚೀಲಗಳಿದ್ದವು. ಅವುಗಳ ಮೇಲೆ ರಾಜ್ಯ ಸರ್ಕಾರವು ಅನ್ನಭಾಗ್ಯ ಮತ್ತಿತರ ಯೋಜನೆಗಳ ಅಡಿಯಲ್ಲಿ ಉಚಿತವಾಗಿ ವಿತರಿಸಲು ಖರೀದಿಸಿದ್ದ ಅಕ್ಕಿ ಎಂಬ ಮಾಹಿತಿಯನ್ನು ಮುದ್ರಿಸಿರುವುದು ಕಂಡುಬಂದಿತ್ತು.

ಅನಾಮಿಕರ ವಿರುದ್ಧ ಎಫ್‌ಐಆರ್: ಕೋಲಾರ ತಾಲ್ಲೂಕು ಗ್ರಾಮಾಂತರ ವಿಭಾಗದ ಆಹಾರ ನಿರೀಕ್ಷಕ ಉಮ್ಮರ್ ಬೇಗ್ ವಾಜಿದ್ ನೀಡಿದ ದೂರಿನಂತೆ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಾ.16ರಂದೇ ಅಗತ್ಯ ವಸ್ತುಗಳ ಕಾಯ್ದೆ–1955ರ ಸೆಕ್ಷನ್ 4 ಮತ್ತು 7ರ ಅಡಿಯಲ್ಲಿ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಲಾಗಿದೆ.

ಪ್ರಜಾವಾಣಿ ವಿಶೇಷ

ಮೂಲಗಳ ಪ್ರಕಾರ, ಚಾಲಕನ ಸಮೇತ ಲಾರಿಯನ್ನು ವಶಕ್ಕೆ ಪಡೆಯಲಾಗಿತ್ತು. ಲಾರಿ ಮಾಲೀಕ ಬೆಂಗಳೂರಿನ ನಂದಿನಿ ಬಡಾವಣೆ ನಿವಾಸಿ ಆರ್.ಎಸ್. ಮಣಿ ಮತ್ತು ನಗರದ ಅಕ್ಕಿ ವರ್ತಕರೊಬ್ಬರು ಕೃತ್ಯದಲ್ಲಿ ಭಾಗಿಯಾಗಿರುವ ಮಾಹಿತಿಗಳೂ ಲಭ್ಯವಿದ್ದವು. ಆದರೆ, ‘ಅನಾಮಿಕ’ರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

5ನೇ ಪುಟ ನೋಡಿ

ಸಂಸ್ಥೆಗೆ ಸಂಬಂಧವಿಲ್ಲ: ಇಸ್ಕಾನ್

‘ಅಕ್ಷಯಪಾತ್ರ ಪ್ರತಿಷ್ಠಾನಕ್ಕೆ ಹಂಚಿಕೆಯಾಗುವ ಆಹಾರ ಧಾನ್ಯಗಳನ್ನು ಹಲವು ವರ್ಷಗಳ ಹಿಂದೆ ಪಾಲಿಶ್‌ಗಾಗಿ ಬಂಗಾರಪೇಟೆಗೆ ಕೊಂಡೊಯ್ಯಲಾಗುತ್ತಿತ್ತು. ಈಗ ನೆಲಮಂಗಲದಲ್ಲೇ ಆ ವ್ಯವಸ್ಥೆ ಇದೆ. ಜಿಲ್ಲೆಯಿಂದ ಹೊರಕ್ಕೆ ಆಹಾರ ಧಾನ್ಯ ಕೊಂಡೊಯ್ಯುತ್ತಿಲ್ಲ. ಈ ಪ್ರಕರಣದಲ್ಲಿ ಸಂಸ್ಥೆಯ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಸಂಶಯವಿದೆ’ ಎಂದು ಅಕ್ಷಯ ಪಾತ್ರ ಪ್ರತಿಷ್ಠಾನದ ವಕ್ತಾರ ನವೀನನೀರದ ದಾಸ ಪ್ರತಿಕ್ರಿಯಿಸಿದರು.

> **ಪಡಿತರ ಧಾನ್ಯವನ್ನು ಉಗ್ರಾಣದಿಂದ ವಿತರಣಾ ಕೇಂದ್ರಕ್ಕೆ ಸಾಗಿಸಲು ಮಾತ್ರ ಅನುಮತಿ ನೀಡಲಾಗುತ್ತಿದೆ. ಬೇರೆ ಪ್ರದೇಶಗಳಿಗೆ ಸಾಗಿಸಲು ಅವಕಾಶವಿಲ್ಲ**
> **ನಾಗರಾಜ್,** ಉಪ ನಿರ್ದೇಶಕರು, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ

SBI



ಎಸ್‌ಬಿಐ ಸಾಲಗಳೊಂದಿಗೆ ಅನೇಕಾನೇಕ ಲಾಭಗಳ ಆನಂದ ಪಡೆಯಿರಿ

ಗೃಹ ಸಾಲ
- 6.70% ಮೇಲ್ಪಟ್ಟು ಲಭ್ಯ
- 70 BPS ವರೆಗೆ ಬಡ್ಡಿ ರಿಯಾಯತಿ
- ಶೂನ್ಯ ಪ್ರಕ್ರಿಯೆ ಶುಲ್ಕ
- ಯೋನೋ ಆಪ್ ಮೂಲಕ ರಿಯಾಯತಿಗಳು
- PMAY ಸಬ್ಸಿಡಿಯ ತ್ವರಿತ ಪ್ರಕ್ರಿಯೆ
- 5 ದಿನಗಳಲ್ಲಿ# ಮಂಜೂರಾತಿ

#ಎಸ್‌ಬಿಐ ಅನುಮೋದಿತ ಪ್ರಾಜೆಕ್ಟ್‌ಗಳಿಗೆ

ಕಾರ್ ಸಾಲ
- ₹1,534/- ಇಎಮ್‌ಐ/ಲಕ್ಷ
- ಶೂನ್ಯ ಪ್ರಕ್ರಿಯೆ ಶುಲ್ಕ ಮತ್ತು ಯೋನೋ ಮೂಲಕ ತ್ವರಿತವಾಗಿ ತಾತ್ವಿಕ ಅನುಮೋದನೆ
- ಆಯ್ದ ಮಾಡೆಲ್‌ಗಳಿಗೆ 100% ಆನ್-ರೋಡ್ ಹಣಕಾಸು ಸೌಲಭ್ಯ
- ಮುಂಚಿತ ಪಾವತಿಯಿಲ್ಲ/ 2 ವರ್ಷಗಳ ನಂತರ ಮುಂಚಿತ ಚುಕ್ತಾ ಶುಲ್ಕಗಳಿಲ್ಲ

ಚಿನ್ನದ ಸಾಲ
- ಶೂನ್ಯ ಪ್ರಕ್ರಿಯೆ ಶುಲ್ಕ ಮತ್ತು ಯೋನೋ ಮೂಲಕ ತ್ವರಿತವಾಗಿ ತಾತ್ವಿಕ ಅನುಮೋದನೆ
- 36 ತಿಂಗಳ ವರೆಗಿನ ಮರುಪಾವತಿಯಲ್ಲಿ ಅನುಕೂಲಕರ ಆಯ್ಕೆಗಳು
- ನಿಮ್ಮ ಚಿನ್ನಕ್ಕೆ ಸಂಪೂರ್ಣ ವಿಮಾ ಸುರಕ್ಷೆ

ಪೂರ್ವಾನುಮೋದಿತ ವೈಯಕ್ತಿಕ ಸಾಲ
- ₹ 8 ಲಕ್ಷದ ವರೆಗೆ ಸಾಲಗಳು
- ಕೇವಲ 4 ಕ್ಲಿಕ್‌ಗಳಲ್ಲಿ ತ್ವರಿತ ಬಟವಾಡೆ
- ಯೋನೋ ಮೂಲಕ 24x7 ಲಭ್ಯತೆ

ನಿಮ್ಮ ಅರ್ಹತೆ ಬಗ್ಗೆ ತಿಳಿಯಲು ನಿಮ್ಮ ನೋಂದಾಯಿತ ಮೊಬೈಲ್ ನಂಬರಿನಿಂದ PAPL <space> ಎಸ್‌ಬಿ ಖಾತೆಯ ಕೊನೆಯ 4 ಅಂಕೆಗಳು> 567676 ಕ್ಕೆ ಎಸ್‌ಎಮ್‌ಎಸ್ ಮಾಡಿರಿ

ಸಾಗರೋತ್ತರ ಶಿಕ್ಷಣ ಸಾಲ
- ₹ 1.5 ಕೋಟಿ ವರೆಗೆ ಸಾಲಗಳು
- i20/ವೀಸಾ ಮುನ್ನವೇ ಬಟವಾಡೆ
- ಸಾಲ ವಸೂಲಾತಿ ನಿಷೇಧ ಅವಧಿಯ (ಮೊರಾಟೋರಿಯಮ್) ನಂತರ 15 ವರ್ಷಗಳ ವರೆಗಿನ ದೀರ್ಘಾವಧಿಯ ಮರುಪಾವತಿ

ಷರತ್ತು ಮತ್ತು ನಿಯಮಗಳು ಅನ್ವಯ

ವಿವರಗಳಿಗಾಗಿ ಭೇಟಿ ನೀಡಿ: bank.sbi/ sbiyono.sbi / ಕರೆ ಮಾಡಿ: 1800 11 2211

ಗೃಹ ಸಾಲಗಳಿಗೆ ಭೇಟಿ ನೀಡಿ: homeloans.sbi / www.sbiloansin59minutes.com / ಕರೆ ಮಾಡಿ: 1800 11 2018

27ಕ್ಕೆ ‘ಪ್ರಕೃತಿಗಾಗಿ ಮಾತನಾಡಿ’ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅರ್ಥ್ ಅವರ್’ ದಿನದ ಅಂಗವಾಗಿ ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ (ಡಬ್ಲ್ಯುಡಬ್ಲ್ಯುಎಫ್) ಇಂಡಿಯಾ ಸಂಸ್ಥೆಯು ಇದೇ 27ರಂದು ‘ಪ್ರಕೃತಿಗಾಗಿ ಮಾತನಾಡಿ’ ಕಾರ್ಯಕ್ರಮ ಹಮ್ಮಿಕೊಂಡಿದೆ.

ಏರುತ್ತಿರುವ ಜಾಗತಿಕ ತಾಪಮಾನವನ್ನು ತಗ್ಗಿಸಲು ಪ್ರತಿ ವರ್ಷ ಮಾರ್ಚ್ ತಿಂಗಳ ಕೊನೆಯ ಶನಿವಾರದಂದು ರಾತ್ರಿ 8.30ರಿಂದ 9.30ರವರೆಗೆ ಒಂದು ಗಂಟೆ ವಿದ್ಯುತ್ ದೀಪ ಆರಿಸಿ ‘ಅರ್ಥ್ ಅವರ್’ ಆಚರಿಸಲಾಗುತ್ತಿತ್ತು. ಕೋವಿಡ್ ಕಾರಣದಿಂದಾಗಿ ಈ ಬಾರಿ ಆನ್‌ಲೈನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಡಬ್ಲ್ಯುಡಬ್ಲ್ಯುಎಫ್ ಇಂಡಿಯಾದ ರಾಯಭಾರಿ ಶಾಂತನು ಮೊಹಿತ್ರಾ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ನಟಿ ದಿಯಾ ಮಿರ್ಜಾ, ಗಾಯಕಿ ಶ್ರೇಯಾ ಘೋಷಾಲ್, ಸಯಾಮಿ ಖೇರ್, ಧೃತಿಮಾನ್ ಮುಖರ್ಜಿ, ಅಂಬಿ ಸುಬ್ರಮಣ್ಯಂ, ಬಿಂದು ಸುಬ್ರಮಣ್ಯಂ, ಜಯಂತಿ ಕುಮಾರೇಶ್ ಪಾಲ್ಗೊಳ್ಳಲಿದ್ದಾರೆ.

27ರಂದು ಮೆಗಾ ಲೋಕ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ (ಕೆಎಸ್‌ಎಲ್‌ಎಸ್‌ಎ) ವತಿಯಿಂದ ಮಾ.27ರಂದು ಮೆಗಾ ಲೋಕ ಅದಾಲತ್ ಆಯೋಜಿಸಲಾಗಿದೆ ಎಂದು ಕೆಎಸ್‌ಎಲ್‌ಎಸ್‌ಎ ಕಾರ್ಯನಿರ್ವಾಹಕ ಅಧ್ಯಕ್ಷ ನ್ಯಾಯಮೂರ್ತಿ ಅರವಿಂದಕುಮಾರ್ ತಿಳಿಸಿದರು.

ಅದಾಲತ್ ಅನ್ನು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಉದ್ಘಾಟಿಸಲಿದ್ದಾರೆ. 2.74 ಲಕ್ಷ ಪ್ರಕರಣಗಳನ್ನು ಈ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ಗುರುತಿಸಲಾಗಿದೆ. 958 ನ್ಯಾಯಾಧೀಶರು ಮತ್ತು ನ್ಯಾಯಾಂಗ ಇಲಾಖೆ ಅಧಿಕಾರಿಗಳು ವಿಚಾರಣೆ ನಡೆಸಲಿದ್ದಾರೆ ಎಂದು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಡಿಸೆಂಬರ್‌ನಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಒಟ್ಟು 2,63,215 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಮಾ.27ರಂದು ವಿಡಿಯೊ ಕಾನ್ಫರೆನ್ಸ್ ಮೂಲಕ ಅದಾಲತ್ ನಡೆಸಲಾಗುವುದು ಎಂದು ಹೇಳಿದರು.

ಬಿಬಿಎಂಪಿ ಬಜೆಟ್ ವಿಳಂಬ: ಸಿಪಿಎಂ ಖಂಡನೆ

ಬೆಂಗಳೂರು: ‘ಬಿಬಿಎಂಪಿ ಕಾಯ್ದೆ–2020ರ ಕಲಂ 196ರ ಪ್ರಕಾರ ಪ್ರತಿ ಹಣಕಾಸು ವರ್ಷದ ಆರಂಭಕ್ಕೆ ಕನಿಷ್ಠ ಮೂರು ವಾರ ಮುಂಚಿತವಾಗಿ ಬಿಬಿಎಂಪಿ ಬಜೆಟ್ ಅಂಗೀಕಾರವಾಗಬೇಕು. ಆದರೆ, ಪ್ರಸಕ್ತ ಹಣಕಾಸು ವರ್ಷ ಆರಂಭವಾಗಲು ಒಂದು ವಾರ ಮಾತ್ರ ಉಳಿದಿದ್ದರೂ ಇದುವರೆಗೆ 2021-22ನೇ ಸಾಲಿನ ಬಜೆಟ್ ಮಂಡನೆಯೇ ಆಗಿಲ್ಲ. ಇದು ಕಾನೂನು ಬಾಹಿರ’ ಎಂದು ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ, ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

‘ಬಿಬಿಎಂಪಿ ಚುನಾವಣೆ ನಡೆಯದಿರುವುದರಿಂದ ಬಜೆಟ್ ರೂಪಿಸಿ ಮಂಡಿಸುವ ಹೊಣೆ ಆಡಳಿತಾಧಿಕಾರಿಗಳ ಮೇಲಿರುತ್ತದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ನಿರ್ದೇಶನ ನೀಡಬೇಕಿತ್ತು. ಆದರೆ ಆ ಕೆಲಸ ಆಗಿಲ್ಲ. ಇದಕ್ಕೆ ಬಿಜೆಪಿ ಸರ್ಕಾರ ಮತ್ತು ಮುಖ್ಯಮಂತ್ರಿಯವರ ಹೊಣೆಗೇಡಿತನವೇ ಕಾರಣ’ ಎಂದು ಸಿಪಿಐ(ಎಂ) ಪ್ರಕಟಣೆ ಹೇಳಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ

ಬೆಂಗಳೂರು: ಇಲ್ಲಿನ ವಿಜಯನಗರದಲ್ಲಿರುವ ಎನ್‌ಲೈಟ್ ಅಕಾಡೆಮಿ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರವು ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳ ಬಯಸುವ ಅಭ್ಯರ್ಥಿಗಳಿಗೆ ನಾಲ್ಕು ತಿಂಗಳವರೆಗೆ ಉಚಿತ ತರಬೇತಿ ಶಿಬಿರ ಹಮ್ಮಿಕೊಂಡಿದೆ.

ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಪಿಡಿಒ ಪರೀಕ್ಷೆ ತೆಗೆದುಕೊಳ್ಳುವವರಿಗೆ ಏ.1ರಿಂದ ಉಚಿತವಾಗಿ ತರಬೇತಿ ನೀಡಲಾಗುವುದು ಎಂದು ಸಂಸ್ಥೆಯ ಸಂಸ್ಥಾಪಕರಾದ ಸಿದ್ಧಾರ್ಥ ಮತ್ತು ರವೀಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿಗೆ, 7892585422 / 7892935570.

ಶಾಸಕ ರಾಮಲಿಂಗಾರೆಡ್ಡಿ ಅವರನ್ನು ಕೇಬಲ್ ಆಪರೇಟರ್‌ಗಳ ಸಂಘದ ಅಧ್ಯಕ್ಷ ವಿ.ಎಸ್. ಪ್ಯಾಟ್ರಿಕ್ ರಾಜು ಸನ್ಮಾನಿಸಿದರು.

ಕೇಬಲ್ ಆಪರೇಟರ್‌ಗಳ ಸಂಘದ ಕಚೇರಿ ಉದ್ಘಾಟನೆ

ಬೆಂಗಳೂರು: ಕರ್ನಾಟಕ ರಾಜ್ಯ ಕೇಬಲ್ ಟಿವಿ ಆಪರೇಟರ್ ಅಸೋಸಿಯೇಷನ್‌ನ ನೂತನ ಕಚೇರಿಯನ್ನು ಕೋರಮಂಗಲದಲ್ಲಿ ಶಾಸಕ ರಾಮಲಿಂಗಾರೆಡ್ಡಿ ಬುಧವಾರ ಉದ್ಘಾಟಿಸಿದರು.

ಸಂಘದ ಸದಸ್ಯತ್ವವನ್ನು ಪಡೆದಿರುವ ರಾಜ್ಯದ ಯಾವುದೇ ಭಾಗದ ಕೇಬಲ್ ಆಪರೇಟರ್‌ಗಳು ಆಕಸ್ಮಿಕವಾಗಿ ಕಾರ್ಯನಿರತರಾಗಿದ್ದ ಸಂದರ್ಭದಲ್ಲಿ ಮರಣ ಹೊಂದಿದರೆ ಅವರ ಕುಟುಂಬಕ್ಕೆ ₹ 1ಲಕ್ಷ ಪರಿಹಾರ ನೀಡಲಾಗುವುದು ಎಂದು ರಾಜ್ಯ ಘಟಕದ ಅಧ್ಯಕ್ಷ ವಿ.ಎಸ್. ಪ್ಯಾಟ್ರಿಕ್ ರಾಜು ಈ ಸಂದರ್ಭದಲ್ಲಿ ಘೋಷಿಸಿದರು.

ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗಗಳ ಕೇಬಲ್ ಆಪರೇಟರ್‌ಗಳಿಗೆ ಆಧುನಿಕ ತಂತ್ರಜ್ಞಾನಗಳ ಬಗ್ಗೆ ಮಾಹಿತಿಗಳನ್ನು ಒದಗಿಸಲು ಸಂಪರ್ಕ ಸಭೆಗಳನ್ನು ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ,

ರಾಮನಗರ ವಿಭಾಗ, ಸಂಚಾರ ಶಾಖೆ

ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂಖ್ಯೆ: ಕರಾಸಾ/ರಾನವಿ/ಸಂ/ವಾ/3000/2020–21 ದಿನಾಂಕ: 23.03.2021

ಇ-ಟೆಂಡರ್ ಪ್ರಕಟಣೆ ಸಂ: 14 & ಮ್ಯಾನ್ಯುಯಲ್ ಟೆಂಡರ್ ಪ್ರಕಟಣೆ ಸಂ: 15/20-21

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಆನೇಕಲ್ ಹಾಗೂ ಕನಕಪುರ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ: **20.04.2021**ರಂದು **14.00** ಗಂಟೆಗೆ ಇ–ಟೆಂಡರ್ ನಡೆಸಲು / ತೆರೆಯಲು ಸಮಯವನ್ನು ನಿಗಧಿಪಡಿಸಲಾಗಿರುತ್ತದೆ. ದಿನಾಂಕ: **25.03.2021** ರಿಂದ ಇ–ಟೆಂಡರ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ: **16.04.2021**ರ ಮಧ್ಯಾಹ್ನ **14.00** ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹಾಗೂ ಚನ್ನಪಟ್ಟಣ, ಕನಕಪುರ, ಕೋಡಿಹಳ್ಳಿ, ಕೋಡಂಬಹಳ್ಳಿ ಹಾಗೂ ದೊಡ್ಡಮರಳವಾಡಿ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ / ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಮ್ಯಾನ್ಯುಯಲ್ ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು ಸಲುವಾಗಿ ದಿನಾಂಕ: **20.04.2021**ರಂದು **12.00** ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ ಪ್ರತಿನಿಧಿಗಳ ಎದುರು ಮ್ಯಾನ್ಯುಯಲ್ ಟೆಂಡರ್‌ನ್ನು ನಡೆಸಲಾಗುವುದು. ಮ್ಯಾನ್ಯುಯಲ್ ಟೆಂಡರ್ ಅರ್ಜಿಗಳನ್ನು ದಿನಾಂಕ: **25.03.2021** ರಿಂದ ದಿನಾಂಕ: **19.04.2021**ರ **15.00** ಗಂಟೆಗಳವರೆಗೆ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂ. ಸಂ: 080–27272308 ಹಾಗೂ ವಿಭಾಗ ಸಂಚಲನಾಧಿಕಾರಿಗಳ ಮೊಬೈಲ್ ಸಂ: 7780990852

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ರಾಮನಗರ ವಿಭಾಗ, ರಾಮನಗರ

DIPR/DDU/Zen/R.O:3224/2020-21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110

ಸಂ. ಬಿಐಎಪಿಎ/ಟಿಪಿ03/ಭೂಉನಿ/22/2020–21/1791 ದಿನಾಂಕ : 23–03–2021

ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರ ತಿದ್ದುಪಡಿ ಕಾಯ್ದೆಯಂತೆ)

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ : ನಅಇ 157 ಬಿಎಂಆರ್ 2005 ದಿನಾಂಕ : **27–01–2009** ಮತ್ತು ತಿದ್ದುಪಡಿ ಆದೇಶ ದಿನಾಂಕ : **29–01–2009** ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (4) ರನ್ವಯ ಈ ಕೆಳಕಂಡಂತೆ ವಸತಿ ಭೂಉಪಯೋಗ ನಿಗಧಿಪಡಿಸಲು ಅರ್ಜಿದಾರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ.ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಭೂ ಉಪಯೋಗ ನಿಗಧಿಪಡಿಸಲು ಕೋರಿರುವ ಉದ್ದೇಶ
1	ಶ್ರೀ ವಿಜಯ್‌ಕುಮಾರ್ ಬಿನ್ ಲೇ॥ ರಾಮಯ್ಯ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	32	3–28 ಮತ್ತು 0ಎ–01ಗು ’ಎ’ ಖರಾಬು	ಸಾರ್ವಜನಿಕ, ಅರೆಸಾರ್ವಜನಿಕ	ವಸತಿ
2	ಶ್ರೀ ಎಂ.ಮುನಿರಾಜು ಬಿನ್ ಲೇ॥ ಮದ್ದಪ್ಪ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	37/1	0–38	ಸಾರ್ವಜನಿಕ, ಅರೆಸಾರ್ವಜನಿಕ	ವಸತಿ
3	ಶ್ರೀ ವೈಎನ್.ಶಾಮಣ್ಣ ಬಿನ್ ವೈ.ಎನ್.ನಾರಾಯಣಪ್ಪ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	37/3	0–38	ಸಾರ್ವಜನಿಕ, ಅರೆಸಾರ್ವಜನಿಕ	ವಸತಿ
4	ಶ್ರೀ ಎಸ್.ಆರ್. ವಿಜಯಕುಮಾರ್ ಬಿನ್ ರಾಮಯ್ಯ	ದೇವನಹಳ್ಳಿ	ಕಸಬಾ	ಗುಟ್ಟಹಳ್ಳಿ	37/4	1–11	ಸಾರ್ವಜನಿಕ, ಅರೆಸಾರ್ವಜನಿಕ	ವಸತಿ

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

DIPR/DDO/B-Rural/Shirdi Sai/419/2020-21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಪಿ.ಯು. ಬೋರ್ಡ್ ಎದುರು, ಮಲ್ಲೇಶ್ವರ–18ನೇ ಕ್ರಾಸ್, ಬೆಂಗಳೂರು–560003 ದೂ.: 080–23343167, ಇ–ಮೇಲ್: forest.brzp@gmail.com

ಸಂಖ್ಯೆ: ಎ2/ಬಿಯುಡಿ/ಬೆಂಗ್ರಾಸಾ/ಟೆಂಡರ್/ಸಿಆರ್–24/2020–21 ದಿನಾಂಕ: 15.03.2021

ಇ–ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆ, ಸಾರ್ವಜನಿಕರಿಗೆ ವಿತರಣೆಗೋಸ್ಕರ ಸಸಿ ಬೆಳೆಸುವ (ಆರ್.ಎಸ್.ಪಿ.ಡಿ.) ಯೋಜನೆ, ರಸ್ತೆ ಬದಿ ನೆಡುತೋಪು ಯೋಜನೆ, ನಗರ ಪ್ರದೇಶ ಹಸಿರೀಕರಣ, ರಾಷ್ಟ್ರೀಯ ಹೆದ್ದಾರಿ ಯೋಜನೆಗಳಡಿ ನೆಡುತೋಪುಗಳ ನಿರ್ವಹಣೆ ಮತ್ತು ಸಸ್ಯ ಕ್ಷೇತ್ರಗಳ್ಲಿ ಸಸಿಗಳ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಪ್ರಾದೇಶಿಕ ಅರಣ್ಯ ವಿಭಾಗ / ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗ ಇಲ್ಲಿ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://eproc.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **05.04.2021 ಸಂಜೆ 4:00** ರವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **07.04.2021**ರ **ಅಪರಾಹ್ನ 4:00 ಗಂಟೆಗೆ**. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಕೆಯಿಲ್ಲದೆ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್ಡನ್ನು ದಿನಾಂಕ: **08.04.2021**ರಂದು **ಅಪರಾಹ್ನ 4:00 ಗಂಟೆಗೆ** ತೆರೆಯಲಾಗುವುದು.

ಮೇಲ್ಕಂಡ ದಿನಾಂಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ: **19.04.2021**ರ **ಅಪರಾಹ್ನ 4:00 ಗಂಟೆ**ವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ: **21.04.2021**ರಂದು ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ದಿನಾಂಕ: **22.04.2021**ರಂದು ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗ, ಪಿ.ಯು. ಬೋರ್ಡ್ ಎದುರು, ಮಲ್ಲೇಶ್ವರಂ 18ನೇ ಕ್ರಾಸ್, ಬೆಂಗಳೂರು–560003 ಇಲ್ಲಿ ಸಂಪರ್ಕಿಸಬಹುದು.

ವಾಸಾಸಂಇ/ಉನಿಕ/ಬೆಂಗ್ರಾಜಿ/ಎಲ್‌ಸಿ/408/2020–21

ಸಹಿ/–, ಉಪ ಅರಣ್ಯ ಸಂರಕ್ಷಣಾಧಿಕಾರಿ,
ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Drivers

WANTED BIKE rider's Join with India's largest bike taxi service and earn up to 30,000 per month & ride at your convenience, redeemable earnings, insured rides & more details please contact:- 080-47096073

Graphic Designers

WANTED DTP Operator/ Graphic Designer, Corel Draw, Illustrator & Photoshop for a Pvt Limited Company in around Rajajinagar Contact: 23307910 / 9108458798

General

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS: 7676760299/ 7676760399

Marketing & Sales

WANTED ONLY Experienced App Downloaders: 50 nos in bangalore contact: 94481 71416

EDUCATIONAL

Correspondence Courses

DIRECT FINAL (ONE Sitting) PUC/B. Com/ BA/BBA/BCA/ MBA/ B.Ed/ Diploma/ B.Tech/ D.Pharma, 100%Success. Shilpa: 9663366823

Distance Education

DEGREE/ DIPLOMA LOGISTICS and Supply Chain, Airport Ground Staff, Airport Management, Automobile Production and Servicing,Textile Technology,Telecom,Hotel Management,Hospital Management,Montessori, NTTC Call: 9778261645 / 9745910775

Special Courses

SUBSCRIBE/ PRACTICE 2021 SSLC-10th/ CBSE/ICSE, II-PUC Authentic Offline Board Examination Papers with Explained Answers. Reduced Syllabus, Revised Blue-prints. 15 Sets/Subject. Practice from home. Score Maximum. Return Practiced Papers, Get Subscription refund. Free Counselling/ Helpful tips. Call for appointments 'EXAMINATIONS ACADEMY'- 9886400491/ Mysore-9886554326

DH Classifieds

BOOK YOUR AD on SATURDAY & GET 50% OFF ON SUNDAY

For more information contact:
9880856233
9731810277 | 9901641752
9845114560 | 9886213331

*condition apply

BUSINESS

Business to Business

Finance

NRI'S INVESTMENT AND FINANCE AVAILABLE ON LOW INTEREST AGAINST, PROPERTIES, LAND& BUILDING, SITES, FLATS, (ALSO) BUSINESS, COMPANIES CALL: 7411265189

Business Offers

General

GOLDEN INVESTMENT Opportunity; Invest Rs.1-Lacs in our Water & Food products business & get Rs.365/- for 365 days. (Including your Principle+ Profit Share). Returns paid on daily basis from the next day of investment. Interested parties Call; 9739979946.

PUBLIC NOTICE

PUBLIC NOTICE

This is to bring to the NOTICE of the general public that, the undersigned have misplaced the following original documents in respect of the properties bearing Sy. No. 103/1, 103/2 and 103/3 (formerly Sy. No. 103) totally measuring 5 Acre 23 Guntas situated at Chikkagubbi Village, Bidarahalli Hobli, Bangalore East Taluk, while in joint custody and possession of the same, and are unable to trace the original documents, despite best efforts and thorough search:

1. Sale Deed dated 20.02.1939 registered as Document No.66/38-39 in Book I, Volume 63, Page 204 to 206 dated 20.02.1939, in the office of the District Registrar of Bangalore.

2. Sale Deed dated 01.11.1951, registered as Document No. 2299/1951-52, in Book I, Volume 740, at Pages 183 to 185, in the office of the Sub-Registrar, Hoskote.

3. Sale Deed dated 06.02.1957, registered as Document No. 2954/56-57 in Book I, Volume 871 at Pages 8 to 9, in the office of the Sub-Registrar, Hoskote, Bangalore.

4. Sale Deed dated 15.10.1959, registered as Document No. 2271/59-60 in Book I, Volume 945 at Page 79, in the office of the Sub-Registrar, Hoskote, Bangalore.

5. Inheritance Certificate bearing IHC No. 01/88-89 dated 14.07.1988.

Hence, the public at large is requested to return the aforementioned original documents to the undersigned, in the event the same is found, forthwith. The General Public is also **CAUTIONED** that, any person in possession of the aforementioned documents, and are misusing the same in any manner would be liable for criminal prosecution.

Dated this, the 25th day of March 2021

Sd/-
Nagaraja R
No: 301, 3rd Floor,
Ebrahim Residency
98/1, Residency Road,
Bangalore-560025.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

AUTOMOTIVE

Four Wheelers Selling

Ford

ACCIDENT DAMAGED KL-18 Y-6108 ECO SPORT 1.5 TITA/2020 is FOR SALE with RC. Contact: 9844048926

RENTAL PROPERTIES

Accommodation Available

Commercial

1500 SQFT AND 3000 SQFT CAN BE RENTED SEPERATELY OR TOGETHER FACING RV. MAIN ROAD NEXT TO INDIAN OIL PETROL BUNK, 45 FEET GLASS FRONTAGE WITH HORIZONTAL GRILL SUITABLE FOR BANKS DEPARTMENTAL STORES ELECTRONIC GOODS SHOWROOMS GROUND FLOOR., RESERVED PARKING GIVEN REASONABLE RENT CONTACT OWNER 9740854176

BANASHANKARI 600 SQFT, FURNISHED OFFICE SPACE NEAR BDA COMPLEX SECOND FLOOR, 16400-RENT, 9986033339, 26713802.

REAL ESTATE SELLING

Agricultural Land

Mysore Road

SALE 1ACRE LAND near MADDUR, BANGALORE- MYSORE ROAD FACING. Genuine Buyers Contact: 9739451139

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Mysore Road

FURNISHED 3 ½ BHK LUXURY APARTMENT, BRIGADE PANORAMA MYSORE ROAD, 11TH FLOOR, 21800-RENT, 9986033339, 9341823353.

Rajarajeshwari Nagar

RAJARAJESHWARINAGAR - 3-BEDROOM Flat- Semi-furnished 1500Sft East Facing, Near Paka-Shala Hotel. 58 Lacs Negotiable. 'GK'- 94480-56369

Farm House/ Land/ Resorts

HAL And Around

THREE 30X46 sqft lot Fully developed location Rs 9999/- sqft contact on WhatsApp +15127962388

Sites

Intl Airport Road

***PREMIUM TEACHERS** LAYOUT* @ ONLY 950/-SFT on NH-207, Near to Bangalore RURAL District Collector Office, Near BANGALORE International Airport & GITAM University Contact:7813860860

Jayanagar

JAYANAGAR T BLOCK BDA 60X40 Site for Sale East Facing, 40 ft Road Contact-9880257586, 9902726006

PERSONAL

Lost

LOST

I, Jayalakshmi Sanjay w/o N.S. Sanjay, r/o B1401, The Icon, Thanisandra Main Road, Bangalore - 77, have lost my Original Sale Deed 1141/2003, registered on 30/07/2003 at Denkanikottai SRO, Krishnagiri Dt, TamilNadu. If found, please contact me at the above address or at the below number

Contact No. 94801 88690

DOCUMENT LOST

I, **Y.Jayaram** aged 66 Years S/o Late S.V. Yallappa Have LOST Sale Deed No 1072/1929-30 dated 17.02.1930 Sy.No. 65, measuring 3 acres 39 guntus situated at Chikkadasarahalli, Sarjapur Hobli, Anekal Taluk, Bangalore Rural.
Finders pls Contact 9964356277

Change of Name

I, MEGHANA.D.S residing No.72, Channarayapatna Village and Post, Devanahalli Taluk, Bangalore Rural-562135 have chagned my minor daughter's name from DHIMAHI.M to DHIMAHI.M. GOWDA vide affidavit dated 24/03/2021 sworn before notary Chandrakala.B, Bangalore.

I SARIYA FATHIMA BEGUM KIRGAVALU MUGDUM holder of Indian Passport No K0737431 daughter of MOHAMED MUGDUM KIRGAVALU BAVASAHEB having permanent residence in #1315/137 Jeevanpur Mohalla, Channapatna -562160, INDIA and presently residing in #1993, Way #2625, Darsait, Muscat, Oman intend to change my name from SARIYA FATHIMA BEGUM KIRGAVALU MUGDUM to SARIYA FATHIMA BEGUM for all practical purpose, any objection towards my name change may please be communicated to Embassy of India, Diplomatic Quarters, Al Khuwair, P box 1727, Postal Code 112. Ruwi, Sultanate of Oman

HEALTH SPECIAL

ವಿಶೇಷ ಕೊಡುಗೆಗಾಗಿ, ಕೂಡಲೇ ಸಂಪರ್ಕಿಸಿ!!!

HHCC
+ ಬ್ಯಾಟರಿಗಳಿಂದ ಮುಕ್ತಿ
+ ಅಗೋಚರ ಶ್ರವಣ ಸಾಧನಗಳು ಉಪಲಬ್ಧ
+ ಹಿರಿಯ ನಾಗರಿಕರಿಗಾಗಿ ಮನೆಗೆ ಭೇಟಿ

ಬೂಥ್‌ಲೆಸ್ ಕುಡುವೇವ್ ಆಡಿಯೋಮೀಟರ್ ಮೂಲಕ ತಪಾಸಣೆ

ಬೆಂಗಳೂರು ನಗರದಾದ್ಯಂತ ಮತ್ತು ಬಾಗಲಕೋಟೆ, ಬಳ್ಳಾರಿ, ದಾವಣಗೆರೆ ಹಾಗೂ ಹುಬ್ಬಳ್ಳಿ ನಗರಗಳಲ್ಲೂ ಕೇಂದ್ರಗಳಿವೆ. ನಿಮ್ಮ ಹತ್ತಿರದ ಕೇಂದ್ರ ತಿಳಿಯಲು ಸಂಪರ್ಕಿಸಿ.

ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್
99456 11100

WE, R. UMESH PRABHU and VISHALA. N. BHUSHAN R/a #238, Railway Mens Layout, Ramakrishnanagara, 4th Block, Nandini Layout, Bengaluru- 560096 Have Changed Our Minor Daughter's Name From POOJA. U.V. PRABHU (DOB: 15.09.2015) to VAIBHAVI AADYA. U. Vide Affidavit Dated: 25.10.2017 Before Notary B. Hanumantharaya, Bengaluru-22.

I, Smt Anuradha R, W/o Late Narayanappa, Residing at #32, Honnonahalli, Rajanakunte, Yelahanka Hobli, Bangalore- 560064, My Name is Wrongly Mentioned In My Husband's LIC Policy as R.Radha and R,Radha, Anuradha R and Radhamma are one and the same name and same Person, In Future My Name Anuradha R Only, Vide Affidavit Dated 03-10-2020, Before Notary R.Shivannachari, Bangalore.

WE, R. UMESH PRABHU and VISHALA. N. BHUSHAN R/a #238, Railway Mens Layout, Ramakrishnanagara, 4th Block, Nandini Layout, Bengaluru- 560096 Have Changed Our Minor Daughter's Name From PURBI. U.V. PRABHU (DOB: 15.09.2015) to VIBHA NIDI. U. Vide Affidavit Dated: 25.10.2017 Before Notary B. Hanumantharaya, Bengaluru-22.

I, NEELASHRI U.S aged about 34 years, W/o Arun S., Residing at No. 22, V.S. Iyer, 1st Main, 2nd Cross, Venkateshwara Layout, B.K. Circle, J.P. Nagar, 8th Phase, B.G. Road, Bangalore 560076. have Changed My Son's Name From Sai Shesh Iyer A.S TO AYUSH IYER A.S. vide affidavit dated 23.03.2021 before notary H.S. Dharma Prasad, Bangalore.

I, MADHU.M.R alias MADHU Residing No.9 and 10, 3rd Cross, 2nd A Main Road, AMS Extension, Vidyaranyapura, Bangalore-560097 have changed my name to MADHUMATHI vide affidavit dated 22/03/2021 sworn before notary Leela, Bangalore

I, DEEKSHITH SHETTY S/o Sachidananda Shetty Residing at #216, 4th main, 5th phase, Mahaganapathinagar, Shivanagar, Bangalore-560044 have changed my name from DEEKSHITH to DEEKSHITH SHETTY vide affidavit dated 05/03/2021 before notary B.V.Nirmala, Bangalore

I, LILLY, R/@ #49, Rajendra Nagar, Koramangala, Bangalore-47. Have Changed My Name To LILLY MARY.F. Vide Affidavit Dated:01/03/2021 Before Noatary B.M Chandrashekar, Bangalore.

‘ಕ್ಷಯ ಮುಕ್ತ ಗ್ರಾಮ ನಿರ್ಮಾಣ’

ಆರೋಗ್ಯ ಇಲಾಖೆಯಿಂದ ವಿಶ್ವ ಕ್ಷಯರೋಗ ದಿನ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2025ರ ವೇಳೆಗೆ ಕರ್ನಾಟಕವನ್ನು ಕ್ಷಯರೋಗ (ಟಿಬಿ) ಮುಕ್ತ ಮಾಡುವ ಗುರಿ ಹಾಕಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಕ್ಷಯ ಮುಕ್ತ ಗ್ರಾಮ, ವಾರ್ಡ್ ಎಂದು ಘೋಷಿಸುವ ಮೂಲಕ ವಿನೂತನ ಆಂದೋಲನವನ್ನು ರಾಜ್ಯದಾದ್ಯಂತ ನಡೆಸಲಾಗುತ್ತದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕಾರ್ಯಕ್ರಮವನ್ನು ಡಾ.ಕೆ. ಸುಧಾಕರ್ ಉದ್ಘಾಟಿಸಿದರು. ಡಾ.ಕೆ.ವಿ. ತ್ರಿಲೋಕ ಚಂದ್ರ, ಡಾ. ಅರುಂಧತಿ ಚಂದ್ರಶೇಖರ್ ಹಾಗೂ ಡಾ. ಓಂಪ್ರಕಾಶ್ ಪಾಟೀಲ್ ಇದ್ದರು

ವಿಶ್ವ ಕ್ಷಯರೋಗ ದಿನದ ಪ್ರಯುಕ್ತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಗರದಲ್ಲಿ ಬುಧವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಜಗತ್ತಿನಲ್ಲಿ ಪ್ರತಿ 22 ಸೆಕೆಂಡಿಗೆ ಒಬ್ಬ ವ್ಯಕ್ತಿ ಸಾವಿಗೀಡಾಗುತ್ತಿದ್ದಾನೆ. ವರ್ಷದಲ್ಲಿ 14 ಲಕ್ಷ ಮಂದಿ ಮೃತಪಡುತ್ತಿದ್ದಾರೆ. ಇದರಲ್ಲಿ ಮೂರನೇ ಒಂದರಷ್ಟು ಮರಣ ಪ್ರಕರಣಗಳು ದೇಶದಲ್ಲಿಯೇ ವರದಿಯಾಗುತ್ತಿದೆ. ಈಗಾಗಲೇ ನಮ್ಮ ದೇಶವನ್ನು ಪೋಲಿಯೊ ಮುಕ್ತ ಮಾಡಲಾಗಿದೆ. ಆದರೆ, ಇದಕ್ಕಿಂತ ಹಿಂದೆ ಕಾಣಿಸಿಕೊಂಡಿದ್ದ ಕ್ಷಯವನ್ನು ಇನ್ನೂ ಹೋಗಲಾಡಿಸಲು ಸಾಧ್ಯವಾಗಲಿಲ್ಲ. 2025ರ ವೇಳೆಗೆ ಕ್ಷಯ ಮುಕ್ತ ದೇಶ ನಿರ್ಮಾಣದ ಗುರಿಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ. ರಾಜ್ಯದಲ್ಲಿ ಕೂಡ ಪೂರಕವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ’ ಎಂದರು.

4 ಲಕ್ಷ ಮಂದಿ ಸಾವು: ಇಲಾಖೆಯ ಆಯುಕ್ತ ಡಾ.ಕೆ.ವಿ. ತ್ರಿಲೋಕ ಚಂದ್ರ, ‘ಕ್ಷಯಕ್ಕೆ ಪ್ರತಿವರ್ಷ ದೇಶದಲ್ಲಿ 4 ಲಕ್ಷದಿಂದ 5 ಲಕ್ಷ ಮಂದಿ ಮೃತಪಡುತ್ತಿದ್ದಾರೆ. ದುರ್ಬಲ ವರ್ಗದ ಜನತೆಯನ್ನು ತಲುಪಿ, ಟಿಬಿ ಸೇವೆಗಳನ್ನು ಒದಗಿಸಲು ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಕೋವಿಡ್‌ನಿಂದಾಗಿ ಕಳೆದ ವರ್ಷ ಈ ರೋಗದ ಪತ್ತೆ ಮತ್ತು ಚಿಕಿತ್ಸೆಗೆ ಸಮಸ್ಯೆಯಾಗಿತ್ತು. ಅಷ್ಟಾಗಿಯೂ ಅಧಿಕ ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ. ಕ್ಷಯ ರೋಗಕ್ಕೆ ವಿಶೇಷ ಸೇವೆಗಳನ್ನು ಒದಗಿಸಲು ಹೆಚ್ಚಿನ ಪ್ರಯತ್ನ ಮಾಡಬೇಕಿದೆ’ ಎಂದರು.

ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಡಾ. ಅರುಂಧತಿ ಚಂದ್ರಶೇಖರ್, ಆರೋಗ್ಯ ಇಲಾಖೆ ನಿರ್ದೇಶಕ ಡಾ. ಓಂಪ್ರಕಾಶ್ ಪಾಟೀಲ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷ ಡಾ.ಎಂ.ಕೆ. ಸುದರ್ಶನ್ ಇದ್ದರು.

‘2025ಕ್ಕೆ ಜಿಲ್ಲೆ ಕ್ಷಯರೋಗ ಮುಕ್ತ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಬೆಂಗಳೂರು ನಗರ ಜಿಲ್ಲೆಯನ್ನು 2025ರ ವೇಳೆಗೆ ಕ್ಷಯ ರೋಗ ಮುಕ್ತವಾಗಿಸುವುದು ನಮ್ಮೆಲ್ಲರ ಮುಖ್ಯ ಗುರಿಯಾಗಬೇಕು’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹೇಳಿದರು.

ವಿಶ್ವ ಕ್ಷಯರೋಗ ದಿನಾಚರಣೆ ಅಂಗವಾಗಿ ಬೆಂಗಳೂರು ಪೂರ್ವ ತಾಲ್ಲೂಕಿನ ಕಣ್ಣೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕ್ಷಯರೋಗ ಪತ್ತೆ ಪ್ರಮಾಣವು ನಮ್ಮ ನಗರ ಜಿಲ್ಲೆಯಲ್ಲಿ ಒಂದು ಲಕ್ಷ ಜನ ಸಂಖ್ಯೆಗೆ 136 ಸರಾಸರಿ ಇದೆ. ಕ್ಷಯ ರೋಗ ಗುಣಪಡಿಸುವಲ್ಲಿ ಶೇ.100 ರಷ್ಟು ಸಾಧನೆಯಾಗಬೇಕು’ ಎಂದರು.

ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರು ಕ್ಷಯರೋಗ ಸಂಪೂರ್ಣವಾಗಿ ವಾಸಿಯಾಗಿರುವ ಕಣ್ಣೂರಿನ ರತ್ನಮ್ಮ ಅವರಿಗೆ ಪೌಷ್ಟಿಕಾಂಶವುಳ್ಳ ಆಹಾರಧಾನ್ಯ ಕಿಟ್ ಅನ್ನು ವಿತರಿಸಿದರು

‘ಒಂದು ಲಕ್ಷ ಜನಸಂಖ್ಯೆಗೆ 10 ಪ್ರಕರಣಗಳಿಗಿಂತ ಕಡಿಮೆ ಪ್ರಮಾಣದಲ್ಲಿ ರೋಗ ಪತ್ತೆಯಾಗುವಂತೆ ಕ್ರಮವಹಿಸಲು ಎಲ್ಲರೂ ಶ್ರಮಿಸಬೇಕಿದೆ. ಈ ರೋಗದಿಂದ ಯಾವುದೇ ಸಾವು ಸಂಭವಿಸದಂತೆ ಎಚ್ಚರ ವಹಿಸುವ ಅಗತ್ಯವಿದೆ’ ಎಂದು ಅವರು ಹೇಳಿದರು.

ಜಿಲ್ಲಾ ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ. ಮಹೇಶ್ ಕುಮಾರ್, ‘ಇದು ಸೂಕ್ತ ಚಿಕಿತ್ಸೆ ಮೂಲಕ ಗುಣಪಡಿಸಬಹುದಾದ ರೋಗವಾಗಿದ್ದು, ಹರಡುವುದನ್ನು ತಡೆಗಟ್ಟಲು, ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಕೈ ಜೋಡಿಸುವ ಅಗತ್ಯವಿದೆ’ ಎಂದರು.

ಪೂರ್ವ ತಾಲ್ಲೂಕಿನ ಆರೋಗ್ಯಾಧಿಕಾರಿಡಾ. ಚಂದ್ರಶೇಖರಯ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶ್ರೀನಿವಾಸ ಜಿ.ಎ., ತಹಶಿಲ್ದಾರ್ ಅಜಿತ್ ಕುಮಾರ್, ಕಣ್ಣೂರಿನ ಪ್ರಾಥಮಿಕ ಆರೋಗ್ಯಾಧಿಕಾರಿ ಉಮಾ ರಾಕೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಅಕ್ಕಯ್ಯಮ್ಮ ಮತ್ತಿತರರು ಇದ್ದರು.

ಕೋವಿಡ್ ಸಂಕಷ್ಟದ ನಡುವೆಯೂ ಕಳೆದ ವರ್ಷಕ್ಕಿಂತ ಹೆಚ್ಚು ತೆರಿಗೆ ಸಂಗ್ರಹ

ಒಂದೇ ದಿನ ₹36 ಕೋಟಿ ಆಸ್ತಿ ತೆರಿಗೆ ಸಂಗ್ರಹ!

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯ ಕಂದಾಯ ವಿಭಾಗದ ಅಧಿಕಾರಿಗಳು ಬುಧವಾರ ಒಂದೇ ದಿನ ₹ 36.65 ಕೋಟಿ ತೆರಿಗೆ ಸಂಗ್ರಹ ಮಾಡಿದ್ದಾರೆ. 2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಇನ್ನೇನು ಒಂದೇ ವಾರ ಇದ್ದು, ಪಾಲಿಕೆಯು ಹಳೆ ಬಾಕಿಯೂ ಸೇರಿ ಇದುವರೆಗೆ ₹ 2,753 ಕೋಟಿ ತೆರಿಗೆ ಸಂಗ್ರಹಿಸಿದೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದ ಎಲ್.ಶ್ರೀನಿವಾಸ್ 2020ರ ಏ. 20ರಂದು ಬಜೆಟ್ ಮಂಡಿಸಿದಾಗ ಬಾಕಿಯೂ ಸೇರಿ ಪ್ರಸಕ್ತ ಸಾಲಿನಲ್ಲಿ ₹ 2,500 ಕೋಟಿ ಹಳೆ ಬಾಕಿ ಸೇರಿಸಿ ₹ 4942 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಿದ್ದರು.

‘ಕಳೆದ (2019–20) ಸಾಲಿಗೆ ಹೋಲಿಸಿದರೆ ಈ ಬಾರಿ ತೆರಿಗೆ ಸಂಗ್ರಹ ಹೆಚ್ಚಾಗಿದೆ. ಬಿಬಿಎಂಪಿ ಇತಿಹಾಸದಲ್ಲೇ ಇಷ್ಟೊಂದು ಪ್ರಮಾಣದ ತೆರಿಗೆ ಸಂಗ್ರಹ ಯಾವತ್ತೂ ಆಗಿರಲಿಲ್ಲ. ಕೋವಿಡ್‌ನಿಂದ ಎದುರಾದ ಸಂಕಷ್ಟದ ಕಾಲದಲ್ಲೂ ಇಷ್ಟೊಂದು ತೆರಿಗೆ ಸಂಗ್ರಹವಾಗಿರುವುದಕ್ಕೆ ಅಧಿಕಾರಿಗಳ ಪರಿಶ್ರಮ ಹಾಗೂ ಬಿಬಿಎಂಪಿ ಮೇಲೆ ಜನ ನಂಬಿಕೆ ಇಟ್ಟಿರುವುದು ಕಾರಣ’ ಎಂದು ಪಾಲಿಕೆ ಆಯುಕ್ತ ಎನ್. ಮಂಜುನಾಥಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ತೆರಿಗೆ ರಿಯಾಯಿತಿ ಇಲ್ಲದ ದಿನಗಳಲ್ಲಿ ಒಂದೇ ದಿನ ₹ 36 ಕೋಟಿ ತೆರಿಗೆ ಸಂಗ್ರಹವಾಗಿದ್ದೂ ಹೊಸ ಸಾಧನೆ. ಇನ್ನೂ ₹ 75 ಕೋಟಿ ಮೊತ್ತದ ತೆರಿಗೆ ಪಾವತಿಗೆ ಆಸ್ತಿ ಮಾಲೀಕರು ಚಲನ್ ಪಡೆದಿದ್ದು, ಅದು ವಾರದೊಳಗೆ ಪಾವತಿ ಆಗುವ ನಿರೀಕ್ಷೆ ಇದೆ. ಈ ಆರ್ಥಿಕ ವರ್ಷದ ಅಂತ್ಯಕ್ಕೆ ₹ 2850 ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗಬಹುದು’ ಎಂದು ಅವರು ಆಶಾವಾದ ವ್ಯಕ್ತಪಡಿಸಿದರು.

‘ಕೋವಿಡ್ ಇದ್ದುದರಿಂದ ತೆರಿಗೆಸಂಗ್ರಹ ಪ್ರಮಾಣದಲ್ಲಿ ಭಾರಿ ಇಳಿಕೆ ಆಗಬಹುದು ಎಂದು ಭಾವಿಸಿದ್ದೆವು. ಹಾಗಾಗಿ ತೆರಿಗೆ ವಸೂಲಿಗೆ ಕಠಿಣ ಪರಿಶ್ರಮ ಹಾಕಿದೆವು. ತೆರಿಗೆ ಸಂಗ್ರಹಕ್ಕೆ ಪ್ರತಿ ಬುಧವಾರ ವಿಶೇಷ ಅಭಿಯಾನ ನಡೆಸಿದೆವು. ಅದು ಫಲ ನೀಡಿದೆ’ ಎಂದು ವಿಶೇಷ ಆಯುಕ್ತ ಬಸವರಾಜ್ ತಿಳಿಸಿದರು.

2019–20ನೇ ಸಾಲಿನಲ್ಲಿ ಬಿಬಿಎಂಪಿ ಹಿಂದಿನ ವರ್ಷಗಳ ಬಾಕಿ ₹ 2,480.58 ಕೋಟಿಯೂ ಸೇರಿದಂತೆ ಒಟ್ಟು ₹ 4,929.89 ತೆರಿಗೆ ಸಂಗ್ರಹಿಸುವ ಗುರಿ ಹೊಂದಿತ್ತು. ₹ 2,686 ಕೋಟಿ ತೆರಿಗೆ ಸಂಗ್ರಹಿಸಿತ್ತು. ಈ ಬಾರಿ ಇದಕ್ಕಿಂತಲೂ ಹೆಚ್ಚು ತೆರಿಗೆ ಸಂಗ್ರಹವಾಗಿದೆ.

ಮಾ.26ರಂದು ಬಜೆಟ್ ಮಂಡನೆ?: ಬಿಬಿಎಂಪಿ ಇದೇ 26ರಂದು 2021-22ನೇ ಸಾಲಿನ ಬಜೆಟ್ ಮಂಡಿಸಲು ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಈ ಕುರಿತ ಅಧಿಕೃತ ಪ್ರಕಟಣೆ ಹೊರಡಿಸಿಲ್ಲ.

ಅಂಕಿ-ಅಂಶಗಳು

20.60 ಲಕ್ಷ
ತೆರಿಗೆ ಪಾವತಿ ವ್ಯಾಪ್ತಿಗೆ ಸೇರಿರುವ ಆಸ್ತಿಗಳು

₹2,098 ಕೋಟಿ
2020–21ನೇ ಸಾಲಿನಲ್ಲಿ ಸಂಗ್ರಹವಾದ ಆಸ್ತಿ ತೆರಿಗೆ

₹592.94 ಕೋಟಿ
ಹಳೆ ಬಾಕಿ ವಸೂಲಿಯಾಗಿರುವುದು

7.44 ಲಕ್ಷ
ತೆರಿಗೆ ಬಾಕಿ ಉಳಿಸಿಕೊಂಡಿದ್ದ ಆಸ್ತಿಗಳು

₹2,442 ಕೋಟಿ
ಬಿಬಿಎಂಪಿಯ 2020–21ನೇ ಸಾಲಿನ ಆಸ್ತಿ ತೆರಿಗೆ ಸಂಗ್ರಹ ಗುರಿ

₹2,500 ಕೋಟಿ
ಈ ಹಿಂದಿನ ವರ್ಷಗಳ ತೆರಿಗೆ ಬಾಕಿ ವಸೂಲಾಗಬೇಕಾದುದು

₹56 ಕೋಟಿ
ನ್ಯಾಯಾಲಯದ ಆದೇಶಗಳ ಮೂಲಕ ತೆರಿಗೆಯ ಭಾಗಶಃ ಮೊತ್ತ ಪಾವತಿ ಆಗಿರುವುದು

ಆಸ್ತಿ ತೆರಿಗೆ ಸಂಗ್ರಹ: ವಲಯವಾರು ವಿವರ (₹ ಕೋಟಿಗಳಲ್ಲಿ)

ವಲಯ	ಹಳೆ ಬಾಕಿ ವಸೂಲಿ	ಪ್ರಸಕ್ತ ವರ್ಷದ ತೆರಿಗೆ	ಒಟ್ಟು ಸಂಗ್ರಹ
ಯಲಹಂಕ	46.68	184.13	230.81
ಮಹದೇವಪುರ	192.66	545.95	738.61
ದಾಸರಹಳ್ಳಿ	16.82	57.48	74.30
ಆರ್.ಆರ್.ನಗರ	49.23	132.06	181.29
ಬೊಮ್ಮನಹಳ್ಳಿ	75.46	199.32	274.78
ದಕ್ಷಿಣ	64.80	341.70	406.50
ಪಶ್ಚಿಮ	48.86	226.62	275.48
ಪೂರ್ವ	98.43	416.98	515.41

‘ತಪ್ಪು ಮಾಹಿತಿಗೆ ಇನ್ನು ಅವಕಾಶವಿಲ್ಲ’

‘ಆಸ್ತಿ ತೆರಿಗೆ ಪಾವತಿಗೆ ಎ,ಬಿ,ಸಿ,ಡಿ,ಇ ಎಂಬ ವಲಯಗಳನ್ನು ಗೊತ್ತುಪಡಿಸಲಾಗಿದೆ. ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ತೆರಿಗೆ ಪಾವತಿಸುವಾಗ ಆಸ್ತಿ ಮಾಲೀಕರು ತಮ್ಮ ಆಸ್ತಿಗೆ ಸಂಬಂಧಪಡದ ವಲಯವನ್ನು (ಅಲ್ಲಿ ಮಾರ್ಗಸೂಚಿ ಮೌಲ್ಯ ಬೇರೆ ಇರುತ್ತದೆ) ಉಲ್ಲೇಖಿಸಿ ವಂಚನೆ ನಡೆಸುತ್ತಿದ್ದರು. ಇಂತಹ 3.90 ಲಕ್ಷ ಪ್ರಕರಣಗಳನ್ನು ಬಿಬಿಎಂಪಿ ಪತ್ತೆಹಚ್ಚಿದ್ದು, 78 ಸಾವಿರ ಮಂದಿಗೆ ನೋಟಿಸ್ ನೀಡಿದ್ದೇವೆ. ಈಗ ಬಿಬಿಎಂಪಿಯೇ ವಲಯದ ಆಯ್ಕೆ ಮಾಡುವುದರಿಂದ ಇಂತಹ ವಂಚನೆಗೆ ಅವಕಾಶ ಇಲ್ಲ. ಹಾಗಾಗಿ ಸಹಜವಾಗಿ ಮುಂದಿನ ವರ್ಷ ಆಸ್ತಿ ತೆರಿಗೆ ಸಂಗ್ರಹ ಇನ್ನಷ್ಟು ಹೆಚ್ಚಳವಾಗಲಿದೆ’ ಎಂದು ಮಂಜುನಾಥಪ್ರಸಾದ್ ವಿಶ್ವಾಸ ವ್ಯಕ್ತಪಡಿಸಿದರು.

‘ಬಹುಮಹಡಿ ಕಟ್ಟಡಗಳ ಟೋಟಲ್ ಸ್ಟೇಷನ್ ಸರ್ವೆ ನಡೆಸಿದಾಗ ಆಸ್ತಿ ತೆರಿಗೆ ವ್ಯತ್ಯಾಸ ಕಂಡುಬಂದಿದೆ. ಇದರ ಮೊತ್ತವೇ ₹ 627 ಕೋಟಿಗಳಷ್ಟಿದೆ. ಈ ವ್ಯತ್ಯಾಸದ ಮೊತ್ತದ ವಸೂಲಿಗೂ ಕ್ರಮವಹಿಸಲಾಗುತ್ತಿದೆ’ ಎಂದರು.

ಸಂಕ್ಷಿಪ್ತ ಸುದ್ದಿ

ಅಮೆರಿಕ ವಿವಿಗಳಲ್ಲಿ ವ್ಯಾಸಂಗ ಮಾಹಿತಿ ಕಾರ್ಯಾಗಾರ

ಬೆಂಗಳೂರು: ಅಮೆರಿಕದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ‘ಸ್ಟೆಮ್’ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ) ಕೋರ್ಸ್‌ಗಳಿಗೆ ದಾಖಲಾಗುವುದಕ್ಕೆ ಸಂಬಂಧಿಸಿದಂತೆ ಯಶ್ ಟ್ರಸ್ಟ್ ಇದೇ 27ರಂದು ಮಾಹಿತಿ ಕಾರ್ಯಾಗಾರ ಹಮ್ಮಿಕೊಂಡಿದೆ.

ಎಜುಕೇಶನ್‌ಯುಎಸ್‌ಎ ಬೆಂಗಳೂರು ಸಂಸ್ಥೆ ಜೊತೆಗೂಡಿ ಟ್ರಸ್ಟ್ ಈ ಕಾರ್ಯಕ್ರಮವನ್ನು ಆನ್‌ಲೈನ್‌ನಲ್ಲಿ ಆಯೋಜಿಸಿದೆ. ಒಹಿಯೊ, ನ್ಯೂಯಾರ್ಕ್, ಡ್ರೆಲೆಕ್ಸ್, ನಾರ್ಥ್ ಈಸ್ಟರ್ನ್, ಇಂಡಿಯಾನಾ, ಸುನಿ, ಸ್ಟೀವನ್ಸ್, ವರ್ಸೆಸ್ಟರ್, ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯಗಳೂ ಸೇರಿದಂತೆ ಅಮೆರಿಕದ 12 ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು ಈ ತಮ್ಮ ವಿಶ್ವವಿದ್ಯಾಲಯಗಳ ಕೋರ್ಸ್‌ಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಿದ್ದಾರೆ.

‘ಸ್ಟೆಮ್’ ವಿಷಯಗಳಡಿ ಅಮೆರಿಕದಲ್ಲಿ ಸ್ನಾತಕೋತ್ತರ ಅಥವಾ ಪಿಎಚ್.ಡಿ ಮಾಡಬಯಸುವ ವಿದ್ಯಾರ್ಥಿಗಳು ಉಚಿತವಾಗಿ ಈ ಕಾರ್ಯಾಗಾರಕ್ಕೆ ನೋಂದಣಿ ಮಾಡಿಕೊಳ್ಳಬಹುದು.

ಈ ನೋಂದಣಿಗೆ bit.ly/STEM21O ಲಿಂಕ್ ಬಳಸಬಹುದು. ಮಾಹಿತಿಗೆ, +91 9880041115 ಅಥವಾ edusa@yashnatrust.org ಗೆ ಮೇಲ್ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ನೀರಿನ ಅದಾಲತ್ ಇಂದು

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಇದೇ 25ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ವಾಣಿಜ್ಯ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಪರಿಹರಿಸಲಾಗುವುದು. ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿಗೆ ತೆರಳಿ ಅದಾಲತ್‌ನಲ್ಲಿ ಪಾಲ್ಗೊಳ್ಳಬಹುದು.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:080–22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆ್ಯಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದು.

ಜಿ+3 ವಿನ್ಯಾಸದಲ್ಲಿ ವಸತಿ ಯೋಜನೆ: ಸೋಮಣ್ಣ

ಬೆಂಗಳೂರು: ‘ಸರ್ಕಾರದ ವತಿಯಿಂದ ಇನ್ನು ಮುಂದೆ ಅತಿ ಎತ್ತರದ ಬಹುಮಹಡಿ ಕಟ್ಟಡ ನಿರ್ಮಾಣ ಮಾಡದೆ, 53 ಸಾವಿರ ಮನೆಗಳನ್ನು ಜಿ + 3 ವಿನ್ಯಾಸದಲ್ಲಿ ನಿರ್ಮಾಣ ಮಾಡಲಾಗು ವುದು’ ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ವಿ.ಸೋಮಣ್ಣ

ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘2017ರಲ್ಲಿ 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ ಘೋಷಿಸಲು ನಿರ್ಧರಿಸಲಾಯಿತು. ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಂದು ಲಕ್ಷ ಮನೆಗಳನ್ನು ನೆಲಮಹಡಿ ಸಹಿತ ಮೂರು ಮಹಡಿ (ಜಿ + 3) ಕಟ್ಟಡ ನಿರ್ಮಿಸಲು ರಾಜ್ಯ ಸರ್ಕಾರ ₹ 6 ಸಾವಿರ ಕೋಟಿಯ ಪ್ರಸ್ತಾವನೆ ಕೇಂದ್ರಕ್ಕೆ ಸಲ್ಲಿಸಿದ್ದು, ಕೇಂದ್ರ ತಾತ್ವಿಕ ಅನುಮೋದನೆ ನೀಡಿದೆ. ಅದರಂತೆ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಅಡಿ ಕೇಂದ್ರದ ಸರ್ಕಾರ ಪ್ರತಿ ಮನೆಗೆ ತನ್ನ ಪಾಲಿನ ₹ 1.50 ಲಕ್ಷದಂತೆ ₹ 1,500 ಕೋಟಿಗೆ ಅನುಮೋದನೆ ನೀಡಿದೆ. ಅಲ್ಲದೆ, ಮೊದಲ ಕಂತಿನ ₹ 600 ಕೋಟಿ ಬಿಡುಗಡೆ ಮಾಡಿದೆ’ ಎಂದರು.

ಬಿಟ್‌ಕಾಯಿನ್ ಸ್ವೀಕಾರ: ಮಸ್ಕ್ ಹೇಳಿಕೆ

ನ್ಯೂಯಾರ್ಕ್ (ಪಿಟಿಐ): ‘ಅಮೆರಿಕದಲ್ಲಿ ಟೆಸ್ಲಾ ಕಾರುಗಳನ್ನು ಖರೀದಿಸುವವರು ಬಿಟ್‌ಕಾಯಿನ್ ರೂಪದಲ್ಲಿ ಹಣ ಪಾವತಿಸಬಹುದು’ ಎಂದು ಟೆಸ್ಲಾ ಕಂಪನಿಯ ಮುಖ್ಯಸ್ಥ ಇಲಾನ್ ಮಸ್ಕ್ ಬುಧವಾರ ಹೇಳಿದ್ದಾರೆ.

ಬಿಟ್‌ಕಾಯಿನ್

‘ಬಿಟ್‌ಕಾಯಿನ್‌ಗಳನ್ನು ಡಾಲರ್ ಆಗಿ ಪರಿವರ್ತಿಸುವುದಿಲ್ಲ. ಕಂಪನಿಯ ಆಂತರಿಕ ವ್ಯವಹಾರವನ್ನು ಸಹ ಬಿಟ್‌ಕಾಯಿನ್‌ಗಳ ಮೂಲಕವೇ ನಡೆಸಲಾಗುವುದು’ ಎಂದೂ ಅವರು ಹೇಳಿದ್ದಾರೆ.

‘ಅಮೆರಿಕ ಹೊರತುಪಡಿಸಿ ಇತರ ದೇಶಗಳ ಗ್ರಾಹಕರಿಗೆ ವರ್ಷಾಂತ್ಯಕ್ಕೆ ಈ ಸೌಲಭ್ಯ ನೀಡಲಾಗುವುದು’ ಎಂದು ಮಸ್ಕ್ ಹೇಳಿದ್ದಾರೆ.

ಡಾ.ಶಿವರಾಮ ಕಾರಂತ ಬಡಾವಣೆ ಯೋಜನೆ ಕೈಬಿಡುವಂತೆ ಒತ್ತಾಯಿಸಿ ಪ್ರತಿಭಟನೆ

ನಮ್ಮ ಭೂಮಿ ನಮ್ಮ ಹಕ್ಕು: ರೈತರ ಸ್ಪಷ್ಟೋಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ.ಶಿವರಾಮ ಕಾರಂತ ಬಡಾವಣೆ ಯೋಜನೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಈ ಬಡಾವಣೆಯ ಸಂತ್ರಸ್ತರು ಬುಧವಾರ ಇಲ್ಲಿ ಪ್ರತಿಭಟನೆ ನಡೆಸಿದರು.

'ನಮ್ಮ ಭೂಮಿ ನಮ್ಮ ಹಕ್ಕು. ನಮ್ಮ ಇಚ್ಛೆಗೆ ವಿರುದ್ದವಾಗಿ ಜಮೀನು ಕಿತ್ತುಕೊಳ್ಳಲು ಬಿಡುವುದಿಲ್ಲ' ಎಂದು ಈ ಬಡಾವಣೆಗಾಗಿ ಭೂಸ್ವಾಧೀನಪಡಿಸಲು ಗೊತ್ತುಪಡಿಸಿರುವ ಗ್ರಾಮಗಳ ರೈತರು ಸ್ಪಷ್ಟ ಸಂದೇಶ ಸಾರಿದರು.

ಶಿವರಾಮ ಕಾರಂತ ಬಡಾವಣೆ ಹೋರಾಟ ಸಮಿತಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ನೇತೃತ್ವದಲ್ಲಿ ಅರಮನೆ ಮೈದಾನದ ಬಳಿಯಿಂದ ಬಿಡಿಎ ಕೇಂದ್ರ ಕಚೇರಿವರೆಗೆ ಮೆರವಣಿಗೆಯಲ್ಲಿ ಸಾಗಲು ಪ್ರತಿಭಟನಕಾರರು ಉದ್ದೇಶಿಸಿದ್ದರು. ಆದರೆ, ಪೊಲೀಸರು ಅವಕಾಶ ನೀಡಲಿಲ್ಲ. ಬಿಡಿಎ ಕಚೇರಿ ತಲುಪುವ ಮುನ್ನವೇ ಪ್ರತಿಭಟನಕಾರರನ್ನು ತಡೆದರು. ಬಳಿಕ ರೈತರು ಮೌರ್ಯ ವೃತ್ತದಲ್ಲಿ ಪ್ರತಿಭಟನೆ ಮುಂದುವರಿಸಿದರು.

ರೈತಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, 'ಜನ ನ್ಯಾಯ ಕೇಳಲು ಬಂದಾಗ ಪೊಲೀಸರನ್ನು ಮುಂದೆ ಬಿಟ್ಟು ತಡೆಯುವುದು ಪ್ರಜಾಪ್ರಭುತ್ವವೇ. ಈ ಪ್ರವೃತ್ತಿ ಮುಂದುವರಿಸಿದರೆ ನಿಮ್ಮ ಗುಂಡಿಯನ್ನು ನೀವೇ ತೋಡಿಕೊಂಡಂತೆ' ಎಂದು ಎಚ್ಚರಿಕೆ ನೀಡಿದರು.

'ಈ ಬಡಾವಣೆ ಬಗ್ಗೆ ಪರಿಶೀಲಿಸಲು ಸುಪ್ರಿಂ ಕೋರ್ಟ್ 2018ರಲ್ಲಿ ನ್ಯಾ. ಕೇಶವನಾರಾಯಣ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಅದರ ವರದಿ ಏನಾಯಿತು' ಎಂದು ಪ್ರಶ್ನಿಸಿದರು.

'ನ್ಯಾ.ಕೇಶವ ನಾರಾಯಣ ಸಮಿತಿ ವರದಿ ನೀಡಿದ ಬಳಿಕವೂ ಪ್ರಾಧಿಕಾರವು ಸುಪ್ರೀಂ ಕೋರ್ಟ್ ದಾರಿ ತಪ್ಪಿಸಿದೆ. ಸುಪ್ರೀಂ ಕೋರ್ಟ್ ಕೂಡಾ ರೈತರ ಅರ್ಜಿಯನ್ನು ಪರಿಗಣಿಸಲೇ ಇಲ್ಲ. ಇದರಿಂದ ಸರ್ಕಾರ ನಡೆಸಿದ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಸಿಗಲಿದೆ' ಎಂದರು.

'ನಾವು ಸುಪ್ರೀಂ ಕೋರ್ಟ್ ಪ್ರಸ್ತುತ ರಚಿಸಿರುವ ನ್ಯಾ.ಚಂದ್ರಶೇಖರ ಸಮಿತಿಯ ಪರವೂ ಇಲ್ಲ; ವಿರುದ್ಧವೂ ಇಲ್ಲ. ಸಮಿತಿ ನನಗೂ ನೋಟಿಸ್ ಜಾರಿ ಮಾಡಿದೆ. ಅದಕ್ಕೆ ಉತ್ತರಿಸುವೆ. ಈ ಬಡಾವಣೆ ನಿರ್ಮಾಣವಾದರೆ ರೈತರಿಗೆ ಅನ್ಯಾಯವಾಗುತ್ತದೆ. ಇದನ್ನು ಕೈಬಿಡಿ ಎಂದಷ್ಟೇ ನಮ್ಮ ಬೇಡಿಕೆ' ಎಂದರು.

ಸ್ಥಳೀಯ ಮುಖಂಡ ಬೆಟ್ಟಹಳ್ಳಿ ವೆಂಕಟೇಶ್, 'ಬಿಡಿಎ ಅಧಿಕಾರಿಗಳು ಒಂದು ಪ್ರಕಟಣೆ ಹೊರಡಿಸಿ ಈ ಗ್ರಾಮಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ನೀಡಿದ್ದ ಮಂಜೂರಾತಿಗಳನ್ನು ರದ್ದುಪಡಿಸಿದ್ದೇವೆ ಎಂದು ಹೇಳಿದ್ದಾರೆ. ಹಾಗಾದರೆ ಆ ಮಂಜೂರಾತಿ ನೀಡಿದ್ದ ಅಧಿಕಾರಿಗಳ ಸಂಬಳ ಮತ್ತು ಭತ್ಯೆಯನ್ನೂ ಹಿಂದಕ್ಕೆ ಪಡೆಯುತ್ತೀರಾ' ಎಂದು ಪ್ರಶ್ನಿಸಿದರು.

ರೈತ ಸಂಘದ ಮುಖಂಡ ರಘು, ಸ್ಥಳೀಯ ಪ್ರಮುಖರಾದ ಅಬ್ಬಿಗೆರೆ ರಾಜಣ್ಣ, ಕೃಷ್ಣಪ್ಪ, ಪಂಚಾಕ್ಷರಿ, ನಾಗಭೂಷಣ್ ಮತ್ತಿತರರು ನೇತೃತ್ವ ವಹಿಸಿದ್ದರು.

ಪ್ರತಿಭಟನಕಾರರು ಬಿಡಿಎ ಕೇಂದ್ರ ಕಚೇರಿ ತಲುಪುವ ಮುನ್ನವೇ ಪೊಲೀಸರು ಬಂಧಿಸಿದರು– ಪ್ರಜಾವಾಣಿ ಚಿತ್ರ

ಬಿಡಿಎ ಅಧ್ಯಕ್ಷರ ನಡೆಗೆ ಬೇಸರ

'ವಿಶ್ವನಾಥ್ ಅವರು ಈ ಬಡಾವಣೆ ಬಗ್ಗೆ ಈ ಹಿಂದೆ ಏನು ಹೇಳಿದ್ದರು ಎಂಬುದು ನಿಮಗೆ ಗೊತ್ತಿದೆ. ಬಿಡಿಎ ಅಧಿಕಾರ ಕೈಗೆ ಬಂದ ಬಳಿಕ ಅವರ ನಿಲುವು ಪೂರ್ತಿ ಬದಲಾಗಿದೆ. ಈಗ ಬೇರೆಯೇ ರೀತಿ ಮಾತನಾಡುತ್ತಿದ್ದಾರೆ' ಎಂದು ಕೋಡಿಹಳ್ಳಿ ಚಂದ್ರಶೇಖರ್ ಬೇಸರ ವ್ಯಕ್ತಪಡಿಸಿದರು.

'ಈ ಪ್ರತಿಭಟನೆ ಯಶಸ್ವಿ ಆಗಬಾರದು ಎಂಬ ಕಾರಣಕ್ಕೆ ಗ್ರಾಮದ ಮನೆಗಳಿಗೆ ಪೊಲೀಸರನ್ನು ರಾತ್ರೊ ರಾತ್ರಿ ಕಳುಹಿಸಿ ಪ್ರಮುಖರನ್ನು ವಶಕ್ಕೆ ಪಡೆಯುವಂತೆ ಮಾಡಿದ್ದೀರಿ. ಪ್ರತಿಭಟನಕಾರರಿಗೆ ಊಟದ ವ್ಯವಸ್ಥೆ ಕಲ್ಪಿಸಿದ ಸ್ಥಳೀಯ ಮುಖಂಡ ಸೀತಾರಾಮ್ ಅವರನ್ನೂ ಬಂಧಿಸಿದ್ದೀರಿ. ವಿಶ್ವನಾಥ್ ಅವರೇ ಇದು ಸರಿಯಲ್ಲ' ಎಂದರು.

ಸಿ.ಎಂ ಭರವಸೆ: ಪ್ರತಿಭಟನೆ ಹಿಂದಕ್ಕೆ

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರತಿಭಟನಕಾರರನ್ನು ಕರೆಸಿಕೊಂಡು ಮಾತುಕತೆ ನಡೆಸಿದರು.

'ಈ ಯೋಜನೆ ಕೈಬಿಡುವ ಬಗ್ಗೆ ರಾಜ್ಯದ ಅಡ್ವೊಕೇಟ್ ಜನರಲ್ ಮೂಲಕ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವುದಾಗಿ ಮುಖ್ಯಮಂತ್ರಿ ನಮ್ಮ ಸಮಕ್ಷಮದಲ್ಲಿ ಆಶ್ವಾಸನೆ ನೀಡಿದ್ದಾರೆ. ಅದರ ಆಧಾರದಲ್ಲಿ ಪ್ರತಿಭಟನೆ ಕೈಬಿಡುತ್ತಿದ್ದೇವೆ' ಎಂದು ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

'ಈ ನಡುವೆ ಬಿಡಿಎ ಅಧ್ಯಕ್ಷರು ರಾಜಕೀಯ ಮಾಡಿದರೆ ನಾವು ಮತ್ತೆ ಹೋರಾಟ ನಡೆಸಬೇಕಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ಕೆಂಪಾಪುರ ಗ್ರಾಮಸ್ಥರ ಪ್ರತಿರೋಧ

ಶಾಸಕ ಆರ್.ಮಂಜುನಾಥ್ ಪೊಲೀಸರನ್ನು ತರಾಟೆಗೆ ತೆಗೆದುಕೊಂಡರು. ಜೆಡಿಎಸ್ ಮುಖಂಡ ವರದರಾಜು, ಕೆಂಪಾಪುರ ಗ್ರಾಮ ಪಂಚಾಯಿತಿ ಸದಸ್ಯ ಕಿರಣ್ ಕುಮಾರ್ ಇದ್ದರು.

ಹೆಸರಘಟ್ಟ: ಡಾ.ಕೆ.ಶಿವರಾಮ ಕಾರಂತ ಬಡಾವಣೆ ಕೈಬಿಡುವಂತೆ ಒತ್ತಾಯಿಸಿ ಬಿಡಿಎ ಕೇಂದ್ರ ಕಚೇರಿಗೆ ಮುತ್ತಿಗೆ ಹಾಕುವ ಪ್ರತಿಭಟನೆಯಲ್ಲಿ ಭಾಗವಹಿಸಲು ಕೆಂಪಾಪುರ ಗ್ರಾಮದ ರೈತರು ಗ್ರಾಮ ಪಂಚಾಯಿತಿ ಸದಸ್ಯ ಕಿರಣ್ ಕುಮಾರ್ ಮುಖಂಡತ್ವದಲ್ಲಿ ಸಿದ್ಧತೆ ನಡೆಸಿದ್ದರು. ಅವರನ್ನು ವಶಕ್ಕೆ ಪಡೆಯಲು ನೂರಾರು ಪೊಲೀಸರು ಗ್ರಾಮಕ್ಕೆ ಬುಧವಾರ ನಸುಕಿನಲ್ಲಿ ಬಸ್ಸಿನಲ್ಲಿ ಬಂದಿದ್ದರು.

ಈ ಪ್ರತಿಭಟನೆಯಲ್ಲಿ ಭಾಗವಹಿಸಲು ಹೊರಟವರನ್ನು ಬಂಧಿಸಲು ಮುಂದಾದಾಗ ಗ್ರಾಮಸ್ಥರೆಲ್ಲ ಒಗ್ಗೂಡಿ ಖಾಕಿ ಪಡೆಗೆ ಪ್ರತಿರೋಧ ಒಡ್ಡಿದರು. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಶಾಸಕ ಆರ್. ಮಂಜುನಾಥ್ ಸೋಲದೇವನಹಳ್ಳಿ ಪೊಲೀಸರ ನಡೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

'ನಮ್ಮದು ಪ್ರಜಾಪ್ರಭುತ್ವ ವ್ಯವಸ್ಥೆ. ಹೋರಾಟ ಮಾಡುವುದು, ಪ್ರಶ್ನೆ ಮಾಡುವುದು ನಮ್ಮ ಹಕ್ಕು. ಗೂಂಡಾಗಿರಿ ಮಾಡಿ ನಮ್ಮ ಹಕ್ಕು ಕಿತ್ತುಕೊಳ್ಳಲು ಬಂದರೆ ಜನರು ದಂಗೆ ಏಳುತ್ತಾರೆ' ಎಂದು ಪೊಲೀಸರಿಗೆ ಎಚ್ಚರಿಕೆ ನೀಡಿದರು.

'ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಅಂದು ರೈತರ ಪರವಾಗಿ ಧ್ವನಿ ಎತ್ತಿದ್ದರು. ಈ ಬಗ್ಗೆ ವಿಶ್ವನಾಥ್ ಅವರ ಜತೆಗೆ ಸಮಾಲೋಚನೆ ನಡೆಸುತ್ತೇನೆ' ಎಂದರು.

ಗ್ರಾಮ ಪಂಚಾಯಿತಿ ಸದಸ್ಯ ಕಿರಣ್ ಕುಮಾರ್, 'ರಾತ್ರಿ 1 ಗಂಟೆಗೆ ಪೊಲೀಸರು ಮನೆಗೆ ಬಂದಿದ್ದರು. ಆದರೆ, ನಾನು ಸಂಬಂಧಿಕರ ಮದುವೆ ಮನೆಗೆ ಹೋಗಿದ್ದರಿಂದ ಅವರ ಕೈಗೆ ಸಿಗಲಿಲ್ಲ. ಬೆಳಿಗ್ಗೆ 4 ಗಂಟೆಗೆ ಮತ್ತೆ ಬಂಧಿಸಲು ಬಂದರು. ಮನೆಯ ಮುಂದೆ ಇದ್ದ ಗೇಟ್ ಬೀಗ ಒಡೆದು ಬಂಧಿಸುವಂತೆ ಹೇಳಿದೆ. ಇಡೀ ಗ್ರಾಮಸ್ಥರು ಒಗ್ಗಟ್ಟಾಗಿದ್ದರಿಂದ ಪೊಲೀಸರು ನನ್ನನ್ನು ಬಂಧಿಸಲಿಲ್ಲ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ನೇರಳೆ ಮಾರ್ಗ: 26ರಿಂದಲೇ ಸಂಚಾರ ಆರಂಭ

ಬೆಂಗಳೂರು: ನಮ್ಮ ಮೆಟ್ರೊದ ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್‌ನಿಂದ ಮೈಸೂರು ರಸ್ತೆ ನಿಲ್ದಾಣದವರೆಗೆ ಇದೇ 26ರಿಂದಲೇ ರೈಲು ಸಂಚಾರ ಪುನರಾರಂಭವಾಗಲಿದೆ.

ಮೈಸೂರು ರಸ್ತೆಯಿಂದ–ಕೆಂಗೇರಿವರೆಗಿನ ವಿಸ್ತರಿತ ಮಾರ್ಗದಲ್ಲಿ ಸಿಗ್ನಲಿಂಗ್ ವ್ಯವಸ್ಥೆ ಮಾರ್ಪಾಡು ನಿಮಿತ್ತ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಇದೇ 21ರಿಂದ 28ರವರೆಗೆ ಈ ಮಾರ್ಗದಲ್ಲಿ ರೈಲು ಸಂಚಾರ ಸ್ಥಗಿತಗೊಳಿಸಲಾಗುವುದು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಹೇಳಿತ್ತು.

ನಿಗದಿತ ಅವಧಿಗಿಂತ ಮೊದಲೇ ಕಾಮಗಾರಿ ಪೂರ್ಣಗೊಳ್ಳುವುದರಿಂದ 26ರ ಬೆಳಿಗ್ಗೆ 7ರಿಂದಲೇ ನೇರಳೆ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗಲಿದೆ ಎಂದು ನಿಗಮ ಹೇಳಿದೆ.

ಮಾ.25ರವರೆಗೆ ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್‌ನಿಂದ ಬೈಯಪ್ಪನಹಳ್ಳಿ ನಿಲ್ದಾಣದ ನಡುವೆ ಮಾತ್ರ ಮೆಟ್ರೊ ರೈಲು ಸಂಚರಿಸಲಿದೆ.

ಹಸಿರು ಮಾರ್ಗದ ನಾಗಸಂದ್ರ ಮತ್ತು ರೇಷ್ಮೆ ಸಂಸ್ಥೆ ನಿಲ್ದಾಣಗಳ ನಡುವೆ ಯಾವುದೇ ವ್ಯತ್ಯಯ ಇರುವುದಿಲ್ಲ ಎಂದೂ ಬಿಎಂಆರ್‌ಸಿಎಲ್ ಹೇಳಿದೆ.

ಕಳ್ಳನ ಬಂಧನ: ಐದು ಬೈಕ್ ವಶ

ಬೆಂಗಳೂರು: ಮನೆಗಳ ಸಮೀಪ ನಿಲ್ಲಿಸಿರುವ ವಾಹನಗಳ ಬೀಗ ಮುರಿದು, ರಾತ್ರಿ ವೇಳೆ ಕದ್ದೊಯ್ಯುತ್ತಿದ್ದ ಆರೋಪಿಯನ್ನು ತಿಲಕನಗರ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ.ನಗರ ಸಮೀಪದ ರಾಗಿಗುಡ್ಡದ ಕೊಳೆಗೇರಿ ನಿವಾಸಿ ಮಾರಿಮುತ್ತು (24) ಬಂಧಿತ ಆರೋಪಿ.

'ಪರಪ್ಪನ ಅಗ್ರಹಾರ, ಜೆ.ಜೆ.ನಗರ, ಆಡುಗೋಡಿ ಠಾಣೆಗಳ ಸರಹದ್ದಿನಲ್ಲಿ ಕಳವು ಮಾಡಿದ್ದ ವಾಹನಗಳನ್ನು ಮಾರಲು ಯತ್ನಿಸುತ್ತಿದ್ದಾಗ ಆರೋಪಿಯನ್ನು ಬಂಧಿಸಲಾಯಿತು. ಕಳವಾಗಿದ್ದ ಐದು ದ್ವಿಚಕ್ರ ವಾಹನಗಳನ್ನು ಆರೋಪಿಯಿಂದ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಈತ ಈ ಹಿಂದೆ ಮೈಕೊ ಬಡಾವಣೆ, ಜೆ.ಪಿ.ನಗರ ಠಾಣಾ ವ್ಯಾಪ್ತಿಗಳಲ್ಲಿ ನಡೆದಿದ್ದ ಕಳವು ಪ್ರಕರಣಗಳಲ್ಲಿ ಜೈಲಿಗೆ ಹೋಗಿದ್ದ. ಅಲ್ಲಿಂದ ಹೊರ ಬಂದ ನಂತರವೂ ಕಳ್ಳತನ ಮುಂದುವರಿಸಿದ್ದ' ಎಂದೂ ಹೇಳಿದರು.

ಕರ್ನಾಟಕ ಹೈಕೋರ್ಟ್‌ಗೆ ಇಬ್ಬರು ಹೆಚ್ಚುವರಿ ನ್ಯಾಯಮೂರ್ತಿಗಳ ನೇಮಕ

ನವದೆಹಲಿ (ಪಿಟಿಐ): ಕರ್ನಾಟಕ ಹೈಕೋರ್ಟ್‌ಗೆ ಇಬ್ಬರು ಹೆಚ್ಚುವರಿ ನ್ಯಾಯಮೂರ್ತಿಗಳನ್ನು ನೇಮಕ ಮಾಡಿ ಕಾನೂನು ಸಚಿವಾಲಯ ಬುಧವಾರ ಅಧಿಸೂಚನೆ ಹೊರಡಿಸಿದೆ. ಹೆಚ್ಚುವರಿ ನ್ಯಾಯಮೂರ್ತಿಗಳು ಸೇರಿದಂತೆ ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯಾಬಲ 62.

ಅಲಹಾಬಾದ್ ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಗಳ ಹುದ್ದೆಗೆ 10 ಜನ ಹೆಚ್ಚುವರಿ ನ್ಯಾಯಮೂರ್ತಿಗಳಿಗೆ ಪದೋನ್ನತಿ ನೀಡಲಾಗಿದೆ. 7 ಜನ ಹೆಚ್ಚುವರಿ ನ್ಯಾಯಮೂರ್ತಿಗಳ ನೇಮಕಾತಿ ಮಾಡಿದ್ದಾರೆ.

'ಹೆಚ್ಚುವರಿ ಹಣ ಸಂಗ್ರಹ'

ಬೆಂಗಳೂರು: 'ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಪಿಎಂಎವೈ) ಫಲಾನುಭವಿಗಳಿಗೆ ಕೇಂದ್ರ ಮತ್ತು ರಾಜ್ಯಸರ್ಕಾರ ಹಾಗೂ ನಿರ್ದಿಷ್ಟ ಇಲಾಖೆಯಿಂದ ₹5.50 ಲಕ್ಷದವರೆಗೆ ನೀಡಲಾಗುತ್ತದೆ. ಆದರೆ, ಫಲಾನುಭವಿಗಳಿಂದ ಹೆಚ್ಚುವರಿಯಾಗಿ ₹3 ಲಕ್ಷ ತೆಗೆದುಕೊಳ್ಳಲಾಗುತ್ತಿದೆ' ಎಂದು ಸ್ಲಂ ಜನರ ಸಂಘಟನೆ ಆರೋಪಿಸಿದೆ.

'ಪಿಎಂಎವೈ ಅಡಿ ವಸತಿಗಾಗಿ ಕೇಂದ್ರ ಸರ್ಕಾರ ₹1.5 ಲಕ್ಷ ನೀಡಿದರೆ, ಎಸ್‌ಸಿ, ಎಸ್‌ಟಿಯವರಿಗೆ ರಾಜ್ಯ ಸರ್ಕಾರ ₹2 ಲಕ್ಷ ನೀಡುತ್ತದೆ. ಸಮಾಜ ಕಲ್ಯಾಣ ಇಲಾಖೆ ಅಥವಾ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ₹1 ಲಕ್ಷ ಹಾಗೂ ಫಲಾನುಭವಿಗಳಿಂದ ₹75 ಸಾವಿರ ತೆಗೆದುಕೊಳ್ಳಲಾಗುತ್ತದೆ. ಉಪಗುತ್ತಿಗೆ ಪಡೆದವರು ವ್ಯತ್ಯಾಸದ ಮೊತ್ತ ಎಂದು ಮತ್ತೆ ₹3 ಲಕ್ಷ ತೆಗೆದುಕೊಳ್ಳುತ್ತಿದ್ದಾರೆ' ಎಂದು ಸಂಘಟನೆಯ ರಾಜ್ಯ ಸಂಚಾಲಕ ಇಸಾಕ್ ಅಮೃತ್ ರಾಜ್ ದೂರಿದ್ದಾರೆ.

ಕೆಟಿಪಿಪಿ ಕಾಯ್ದೆಗೆ ತಿದ್ದುಪಡಿ: ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ತಿದ್ದುಪಡಿಯನ್ನು ವಿರೋಧಿಸಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರ ಮನೆ ಎದುರು ಕರ್ನಾಟಕ ಎಸ್‌ಸಿ/ಎಸ್‌ಟಿ ಗುತ್ತಿಗೆದಾರರ ಸಂಘದಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

'ಕರ್ನಾಟಕ ರಾಜ್ಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಐಡಿಎಲ್) ₹2 ಕೋಟಿ ವರೆಗಿನ ಕಾಮಗಾರಿಯನ್ನು ನೇರವಾಗಿ ವಹಿಸುವ ನಿಟ್ಟಿನಲ್ಲಿ ಈ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಇದು ಗುತ್ತಿಗೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಗುತ್ತಿಗೆದಾರರ ಮೀಸಲಾತಿ ಸವಲತ್ತು ದುರ್ಬಲಗೊಳಿಸುವ ಪ್ರಯತ್ನ' ಎಂದು ಸಂಘ ಆರೋಪಿಸಿತು.

'ಈ ಕಾಯ್ದೆಗೆ ತಿದ್ದುಪಡಿ ತಂದರೆ ಕೆಟಿಟಿಪಿ ಕಾಯ್ದೆಯ ಮೂಲ ಉದ್ದೇಶಕ್ಕೆ ಧಕ್ಕೆಯಾಗಲಿದೆ ಎಂದು ಅಡ್ವೊಕೇಟ್ ಜನರಲ್ ಅಭಿಪ್ರಾಯ ನೀಡಿದ್ದಾರೆ. ಕೆಆರ್‌ಐಡಿಎಲ್ ಸಂಸ್ಥೆಗೆ ವಿನಾಯಿತಿ ನೀಡಬಾರದು ಎಂದು ಹೈಕೋರ್ಟ್ ಕೂಡ ಹೇಳಿದೆ. ಆದರೂ, ಕೆಟಿಪಿಪಿ ಕಾಯ್ದೆಗೆ ಸರ್ಕಾರ ತಿದ್ದುಪಡಿ ತಂದಿದೆ' ಎಂದು ಸಂಘದ ಅಧ್ಯಕ್ಷ ಎನ್. ಮಹದೇವಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಕೆಆರ್‌ಐಡಿಎಲ್ 4ಜಿ ವಿನಾಯಿತಿ ಪಡೆದು ಪ್ರತಿವರ್ಷ ಸಾವಿರಾರು ಕೋಟಿ ಮೊತ್ತದ ಕಾಮಗಾರಿ ನಿರ್ವಹಿಸುತ್ತಿದೆ. ಎಸ್.ಆರ್. ದರಕ್ಕಿಂತ ಹೆಚ್ಚಿನ ಮೊತ್ತಕ್ಕೆ (ಶೇ 8ರಿಂದ ಶೇ 11) ಕಾಮಗಾರಿ ನಿರ್ವಹಿಸಲಾಗಿದೆ. ಇದರಿಂದ ಬೊಕ್ಕಸಕ್ಕೆ ನಷ್ಟವಾಗಿದೆ. ಇದೆಲ್ಲವೂ ಸರ್ಕಾರಕ್ಕೆ ತಿಳಿದಿದ್ದರೂ ಸ್ವಹಿತಾಸಕ್ತಿಗಾಗಿ ಕೆಟಿಪಿಪಿ ಕಾಯ್ದೆಯನ್ನು ಹಾಳು ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗುತ್ತಿಗೆ ಮೀಸಲಾತಿ ಮಿತಿಯನ್ನು ₹50 ಲಕ್ಷದಿಂದ ₹1 ಕೋಟಿಗೆ ಹೆಚ್ಚಳ ಮಾಡುವ ಘೋಷಣೆ 2018–19ನೇ ಸಾಲಿನ ಬಜೆಟ್‌ನಲ್ಲಿ ಮಾಡಲಾಗಿದೆ. ಆದರೆ, ಈ ಸಂಬಂಧ ಸರ್ಕಾರ ಆದೇಶ ಹೊರಡಿಸಿಲ್ಲ. ಕೂಡಲೇ ಆದೇಶ ಹೊರಡಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಗೋವಿಂದ ಕಾರಜೋಳ ಅವರ ಮನೆ ಎದುರು ಧರಣಿ ನಡೆಸಿದ ಎಸ್‌ಎಸ್/ಎಸ್‌ಟಿ ಗುತ್ತಿಗೆದಾರರು. ಸಂಘದ ಅಧ್ಯಕ್ಷ ಎನ್.ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಪಿ.ಪುಟ್ಟಸ್ವಾಮಿ ಇದ್ದರು –ಪ್ರಜಾವಾಣಿ ಚಿತ್ರ

'ಸಂಚಾರ ನಿಯಮ ಉಲ್ಲಂಘನೆ ಪತ್ತೆಗೆ ತಂತ್ರಜ್ಞಾನ ಬಳಸಿ'

ಬೆಂಗಳೂರು: 'ಸಂಚಾರ ನಿಯಮಗಳ ಉಲ್ಲಂಘನೆ ಪತ್ತೆಗೆ ಆಧುನಿಕ ತಂತ್ರಜ್ಞಾನ ಬಳಸಿ, ಪೊಲೀಸರಿಂದ ಆಗುತ್ತಿರುವ ಕಿರುಕುಳ ತಪ್ಪಿಸಲು ಕ್ರಮ ಕೈಗೊಳ್ಳಬೇಕು' ಎಂದು ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ರಕ್ಷಾ ರಾಮಯ್ಯ ಆಗ್ರಹಿಸಿದ್ದಾರೆ.

ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್‌ಗೆ ಮನವಿ ಸಲ್ಲಿಸಿದ ಅವರು, 'ಮೈಸೂರಿನ ಬೋಗಾದಿ – ಹಿನಕಲ್ ವರ್ತುಲ ರಸ್ತೆಯಲ್ಲಿ ಸಂಚಾರ ಪೊಲೀಸರ ಕಿರುಕುಳದಿಂದ ದೇವರಾಜ್ ಎಂಬವರು ಮೃತಪಟ್ಟು, ಸುರೇಶ್ ಎಂಬವರು ಗಾಯಗೊಂಡ ಘಟನೆ ಆಘಾತಕಾರಿ, ಕ್ರೂರ ಮತ್ತು ಅಮಾನವೀಯ' ಎಂದಿದ್ದಾರೆ.

'ಸಂಚಾರ ಪೊಲೀಸರು ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ತಮ್ಮ ಕರ್ತವ್ಯವನ್ನೇ ಮರೆತಂತೆ ವರ್ತಿಸುತ್ತಿದ್ದಾರೆ. ಸಣ್ಣಪುಟ್ಟ ವ್ಯಾಪಾರಿಗಳು, ರೈತರು, ಜನಸಾಮಾನ್ಯರನ್ನೇ ಗುರಿಯಾಗಿಸಿ ದಂಡ ವಸೂಲಿ ಮಾಡುತ್ತಿದ್ದಾರೆ. ಪೊಲೀಸರ ಈ ವರ್ತನೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಮೈಸೂರಿನ ಬೋಗಾದಿಯಲ್ಲಿ ಇದು ಸ್ಫೋಟಗೊಂಡಿರುವುದು ಸಣ್ಣ ಉದಾಹರಣೆ. ಸಂಚಾರ ಪೊಲೀಸರಿಂದ ಎಲ್ಲೆಡೆ ಹಗಲು ದರೋಡೆ, ಶೋಷಣೆ ನಡೆಯುತ್ತಿದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ತಂತ್ರಜ್ಞಾನದ ಸದ್ಬಳಕೆಯಿಂದ ಸಂಚಾರ ಪೊಲೀಸರ ಹಸ್ತಕ್ಷೇಪ, ಭ್ರಷ್ಟಾಚಾರ ಮತ್ತು ಜನರಿಗೆ ಆಗುತ್ತಿರುವ ಕಿರುಕುಳ ತಪ್ಪಿಸಬಹುದು. ತಕ್ಷಣ ಈ ಬಗ್ಗೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕು' ಎಂದೂ ಮನವಿಯಲ್ಲಿ ಆಗ್ರಹಿಸಿದ್ದಾರೆ.

ಮನವಿ ಸ್ವೀಕರಿಸಿದ ಪ್ರವೀಣ್ ಸೂದ್, 'ಕೆಲವು ತಾಂತ್ರಿಕ ತೊಡಕು ಎದುರಾಗಿದೆ. ಅವುಗಳನ್ನು ನಿವಾರಿಸಿ, ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.

ಮನೆಗೆ ನುಗ್ಗಿ ದರೋಡೆ: 10 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನ್ನಪೂರ್ಣೇಶ್ವರಿ ಠಾಣಾ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ, ಮನೆಯವರನ್ನು ಹೆದರಿಸಿ ಚಿನ್ನಾಭರಣ, ನಗದು, ಮೊಬೈಲ್ ದರೋಡೆ ಮಾಡಿದ್ದ 10 ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಇಟ್ಟಮಡು ನಿವಾಸಿ ನಾಗೇಂದ್ರ (30), ವಿನೋಬಾನಗರದ ಪಾರ್ಥಿಬನ್ (25), ಮೈಸೂರು ರಸ್ತೆಯ ನಯಾಜ್ ಪಾಷಾ (35), ಕೆಂಗೇರಿ ಸೈಯದ್ ಸಿದ್ದಿಕ್ (30), ಶೇಷಾದ್ರಿಪುರದ ಸುರೇಶ (33), ದೇವರಜೀವನಹಳ್ಳಿಯ ನತೀಶ್ (30), ಶಿವಮೊಗ್ಗದ ಹನುಮೇಗೌಡ (28) ಹಾಗೂ ಧರ್ಮರಾಜ (28), ದೊಡ್ಡಮಾವಳ್ಳಿಯ ಇಮ್ರಾನ್ ಪಾಷಾ (32), ಚಿಕ್ಕಲ್ಲಸಂದ್ರದ ಹೇಮಂತ್ (22) ಬಂಧಿತ ಆರೋಪಿಗಳು.

ಅನ್ನಪೂರ್ಣೇಶ್ವರಿ ಠಾಣಾ ವ್ಯಾಪ್ತಿಯ ಮನೆಯೊಂದಕ್ಕೆ ಮಾ.6ರಂದು ನುಗ್ಗಿದ್ದ ಆರೋಪಿಗಳು ಮನೆಯವರನ್ನು ಚಾಕು ತೋರಿಸಿ ಹೆದರಿಸಿದ್ದರು. ಬಳಿಕ ಮನೆಯಲ್ಲಿದ್ದ ಚಿನ್ನಾಭರಣ, ನಗದು ಹಾಗೂ ಮೊಬೈಲ್‌ಗಳನ್ನು ಕದ್ದು ಪರಾರಿಯಾಗಿದ್ದರು.

ಬಂಧಿತರಿಂದ ₹5 ಲಕ್ಷ ಬೆಲೆಬಾಳುವ ಚಿನ್ನದ ಆಭರಣಗಳು, ₹₹1.45 ಲಕ್ಷ ನಗದು, ಮೊಬೈಲ್ ಹಾಗೂ ಕೃತ್ಯಕ್ಕೆ ಬಳಸಿದ್ದ ಒಂದು ಆಟೊ, ಎರಡು ಬೈಕ್ ಜಪ್ತಿ ಮಾಡಲಾಗಿದೆ.

ಅಪರಾಧ ಸುದ್ದಿ

ಬಂಧಿತರಿಂದ ಜಪ್ತಿ ಮಾಡಿರುವ ನಗದು, ಚಿನ್ನಾಭರಣ ಹಾಗೂ ಮಾರಕಾಸ್ತ್ರ

ಮಲಗಿದ್ದಾಗ ವ್ಯಕ್ತಿಗೆ ಇರಿದು ಕೊಲೆ

ಬೆಂಗಳೂರು: ಮನೆಯ ಕೋಣೆಯಲ್ಲಿ ಮಲಗಿದ್ದ ವ್ಯಕ್ತಿಯೊಬ್ಬರನ್ನು ಹರಿತವಾದ ವಸ್ತುವಿನಿಂದ ಇರಿದು, ಕೊಲೆ ಮಾಡಿರುವ ಘಟನೆ ಚೆನ್ನಮ್ಮನಕೆರೆ ಅಚ್ಚುಕಟ್ಟು ಠಾಣಾ ವ್ಯಾಪ್ತಿಯ ಇಟ್ಟಮಡುವಿನಲ್ಲಿ ಮಂಗಳವಾರ ತಡರಾತ್ರಿ ನಡೆದಿದೆ. ಇಟ್ಟಮಡುವಿನ ಮಂಜು (37) ಕೊಲೆಯಾಗಿರುವ ವ್ಯಕ್ತಿ.

'ರಿಯಲ್ ಎಸ್ಟೇಟ್ ಏಜೆಂಟ್ ಆಗಿದ್ದ ಈತ ರೌಡಿಶೀಟರ್‌ವೊಬ್ಬನ ಸಹೋದರ ಎನ್ನಲಾಗಿದೆ. ಮಂಜು ಮೇಲೆ ದುಷ್ಕರ್ಮಿಗಳ ತಂಡ ದಾಳಿ ಮಾಡಿ ಕೊಲೆ ಮಾಡಿದೆ. ಹರಿತವಾದ ಆಯುಧಗಳಿಂದ ಇರಿದು ಕೊಲೆಗೈದು ಪರಾರಿಯಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೋಣೆಯಲ್ಲಿದ್ದ ಮಂಜು ಮೃತಪಟ್ಟಿರುವುದನ್ನು ಕುಟುಂಬಸ್ಥರು ಬುಧವಾರ ಬೆಳಿಗ್ಗೆ ನೋಡಿ, ಕೂಡಲೇ ಪೊಲೀಸರಿಗೆ ತಿಳಿಸಿದ್ದಾರೆ. ಹಳೆಯ ದ್ವೇಷದಿಂದ ದುಷ್ಕರ್ಮಿಗಳು ಕೊಲೆ ಮಾಡಿರುಬಹುದು ಎಂದು ಶಂಕಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ.

ಮಾಲೀಕರ ಮನೆಯಲ್ಲಿ ಕಳವು: ಬಂಧನ

ಬೆಂಗಳೂರು: ತಾನು ಕೆಲಸ ಮಾಡುತ್ತಿದ್ದ ಹೋಟೆಲ್ ಮಾಲೀಕರ ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಮಹಿಳೆ ಸೇರಿ ಇಬ್ಬರು ಆರೋಪಿಗಳನ್ನು ಕೆ.ಪಿ.ಅಗ್ರಹಾರ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ಪುರದ ಅಮರಜ್ಯೋತಿ ನಗರದಲ್ಲಿ ವಾಸವಿದ್ದ ಅನು (45) ಹಾಗೂ ಕಲಬುರ್ಗಿಯ ರೇಣುಕಾನಂದ (31) ಬಂಧಿತರು.

'ಆರೋಪಿ ಅನು ಕೆ.ಪಿ.ಅಗ್ರಹಾರದ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಮಾಲೀಕರ ಮನೆಗೆ ಹೋಗಿದ್ದಾಗ ಅವರಿಗೆ ಗೊತ್ತಾಗದಂತೆ ಮನೆಯಲ್ಲಿದ್ದ ಚಿನ್ನಾಭರಣಗಳನ್ನು ಕಳವು ಮಾಡಿದ್ದಳು. ಬಳಿಕ ತನ್ನ ಸ್ನೇಹಿತ ರೇಣುಕಾನಂದನಿಗೆ ಚಿನ್ನ ನೀಡಿದ್ದಳು. ಆರೋಪಿ ರೇಣುಕಾನಂದ ಕದ್ದ ಚಿನ್ನ ಚಿನ್ನವನ್ನು ಮಾರಾಟ ಮಾಡಿದ್ದ' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳಿಂದ ₹1.40 ಲಕ್ಷ ಬೆಲೆಬಾಳುವ 45 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಹೇಳಿದರು.

ಯುವತಿಯೊಂದಿಗೆ ಅಸಭ್ಯ ವರ್ತನೆ: ಬಂಧನ

ಬೆಂಗಳೂರು: ಪಬ್‌ವೊಂದರಲ್ಲಿ ಯುವತಿಯೊಂದಿಗೆ ಅಸಭ್ಯವಾಗಿ ವರ್ತಿಸಿದ್ದ ಆರೋಪಿಯನ್ನು ಕಬ್ಬನ್ ಪಾರ್ಕ್ ಪೊಲೀಸರು ಬಂಧಿಸಿದ್ದಾರೆ. ಮಧುಸೂದನ್ ಚೆಲ್ಲಾರಾಂ ಬಂಧಿತ ಆರೋಪಿ.

'ಮಾ.21ರ ರಾತ್ರಿ ಯುವತಿ ತನ್ನ ತಾಯಿ ಹಾಗೂ ಸ್ನೇಹಿತರೊಂದಿಗೆ ಚರ್ಚ್‌ಸ್ಟ್ರೀಟ್‌ನಲ್ಲಿರುವ ಪಬ್‌ವೊಂದಕ್ಕೆ ಬಂದಿದ್ದರು. ಬೇರೊಬ್ಬರಿಂದ ಮಧುಸೂದನ್ ಯುವತಿಯನ್ನು ಪರಿಚಯಿಸಿಕೊಂಡಿದ್ದ. ಪಾರ್ಟಿ ನಡೆಯುತ್ತಿದ್ದ ವೇಳೆ ಯುವತಿಯನ್ನು ಏಕಾಏಕಿ ತಬ್ಬಿಕೊಂಡು, ಅಸಭ್ಯವಾಗಿ ವರ್ತಿಸಿದ್ದ. ಯುವತಿಯನ್ನು ಮುಟ್ಟಿ ಅವಾಚ್ಯ ಶಬ್ಧಗಳಿಂದಲೂ ನಿಂದಿಸಿದ್ದ'.

'ಇದರಿಂದ ನೊಂದ ಯುವತಿ ಕಬ್ಬನ್ ಪಾರ್ಕ್ ಪೊಲೀಸರಿಗೆ ದೂರು ನೀಡಿದ್ದರು. ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಲಾಗಿದೆ. ತನಿಖೆ ಮುಂದುವರಿದೆ' ಎಂದು ಪೊಲೀಸರು ತಿಳಿಸಿದರು.

ನಿಧನ ವಾರ್ತೆ

ಶಾಮವ್ವ ಗೋತಗಿ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಪಟ್ಟಣದ ಈಡಿಗ ಸಮುದಾಯದ ಹಿರಿಯರು ಹಾಗೂ ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯ ಹೋರಾಟಗಾರರಾಗಿದ್ದ ಶಾಮವ್ವ ಶಾಮಣ್ಣ ಗೋತಗಿ (105) ಬುಧವಾರ ನಿಧನರಾದರು.

ಅವರಿಗೆ ಎಂಟು ಜನ ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಗುರುವಾರ (ಮಾ.25) ಬೆಳಿಗ್ಗೆ 10 ಗಂಟೆಗೆ ಮದಲಗಟ್ಟಿ ಬಳಿ ಇರುವ ಜಗನ್ನಾಥ ಗೋತಗಿ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ನರಸಿಂಹಯ್ಯ



ಬೆಂಗಳೂರು: ಶೇಷಾದ್ರಿಪುರದ ಪತ್ರಿಕಾ ವಿತರಕ ನರಸಿಂಹಯ್ಯ (71) ಹೃದಯಾಘಾತದಿಂದ ಬುಧವಾರ ಬೆಳಿಗ್ಗೆ ನಿಧನರಾದರು.

ಶೇಷಾದ್ರಿಪುರದಲ್ಲಿ ವಾಸವಿದ್ದ ಇವರು 45 ವರ್ಷಗಳಿಂದ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದರು.

ಅವರಿಗೆ ಪತ್ನಿ ಹಾಗೂ ಮೂವರು ಪುತ್ರರು ಇದ್ದಾರೆ. ಸುಮನಹಳ್ಳಿಯ ಚಿತಾಗಾರದಲ್ಲಿ ಗುರುವಾರ ಬೆಳಿಗ್ಗೆ 10.30ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್.ರಂಗಪ್ಪ

'ಕೆಎಸ್‌ಎನ್ ನಿವಾಸ ಸ್ಮಾರಕವಾಗಿಸಲು ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಿಕ್ಕೇರಿಯಲ್ಲಿರುವ ಕೆ.ಎಸ್.ನರಸಿಂಹಸ್ವಾಮಿ ಅವರ ನಿವಾಸವನ್ನು ಸ್ಮಾರಕವನ್ನಾಗಿ ಪರಿವರ್ತಿಸಲು ಹಾಗೂ 600 ಎಕರೆ ವ್ಯಾಪ್ತಿಯ ಕಿಕ್ಕೇರಿ ಕೆರೆಗೆ ಕೆಎಸ್‌ಎನ್ ಸರೋವರವೆಂದು ನಾಮಕರಣ ಮಾಡಿ ಅದನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ಈ ಸಂಬಂಧ ಸಚಿವರ ಜೊತೆ ಚರ್ಚಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುತ್ತೇವೆ' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್. ರಂಗಪ್ಪ ಹೇಳಿದರು.

ಕೆ.ಎಸ್.ನರಸಿಂಹಸ್ವಾಮಿ ಟ್ರಸ್ಟ್ ಪ್ರಕಟಿಸಿರುವ 'ಸಾತ್ವಿಕತೆಯ ಪ್ರತಿರೂಪ', 'ಇಹದ ತಳಹದಿಯಲ್ಲಿ ದಿಟದ ದರ್ಶನ', 'ಕೆ.ಎಸ್.ನರಸಿಂಹಸ್ವಾಮಿ ಸಾಹಿತ್ಯ ಸೂಚಿ' ಹಾಗೂ 'ಎಲ್ಲರಿಗೊಳಿತನುಬಯಸಲಿ ಕವನ' ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕೆ.ಎಸ್.ನರಸಿಂಹ ಸ್ವಾಮಿ ಟ್ರಸ್ಟ್‌ನ ಅಧ್ಯಕ್ಷ ನರಹಳ್ಳಿ ಬಾಲಸುಬ್ರಹ್ಮಣ್ಯ 'ಸಮಾಜದಲ್ಲಿ ಇಂದು ಎಲ್ಲೆಡೆ ದ್ವೇಷ, ಅಸಹನೆ, ಹಿಂಸೆ, ಸಿಟ್ಟು ತುಂಬಿದೆ. ಇಂತಹ ಹೊತ್ತಿನಲ್ಲಿ ಪ್ರೀತಿಯನ್ನು ಜೀವನ ಸಿದ್ಧಾಂತವಾಗಿ ಪ್ರತಿಪಾದಿಸಿದವರು ನರಸಿಂಹಸ್ವಾಮಿ. ಅವರು ಬದುಕಿಗೆ ಪ್ರೀತಿಯ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟರು. ಪ್ರೀತಿ ಇದ್ದರೆ ದುಃಖ ಕೂಡ ಹಗುರವಾಗಿಬಿಡುತ್ತದೆ. ಪ್ರೀತಿಯು ಹಾಸ್ಯವಲ್ಲ ಅದೊಂದು ಸಿದ್ಧಾಂತ ಎಂಬುದನ್ನು ತಮ್ಮ ಕಾವ್ಯದ ಮೂಲಕ ತಿಳಿ ಹೇಳಿದ್ದಾರೆ' ಎಂದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಸತೀಶ್ ಕುಮಾರ ಹೊಸಮನಿ, 'ಈಗ ಹೊರತಂದಿರುವ ಈ ನಾಲ್ಕೂ ಕೃತಿಗಳು ಅರ್ಥಗರ್ಭಿತವಾಗಿವೆ. ಇವನ್ನು ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಮುಂದೆ ಮಂಡಿಸಿ ಗ್ರಂಥಾಲಯಕ್ಕೆ ತೆಗೆದುಕೊಳ್ಳುತ್ತೇವೆ' ಎಂದು ತಿಳಿಸಿದರು.

ಕೆ.ಎಸ್.ರಂಗಪ್ಪ (ಬಲದಿಂದ ಎರಡನೇಯವರು) ಪುಸ್ತಕ ಬಿಡುಗಡೆ ಮಾಡಿದರು. ಲೇಖಕಿ ಸಂಧ್ಯಾ ಹೆಗಡೆ ದೊಡ್ಡಹೊಂಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಸತೀಶ್ ಕುಮಾರ ಹೊಸಮನಿ ಹಾಗೂ ಕೆ.ಎಸ್.ಎನ್.ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕಿಕ್ಕೇರಿ ಕೃಷ್ಣಮೂರ್ತಿ ಇದ್ದಾರೆ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ್.ಟಿ.

ನಗರದಲ್ಲಿ ಇಂದು

ಚಿತ್ರಕಲಾ ಪ್ರದರ್ಶನ: ಮುಖ್ಯ ಅತಿಥಿಗಳು: ಮಹದೇವ ಸ್ವಾಮೀಜಿ, ಬಿ. ಚಿಕ್ಕನಾರಾಯಣ ಸ್ವಾಮಿ, ವಿಶೇಷ ಅತಿಥಿಗಳು: ಪಿ. ಕೆಂಪೇಗೌಡ, ವಿ. ರಾಜಣ್ಣ, ವಿ. ಚಂದ್ರೇಶ್ವರ ಜಿ., ಟಿ. ನಾಗೇಶ್ವರ ರಾವ್, ಆಯೋಜನೆ: ವಸಂತ ಆರ್ಟ್ಸ್, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ ಬಾ ರಸ್ತೆ, ಬೆಳಿಗ್ಗೆ 11.30

ಹಿರಿಯ ಕೃಷಿ ತಂತ್ರಜ್ಞಾನರಿಗೆ ಸನ್ಮಾನ: ಉದ್ಘಾಟನೆ: ಡಾ.ಕೆ.ಎಂ. ಇಂದ್ರೇಶ್, ಅಧ್ಯಕ್ಷತೆ: ಪ್ರೊ.ವಿ. ವೀರಭದ್ರಯ್ಯ, ಸ್ಥಳ ಡಾ.ಎಚ್.ಆರ್. ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಮಧ್ಯಾಹ್ನ 12

ಸಂಕ್ರಮಣ–2021 ಸಾಂಸ್ಕೃತಿಕ ಉತ್ಸವ: ಮಧುರ ಮಧುರ ವೀ ಮಂಜುಳ ಗಾನ, ಮುಖ್ಯ ಅತಿಥಿ: ಟಿ.ಎಸ್. ನಾಗಾಭರಣ, ಆಯೋಜನೆ: ಸಪ್ತಸ್ವರ ಆರ್ಟ್ ಆ್ಯಂಡ್ ಕ್ರಿಯೇಷನ್ಸ್, ಸ್ಥಳ: ಸಂಸ ಬಯಲು ರಂಗ ಮಂದಿರ, ಸಂಜೆ 6.30

ನಾಗಾಭರಣ

ಮೆಟ್ರೊ ಯೋಜನೆ: ತಜ್ಞ ಸಂಸ್ಥೆ ನೇಮಿಸಲು ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ಮೊದಲ ಮತ್ತು ಎರಡನೇ ಹಂತದ ಯೋಜನೆ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರ ವಿಧಿಸಿರುವ ಷರತ್ತು ಪಾಲನೆಯಾಗಿರುವುದನ್ನು ಖಚಿತಪಡಿಸಲು ತಜ್ಞ ಸಂಸ್ಥೆಯನ್ನು ನೇಮಕ ಮಾಡಲು ಸಮ್ಮತಿ ಇದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ತಿಳಿಸಿವೆ.

'ತರ್ಕಬದ್ಧ ಸಮಗ್ರ ಸಂಚಾರ ಯೋಜನೆ' (ಐಟಿಆರ್‌ಪಿ) ಹಾಗೂ 'ಸಮಗ್ರ ಸಂಚಾರ ಯೋಜನೆ' (ಸಿಎಂಪಿ) ಷರತ್ತು ಪಾಲನೆ ಆಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತಜ್ಞ ಏಜೆನ್ಸಿಯಿಂದ ಪರಿಶೀಲನೆ ನಡೆಸಲು ಸರ್ಕಾರ ಸಿದ್ಧವಿದೆಯೇ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಪ್ರಶ್ನೆ ಮಾಡಿತ್ತು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಸೆಂಟರ್ ಫಾರ್ ಇನ್ಫ್ರಾಸ್ಟ್ರಕ್ಚರ್, ಸಸ್ಟೈನಬಲ್ ಟ್ರಾನ್ಸ್‌ಪೋರ್ಟ್ ಮತ್ತು ಅರ್ಬನ್ ಪ್ಲಾನಿಂಗ್ (ಸಿಸ್ಟುಪ್) ಅಥವಾ ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ) ಅನ್ನು ಈ ಕೆಲಸಕ್ಕೆ ಪರಿಗಣಿಸಬಹುದು ಎಂದು ಪತ್ರದಲ್ಲಿ ತಿಳಿಸಿದೆ. ಕೇಂದ್ರ ಸರ್ಕಾರ ಸಮಯ ಕೋರಿರುವ ಕಾರಣ ವಿಚಾರಣೆಯನ್ನು ಏ.1ಕ್ಕೆ ಮುಂದೂಡಲಾಯಿತು.

ದೊಮ್ಮಲೂರು ನಿವಾಸಿ ಡಿ.ಟಿ. ದೇವರೆ ಹಾಗೂ 'ಬೆಂಗಳೂರು ಎನ್ವಿರಾನ್‌ಮೆಂಟ್ ಟ್ರಸ್ಟ್'ನವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ, ಷರತ್ತುಗಳು ಪಾಲನೆ ಆಗಿಲ್ಲ ಎಂದು ಆರೋಪಿಸಿದ್ದರು.

ಎಎಐ ಸರ್ವೆ ಪ್ರಶ್ನಿಸಿದ ಹೈಕೋರ್ಟ್

ಬೆಂಗಳೂರು: 'ನ್ಯಾಯಾಲಯದ ಅನುಮತಿ ಪಡೆಯದೆ ಜಕ್ಕೂರು ಏರೋಡ್ರೋಮ್‌ನಲ್ಲಿ ವಿಮಾನ ನಿಲ್ದಾಣ ಪ್ರಾಧಿಕಾರ(ಎಎಐ) ಸರ್ವೆ ನಡೆಸಿದ್ದು ಹೇಗೆ' ಎಂದು ಹೈಕೋರ್ಟ್ ಪ್ರಶ್ನೆ ಮಾಡಿದೆ.

ವಕೀಲ ಅಜಯಕುಮಾರ್ ಪಾಟೀಲ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. 'ರನ್‌ವೇಯಿಂದ 60 ಮೀಟರ್ ಅಂತರದಲ್ಲಿ ಯಾವುದೇ ನಿರ್ಮಾಣ ಕಾರ್ಯ ಮಾಡುವಂತಿಲ್ಲ. ಪ್ರಸ್ತಾವಿತ ಮೆಟ್ರೊ ಮಾರ್ಗ ಈ ನಿಷೇಧಿತ ವಲಯದಲ್ಲೇ ಬರಲಿದೆ' ಎಂದು ಅರ್ಜಿದಾರರು ದೂರಿದ್ದರು.

ಮಾ.9ರಿಂದ 16ರ ನಡುವೆ ಈಗಾಗಲೇ ಸರ್ವೆಯನ್ನು ಎಎಐ ಸರ್ವೆ ನಡೆಸಿದೆ ಎಂದು ರಾಜ್ಯ ಸರ್ಕಾರ ತಿಳಿಸಿತು. ಈ ಬಗ್ಗೆ ಜವಾಬ್ದಾರಿಯುತ ಅಧಿಕಾರಿಯೊಬ್ಬರು ಅಫಿಡವಿಟ್ ಸಲ್ಲಿಸಬೇಕು ಎಂದು ಎಎಐಗೆ ಪೀಠ ನಿರ್ದೇಶನ ನೀಡಿತು.

ಹೈಕೋರ್ಟ್ ಸುದ್ದಿ

ಸುಧಾಕರ್ ಹೇಳಿಕೆಗೆ ಶಾಸಕರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಯಾವ ಶಾಸಕರೂ ಏಕ ಪತ್ನಿ ವ್ರತಸ್ಥರಲ್ಲ' ಎಂಬ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿಕೆಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಮೂರೂ ಪಕ್ಷಗಳ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಆರೋಗ್ಯ ಸಚಿವರ ಹೇಳಿಕೆಯನ್ನು ಕಟುವಾದ ಮಾತುಗಳಿಂದ ಖಂಡಿಸಿದ್ದಾರೆ.

'ಮೂರ್ಖತನದ ಪರಮಾವಧಿ'

ಸಚಿವ ಸುಧಾಕರ್ ಎಲ್ಲ ಶಾಸಕರ ಕ್ಷಮೆ ಯಾಚಿಸಬೇಕು. ಜವಾಬ್ದಾರಿ ಸ್ಥಾನದಲ್ಲಿರುವವರು ಸದನದಲ್ಲಿ ಉತ್ತರ ಕೊಡಬೇಕಿತ್ತು. 225 ಜನರಲ್ಲಿ ಶಾಸಕಿಯರೂ ಇದ್ದಾರೆ. ಅವರಿಗೆ ಮನೆಯಲ್ಲಿ ಕುಟುಂಬದ ಸದಸ್ಯರಿದ್ದಾರೆ. ಮಹಿಳೆಯರಿಗೆ ಅವಮಾನವಾಗುತ್ತದೆ. ಈ ಹೇಳಿಕೆಯಿಂದ ನಿಮಗೆ ಒಳ್ಳೆದಾಗುತ್ತದೆ ಎಂದು ಭಾವಿಸಿದರೆ ಮೂರ್ಖತನದ ಪರಮಾವಧಿ. ಇದರಿಂದ ನಿಮ್ಮ ವ್ಯಕ್ತಿತ್ವಕ್ಕೆ ಧಕ್ಕೆಯಾಗಲಿದೆ.

ಎಂ.ಪಿ. ರೇಣುಕಾಚಾರ್ಯ, ಬಿಜೆಪಿ ಶಾಸಕ ಹಾಗೂ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ

'ಅವರು ಒಪ್ಪಿಕೊಂಡಂತೆ ಆಗಿದೆ'

ಅವರ ಹೇಳಿಕೆ ತಪ್ಪು. ನಾನು ನೂರಕ್ಕೆ ನೂರು ಏಕಪತ್ನಿ ವ್ರತಸ್ಥ. ನನಗೆ ಒಬ್ಬಳೇ ಹೆಂಡತಿ. ಯಾವುದೇ ದೇವರ ಎದುರು ಬಂದು ಪ್ರಮಾಣ ಮಾಡಲು ಸಿದ್ಧ. ಅವರು ತಮ್ಮನ್ನೂ ಸೇರಿಸಿಕೊಂಡು ಹೇಳಿದ್ದಾರೆ. ಅವರಿಗೆ ಸಂಬಂಧ ಇರುವುದನ್ನು ಒಪ್ಪಿಕೊಂಡಂತೆ ಆಗಿದೆ. 225 ಜನರ ಹೆಸರು ಹೇಳಿ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಸಚಿವರ ಘನತೆಗೆ ತಕ್ಕ ಮಾತು ಅಲ್ಲ. ಬಾಯಿ ತಪ್ಪಿಯೂ ಇಂತಹ ಮಾತು ಹೇಳಬಾರದಿತ್ತು.

ಕೆ.ಎಂ. ಶಿವಲಿಂಗೇಗೌಡ, ಜೆಡಿಎಸ್ ಶಾಸಕ

'ಸುಧಾಕರ್‌ಗೆ ಮಾಡಲಿಕ್ಕೆ ಕೆಲಸ ಇಲ್ಲ'

ಸುಧಾಕರ್‌ಗೆ ಮಾಡೋಕೆ ಕೆಲಸ ಇಲ್ಲದೆ ಈ ರೀತಿ ಹೇಳಿಕೆ ನೀಡಿದ್ದಾರೆ. ಕೆಲಸ ಕೊಡಿಸುತ್ತಾರೆಂದು ಬಂದ ಹೆಣ್ಣು ಮಗಳನ್ನು ದುರ್ಬಳಕೆ ಮಾಡಿದ್ದಾರೆ (ಸಿ.ಡಿ ಪ್ರಕರಣ). ಆ ಹೆಣ್ಣು ಮಗಳಿಗೆ ಅನ್ಯಾಯ ಆಗಿದೆ. ನ್ಯಾಯ ಸಿಗಬೇಕೆಂದು ನಾವು (ಕಾಂಗ್ರೆಸ್) ಕೇಳುತ್ತಿದ್ದೇವೆ. ಪ್ರಕರಣವನ್ನು ಸಿಬಿಐಗೆ ಕೊಡಲಿ. ಕೋರ್ಟ್‌ಗೆ ಹೋಗಿ ಸಚಿವರು ತಡೆಯಾಜ್ಞೆ ಯಾಕೆ ತರಬೇಕು.

ಸೌಮ್ಯಾರೆಡ್ಡಿ, ಕಾಂಗ್ರೆಸ್ ಶಾಸಕಿ

'ಮಾನಸಿಕ ಸಮತೋಲನ ತಪ್ಪಿದೆ'

'ಅವರಿಗೆ (ಸುಧಾಕರ್‌ಗೆ) ಮಾನಸಿಕ ಸಮತೋಲನ ತಪ್ಪಿದಂತೆ ಕಾಣುತ್ತಿದೆ. 225 ಶಾಸಕರೂ ಎಂದು ಅವರು ಹೇಳಿದ್ದಾರೆ. ಅವರಲ್ಲಿ ಹೆಣ್ಣು ಮಕ್ಕಳು ಶಾಸಕರೂ ಇದ್ದಾರಲ್ಲಾ. ಅವರನ್ನೆಲ್ಲ ಸೇರಿಸಿ ಹೇಳಿದಂತೆ ಆಯಿತಲ್ಲ. ಸ್ಪೀಕರ್, ಎಲ್ಲರೂ ಅಂಥವರೇ ಆದರೆ ಸದನದ ಪಾವಿತ್ರ್ಯತೆ ಏನು ಉಳಿಯುತ್ತದೆ. ಅವರದೇ ಮುಖ್ಯಮಂತ್ರಿ ಅಲ್ವಾ. ನನ್ನ ಬಗೆಯೂ ಹೇಳಿದ್ದಾರೆ. ನನ್ನ ವಿರುದ್ಧ ಯಾವ ತನಿಖೆ ಬೇಕಾದರೂ ಮಾಡಲಿ.

ಕೆ.ಆರ್. ರಮೇಶ್ ಕುಮಾರ್, ಕಾಂಗ್ರೆಸ್ ಶಾಸಕ

'ತಪ್ಪು ಹೇಳಿಕೆ'

ಯಾವ ದೃಷ್ಟಿಕೋನದಲ್ಲಿ ಯಾವ ಕಾರಣಕ್ಕೆ ಕೊಟ್ಟಿದ್ದಾರೊ ಗೊತ್ತಿಲ್ಲ. ಮಾತನಾಡಲು ಶಾಸಕರಿಗೆ ವೈಯಕ್ತಿಕ ಸ್ವಾತಂತ್ರ್ಯ ಇದೆ. ಆದರೆ, ಎಲ್ಲ ಶಾಸಕರ ಬಗ್ಗೆ ಮಾತನಾಡುವ ಸ್ವಾತಂತ್ರ್ಯ ಅವರಿಗೆ ಇಲ್ಲ. ಅವರ ಹೇಳಿಕೆ ತಪ್ಪು.

ರೂಪಾ ಶಶಿಧರ್, ಕಾಂಗ್ರೆಸ್ ಶಾಸಕಿ

'ವೇದನೆ ಹೇಳಿಕೊಂಡಿರುವೆ'

ಬೆಂಗಳೂರು: 'ಕೆಲವು ಹಿರಿಯ ನಾಯಕರು ತೇಜೋವಧೆ ಮೂಲಕ ನಮ್ಮ ಸಾರ್ವಜನಿಕ ಜೀವನಕ್ಕೆ ಇತಿಶ್ರೀ ಹೇಳಲು ಮುಂದಾದಾಗ ಅನಿವಾರ್ಯವಾಗಿ ನನ್ನ ಮನಸ್ಸಿಗಾದ ನೋವನ್ನು ಬಹಿರಂಗವಾಗಿ ತೋಡಿಕೊಂಡಿದ್ದೇನೆ. ನನ್ನ ಹೇಳಿಕೆ ಹಿಂದಿನ ವೇದನೆ ಅರ್ಥ ಮಾಡಿಕೊಳ್ಳಬೇಕು' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ತಮ್ಮ ಹೇಳಿಕೆಗೆ ಸಮಜಾಯಿಷಿ ನೀಡಿರುವ ಅವರು, 'ಶಾಸಕರು, ಶಾಸನ ಸಭೆ ಬಗ್ಗೆ ಅಪಾರ ಗೌರವ ಹೊಂದಿರುವ ನಾನು ಯಾರ ಸ್ವಾಭಿಮಾನ, ಗೌರವಕ್ಕೆ ಧಕ್ಕೆ ತರುವ ಪ್ರಶ್ನೆಯೇ ಇಲ್ಲ' ಎಂದು ಹೇಳಿದ್ದಾರೆ.

'ನನ್ನನ್ನೂ ಸೇರಿದ ಹಾಗೆ ಕೆಲವು ಸಚಿವರ ನೈತಿಕ ಅರ್ಹತೆಯನ್ನು ವಿರೋಧ ಪಕ್ಷದ ಕೆಲ ನಾಯಕರು ನಿರಂತರವಾಗಿ ಪ್ರಶ್ನಿಸಿ ನಮ್ಮ ಗೌರವಕ್ಕೆ ಹಾನಿ ಮಾಡಿದ್ದಾರೆ. ಈ ರಾಜಕೀಯ ಷಡ್ಯಂತ್ರ ಎದುರಿಸಲು ಕಾನೂನಾತ್ಮಕಉಪಕ್ರಮಕ್ಕೆ ಮುಂದಾಗಿದ್ದು ನಿಜ. ಅದರ ಅರ್ಥ ನಾವೇನೋ ಅಪರಾಧ ಮಾಡಿದ್ದೇವೆ ಅಂತಲ್ಲ' ಎಂದು ಸುಧಾಕರ್ ಹೇಳಿದ್ದಾರೆ.

'ಕೆಲವು ನಾಯಕರ ಏಕಪಕ್ಷೀಯ, ಪೂರ್ವಗ್ರಹ ಪೀಡಿತ ಹೇಳಿಕೆಗಳಿಂದ ಬೇಸತ್ತು ಅವರ ನೈತಿಕತೆಯನ್ನು ಪ್ರಶ್ನಿಸಿ ಬೆಳಗ್ಗೆ ಮಾಧ್ಯಮಗಳಿಗೆ ನೀಡಿದ ಹೇಳಿಕೆ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಂಡಿದೆ. ಎಲ್ಲ ಶಾಸಕ ಮಿತ್ರರ ಬಗ್ಗೆ ಅಪಾರ ಗೌರವ ಇಟ್ಟುಕೊಂಡಿದ್ದೇನೆ' ಎಂದೂ ಅವರು ಹೇಳಿದ್ದಾರೆ.

'ಕಡತದಿಂದ ಹೆಸರು ತೆಗೆಯಿರಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಬಿಜೆಪಿ ಶಾಸಕ ರಮೇಶ ಜಾರಕಿಹೊಳಿಗೆ ಸಂಬಂಧಿಸಿದ್ದೆನ್ನಲಾದ ಸಿ.ಡಿ ಪ್ರಕರಣದ ಕುರಿತು ವಿಧಾನ ಮಂಡಲದಲ್ಲಿ ನಡೆದ ಚರ್ಚೆಯಲ್ಲಿ ಹಲವರು ನನ್ನ ಹೆಸರನ್ನು ಪ್ರಸ್ತಾಪಿಸಿದ್ದು, ಇದನ್ನು ಕಡತದಿಂದ ತೆಗೆದು ಹಾಕಬೇಕು' ಎಂದು ಸಾಮಾಜಿಕ ಕಾರ್ಯಕರ್ತ ರಾಜಶೇಖರ ಮುಲಾಲಿ ಮನವಿ ಮಾಡಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಪ್ರಕರಣದಲ್ಲಿ ನನ್ನ ಪಾತ್ರ ಏನೂ ಇಲ್ಲ. ಹೀಗಾಗಿ ವಿಧಾನಸಭೆ ಹಾಗೂ ಪರಿಷತ್ ಸಭಾಧ್ಯಕ್ಷರು ನನ್ನ ಹೆಸರನ್ನು ಕಡತದಿಂದ ತೆಗೆದು ಹಾಕಬೇಕು. ಪ್ರಕರಣದ ಸಂತ್ರಸ್ತೆ ರಕ್ಷಣೆ ಕೋರಿದರೆ ಸುಪ್ರೀಂ ಕೋರ್ಟ್ ತನಕವೂ ಹೋರಾಟ ನಡೆಸಲು ಸಿದ್ಧನಿದ್ದೇನೆ' ಎಂದರು.

'ಹಿಂದಿನ ಒಂಬತ್ತು 'ಸಿ.ಡಿ' ಪ್ರಕರಣಗಳನ್ನು ಗಮನಿಸಿದಾಗ, ಈ ತನಿಖೆಯೂ ಹಳ್ಳ ಹಿಡಿಯುವ ಸಾಧ್ಯತೆ ಗೋಚರಿಸುತ್ತಿದೆ. ಇದರಲ್ಲಿ ದೊಡ್ಡ ದೊಡ್ಡ ಪತ್ರಕರ್ತರು, ಪ್ರಮುಖರ ಪಾತ್ರ ಇದೆ ಎಂಬ ಆರೋಪಗಳಿವೆ. ಅದಕ್ಕಾಗಿ ಇದರ ತನಿಖೆಯನ್ನು ಸಿಬಿಐಗೆ ನೀಡಬೇಕು' ಎಂದು ಒತ್ತಾಯಿಸಿದರು.

'ಇತರ ಆರು ಸಚಿವರು ನ್ಯಾಯಾಲಯದ ಮೆಟ್ಟಿಲೇರಿದ್ದು, ಅರ್ಜಿಯಲ್ಲಿ ನನ್ನ ಹೆಸರನ್ನೂ ಸೇರಿಸಿದ್ದಾರೆ. ನಾನೂ ಕಾನೂನು ಹೋರಾಟ ಮಾಡುತ್ತೇನೆ' ಎಂದರು.

'ಜೈ ಸಿಡಿ ರಾಮ್' ಎಂದ ಇಬ್ರಾಹಿಂ: ಬಿಜೆಪಿ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕ ಸಿ.ಎಂ. ಇಬ್ರಾಹಿಂ ಅವರು 'ಜೈ ಸಿಡಿ ರಾಮ್' ಎಂಬ ಪದ ಬಳಕೆ ಮಾಡಿರುವುದನ್ನು ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣ ಸ್ವಾಮಿ ಖಂಡಿಸಿದ್ದಾರೆ.

'ಬಿಜೆಪಿಯವರು ಜೈಶ್ರೀರಾಮ್ ಎನ್ನುತ್ತಿದ್ದರು. ಇನ್ನು ಮುಂದೆ ಜೈ ಸಿಡಿ ರಾಮ್ ಅನ್ನಬೇಕು' ಎಂದು ಎಂದು ವ್ಯಂಗ್ಯವಾಡಿ ಉದ್ಧಟತನ ಪ್ರದರ್ಶಿಸಿದ್ದಾರೆ ಎಂದು ಹೇಳಿದ್ದಾರೆ.

'ಇಬ್ರಾಹಿಂ ಅವರು ಶ್ರೀರಾಮನ ಹೆಸರು ಪ್ರಸ್ತಾಪಿಸಿ ಅಪಮಾನ ಮಾಡಿದ್ದಾರೆ. ಇದರಿಂದ ಅಸಂಖ್ಯಾತ ಹಿಂದುಗಳ ಮನಸ್ಸಿಗೆ ನೋವುಂಟು ಮಾಡಿದ್ದಾರೆ. ತಕ್ಷಣವೇ ಇಬ್ರಾಹಿಂ ಅವರು ಕ್ಷಮೆ ಕೇಳಬೇಕು. ಇಲ್ಲವಾದರೆ ಅವರ ವಿರುದ್ಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಭಾರತ್ ನಗರ ಹಾಗೂ ಗ್ರಾಮೀಣಾ ಅಭಿವೃದ್ಧಿ ಟ್ರಸ್ಟ್ ನಗರದ ನಯನ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್. ಸಂಜಯ್ ಅವರಿಗೆ ಸಂಜೀವಿನಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಕೆ.ಎಸ್. ರಂಗಪ್ಪ, ವಿಧಾನಪರಿಷತ್ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ಲೇಖಕ ಡಾ.ಕೂಡ್ಲೂರು ವೆಂಕಟಪ್ಪ ಇದ್ದಾರೆ

₹35.87 ಕೋಟಿ ಮೌಲ್ಯದ ಚಿನ್ನ ಇದೆ ಎಂದಿರುವ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ವೆಂಕಟೇಶ್ವರ ಸ್ವಾಮೀಜಿ

ಬಸವಕಲ್ಯಾಣ (ಬೀದರ್ ಜಿಲ್ಲೆ): ಈ ಕ್ಷೇತ್ರದ ಉಪ ಚುನಾವಣೆಗೆ ಹಿಂದುಸ್ತಾನ್ ಜನತಾ ಪಕ್ಷದಿಂದ ಬುಧವಾರ ನಾಮಪತ್ರ ಸಲ್ಲಿಸಿರುವ ವಿಜಯಪುರ ಜಿಲ್ಲೆ ಬರಡೋಲದ ವೆಂಕಟೇಶ್ವರ ಸ್ವಾಮೀಜಿ ತಮ್ಮ ಬಳಿ ₹35.87 ಕೋಟಿ ಮೌಲ್ಯದ 45 ಕೆ.ಜಿ ಚಿನ್ನ ಇರುವುದಾಗಿ ಪ್ರಮಾಣ-ಪತ್ರದಲ್ಲಿ ತಿಳಿಸಿದ್ದಾರೆ.

ಆದರೆ, ಆದಾಯ ತೆರಿಗೆ ರಿಟರ್ನ್ ಸಲ್ಲಿಸಿದ್ದು, ಅದರಲ್ಲಿ ವಾರ್ಷಿಕ ಆದಾಯ ಶೂನ್ಯ ಎಂದೂ ನಮೂದಿಸಿದ್ದಾರೆ!

ಧಾರವಾಡದಲ್ಲಿ ಬಿ.ಕಾಂ ಓದಿರುವ ಇವರು ಈ ವರೆಗೆ 25 ಚುನಾವಣೆಗಳಲ್ಲಿ ಸ್ಪರ್ಧಿಸಿದ್ದು ಈಗ 26ನೇ ಸಲ ನಾಮಪತ್ರ ಸಲ್ಲಿಸಿದ್ದಾರೆ. ಪತ್ನಿ ಕವಿತಾ ಬಳಿ ₹23 ಲಕ್ಷದ ಚಿನ್ನ ಹಾಗೂ ₹4 ಲಕ್ಷ ಮೌಲ್ಯದ ಬೆಳ್ಳಿ ಆಭರಣಗಳಿವೆ. ಒಟ್ಟು ₹58.37 ಕೋಟಿ ಮೌಲ್ಯದ ಚರಾಸ್ತಿ ಹಾಗೂ ₹1 ಕೋಟಿ ಮೌಲ್ಯದ ಸ್ಥಿರಾಸ್ತಿ ಇದೆ ಎಂದೂ ಅವರು ಉಲ್ಲೇಖಿಸಿದ್ದಾರೆ.

'ಶೂದ್ರರಾದರೆ ಎಸ್‌ಸಿ ಮೀಸಲಾತಿ ಕೇಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಸಮುದಾಯದವರೂ ಶೂದ್ರರು ಎಂದುಕೊಳ್ಳುವುದಾದರೆ ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಕೇಳಿ. ಅದು ಬಿಟ್ಟು ನಮ್ಮ ತಟ್ಟೆಯಲ್ಲಿ (2ಎ ಪ್ರವರ್ಗ) ಕೈ ಹಾಕಿ ಅನ್ನವನ್ನು ಕಿತ್ತುಕೊಳ್ಳುವುದು ಬೇಡ' ಎಂದು ಅತಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ಗೌರವ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಹೇಳಿದರು.

ಮುಂದುವರಿದ ಸಮುದಾಯಗಳನ್ನು 2ಎ ಪ್ರವರ್ಗ ಪಟ್ಟಿಯಲ್ಲಿ ಸೇರಿಸಬಾರದು ಎಂದು ಆಯೋಗಕ್ಕೆ ನೀಡಿದ್ದ ಮನವಿಯ ನಿಮಿತ್ತ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಬಹಿರಂಗ ವಿಚಾರಣೆಯಲ್ಲಿ ಅವರು ತಮ್ಮ ವಾದವನ್ನು ಮಂಡಿಸಿದರು.

'ಪಟ್ಟಿಯಲ್ಲಿ ಈಗಾಗಲೇ ಇರುವ ಹಲವಾರು ಸಮುದಾಯಗಳ ವ್ಯಕ್ತಿಗಳು ಇದುವರೆಗೂ ಒಂದು ಬಾರಿಯೂ ಮೀಸಲಾತಿಯ ಉಪಯೋಗ ಪಡೆದುಕೊಂಡಿಲ್ಲ. ಈ ಪಟ್ಟಿಯಲ್ಲಿ ಮುಂದುವರಿದ ಪ್ರಬಲ ಜಾತಿಗಳನ್ನು ಸೇರಿಸಿದಲ್ಲಿ ಕುಲಕಸುಬು ಆಧಾರಿತ ಸಮುದಾಯಗಳು ತಮ್ಮ ಅಸ್ತಿತ್ವನ್ನೇ ಕಳೆದುಕೊಳ್ಳಬೇಕಾಗುತ್ತದೆ' ಎಂದೂ ಅವರು ಆತಂಕ ವ್ಯಕ್ತಪಡಿಸಿದರು.

ವೇದಿಕೆಯ ಅಧ್ಯಕ್ಷ ಎಂ.ಸಿ ವೇಣುಗೋಪಾಲ್, 'ರಾಜಕೀಯ ಒತ್ತಡಕ್ಕೆ ಮಣಿಯದೆ ನ್ಯಾಯ ಯುತವಾದಂತಹ ವರದಿಯನ್ನು ಸರ್ಕಾರಕ್ಕೆ ನೀಡಬೇಕು ಹಾಗೂ ಅತಿ ಹಿಂದುಳಿದ ಜಾತಿಗಳ ಅಸ್ಮಿತೆ ಹಾಗೂ ಅಸ್ತಿತ್ವವನ್ನು ಕಾಪಾಡಬೇಕು' ಎಂದು ಅವರು ಆಯೋಗಕ್ಕೆ ಮನವಿ ಮಾಡಿದರು.

ವೇದಿಕೆಯ ಉಪಾಧ್ಯಕ್ಷರಾದ ಡಾ.ಜಿ. ರಮೇಶ್, ಎಚ್.ಸುಬ್ಬಣ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಜಿ.ಡಿ ಗೋಪಾಲ್, ಎಚ್.ಸಿ. ರುದ್ರಪ್ಪ, ಟಿ.ಸಿ ನಟರಾಜ್, ಎಂ.ಬಿ ಬಸವರಾಜ್ ಉಪಸ್ಥಿತರಿದ್ದರು.

ಒಕ್ಕಲಿಗರ ಮೀಸಲಾತಿ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಒಕ್ಕಲಿಗರ ಮೀಸಲಾತಿ ಪ್ರಮಾಣವನ್ನು ಶೇ 4ರಿಂದ ಶೇ 10ಕ್ಕೆ ಹೆಚ್ಚಿಸಲು ಶಿಫಾರಸು ಮಾಡಬೇಕು ಎಂದು ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ, ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸಿದೆ.

ಸಮಿತಿಯ ಅಧ್ಯಕ್ಷ ಡಾ.ವೈ.ಕೆ. ಪುಟ್ಟಸೋಮೇಗೌಡ ಬರೆದಿರುವ ಪತ್ರವನ್ನು ಸಮಿತಿಯ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಯಲಚವಾಡಿ ನೇತೃತ್ವದ ನಿಯೋಗವು ಆಯೋಗದ ಅಧ್ಯಕ್ಷರಾದ ಕೆ. ಜಯಪ್ರಕಾಶ್ ಹೆಗ್ಡೆ ಅವರಿಗೆ ಬುಧವಾರ ಮನವಿ ಸಲ್ಲಿಸಿತು.

'ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಒಕ್ಕಲಿಗರು ಎರಡನೇ ಸ್ಥಾನದಲ್ಲಿದ್ದಾರೆ. ಶೇ 60ರಷ್ಟು ಒಕ್ಕಲಿಗರು ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿದ್ದಾರೆ. ಇವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಈ ಸಮುದಾಯದ ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು' ಎಂದು ಅವರು ಒತ್ತಾಯಿಸಲಾಗಿದೆ.

ಸಮಿತಿಯ ಪ್ರಧಾನ ಸಂಚಾಲಕ ಆಡಿಟರ್ ನಾಗರಾಜ್ ಯಲಚವಾಡಿ ಅವರು ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರಿಗೆ ಮನವಿ ಪತ್ರ ಸಲ್ಲಿಸಿದರು. ನಿವೃತ್ತ ಐಎಎಸ್ ಅಧಿಕಾರಿ ಟಿ.ತಿಮ್ಮೇಗೌಡ, ಆಯೋಗದ ಸದಸ್ಯ ರಾಜಶೇಖರ್, ಸಮಿತಿ ಸದಸ್ಯರಾದ ಎಲ್.ಎನ್. ಮುಕುಂದರಾಜ್, ಮಹೇಶಗೌಡ ಮತ್ತು ಕರುಣ್ ಆನಂದ್ ಇದ್ದರು

'ರಾಜ್ಯದಲ್ಲಿ ಒಕ್ಕಲಿಗರಿಗೆ ಪ್ರವರ್ಗ 3ಎ ಅಡಿ ಶೇ 4ರಷ್ಟು ಮೀಸಲಾತಿ ಅವಕಾಶ ಇದ್ದರೂ, ಈ ಪ್ರವರ್ಗದಡಿಯಲ್ಲಿಯೇ ಬಲಿಜ ಹಾಗೂ ಕೊಡವ ಸಮುದಾಯದವರೂ ಇದ್ದಾರೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಅವರು ಹೊಂದಿರುವ ಜನಸಂಖ್ಯೆ ಆಧಾರದ ಮೇಲೆ ಒಟ್ಟು ಶೇ 18ರಷ್ಟು ಮೀಸಲಾತಿ ನೀಡಲಾಗಿದೆ. ರಾಜ್ಯದಲ್ಲಿಯೇ ಎರಡನೇ ಸ್ಥಾನದಲ್ಲಿರುವ ಒಕ್ಕಲಿಗರಿಗೆ ಕೇವಲ ಶೇ 4ರಷ್ಟು ಮೀಸಲಾತಿ ನೀಡಿರುವುದು ಸಮಂಜಸ ಎನಿಸುವುದಿಲ್ಲ' ಎಂದು ಮನವಿ ಪತ್ರದಲ್ಲಿ ವಿವರಿಸಲಾಗಿದೆ.

'ಹಕ್ಕುಪತ್ರ ನೋಂದಣಿ ಶುಲ್ಕ ಇಳಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳೆದ 40 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಬಡವರಿಗೆ ಹಕ್ಕುಪತ್ರ ನೀಡುವ ಕಾರ್ಯಕ್ರಮಕ್ಕೆ ನಮ್ಮ ಸರ್ಕಾರ ಚಾಲನೆ ನೀಡಿದೆ. ಈ ಮೊದಲು ಸಾಮಾನ್ಯ ವರ್ಗದವರಿಗೆ ₹10 ಸಾವಿರ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ₹4 ಸಾವಿರ ಹಕ್ಕುಪತ್ರ ನೋಂದಣಿ ಶುಲ್ಕ ವಿಧಿಸಲಾಗುತ್ತಿತ್ತು. ಇದನ್ನು ನಾವು ಕ್ರಮವಾಗಿ ₹4 ಹಾಗೂ ₹2 ಸಾವಿರಕ್ಕೆ ಇಳಿಸಿದ್ದೇವೆ' ಎಂದು ವಸತಿ ಸಚಿವ ವಿ.ಸೋಮಣ್ಣ ಬುಧವಾರ ಹೇಳಿದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ದಾಸರಹಳ್ಳಿ ಮತ್ತು ರಾಜಕುಮಾರ್ ವಾರ್ಡ್‌ನ ಫಲಾನುಭವಿಗಳಿಗೆ ಹಕ್ಕುಪತ್ರ ಮತ್ತು ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅಡಿಯಲ್ಲಿ ಮನೆ ಕಟ್ಟಲು ಬಿಡುಗಡೆಯಾಗಿರುವ ಚೆಕ್‌ಗಳನ್ನು ವಿತರಿಸಿ ಮಾತನಾಡಿದರು.

'ಹಕ್ಕುಪತ್ರ ಪಡೆದವರು ಮನೆಗಳನ್ನು ಮಾರಾಟ ಮಾಡಬೇಡಿ. ಇದನ್ನು ಉಳಿಸಿಕೊಂಡು ನೆಮ್ಮದಿಯ ಜೀವನ ನಡೆಸಿ' ಎಂದು ಕಿವಿಮಾತು ಹೇಳಿದರು.

ಫಲಾನುಭವಿಗಳಿಗೆ ಸಚಿವ ವಿ.ಸೋಮಣ್ಣ ಚೆಕ್ ವಿತರಿಸಿದರು. ಬಿಜೆಪಿ ಮುಖಂಡರಾದ ಕೆ.ಉಮೇಶ್ ಶೆಟ್ಟಿ, ಗಂಗಭೈರಯ್ಯ, ರೂಪ ಲಿಂಗೇಶ್ವರ್ ಹಾಗೂ ಗೋವಿಂದರಾಜನಗರ ಬಿಜೆಪಿ ಮಂಡಲದ ಅಧ್ಯಕ್ಷ ವಿಶ್ವನಾಥಗೌಡ ಇದ್ದಾರೆ

ಜೆಇಇ (ಮೇನ್ಸ್) ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಮಾರ್ಚ್‌ನಲ್ಲಿ ನಡೆದ ಜೆಇಇ (ಮೇನ್ಸ್) ಫಲಿತಾಂಶವನ್ನು ಬುಧವಾರ ಪ್ರಕಟಿಸಲಾಗಿದೆ. 13 ಅಭ್ಯರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಹೇಳಿದೆ.

'ಫೆಬ್ರುವರಿ, ಮಾರ್ಚ್‌ನಲ್ಲಿ ಎರಡು ಹಂತದ ಪರೀಕ್ಷೆಗಳು ಮುಗಿದಿವೆ. ಏಪ್ರಿಲ್ ಹಾಗೂ ಮೇನಲ್ಲಿ ನಡೆಯುವ ಇನ್ನೂ ಎರಡು ಹಂತದ ಪರೀಕ್ಷೆಗಳು ಮುಕ್ತಾಯಗೊಂಡ ನಂತರ ರ‍್ಯಾಂಕ್ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು' ಎಂದು ಎನ್‌ಟಿಎ ತಿಳಿಸಿದೆ.

ಅಂತರಂಗ ಸಂಘಟನೆಯು ನಗರದಲ್ಲಿ ಹಮ್ಮಿಕೊಂಡಿದ್ದ 41ನೇ ವರ್ಷದ ನವೋಲ್ಲಾಸ ರಂಗಸಂಭ್ರಮಕ್ಕೆ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಹಾಗೂ ನಾಟಕಕಾರ ಶ್ರೀಪತಿ ಮಂಜನಬೈಲು ಚಾಲನೆ ನೀಡಿದರು

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



ಜಿ.ಪಂ., ತಾ.ಪಂ. ಕ್ಷೇತ್ರಗಳ ಸಂಖ್ಯೆ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಚುನಾವಣಾ ಆಯೋಗವು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿನ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಸದಸ್ಯರ ಸಂಖ್ಯೆ ನಿಗದಿಗೊಳಿಸಿ ಬುಧವಾರ ಅಧಿಸೂಚನೆ ಹೊರಡಿಸಿದೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆ 25. ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿಯಲ್ಲಿ 11 ಸದಸ್ಯರು ಇರಲಿದ್ದು, ಇದೇ ವ್ಯಾಪ್ತಿಯಲ್ಲಿ 3 ಜಿಲ್ಲಾ ಪಂಚಾಯಿತಿ ಸದಸ್ಯರು ಇರುತ್ತಾರೆ. ಯಲಹಂಕ ತಾಲ್ಲೂಕು ಪಂಚಾಯಿತಿಯಲ್ಲಿ 12 ಸದಸ್ಯರು ಇರಲಿದ್ದು, ಆ ವ್ಯಾಪ್ತಿಯ ಜಿಲ್ಲಾ ಪಂಚಾಯಿತಿ ಸದಸ್ಯರ ಸಂಖ್ಯೆ 5. ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿಯಲ್ಲಿ 13 ಸದಸ್ಯರು ಇರಲಿದ್ದು, 5 ಮಂದಿ ಜಿಲ್ಲಾ ಪಂಚಾಯಿತಿ ಸದಸ್ಯರು ಆ ವ್ಯಾಪ್ತಿಯಲ್ಲಿ ಆಯ್ಕೆಯಾಗಲಿದ್ದಾರೆ. ಆನೇಕಲ್ ತಾಲ್ಲೂಕು ಪಂಚಾಯಿತಿಯಲ್ಲಿ 24 ಸದಸ್ಯರಿದ್ದು, ಅಲ್ಲಿ 9 ಮಂದಿ ಜಿಲ್ಲಾ ಪಂಚಾಯಿತಿ ಸದಸ್ಯರು ಇರುತ್ತಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಒಟ್ಟು ಸದಸ್ಯರ ಸಂಖ್ಯೆ 23. ದೇವನಹಳ್ಳಿ ತಾಲ್ಲೂಕು ಪಂಚಾಯಿತಿಯಲ್ಲಿ 12 ಸದಸ್ಯರು ಇರಲಿದ್ದು, ಆ ವ್ಯಾಪ್ತಿಯಲ್ಲಿ 5 ಜಿಲ್ಲಾ ಪಂಚಾಯಿತಿ ಸದಸ್ಯರು ಆಯ್ಕೆಯಾಗುತ್ತಾರೆ. ದೊಡ್ಡಬಳ್ಳಾಪುರ ತಾಲ್ಲೂಕು ಪಂಚಾಯಿತಿಯಲ್ಲಿ 16 ಸದಸ್ಯರು ಇರಲಿದ್ದು, ಅಲ್ಲಿ 6 ಜಿಲ್ಲಾ ಪಂಚಾಯಿತಿ ಸದಸ್ಯರು ಇರುತ್ತಾರೆ. ನೆಲಮಂಗಲ ತಾಲ್ಲೂಕು ಪಂಚಾಯಿತಿಯಲ್ಲಿ 12 ಸದಸ್ಯರು ಆಯ್ಕೆಯಾಗಲಿದ್ದು, ಆ ವ್ಯಾಪ್ತಿಯಲ್ಲಿ 5 ಜಿಲ್ಲಾ ಪಂಚಾಯಿತಿ ಸದಸ್ಯರು ಇರುತ್ತಾರೆ. ಹೊಸಕೋಟೆ ತಾಲ್ಲೂಕು ಪಂಚಾಯಿತಿಯಲ್ಲಿ 24 ಸದಸ್ಯರು ಇರಲಿದ್ದು, ಅಲ್ಲಿನ ವ್ಯಾಪ್ತಿಯಲ್ಲಿ 7 ಮಂದಿ ಜಿಲ್ಲಾ ಪಂಚಾಯಿತಿ ಸದಸ್ಯರು ಆಯ್ಕೆಯಾಗುತ್ತಾರೆ.

ವಿಸ್ತಾರ ಇಲ್ಲದಿದ್ದರೆ ಆಳವೂ ಇರದು– ಭೈರಪ್ಪ

ಪ್ರಜಾವಾಣಿ ವಾರ್ತೆ



ಮೈಸೂರು: 'ವಿಸ್ತಾರ ಇಲ್ಲದೇ ಹೋದರೆ ಆಳವೂ ಇರುವುದಿಲ್ಲ. ವಿಸ್ತಾರ ಮತ್ತು ಆಳ ಪರಸ್ಪರ ಪೂರಕ. ಎಲ್ಲವೂ ಸಂಕ್ಷಿಪ್ತವಾಗಿರಬೇಕು ಎನ್ನುವ ಪರಿಕಲ್ಪನೆ ಬಹಳ ದಿನ ಬದುಕುವುದಿಲ್ಲ' ಎಂದು ಸಾಹಿತಿ ಎಸ್.ಎಲ್.ಭೈರಪ್ಪ ತಿಳಿಸಿದರು.

ಮೈಸೂರು ರಂಗಾಯಣದಲ್ಲಿ ಬುಧವಾರ ನಡೆದ 'ಚಹಾದ ಜೋಡಿ ಚರ್ಚಾ ಪರ್ವ' ಸಂವಾದದಲ್ಲಿ ಅವರು ಮಾತನಾಡಿದರು.

'ಪರ್ವ' ನಾಟಕ ವಿಸ್ತಾರವಾಯಿತು. ಅದು ಸಮಯ, ಹಣ, ಶಕ್ತಿ ಅಪವ್ಯಯಕ್ಕೆ ಕಾರಣ ಎಂಬ ಟೀಕೆಗಳು ಬರುತ್ತಿವೆ. ಇದೇ ಬಗೆಯ ಟೀಕೆಗಳು ಕನ್ನಡದ ನವ್ಯ ಸಾಹಿತ್ಯ ಕಾಲಘಟ್ಟದಲ್ಲೂ ಬಂದಿತ್ತು. ನವೋದಯ ಸಾಹಿತ್ಯವನ್ನು ಕೆಲವು ನವ್ಯ ಸಾಹಿತಿಗಳು 'ಆನೆ ಲದ್ದಿ' ಎಂದೇ ಟೀಕಿಸಿದರು. ಈ ನಾಟಕ ಕುರಿತು ಮಾಡುವ ಟೀಕಾಕಾರರೂ ನವ್ಯ ಕಾಲಘಟ್ಟಕ್ಕೆ ಸೇರಿದವರೆಂದು ತಿಳಿದು, ಹೆಚ್ಚಿನ ಮಹತ್ವ ನೀಡಬೇಕಿಲ್ಲ ಎಂದರು.

ಹಿಂದೆ ಕಂಪನಿ ನಾಟಕವನ್ನು ದಿನವಿಡೀ ಜನ ನೋಡುತ್ತಿದ್ದರು. ಈಗಲೂ ಹಳ್ಳಿಗಳಲ್ಲಿ ಪೌರಾಣಿಕ ನಾಟಕವನ್ನು ರಾತ್ರಿಯಿಂದ ಮುಂಜಾನೆಯವರೆಗೆ ನೋಡುತ್ತಾರೆ ಎಂದರು.

'ನಾಟಕ ನೋಡಿದ ಮೇಲೆ ಪರ್ವ ಕಾದಂಬರಿಯನ್ನು ಮತ್ತೊಮ್ಮೆ ಓದಬೇಕು ಎಂದೆನಿಸಿದೆ. ಮತ್ತೊಂದು ಬಾರಿ ನಾಟಕ ನೋಡಿ, ಓದುತ್ತೇನೆ' ಎಂದರು.

'ಪರ್ವ ಕಾದಂಬರಿ ಬರೆಯುವುದಕ್ಕೂ ಮುಂಚೆ ಸಾಕಷ್ಟು ಸಂಶೋಧನೆಗಳನ್ನು ಕೈಗೊಂಡೆ. ಹಲವು ಮಹಾಭಾರತಗಳನ್ನು, ಪಿ.ವಿ.ಕಾಣೆ ಅವರ 'ಹಿಸ್ಟರಿ ಆಫ್ ಧರ್ಮಶಾಸ್ತ್ರ' ಗ್ರಂಥದ 7 ಸಂಪುಟಗಳನ್ನೂ ಅಧ್ಯಯನ ಮಾಡಿದ್ದೆ' ಎಂದು ವಿವರಿಸಿದರು.

ಟೀಕಿಸಿದ್ದ ಸತ್ಯು: ಈಚೆಗೆ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿನಿಮಾ ನಿರ್ದೇಶಕ ಎಂ.ಎಸ್.ಸತ್ಯು ಮಾತನಾಡಿ, 'ಪರ್ವ ನಾಟಕ ದೀರ್ಘವಾಗಿ ಬೇಕಿರಲಿಲ್ಲ. ನಾವು ಏನನ್ನು ಹೇಳಬೇಕು ಎಂಬುದನ್ನು ಸೂಕ್ಷ್ಮವಾಗಿ, ಒಂದು ಸೀಮಿತ ಚೌಕಟ್ಟಿನಲ್ಲಿ ಹೇಳಬೇಕಿತ್ತು' ಎಂದು ಟೀಕಿಸಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೆಂಗಳೂರು ನಗರದ ಕೆ.ಆರ್. ಮಾರುಕಟ್ಟೆಯಿಂದ (ಬೊಂಬುಬಜಾರ್) ಬೆಳ್ಳಂದೂರು ಕೆರೆಗೆ ಹರಿಯುವ ಕೋರಮಂಗಲ ರಾಜಕಾಲುವೆ (ಕೆ–100)ಅನ್ನು "ಜಲ ಮಾರ್ಗ (Citizens Water Way Project) ಅಭಿವೃದ್ಧಿಪಡಿಸುವ ಮತ್ತು ಸೌಂದರೀಕರಣಗೊಳಿಸುವ ಯೋಜನೆಯ" ಶಂಕುಸ್ಥಾಪನೆ ಕಾರ್ಯಕ್ರಮ

ದಿನಾಂಕ: 25.03.2021, ಬೆಳಗ್ಗೆ 10.00 ಗಂಟೆಗೆ
ಸ್ಥಳ: ಡಬಲ್ ರೋಡ್, ಶಾಂತಿನಗರ ಬಸ್ ನಿಲ್ದಾಣ ಎದುರು, ಬೆಂಗಳೂರು

ಜಲ ಮಾರ್ಗದ ಯೋಜನೆಯ ಪ್ರಮುಖ ಅಂಶಗಳು

- ಜಲ ಮಾರ್ಗದ ಯೋಜನೆಯ ಮೊತ್ತ: ರೂ.179.5 ಕೋಟಿ ಹೊಂದಿದ್ದು 10 ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಿದೆ.
- ರಾಜಕಾಲುವೆಯಲ್ಲಿ ನಾಗರೀಕ ಒಳಚರಂಡಿ/ಕೈಗಾರಿಕಾ ತ್ಯಾಜ್ಯ ನೀರನ್ನು ಬೇರ್ಪಡಿಸಿ ತಳಭಾಗವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ Geo-synthetic Membrane ಗಳನ್ನು ಅಳವಡಿಸುವುದು.
- ಜಲ ಮಾರ್ಗಕ್ಕೆ ತಳಭಾಗದಲ್ಲಿ ಕೊಳವೆಗಳನ್ನು ನಿರ್ಮಿಸಿ ಅದರ ಮೇಲೆ ಸಾರ್ವಜನಿಕರ/ಪಾದಚಾರಿಗಳ ಮಾರ್ಗ ನಿರ್ಮಾಣ.
- ವಾಸ್ತುಶಿಲ್ಪದ ಮಾದರಿಯಲ್ಲಿ ಮರುವಿನ್ಯಾಸ, ಹಸಿರು ವಾತಾವರಣದ ಸೃಷ್ಟಿ ಮತ್ತು ಅಲಂಕಾರಿಕಾ ವಿದ್ಯುಧೀಕರಣದ ಅಳವಡಿಕೆ.
- ನಾಗರೀಕರ ಸುರಕ್ಷತೆಗೆ 24/7 ಸಿಸಿಟಿವಿ ಕ್ಯಾಮರ ವ್ಯವಸ್ಥೆ, ನಿಯಂತ್ರಣ ಕೊಠಡಿ ಸ್ಥಾಪನೆ, ನೀರಿನ ಕಾರಂಜಿಗಳ ನಿರ್ಮಾಣ ಮತ್ತು ಶೌಚಾಲಯವನ್ನು ನಿರ್ಮಿಸಲು ಕ್ರಮ.
- ವರ್ಷದ 365 ದಿನವು ಜಲ ಮಾರ್ಗದಲ್ಲಿ ಶುದ್ಧೀಕರಿಸಿದ ನೀರು ಹರಿಯುವಂತೆ ಮಾಡಲು 05 ಎಂ.ಎಲ್.ಡಿ ಎಸ್.ಟಿ.ಪಿಯ ಸ್ಥಾಪನೆ.

ಶಂಕುಸ್ಥಾಪನೆ
ಶ್ರೀ ಬಿ.ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ

ಜ್ಯೋತಿ ಬೆಳಗಿಸುವವರು
ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಡಿ.ವಿ. ಸದಾನಂದಗೌಡ, ಮಾನ್ಯ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು, ಭಾರತ ಸರ್ಕಾರ
ಡಾ॥ ಸಿ.ಎನ್. ಅಶ್ವತ್ಥ ನಾರಾಯಣ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐಟಿ–ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ
ಶ್ರೀ ರಾಮಲಿಂಗಾರೆಡ್ಡಿ, ಮಾನ್ಯ ಶಾಸಕರು, ಬಿ.ಟಿ.ಎಂ ಲೇಔಟ್ ವಿಧಾನಸಭಾ ಕ್ಷೇತ್ರ
ಶ್ರೀ ಉದಯ್ ಬಿ.ಗರುಡಾಚಾರ್, ಮಾನ್ಯ ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ
ಶ್ರೀ ಎನ್.ಎ. ಹ್ಯಾರಿಸ್, ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಶ್ರೀ ಆರ್. ಅಶೋಕ್, ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ವಿ. ಸೋಮಣ್ಣ, ಮಾನ್ಯ ವಸತಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಸ್. ಸುರೇಶ್ ಕುಮಾರ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಅರವಿಂದ ಲಿಂಬಾವಳಿ, ಮಾನ್ಯ ಅರಣ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎನ್. ನಾಗರಾಜು (ಎಂ.ಟಿ.ಬಿ), ಮಾನ್ಯ ಸಕ್ಕರೆ ಹಾಗೂ ಪೌರಾಡಳಿತ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಬಿ.ಎ. ಬಸವರಾಜ, ಮಾನ್ಯ ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಸ್.ಟಿ. ಸೋಮಶೇಖರ್, ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಗೋಪಾಲಯ್ಯ ಕೆ., ಮಾನ್ಯ ಅಬಕಾರಿ ಸಚಿವರು, ಕರ್ನಾಟಕ ಸರ್ಕಾರ
ಶ್ರೀ ಎಸ್.ಆರ್. ವಿಶ್ವನಾಥ್, ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಪಿ.ಸಿ. ಮೋಹನ್, ಮಾನ್ಯ ಸಂಸದರು (ಲೋಕಸಭೆ), ಬೆಂಗಳೂರು ಕೇಂದ್ರ ಕ್ಷೇತ್ರ
ಶ್ರೀ ಎಲ್.ಎಸ್. ತೇಜಸ್ವಿ ಸೂರ್ಯ, ಮಾನ್ಯ ಸಂಸದರು (ಲೋಕಸಭೆ), ಬೆಂಗಳೂರು ದಕ್ಷಿಣ ಕ್ಷೇತ್ರ
ಶ್ರೀ ಎಂ. ರಾಜೀವ್ ಚಂದ್ರಶೇಖರ್, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಕೆ.ಸಿ. ರಾಮಮೂರ್ತಿ, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜೈರಾಮ್ ರಮೇಶ್, ಮಾನ್ಯ ಸಂಸದರು (ರಾಜ್ಯಸಭೆ)
ಡಾ॥ ಎಲ್. ಹನುಮಂತಯ್ಯ, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್, ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಬಿ.ಕೆ. ಹರಿಪ್ರಸಾದ್, ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಪುಟ್ಟಣ್ಣ, ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಕೆ. ಗೋವಿಂದರಾಜ್, ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಪಿ.ಆರ್. ರಮೇಶ್, ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಅ. ದೇವೇಗೌಡ, ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಯು.ಬಿ. ವೆಂಕಟೇಶ್, ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಂ. ರಮೇಶಗೌಡ, ಮಾನ್ಯ ಶಾಸಕರು (ವಿಧಾನಪರಿಷತ್)
ಶ್ರೀ ಮುನಿರಾಜು ಗೌಡ. ಪಿ.ಎಂ (ತುಳಸಿ), ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಪಿ. ರವಿಕುಮಾರ್, ಭಾ.ಆ.ಸೇ., ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
ಶ್ರೀಮತಿ ವಂದಿತಾ ಶರ್ಮ, ಭಾ.ಆ.ಸೇ., ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ
ಶ್ರೀ ರಾಕೇಶ್ ಸಿಂಗ್, ಭಾ.ಆ.ಸೇ., ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ

ನಗರದ ಎಲ್ಲಾ ಮಾನ್ಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರಿಗೂ ಆದರದ ಸ್ವಾಗತ

ಗೌರವ್ ಗುಪ್ತ, ಭಾ.ಆ.ಸೇ, ಆಡಳಿತಗಾರರು, ಬಿಬಿಎಂಪಿ
ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ, ಆಯುಕ್ತರು, ಬಿಬಿಎಂಪಿ

"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ"

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಎನ್. ಆರ್. ಚೌಕ, ಬೆಂಗಳೂರು – 560 002

ವಾಸಾಸಂಇ/ಬಿಬಿಎಂಪಿ/16/2020-21

ಬೇಡ್ತಿ–ವರದಾ ನದಿ ಜೋಡಣೆ ಯೋಜನೆ: ಸರ್ಕಾರಕ್ಕೆ ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಎಚ್ಚರಿಕೆ

ವೈಜ್ಞಾನಿಕ ಅಂಶ ಅಲ್ಲಗಳೆದರೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಶಿರಸಿ: ಬೇಡ್ತಿ-ವರದಾ ನದಿ ಜೋಡಣೆ ಯೋಜನೆಯಿಂದ ಎದುರಾಗಬಹುದಾದ ಅನಾಹುತಗಳ ಕುರಿತು ಸರ್ಕಾರಕ್ಕೆ ಸಲ್ಲಿಸುವ ವೈಜ್ಞಾನಿಕ ಅಂಶಗಳನ್ನು ಅಲ್ಲಗಳೆದರೆ ಪ್ರತಿಭಟಿಸುವುದು ಅನಿವಾರ್ಯವಾಗಲಿದೆ ಎಂದು ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಎಚ್ಚರಿಸಿದರು.

ಬೇಡ್ತಿ ಹಾಗೂ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ನಗರದಲ್ಲಿ ಬುಧವಾರ ಆಯೋಜಿಸಿದ್ದ 'ಬೇಡ್ತಿ, ಅಘನಾಶಿನಿ-ವರದಾ ನದಿ ಜೋಡಣೆ ಯೋಜನೆಗಳ ಸಾಧಕ-ಬಾಧಕಗಳ ಕುರಿತು ಸಮಾಲೋಚನಾ ಕಾರ್ಯಾಗಾರ'ದಲ್ಲಿ ಮಾತನಾಡಿದ ಅವರು, 'ವೈಜ್ಞಾನಿಕ ಚಿಂತನೆಯೊಂದಿಗೆ ಸರ್ಕಾರ ಸಾಗಲಿ. ಅದು ಸಾಧ್ಯವಾಗದಿದ್ದರೆ ಹೋರಾಟ ಅನಿವಾರ್ಯ' ಎಂದರು.

ಬೇಡ್ತಿ, ಅಘನಾಶಿನಿ, ವರದಾ ನದಿ ಜೋಡಣೆ ಯೋಜನೆಗಳ ಸಾಧಕಬಾಧಕಗಳ ಕುರಿತು ಶಿರಸಿಯಲ್ಲಿ ನಡೆದ ಸಮಾಲೋಚನಾ ಕಾರ್ಯಾಗಾರದಲ್ಲಿ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಮಾತನಾಡಿದರು

ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ, 'ನದಿ ತಿರುವು ಯೋಜನೆಯಿಂದ ಪಶ್ಚಿಮ ಘಟ್ಟದಲ್ಲಿ ಭೂ ಕುಸಿತ ಹೆಚ್ಚಲಿದೆ. ಸರ್ಕಾರ ಈ ಯೋಜನೆಯನ್ನು ಮರು ಪರಿಶೀಲಿಸಬೇಕು' ಎಂದರು.

ದಿಕ್ಸೂಚಿ ಭಾಷಣ ಮಾಡಿದ ವಿಜ್ಞಾನ ಲೇಖಕ ನಾಗೇಶ ಹೆಗಡೆ, 'ಪಶ್ಚಿಮ ಘಟ್ಟ ದೇಶಕ್ಕೆ ಗಂಗಾಧರ ಇದ್ದಂತೆ. ಇಲ್ಲಿ ನೀರು ಶೇಖರಣೆಯಾದರೆ ತೆಲಂಗಾಣ, ಉತ್ತರ ಭಾರತದಲ್ಲಿ ಶುದ್ಧಗಾಳಿ ಸಿಗುತ್ತದೆ. ನದಿ ಜೋಡಣೆಯಾದರೆ ಪಶ್ಚಿಮ ಘಟ್ಟಕ್ಕೆ ಗಂಡಾಂತರ ಎದುರಾಗಬಹುದು' ಎಂದರು.

ಬಿ.ಎಂ.ಕುಮಾರಸ್ವಾಮಿ, 'ಮಳೆ ಬೀಳುವ ಪ್ರದೇಶದಲ್ಲಿ ಮಳೆ ನೀರು ಸಂಗ್ರಹಿಸುವ ಕೆಲಸವಾಗಬೇಕು. ಕೆರೆಗಳ ಪುನಶ್ಚೇತನ ಮಾಡಬೇಕು. ಪ್ರಧಾನ ಮಂತ್ರಿ ಮೋದಿಯವರ 'ಕ್ಯಾಚ್ ದಿ ರೇನ್' ತತ್ವ ಪಾಲಿಸಿದರೆ ಸಾಕು' ಎಂದರು.

ಪ್ರಮುಖ ನಿರ್ಣಯಗಳು

- ಬೇಡ್ತಿ-ವರದಾ ನದಿ ಜೋಡಣೆ ಯೋಜನೆ ಕುರಿತು ಡಿಪಿಆರ್ ತಯಾರಿಸಲು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಗೆ (ಎನ್.ಡಬ್ಲ್ಯೂ.ಡಿ.ಎ.) ನೀಡಿದ ಆದೇಶ ಸರ್ಕಾರ ಹಿಂಪಡೆಯಬೇಕು ಮತ್ತು ಸ್ಥಳ ಸಮೀಕ್ಷೆ ನಡೆಸಬಾರದು.
- ಪಶ್ಚಿಮಾಭಿಮುಖವಾಗಿ ಹರಿಯುವ ನದಿ ದಿಕ್ಕು ತಿರುಗಿಸುವ ಕುರಿತು ಅಧ್ಯಯನ ಮಾಡಲು ಎನ್.ಡಬ್ಲ್ಯೂ.ಡಿ.ಎ.ಗೆ ನೀಡಿದ ಆದೇಶ ಹಿಂಪಡೆಯಬೇಕು.
- ಈ ಬೇಡಿಕೆ ಈಡೇರಿಕೆಗೆ ಮುಖ್ಯಮಂತ್ರಿ ಅವರಿಗೆ ಮನವರಿಕೆ ಮಾಡಲು ನಿಯೋಗ ಕೊಂಡೊಯ್ಯಲು ಜಿಲ್ಲೆಯ ಜನಪ್ರತಿನಿಧಿಗಳು ದಿನ ನಿಶ್ಚಯಿಸಬೇಕು.
- ಜಿಲ್ಲೆಯ ಸ್ಥಳೀಯ ಸಂಸ್ಥೆಗಳು, ಸಂಘ, ಸಂಸ್ಥೆಗಳು ಯೋಜನೆಯ ವಿರುದ್ಧ ನಿರ್ಣಯಿಸಿ, ಸರ್ಕಾರಕ್ಕೆ ಮನವಿ ಮಾಡಬೇಕು.
- ನದಿ ಜೋಡಣೆ/ತಿರುವು ಯೋಜನೆ ದುಷ್ಪರಿಣಾಮದ ಕುರಿತು ಜಾಗೃತಿಗೆ ಪಶ್ಚಿಮ ಘಟ್ಟ ಪರಿಸರ ಸಂಘ ಸಂಸ್ಥೆಗಳ ಒಕ್ಕೂಟ ರಚಿಸಬೇಕು.

ಸುದ್ದಿ 2 ನಿಮಿಷ

ಕಾವೇರಿ ಕೂಗು: ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ

ಬೆಂಗಳೂರು: ಕಾವೇರಿ ಕೂಗು ಯೋಜನೆ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು(ಪಿಐಎಲ್) ಸ್ವಯಂ ಪ್ರೇರಿತ ಅರ್ಜಿಯನ್ನಾಗಿ ಮಾರ್ಪಡಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ 'ಈಶಾ ಔಟ್‌ರೀಚ್' ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ(ಎಸ್‌ಎಲ್‌ಪಿ) ಸಲ್ಲಿಸಿದೆ.

2020ರ ಅಕ್ಟೋಬರ್ 15ರಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಈ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ಈಶಾ ಔಟ್‌ರಿಚ್ ಪರ ವಕೀಲರು ಬುಧವಾರ ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿದರು. ವಿಚಾರಣೆಯನ್ನು 2021ರ ಮೇ 25ಕ್ಕೆ ಪೀಠ ಮುಂದೂಡಿತು.

ಮೂಲ ಅರ್ಜಿದಾರರಾದ ವಕೀಲ ಎ.ವಿ. ಅಮರನಾಥ್ ಅವರು ಡಿಸ್ಕವರಿ ವಾಹಿನಿಗೆ ನೋಟಿಸ್ ನೀಡಿ, ಕಾವೇರಿ ಕೂಗು ಕಾರ್ಯಕ್ರಮ ಪ್ರಸಾರ ಮಾಡಿದರೆ ನ್ಯಾಯಾಂಗ ನಿಂದನೆಯಾಗಲಿದೆ ಎಂದು ತಿಳಿಸಿದ್ದರು. ಅದನ್ನು ಸಮರ್ಥಿಸಿಕೊಂಡ ಕಾರಣಕ್ಕೆ ಅವರನ್ನು ವಿಚಾರಣೆಯಿಂದ ನ್ಯಾಯಾಲಯ ಕೈಬಿಟ್ಟು ಸ್ವಯಂ ಪ್ರೇರಿತ ವಿಚಾರಣೆ ಆರಂಭಿಸಿದೆ.

'ಕಾವೇರಿ ಜಲಾನಯನ ಪ್ರದೇಶದಲ್ಲಿ 253 ಕೋಟಿ ಸಸಿಗಳನ್ನು ನೆಡುವ ಉದ್ದೇಶಕ್ಕೆ ಸಾರ್ವಜನಿಕರಿಂದ ಹಣ ಸಂಗ್ರಹಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡೂ ಅನುಮತಿ ನೀಡಿವೆ ಎಂದು ಈಶಾ ಫೌಂಡೇಷನ್‌ನ ಜಗ್ಗಿ ವಾಸುದೇವ್ ಅವರು ಸುಳ್ಳು ಹೇಳಿಕೊಂಡಿದ್ದಾರೆ' ಎಂದು ಅಮರನಾಥ್ ಅವರು ಪಿಐಎಲ್ ಸಲ್ಲಿಸಿದ್ದರು.

ಕೊಂಡ ಹಾಯುವಾಗ ಬಿದ್ದು ಗಾಯ

ಮಳವಳ್ಳಿ: ತಾಲ್ಲೂಕಿನ ಮಂದಲಗಹಳ್ಳಿ ಗ್ರಾಮದಲ್ಲಿ ಬುಧವಾರ ಬೆಳಿಗ್ಗೆ ಮಾರಮ್ಮ ದೇವಿಯ ಕೊಂಡೋತ್ಸವದ ವೇಳೆ ಕೊಂಡ ಹಾಯುವಾಗ ಪೂಜಾರಿಯೊಬ್ಬರು ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ.

ಮಾರಮ್ಮ ದೇವಸ್ಥಾನದ ಪೂಜಾರಿ ಗುಡ್ಡಪ್ಪ ಮಂಜುನಾಥ (30) ಗಾಯಗೊಂಡವರು. ಅವರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೊಂಡ ಹಾಯುತ್ತಿದ್ದಾಗ ಬೆಂಕಿ ಕೆಂಡಗಳ ಮೇಲೆಯೇ ಬಿದ್ದಿದ್ದಾರೆ. ಅವರ ಮುಖ, ಎದೆ, ಹೊಟ್ಟೆ, ತೊಡೆ ಹಾಗೂ ಕೈಕಾಲುಗಳಲ್ಲಿ ಸುಟ್ಟ ಗಾಯಗಳಾಗಿವೆ. ಕೊಂಡ ನಿರ್ವಹಿಸುತ್ತಿದ್ದವರು ಪೂಜಾರಿಯನ್ನು ಮೇಲೆತ್ತಿ ರಕ್ಷಿಸಿದ್ದಾರೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಪೌಷ್ಟಿಕ ಆಹಾರ ಸೇವಿಸಿ

ಮಸೀದಿ ಉದ್ಘಾಟನೆಗೆ ವಿದ್ಯಾರ್ಥಿಗಳನ್ನು ಕರೆದೊಯ್ದ ಶಿಕ್ಷಕರು

ಮುಖ್ಯ ಶಿಕ್ಷಕರಿಗೆ ರಜೆ: ವಿಚಾರಣೆಗೆ ಆದೇಶ

ಮಂಗಳೂರು: ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡದ ಮಸೀದಿ ಉದ್ಘಾಟನೆಗೆ ಶಾಲಾ ಮಕ್ಕಳನ್ನು ಕರೆದೊಯ್ದಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಭಾರ ಮುಖ್ಯ ಶಿಕ್ಷಕರನ್ನು 10 ದಿನ ರಜೆ ಮೇಲೆ ಕಳುಹಿಸಲಾಗಿದೆ. ಈ ಬಗ್ಗೆ ವಿಚಾರಣೆ ನಡೆಸಲು ಸಮಗ್ರ ಶಿಕ್ಷಣದ ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿಗೆ ಸೂಚನೆ ನೀಡಲಾಗಿದೆ.

ಕೊಕ್ಕಡದಲ್ಲಿ ನವೀಕರಣಗೊಂಡ ಮಸೀದಿಯ ಉದ್ಘಾಟನೆ ಮಾ.19ರಂದು ನಡೆದಿತ್ತು. ಕಾರ್ಯಕ್ರಮಕ್ಕೆ ಕೊಕ್ಕಡ ಪ್ರೌಢಶಾಲೆಯ ವಿದ್ಯಾರ್ಥಿಗಳನ್ನು ಶಿಕ್ಷಕರು ಕರೆದುಕೊಂಡು ಹೋಗಿದ್ದು, ಈ ಬಗ್ಗೆ ವಿವಾದ ಉಂಟಾಗಿತ್ತು. ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದೆ.

'ಶಾಲಾ ಅವಧಿಯಲ್ಲಿ ಮಾರ್ಗಸೂಚಿ ಉಲ್ಲಂಘಿಸಿ ವಿದ್ಯಾರ್ಥಿಗಳನ್ನು ಮಸೀದಿ ಉದ್ಘಾಟನೆಗೆ ಕಳುಹಿಸಿರುವ ಬಗ್ಗೆ ಸಾರ್ವಜನಿಕ ವಲಯದಲ್ಲಿ ಹಾಗೂ ಸಾಮಾಜಿಕ ಜಾಲತಾಣದಲ್ಲಿ ವಿರೋಧ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಭಾರ ಮುಖ್ಯ ಶಿಕ್ಷಕ ದಿನೇಶ್ ಅವರನ್ನು 10 ದಿನ ರಜೆಯ ಮೇಲೆ ಕಳುಹಿಸಲಾಗಿದೆ. ವಿಚಾರಣಾ ವರದಿ ಬಂದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು' ಎಂದು ಡಿಡಿಪಿಐ ಮಲ್ಲೇಸ್ವಾಮಿ ತಿಳಿಸಿದ್ದಾರೆ.

ಪ್ರಮಾಣಪತ್ರ ಸಿಗದೆ ಭಾವಿ ವೈದ್ಯರ ಪರದಾಟ

ಗ್ರಾಮೀಣ ಸೇವೆ ಬಗ್ಗೆ ಸ್ಪಷ್ಟವಾಗಿ ಹೇಳದ ವೈದ್ಯಕೀಯ ಶಿಕ್ಷಣ ಇಲಾಖೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕೋ, ಬೇಡವೋ ಎಂಬ ಬಗ್ಗೆ ವೈದ್ಯಕೀಯ ಶಿಕ್ಷಣ ಇಲಾಖೆ ಯಾವುದೇ ಸೂಚನೆ ನೀಡುತ್ತಿಲ್ಲ. ಕೋರ್ಸ್ ಮುಗಿಸಿ ಒಂದೂವರೆ ತಿಂಗಳು ಕಳೆದರೂ ಪ್ರಮಾಣಪತ್ರಗಳನ್ನು ನೀಡುತ್ತಿಲ್ಲ ಎಂದು ಎಂಬಿಬಿಎಸ್ ವಿದ್ಯಾರ್ಥಿಗಳು ದೂರಿದ್ದಾರೆ.

'ವೈದ್ಯಕೀಯ ಪದವಿ ವ್ಯಾಸಂಗ ಮುಗಿಸಿದವರು ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸುವ ಬಗ್ಗೆ ಮೊದಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರದೊಂದಿಗೆ ಷರತ್ತುಬದ್ಧ ಒಪ್ಪಂದ ಮಾಡಿಕೊಳ್ಳಲಾಗುತ್ತಿತ್ತು. 2015ರ ಕಡ್ಡಾಯ ಸೇವಾ ತರಬೇತಿ ತಿದ್ದುಪಡಿ ಕಾಯ್ದೆಯನ್ವಯ ಕಡ್ಡಾಯವಾಗಿ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕು ಎಂದಿದೆ. ಆದರೆ, ಈ ಬಗ್ಗೆ ಸರ್ಕಾರ ಸ್ಪಷ್ಟ ನಿಲುವು ಪ್ರಕಟಿಸುತ್ತಿಲ್ಲ' ಎಂದು ಎಂಬಿಬಿಎಸ್ ಪದವೀಧರರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

'2015ರ ಜುಲೈ 24ರ ಮೊದಲು ಎಂಬಿಬಿಎಸ್‌ಗೆ ದಾಖಲಾದವರಿಗೆ ಈ ನಿಯಮ ಅನ್ವಯಿಸುವುದಿಲ್ಲ. ನಂತರ ದಾಖಲಾದವರಿಗೆ ಅನ್ವಯಿಸುತ್ತದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆ ವರ್ಷದಲ್ಲಿ ಒಂದೇ ಬ್ಯಾಚ್‌ನ ಅಭ್ಯರ್ಥಿಗಳು ಈ ದಿನಾಂಕದ ಹಿಂದೆ-ಮುಂದೆ ದಾಖಲಾತಿಯಾಗಿದ್ದಾರೆ. ದಿನಾಂಕದ ಬದಲು ನಿರ್ದಿಷ್ಟ ಶೈಕ್ಷಣಿಕ ವರ್ಷದಲ್ಲಿ ಓದಿದವರಿಗೆ ಅನ್ವಯಿಸಬೇಕಾಗಿತ್ತು' ಎಂದೂ ಹೇಳಿದರು.

'ಎಂಬಿಬಿಎಸ್ ಪೂರ್ಣಗೊಳಿಸಿದವರು ಕರ್ನಾಟಕ ವೈದ್ಯಕೀಯ ಮಂಡಳಿ (ಕೆಎಂಸಿ) ಅಡಿ ನೋಂದಾಯಿಸಿಕೊಳ್ಳಬೇಕು. ಆಗ ಮಾತ್ರ ನಾವು ಪ್ರಾಕ್ಟೀಸ್ ಆರಂಭಿಸಲು ಸಾಧ್ಯ. ಪ್ರಮಾಣಪತ್ರ ಸೇರಿದಂತೆ ಕಾಲೇಜಿನಿಂದ ಒಟ್ಟು 12 ದಾಖಲೆಗಳು ನಮಗೆ ಬೇಕು. ಆದರೆ, ಯಾವುದೇ ದಾಖಲೆಗಳನ್ನು ನೀಡಬಾರದು ಎಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ (ಡಿಎಂಇ) ಹೇಳಿದೆ ಎಂದು ಕಾಲೇಜು ಆಡಳಿತ ಮಂಡಳಿ ಹೇಳುತ್ತಿದೆ' ಎಂದು ಮತ್ತೊಬ್ಬ ಅಭ್ಯರ್ಥಿ ಹೇಳಿದರು.

'ಕಳೆದ ವರ್ಷ ನಾವು ಕೋವಿಡ್ ಕರ್ತವ್ಯ ಕೂಡ ನಿಭಾಯಿಸಿದ್ದೇವೆ. ಈ ಬಾರಿಯೂ ಅದೇ ಕರ್ತವ್ಯಕ್ಕೆ ನಿಯೋಜಿಸಬೇಕು ಎಂಬ ಕಾರಣದಿಂದ ವಿಳಂಬ ಮಾಡುತ್ತಿದ್ದಾರೋ ಅರ್ಥವಾಗುತ್ತಿಲ್ಲ. ಕೋರ್ಸ್ ಮುಗಿದು, ಫಲಿತಾಂಶ ಬಂದು ಒಂದೂವರೆ ತಿಂಗಳಾದರೂ ದಾಖಲಾತಿಗಳನ್ನು ನೀಡುವುದು ಸರಿ ಅಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಪ್ರಸಕ್ತ ಸಾಲಿನಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿದವರು ಸುಮಾರು 6000 ಪದವೀಧರರಿದ್ದೇವೆ. ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಲು ಬಹುತೇಕರು ಸಿದ್ಧರಿದ್ದಾರೆ. ಆದರೆ, ಬ್ಯಾಚ್‌ನ ಎಲ್ಲರಿಗೂ ಒಂದೇ ನಿಯಮ ಅನ್ವಯಿಸಬೇಕು. ತಾರತಮ್ಯ ಮಾಡಬಾರದು. ಈ ಬಗ್ಗೆ ಸ್ಪಷ್ಟ ನಿರ್ಧಾರವನ್ನು ಇಲಾಖೆ ತೆಗೆದುಕೊಳ್ಳಬೇಕು' ಎಂದು ಅವರು ಒತ್ತಾಯಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಅಧಿಕಾರಿಗಳು ಲಭ್ಯರಾಗಲಿಲ್ಲ.

'ಹಳೆ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆ'

ಕಲಬುರ್ಗಿ: 'ಹಳೆ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆ ಅಗತ್ಯವಿರುವುದರಿಂದ ಇನ್ನು ಮುಂದೆ ಆ ಭಾಗದಲ್ಲಿ ಹೆಚ್ಚು ಸಂಚರಿಸಲಿದ್ದೇನೆ. ಇದು ಪಕ್ಷದ ಆಶಯವೂ ಆಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಬುಧವಾರ ನಗರಕ್ಕೆ ಬಂದಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ನಾನು ಉಪಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ಹೈ ಕಮಾಂಡ್ ನಿರ್ಧರಿಸುತ್ತದೆ. ರಾಜ್ಯದ ಯಾವ ಕ್ಷೇತ್ರದಲ್ಲಿ ಟಿಕೆಟ್ ನೀಡಿದರೂ ಸ್ಪರ್ಧೆ ಮಾಡುತ್ತೇನೆ. ಉಪ ಚುನಾವಣೆ ಬಿಜೆಪಿಗೆ ಸವಾಲಾಗಿದ್ದು, ಕಾರ್ಯಕರ್ತರು ಇದನ್ನು ಸಮರ್ಥವಾಗಿ ಎದುರಿಸುತ್ತಾರೆ' ಎಂದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ನೀಡುತ್ತಿರುವ ಹೇಳಿಕೆಗಳ ಕುರಿತು ಪ್ರತಿಕ್ರಿಯಿಸಿದ ಅವರು, 'ಎಲ್ಲಾ ಬೆಳವಣಿಗೆಯನ್ನು ಹೈ ಕಮಾಂಡ್ ಗಮನಿಸುತ್ತಿದೆ' ಎಂದರು.

ಸ್ಪೃಶ್ಯ ಸಮುದಾಯ ಎಸ್‌ಸಿ ಪಟ್ಟಿಗೆ ಸೇರಿಸಲು ವಿರೋಧ

ಮೈಸೂರು: 'ಪ್ರವರ್ಗ- 1ರ ಪಟ್ಟಿಯಲ್ಲಿರುವ 17 ಸ್ಪೃಶ್ಯ ಸಮುದಾಯಗಳನ್ನು ಪರಿಶಿಷ್ಟಜಾತಿ ಪಟ್ಟಿಗೆ ಸೇರಿಸಬಾರದು. ಈಗಾಗಲೇ ಸೇರಿಸಿರುವ ಸ್ಪೃಶ್ಯ ಸಮುದಾಯಗಳನ್ನು ತೆಗೆಯಬೇಕು' ಎಂದು ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು ಒತ್ತಾಯಿಸಿದರು.

ಪರಿಶಿಷ್ಟ ಜಾತಿ ಪಟ್ಟಿಯಿಂದ ಸ್ಪೃಶ್ಯ ಸಮುದಾಯಗಳನ್ನು ಕೈಬಿಡುವಂತೆ ಸುಪ್ರೀಂ ಕೋರ್ಟ್, ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗಕ್ಕೆ ನಿರ್ದೇಶನ ನೀಡಿದೆ. ಕೈಗೊಂಡ ಕ್ರಮದ ಕುರಿತು ವರದಿ ಸಲ್ಲಿಸುವಂತೆ ಆಯೋಗವು ಸರ್ಕಾರಕ್ಕೆ ಸೂಚನೆ ನೀಡಿದೆ. ಆದರೆ, ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು.

ಇನ್ನಷ್ಟು ಸ್ಪೃಶ್ಯ ಸಮುದಾಯಗಳನ್ನು ಪರಿಶಿಷ್ಟಜಾತಿ ಪಟ್ಟಿಗೆ ಸೇರಿಸುವ ಪ್ರಯತ್ನವನ್ನು ಸರ್ಕಾರ ಕೈಬಿಟ್ಟು, ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ವಿಜಯಪುರ ವಿಭಾಗ, ವಿಜಯಪುರ

ಸಂ:ಈಕರಸಾ:ವಿವಿ:ಸಂ:ವಾಣಿಜ್ಯ:4430:20–21 ದಿನಾಂಕ:24.03.2021

ಕೋಟೆಶನ್ ಆಹ್ವಾನಿಸಲಾಗಿದೆ
(ಕೇ.ಬ.ನಿ ವಿಜಯಪುರದ ತಾತ್ಕಾಲಿಕ ಸ್ವಚ್ಛತಾ ಗುತ್ತಿಗೆಗಾಗಿ)

ವಿಷಯ: ಕೇಂದ್ರ ಬಸ್ ನಿಲ್ದಾಣ ವಿಜಯಪುರದ ಸ್ವಚ್ಛತೆ ಹಾಗೂ ಶೌಚಾಲಯ/ಮೂತ್ರಾಲಯಗಳನ್ನು ತಾತ್ಕಾಲಿಕವಾಗಿ ನಿರ್ವಹಣೆ ಮಾಡಲು ಕೋಟೆಶನ್ ಆಹ್ವಾನಿಸಿದ ಕುರಿತು.

ಉಲ್ಲೇಖ: ಸಂಖ್ಯೆ:ಈಕರಸಾ:ಕೇಕ:ಸಂ:ವಾಣಿಜ್ಯ:3274:20–21 ದಿನಾಂಕ: 23.03.2021

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ವಿಜಯಪುರ ಕೇಂದ್ರ ಬಸ್ ನಿಲ್ದಾಣದ ಸ್ವಚ್ಛತೆಗಾಗಿ / ಶೌಚಾಲಯ & ಮೂತ್ರಾಲಯ ನಿರ್ವಹಣೆಗಾಗಿ ತಾತ್ಕಾಲಿಕ ಗುತ್ತಿಗೆ ನೀಡಲು ಕೋಟೆಶನ್ ಆಹ್ವಾನಿಸಲಾಗಿದ್ದು, ಸ್ವಚ್ಛತಾ ಗುತ್ತಿಗೆಗಾಗಿ ಹೆಚ್ಚಿನ ಬೇಡಿಕೆ ಸಲ್ಲಿಸುವ ಬೇಡಿಕೆದಾರರಿಗೆ ಸಂಸ್ಥೆಯ ನಿಯಮಾವಳಿಗಳನ್ವಯ ಆಯ್ಕೆಗೊಳಿಸಿ ಕೇಂದ್ರ ಬಸ್ ನಿಲ್ದಾಣ ವಿಜಯಪುರ ಆವರಣ ಸ್ವಚ್ಛತೆ, ಶೌಚಾಲಯ / ಮೂತ್ರಾಲಯ ನಿರ್ವಹಣೆಗಾಗಿ ತಾತ್ಕಾಲಿಕ ಗುತ್ತಿಗೆ ನೀಡಲಾಗುವುದು.

ಆಸಕ್ತದಾರರು ದಿನಾಂಕ:27.03.2021 ರಂದು ಬೆಳಿಗ್ಗೆ : 10.00 ಗಂಟೆಯ ನಂತರ ಈ.ಕ.ರ.ಸಾ ಸಂಸ್ಥೆ, ವಿಜಯಪುರ ವಿಭಾಗದ ವಿಭಾಗೀಯ ಕಚೇರಿಯಲ್ಲಿ ಜರುಗಲಿರುವ ಸಂಧಾನ ಮಾತುಕತೆಗೆ ಹಾಜರಾಗುವುದು ಈ ಕುರಿತು ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಸಾರಿಗೆ ಅಧಿಕಾರಿ ದೂರವಾಣಿ ಸಂಖ್ಯೆ : 7760992252 ಗೆ ಕರೆ ಮಾಡಿ ವಿಚಾರಿಸಬಹುದಾಗಿದೆ.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ, ಈ.ಕ.ರ.ಸಾ.ಸಂಸ್ಥೆ, ವಿಜಯಪುರ ವಿಭಾಗ.

ವಾಸಾಸಂಇ/ವಿಜಯಪುರ/654/ಜಿಎ/2020–21

ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–01,
ದೂ : 080–22864681/4604, ಫ್ಯಾಕ್ಸ್: 080–22864619, ಇ–ಮೇಲ್ : dof-blr-ka@nic.in

ಸಂಖ್ಯೆ : ಮೀನಿ/ವಾಹನ/ಹೊರಗುತ್ತಿಗೆ/18/2020–21 ದಿನಾಂಕ: 22.03.2021

ಇ–ಟೆಂಡರ್ ಪ್ರಕಟಣೆ

2021–22ನೇ ಸಾಲಿಗೆ ಮೀನುಗಾರಿಕೆ ನಿರ್ದೇಶನಾಲಯದ ಕಛೇರಿಯ ಉಪಯೋಗಕ್ಕಾಗಿ 2017 ರ ಅಥವಾ ನಂತರದ ಮಾಡೆಲ್‌ನ ಎ.ಸಿ ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಹ್ಯಾಚ್‌ಬ್ಯಾಕ್/ ಸಿಡಾನ್ ಮಾದರಿಯ ಸ್ವಿಫ್ಟ್ ಡಿಸೈರ್/ ಬೊಲೇರೋ ಜೀಪು/ ಟೊಯೋಟಾ ಇಟಿಓಎಸ್/ ಮಾರುತಿ ವಾಹನಗಳನ್ನು ನುರಿತ ಚಾಲಕರೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಒದಗಿಸಲು ಅರ್ಹ ವಾಹನ ಮಾಲೀಕರು/ ಟ್ರಾವಲ್ಸ್ ಸಂಸ್ಥೆ/ ಏಜೆನ್ಸಿಗಳಿಂದ ದ್ವಿ ಲಕೋಟೆ (Two Covers System) ಪದ್ಧತಿಯಲ್ಲಿ ಇ–ಟೆಂಡರ್ (E-Procurement Portal ಮುಖಾಂತರ) ಆಹ್ವಾನಿಸಲಾಗಿದೆ. ಅರ್ಜಿಯನ್ನು ಅಂತರ್ಜಾಲದ ವೆಬ್‌ಸೈಟ್ **www.eproc.karnataka.gov.in** ರಲ್ಲಿ ಸಲ್ಲಿಸಬೇಕು. ಕಛೇರಿಗಳು: 1) ಮೀನುಗಾರಿಕೆ ನಿರ್ದೇಶನಾಲಯ ಬೆಂಗಳೂರು 2) ವಾಹನ ವಿವರ ಹಾಗೂ ಮಾದರಿ (Model) : 2017ರ ಅಥವಾ ನಂತರದ ಎ.ಸಿ. ವಾಹನದ ಮಾಡೆಲ್‌ನ ಹ್ಯಾಚ್‌ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ಬೊಲೋರೋ ಜೀಪು/ಟೊಯೋಟಾ ಇಟಿಓಎಸ್ 3) ಮಾಸಿಕ ದರ ಹಾಗೂ ಇ.ಎಂ.ಡಿ. ಮೊತ್ತದ ವಿವರಗಳು: ಗರಿಷ್ಠ **ರೂ.30,000/–** (GST ಒಳಗೊಂಡಂತೆ), ಎರಡು ವಾಹನಕ್ಕೆ ಇ.ಎಂ.ಡಿ. ಮೊತ್ತ: **ರೂ.18,000/–** (ಇ.ಎಂ.ಡಿ. ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು ಬೆಂಗಳೂರು ರವರ ಹೆಸರಿಗೆ Online ನಲ್ಲಿ ಜಮಾ ಮಾಡುವುದು). **ಸೂಚನೆ:** ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು. 1) ಇ–ಟೆಂಡರ್ (e-procurement) ಗೆ ಸಂಬಂಧಿಸಿದ ದಾಖಲೆಗಳನ್ನು ಅಂತರ್ಜಾಲಕ್ಕೆ ರವಾನಿಸಲು (uplode ಮಾಡಲು) ಅಂತಿಮ ದಿನಾಂಕ ಮತ್ತು ವೇಳೆ: **08.04.2021 ಸಂಜೆ 7.00** ಗಂಟೆಗೆ. 2) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ (ಇ–ಪೋರ್ಟಲ್‌ನಲ್ಲಿ): **12.04.2021 ಬೆಳಿಗ್ಗೆ 11.00** ಗಂಟೆಗೆ. 3) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ: **15.04.2021 ಬೆಳಿಗ್ಗೆ 11.00 ಗಂಟೆಗೆ.**

ಸಹಿ/–
ಮೀನುಗಾರಿಕೆ ನಿರ್ದೇಶಕರು

ವಾಸಾಸಂಇ/ಬೆಂಗಳೂರು/ಶಿರಡಿ ಸಾಯಿ/3191/2020–21

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು–570001,
ದೂರವಾಣಿ ಸಂಖ್ಯೆ: +91-0821-2520512 (Off), 2520803 (Fax),
Email- mmcrimysore@yahoo.com, website: www.karnataka.gov.in/mmcri

ಸಂಖ್ಯೆ: ಕೃರಾಆ/ಟೆಂಡರ್/222/2020–21 ದಿನಾಂಕ: 23.03.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರಂತೆ ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಸಂಯುಕ್ತ ಆಸ್ಪತ್ರೆಗಳಾದ ಕೆ.ಆರ್.ಆಸ್ಪತ್ರೆ, ಮೈಸೂರು, ಚೆಲುವಾಂಬ ಆಸ್ಪತ್ರೆ, ಮೈಸೂರು ಪಿ.ಕೆ.ಟಿ.ಬಿ ಆಸ್ಪತ್ರೆ, ಮೈಸೂರು ಟ್ರಾಮಾಕೇರ್ ಸೆಂಟರ್ ಮೈಸೂರು ಇಲ್ಲಿಗೆ 2021–22ನೇ ಸಾಲಿನ ಒಂದು ವರ್ಷದ ಅವಧಿಗೆ ಮೆಡಿಕಲ್ ಆಕ್ಸಿಜನ್ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in.** ಮುಖಾಂತರ ಸ್ಪರ್ಧಾತ್ಮಕ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ಟೆಂಡರ್‌ಗೆ ಸಂಬಂಧಪಟ್ಟಂತೆ ಎಲ್ಲಾ ಮಾಹಿತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ಅಥವಾ ನಿರ್ದೇಶಕರು ಮತ್ತು ಡೀನ್, ಎಂ.ಎಂ.ಸಿ & ಆರ್.ಐ ಮೈಸೂರು ಅಥವಾ ವೈದ್ಯಕೀಯ ಅಧೀಕ್ಷಕರು, ಕೆ.ಆರ್.ಆಸ್ಪತ್ರೆ, ಮೈಸೂರು ಇಲ್ಲಿನ ಕಛೇರಿಗೆ ಸಂಪರ್ಕಿಸಿ ಪಡೆಯಬಹುದು.

ಸಹಿ/– ನಿರ್ದೇಶಕರು ಮತ್ತು ಡೀನ್
ಎಂ.ಎಂ.ಸಿ & ಆರ್.ಐ, ಮೈಸೂರು

ವಾಸಾಸಂ/ಮೈಸೂರು/ಶಿರಡಿ ಸಾಯಿ/1187/2020–21

ಕರ್ನಾಟಕ ಸರ್ಕಾರ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಸಕಾಲ ಮಿಷನ್,
ಸಕಾಲ
1ನೇ ಗೇಟ್, 6ನೇ ಮಹಡಿ, ಕೊಠಡಿ ಸಂಖ್ಯೆ :607, ಬಹುಮಹಡಿ ಕಟ್ಟಡ, ಬೆಂಗಳೂರು-01, ದೂ: 080-2203 2857, 080-2203 2899,
ವೆಬ್‌ಸೈಟ್: **www.sakala.kar.nic.in**

No. dparegov/6sam/rfp/cc/2020-21 ದಿನಾಂಕ: 24.03.2021

ಟೆಂಡರ್ ಅಧಿಸೂಚನೆ

''ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು (ತಿದ್ದುಪಡಿ) ಅಧಿನಿಯಮ-2014'' ರಡಿ ಕರೆ ಕೇಂದ್ರದ ಸೇವೆಯನ್ನು ಒದಗಿಸಲು ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಇ-ಆಡಳಿತ ಇಲಾಖೆಯ ವೆಬ್‌ಸೈಟ್ **http://www.eproc.karnataka.gov.in** ಮುಖಾಂತರ ಅರ್ಹ ಟೆಂಡರ್‌ದಾರರಿಂದ (1) ತಾಂತ್ರಿಕ ಬಿಡ್, (2) ದರದ ಬಿಡ್ ಎಂದು 2 ಭಾಗಗಳಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಕೆಳಕಂಡಂತೆ ನಿಗದಿಪಡಿಸಲಾಗಿದೆ: (1) ಬಿಡ್ ಚಾಲ್ತಿಯ ಅವಧಿ: **90 ದಿನಗಳು.** (2) ಟೆಂಡರ್ ಕುರಿತಾದ ವಿಚಾರಣೆ/ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಮತ್ತು ವೇಳೆ: **03.04.2021, ಸಂಜೆ 5.30 ಗಂಟೆ.** (3) ಟೆಂಡರ್ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ವೇಳೆ: **07.04.2021, ಸಂಜೆ 5.30 ಗಂಟೆ.** (4) ಟೆಕ್ನಿಕಲ್ ಬಿಡ್ ತೆರೆಯಲು ದಿನಾಂಕ ಮತ್ತು ವೇಳೆ: **09.04.2021, ಬೆಳಿಗ್ಗೆ 11.00 ಗಂಟೆ.** (5) ಫೈನಾನ್ಷಿಯಲ್ ಬಿಡ್ ತೆರೆಯಲು ದಿನಾಂಕ ಮತ್ತು ವೇಳೆ: **15.04.2021, ಬೆಳಿಗ್ಗೆ 11.00 ಗಂಟೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **www.eproc.karnataka.gov.in**

ಸಹಿ/- ಆಡಳಿತಾಧಿಕಾರಿಗಳು ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ, ಸಕಾಲ ಮಿಷನ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಇ-ಆಡಳಿತ)

ವಾಸಾಸಂಇ/ಉನಿ.ನ/89/ಎಂಸಿಎ/2020-21

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ,
ಖಾನಾಪೂರ ಕ್ಯಾಂಪ್ – 585319, ತಾ. ಶಹಾಪೂರ, ಜಿ. ಯಾದಗಿರಿ

ಸಂಖ್ಯೆ: ಕೃಭಾಜನಿನಿ/ಸ.ಏ.ನೀ.ವಿ/ಎಸ್.ಸಿ.ಪಿ–ಟಿಎಸ್‌ಪಿ ಕಾಮಗಾರಿ/2020–21/935 ದಿನಾಂಕ: 19.03.2021

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ) ::

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ರವರ ಪರವಾಗಿ ಕಾರ್ಯಪಾಲಕ ಅಭಿಯಂತರರರ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ, ರವರು ಅಲ್ಪಾವಧಿ ಶೇಕಡವಾರು ಟೆಂಡರ್‌ನ್ನು ದ್ವಿ ಲಕೋಟಿ ಟೆಂಡರ್ ಪದ್ಧತಿಯಡಿಯಲ್ಲಿ ಪಿ.ಡಬ್ಲ್ಯು.ಡಿ /ಕೆ.ಪಿ.ಡಬ್ಲ್ಯು.ಡಿ/ ಕೆ.ಬಿ.ಜೆ.ಎನ್.ಎಲ್ ನಲ್ಲಿ ನೋಂದಾಯಿತ ಪ್ರಥಮ ದರ್ಜೆ ಮೇಲ್ಪಟ್ಟು ಗುತ್ತಿಗೆದಾರರಿಗೆ ಟೆಂಡರನ್ನು ಕರೆಯಲಾಗಿದೆ. ಗುತ್ತಿಗೆದಾರರು.
1) ಕಾಮಗಾರಿಯ ಹೆಸರು : Construction of Cart Track Bridge across Nala coming under the Back water of Yadgir Bridge cum Barrage Near Naikal Village. (Indent No 20469, 2) ಟೆಂಡರ್ ಮೊತ್ತ : **ರೂ. 52.84 ಲಕ್ಷಗಳು,** 3) ಗುತ್ತಿಗೆದಾರರು ಕ್ಲಾಸ್ : ಪಿ.ಡಬ್ಲ್ಯು.ಡಿ / ಕೆ.ಬಿ.ಜೆ.ಎನ್.ಎಲ್/ ಕೆ.ಪಿ.ಡಬ್ಲ್ಯು.ಡಿ ನಲ್ಲಿ ನೋಂದಾಯಿತ ಪ್ರಥಮ ದರ್ಜೆ ಮೇಲ್ಪಟ್ಟು ಗುತ್ತಿಗೆದಾರರಿಗೆ, 4) ಟೆಂಡರ್ ಪ್ರಕ್ರಿಯೆ ದರ : ಇ–ಪೋರ್ಟಲ್‌ನಲ್ಲಿ ನಿಗದಿಪಡಿಸಿದಂತೆ, 5) ಇ.ಎಂ.ಡಿ ಮೊತ್ತ : ಇ.ಎಂ.ಡಿ ಮೊತ್ತ ಬದಲು ದೃಡಿಕರಣ ಪತ್ರ ಸಲ್ಲಿಸುವುದು, 6) ಟೆಂಡರ್ ತುಂಬುವ ದಿನಾಂಕ : **ದಿ: 26–03–2021 ರಿಂದ 03–04–2021 ರ ಸಂಜೆ 5.00 ಗಂಟೆ ವರೆಗೆ,** 7) ಪೂರ್ಣ ತುಂಬಿದ ಇ–ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ : **03–04–2021 ರ ಸಂಜೆ 5.00 ಗಂಟೆ ವರೆಗೆ,** 8) ತಾಂತ್ರಿಕ & ಆರ್ಥಿಕ ಪೂರ್ಣ ತುಂಬಿದ ಇ–ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : ಕಾರ್ಯಪಾಲಕ ಅಭಿಯಂತರರ ಕಛೇರಿ,ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ ಕ್ಯಾಂಪ್ : **06.04.2021 ರ ಸಂಜೆ 11.00 ಗಂಟೆ ವರೆಗೆ,** 9) ಆರ್ಥಿಕ ಪೂರ್ಣ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ ಕಾರ್ಯಪಾಲಕ ಅಭಿಯಂತರರ ಕಛೇರಿ,ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ ಕ್ಯಾಂಪ್ ತಾಂತ್ರಿಕ ಬಿಡ್ಡ್ ಮಂಜೂರಾದ ನಂತರ ತೆರೆಯಲಾಗುವುದು.

ಮೇಲೆ ನೀಡಲಾದ ಟೆಂಡರ್‌ನ ಹೆಚ್ಚಿನ ಮಾಹಿತಿಯನ್ನು ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಮತ್ತು ಇ–ಟೆಂಡರ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಹ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ ಖಾನಾಪೂರ ಕ್ಯಾಂಪ್

ವಾ.ಸಾ.ಸಂ.ಇ/ಯಾದಗಿರಿ/341/ಎಂಸಿ&ಎ/2020–21

ಕರ್ನಾಟಕ ಸರ್ಕಾರ (ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ
ಕ್ರಸಂ : ಕಾನಿಇಂಧಾ/ಪಿಬಿ–3/ಗುತ್ತಿಗೆ/2020–21/9949 ದಿನಾಂಕ : 22–03–2021

ಅಲ್ಪಾವಧಿ ಟೆಂಡರ ಪ್ರಕಟಣೆ – I.F.T – KW- 3
ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ e-Proc- ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಭರ್ತಿ ಮಾಡಿದ ಟೆಂಡರ ಸ್ವೀಕರಿಸುವ ದಿನಾಂಕ (e-Proc)	ತಾಂತ್ರಿಕ ಬಿಡ್ ತೆರೆಯುವ ದಿನಾಂಕ (e-Proc)	ಆರ್ಥಿಕ ಬಿಡ್ ತೆರೆಯುವ ದಿನಾಂಕ (e-Proc)
	2020–21 ನೇ ಸಾಲಿನ 3054 ಜಿಲ್ಲಾ ಮುಖ್ಯ ರಸ್ತೆ ಮಳೆ ಹಾನಿ ಕಾಮಗಾರಿ				
1	IMPROVEMENTS TO AMARGOL TO NARAGUND TALUK BORDER MDR FROM KM.0.00 TO KM.1.50 IN NAVALGUND TALUK OF DHARWAD DISTRICT 9KPWD/2020-21/RD/ WORK_INDENT136612)	100.00	29/03/2021	30/03/2021	31/03/2021
2	IMPROVEMENTS TO NAVALGUND SHANAVAD GOBBARGUMPI MDR FROM KM.0.00 TO KM.5.00 (IN SELECTED REACHES) IN NAVALGUND TALUK OF DHARWAD DISTRICT (KPWD/2020-21/RD/ WORK_INDENT136611)	100.00	29/03/2021	30/03/2021	31/03/2021

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ

ವಾಸಾಸಂಇ/ಧಾ/ಎಂಸಿಎ/906/2020–21

ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.
ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013
(ದಿನಾಂಕ: 01.01.2014ರಿಂದ ಜಾರಿಗೆ ಬಂದ ಅಧಿಸೂಚನೆ ಪ್ರಕಾರ)ರೊಂದಿಗೆ ಓದಲಾದ ಕಲಂ–11(1)ರಲ್ಲಿ ಮಾಡಿದ

ಅಧಿಸೂಚನೆ

ಸಂಖ್ಯೆ: ಭೂಸ್ವಾಧೀನ/ಸಿಆರ್/96/2020–21 ದಿನಾಂಕ: 19.03.2021

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಸ್ವತ್ತನ್ನು ಭೂಸ್ವಾಧೀನ ಮಾಡಿಕೊಳ್ಳಲು ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 41344/2015 ದಿನಾಂಕ: 17.09.2019ರಂತೆ ಆದೇಶ ಹೊರಡಿಸಿರುತ್ತದೆ. ಪ್ರಯುಕ್ತ ಸಾರ್ವಜನಿಕ ಉದ್ದೇಶವಾಗಿರುವ ದಾವಣಗೆರೆ ನಗರದ ಪಿ.ಬಿ. ರಸ್ತೆಯ ಅಗಲೀಕರಣದ ಭಾಗವಾಗಿ ತಾತ್ಕಾಲಿಕ ಯೋಜನಾ ಕಛೇರಿಯ ನಿರ್ಮಾಣಕ್ಕಾಗಿ ದಾವಣಗೆರೆ ನಗರದ 5ನೇ ವಾರ್ಡ್, 7ನೇ ಡಿವಿಜನ್, ಪಿ.ಬಿ. ರಸ್ತೆಯ ಈ ಕಳಗಿನ ಅನುಸೂಚಿಯಲ್ಲಿ ಕಾಣಿಸಿದ ಸ್ವತ್ತನ್ನು ಈ ಮೇಲಿನಂತೆ ವಿವರಿಸಿದ ಉದ್ದೇಶಕ್ಕೆ ಭೂಸ್ವಾಧೀನ ಮಾಡುವುದು ಅವಶ್ಯವಿರುತ್ತದೆ.

ಈ ಮೂಲಕ ತಿಳಿಸುವುದೇನಂದರೆ, ಭೂಸ್ವಾಧೀನ ಪ್ರಕ್ರಿಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ–2013 (ದಿನಾಂಕ: 01.01.2014ರಿಂದ ಜಾರಿಗೆ ಬಂದ ಅಧಿಸೂಚನೆ ಪ್ರಕಾರ)ರ ಕಲಂ 11ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30ನೇ ಕಾಯ್ದೆ) ಸದರಿ ಕಾನೂನಿನ ಕಲಂ–12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ರವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ಉಪವಿಭಾಗಾಧಿಕಾರಿಗಳು, ದಾವಣಗೆರೆ ಇವರಿಗೆ ನೀಡಲಾಗಿದೆ ಹಾಗೂ ಕಲಂ–43ರ ಮೇರೆಗೆ ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಅಧಿಕೃತ ಪ್ರಾಧಿಕಾರದ ಕಾರ್ಯಪಾಲನೆಯನ್ನು ಅಪರ ಜಿಲ್ಲಾಧಿಕಾರಿಗಳು, ದಾವಣಗೆರೆ ಇವರಿಗೆ ನೀಡಲಾಗಿದೆ.

2013ರ ಕಾಯ್ದೆ ಕಲಂ–15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ತಂಟೆ–ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗೆ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೆ ವಿಲೇಗೆ ಹಾಕಲಾಗುವುದು.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013ರ ಕಲಂ–4ರಂತೆ ಸಾಮಾಜಿಕ ಪರಿಣಾಮ ನಿರ್ಧರಣೆಯ ಅಧ್ಯಯನಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 07 ಎಕ್ಯೂಸಿ 2021 ದಿನಾಂಕ: 18.03.2021 ಈ ಆದೇಶದಂತೆ ಸ್ವತ್ತಿನ ಭೂಸ್ವಾಧೀನ ಪ್ರಕ್ರಿಯ ಪ್ರಾರಂಭಿಸಲು 2013ರ ಮೂಲ ಭೂಸ್ವಾಧೀನ ಕಾಯ್ದೆಯ ಅಧ್ಯಾಯ–IIರಡಿ ಸಾಮಾಜಿಕ ಪರಿಣಾಮ ನಿರ್ಧರಣೆ (SIA) ಅಧ್ಯಯನ ಮಾಡುವುದರಿಂದ ಹಾಗೂ ಅಧ್ಯಾಯ–IIIರ ಕಲಂ–10ನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಿ ಆದೇಶಿಸಲಾಗಿದೆ.

ಈ ಸ್ವತ್ತಿನ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಿಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ಕೆ–2013ರ ಕಲಂ–11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಅನುಸೂಚಿ

ಜಿಲ್ಲೆ: ದಾವಣಗೆರೆ | ತಾಲ್ಲೂಕು: ದಾವಣಗೆರೆ | ಹೋಬಳಿ: ಕಸಬಾ | ಗ್ರಾಮ: ದಾವಣಗೆರೆ

ಕ್ರ ಸಂ.	ಖಾತೆದಾರರ ಹೆಸರು	ಸ್ವತ್ತಿನ ಸಂ.	ಚೆಕ್ಕುಬಂದಿ				ಭೂಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣ ಚ.ಅಡಿ	ಷರಾ
			ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ		
1	ಶ್ರೀ ಡಿ.ಎಸ್. ಕುಮಾರಸ್ವಾಮಿ ಬಿನ್ ಡಿ. ಶೇಖರಪ್ಪ ಮತ್ತು ಶ್ರೀಮತಿ ರೇಖಾ ಕುಮಾರ್ ಕೋಂ ಡಿ.ಎಸ್. ಕುಮಾರಸ್ವಾಮಿ	239 1ಎ, 2, 3ಬಿ	ಪಿ.ಬಿ. ರಸ್ತೆ	ಕುಮಾರ ಸ್ವಾಮಿಯವರ ಉಳಿದ ಸ್ವತ್ತು (ಡೋರ್ ನಂ. 239 1ಎ, 2, 3ಬಿ)	ಕನ್ಸ್ ರ್ವೆನ್ಸಿ	ರವಿಕುಮಾರ್ ರವರಿಗೆ ಸೇರಿದ ಸ್ವತ್ತು	255	

ಘೋಷ್ವಾರೆ

ದಾವಣಗೆರೆ	255 ಚದರ ಅಡಿಗಳು

ಸಹಿ/–
ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು,
ದಾವಣಗೆರೆ ಉಪವಿಭಾಗ, ದಾವಣಗೆರೆ.

ಸಹಿ/–
ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ,
ದಾವಣಗೆರೆ.

ಅಹೋರಾತ್ರಿ ಧರಣಿಗೆ ಮುಂದಾಗಿದ್ದ ಕಾಂಗ್ರೆಸ್; ಸುಳಿವರಿತ ಸರ್ಕಾರದಿಂದ ಎಚ್ಚರಿಕೆ ಹೆಜ್ಜೆ

ಸಿ.ಡಿ. ಗದ್ದಲ: ಅಧಿವೇಶನ 5 ದಿನ ಮೊಟಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಹಾಗೂ ಆರು ಮಂದಿ ಹಾಲಿ ಸಚಿವರ ಸಿ.ಡಿ ವಿಚಾರ ವಿಧಾನ ಮಂಡಲದ ಉಭಯ ಸದನಗಳಲ್ಲಿ ಬುಧವಾರ ಕೋಲಾಹಲಕ್ಕೆ ಕಾರಣವಾಯಿತು. ಇದರ ಪರಿಣಾಮವಾಗಿ ಬಜೆಟ್ ಅಧಿವೇಶನ ಐದು ದಿನ ಮುಂಚಿತವಾಗಿಯೇ ಅಂತ್ಯಗೊಂಡಿತು.

ಪೂರ್ವ ನಿಗದಿಯಂತೆ ಇದೇ 31ರವರೆಗೆ ಅಧಿವೇಶನ ನಡೆಯಬೇಕಿತ್ತು. ಏತನ್ಮಧ್ಯೆ ಕಲಾಪ ಸಲಹಾ ಸಮಿತಿ(ಬಿಎಸಿ) ಸಭೆ ನಡೆಸಿದ್ದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾ.25ಕ್ಕೆ ಮುಖ್ಯಮಂತ್ರಿ ಉತ್ತರ ನೀಡಲಿದ್ದು, 26ಕ್ಕೆ ಬಜೆಟ್ ಅಧಿವೇಶನ ಮುಗಿಸುವ ಬಗ್ಗೆ ಚರ್ಚೆ ನಡೆದಿದೆ. ಮತ್ತೊಮ್ಮೆ ಬಿಎಸಿ ಸಭೆ ಸೇರಿ, ಒಂದು ದೇಶ ಒಂದು ಚುನಾವಣೆ ಸೇರಿದಂತೆ ಮತ್ತಿತರ ವಿಚಾರಗಳ ಬಗ್ಗೆ ಚರ್ಚೆ ನಡೆಸುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಸದನದಲ್ಲಿ ಪ್ರಕಟಿಸಿದ್ದರು. ಬಿಎಸಿಯಿಂದ ದೂರ ಉಳಿಯಲು ಕಾಂಗ್ರೆಸ್ ನಿರ್ಧರಿಸಿದ್ದರಿಂದ ಸಭೆ ನಡೆದಿರಲಿಲ್ಲ. ಹೀಗಾಗಿ 26ವರೆಗಾದರೂ ಕಲಾಪ ನಡೆಯಬೇಕಿತ್ತು.

ಆದರೆ, ಬುಧವಾರ ಉಭಯ ಸದನಗಳಲ್ಲೂ ಸಿ.ಡಿ ವಿಚಾರವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಸದಸ್ಯರು, ಅಹೋರಾತ್ರಿ ಧರಣಿಗೆ ಮುಂದಾಗಿದ್ದರು.

ಸಿ.ಡಿ ವಿಷಯದಲ್ಲಿ ಆರು ಸಚಿವರು ಪ್ರತಿಬಂಧಕಾಜ್ಞೆ ತಂದಿರುವ ವಿಷಯದ ಕುರಿತು ತನಿಖೆಗೆ ಆಗ್ರಹಿಸಿ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರು ಧರಣಿ ಮಾಡಿದರು. ಪ್ರಜಾವಾಣಿ ಚಿತ್ರ : ಅನೂಪ್ ರಾಘ. ಟಿ.

ಗದ್ದಲದ ನಡುವೆ ಕಲಾಪ: ವಿಧಾನಸಭೆಯಲ್ಲಿ ಕಲಾಪ ಆರಂಭವಾಗುತ್ತಿದ್ದಂತೆಯೇ ಕಾಂಗ್ರೆಸ್ ಸದಸ್ಯರು ಧರಣಿ ಆರಂಭಿಸಿದರು. ಗದ್ದಲದ ಮಧ್ಯದಲ್ಲೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿದರು. ಬಳಿಕ ಧನವಿನಿಯೋಗ ಮಸೂದೆ, ಪೂರಕ ಅಂದಾಜಿನ ಮೂರನೇ ಕಂತು, ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಮಸೂದೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆ (ತಿದ್ದುಪಡಿ) ಮಸೂದೆಗೆ ಅಂಗೀಕಾರ ನೀಡಿ ಕಲಾಪವನ್ನು ಮುಂದೂಡಲಾಯಿತು.

ಕಲಾಪದುದ್ದಕ್ಕೂ ಕಾಂಗ್ರೆಸ್– ಬಿಜೆಪಿ ಸದಸ್ಯರ ನಡುವೆ ತೀವ್ರ ವಾಕ್ಸಮರ ನಡೆಯಿತು. ಸಿ.ಡಿ ವಿಚಾರದಲ್ಲಿ ನ್ಯಾಯಾಲಯದಿಂದ ಪ್ರತಿಬಂಧಕಾಜ್ಞೆ ತಂದಿರುವ ಆರು ಸಚಿವರ ರಾಜೀನಾಮೆ ಪಡೆಯುವಂತೆ ಆಗ್ರಹಿಸಿದ ಕಾಂಗ್ರೆಸ್ ಸದಸ್ಯರು, 'ಇದು ಲಂಚ ಮಂಚದ ಸರ್ಕಾರ', 'ಬ್ಲೂ ಬಾಯ್ಸ್‌ಗೆ ಧಿಕ್ಕಾರ– ಬೇಡ ಬೇಡ ಬಾಂಬೆ ಮಿಠಾಯಿ ಬೇಡ' ಎಂಬ ಘೋಷಣೆಗಳನ್ನು ಕೂಗಿದರು. ಮುಖ್ಯಮಂತ್ರಿ ಕೂಡ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಭೋಜನ ವಿರಾಮದ ಬಳಿಕ ಕಲಾಪ ಆರಂಭವಾಗುತ್ತಿದ್ದಂತೆ 'ಯಾವ ಶಾಸಕರೂ ಏಕಪತ್ನಿ ವ್ರತಸ್ಥರಲ್ಲ' ಎಂಬರ್ಥದಲ್ಲಿ ಸಚಿವ ಡಾ.ಕೆ. ಸುಧಾಕರ್ ನೀಡಿದ್ದ ಹೇಳಿಕೆಯನ್ನು ಪ್ರಸ್ತಾಪಿಸಿದ ಪ್ರತಿಪಕ್ಷಗಳ ಸದಸ್ಯರು, ಎಲ್ಲರ ಬಗ್ಗೆಯೂ ತನಿಖೆಗೆ ಆಗ್ರಹಿಸಿದರು. ಗದ್ದಲ ಜೋರಾಗುತ್ತಿದ್ದಂತೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿರುವುದಾಗಿ ಪ್ರಕಟಿಸಿದರು.

ಪರಿಷತ್‌ನಲ್ಲೂ ಕೋಲಾಹಲ

ವಿಧಾನ ಪರಿಷತ್‌ನಲ್ಲಿ ಕಲಾಪ ಆರಂಭವಾಗುತ್ತಿದ್ದಂತೆ ಸಿ.ಡಿ ವಿಚಾರ ಪ್ರಸ್ತಾಪಿಸಿದ ಕಾಂಗ್ರೆಸ್ ಸದಸ್ಯರು ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿ ಧರಣಿ ಆರಂಭಿಸಿದರು. ನಡುವೆಯೇ ಮುಖ್ಯಮಂತ್ರಿ ಬಜೆಟ್ ಮೇಲಿನ ಚರ್ಚೆಗೆ ಲಿಖಿತ ಉತ್ತರ ಮಂಡಿಸಿದರು. ಧನವಿನಿಯೋಗ ಮಸೂದೆಗೂ ಒಪ್ಪಿಗೆ ಪಡೆದರು.

ಗದ್ದಲ ಜೋರಾಗುತ್ತಿದ್ದಂತೆ ಸಭಾಪತಿ ಬಸವರಾಜ ಹೊರಟ್ಟಿ ಹತ್ತು ನಿಮಿಷ ಕಲಾಪ ಮುಂದೂಡಿದರು. ಮತ್ತೆ ಕಲಾಪ ಆರಂಭವಾದಾಗಲೂ ಕಾಂಗ್ರೆಸ್ ಧರಣಿ ಮುಂದುವರಿಸಿತು. ಪ್ರಮುಖ ವಿಷಯಗಳ ಚರ್ಚೆಗೆ ಅವಕಾಶ ದೊರಕುತ್ತಿಲ್ಲ ಎಂದು ಆಕ್ಷೇಪಿಸಿ ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು. ಗದ್ದಲ ಹೆಚ್ಚಾದ ಕಾರಣ ಮತ್ತೆ ಕಲಾಪ ಮುಂದೂಡಲಾಯಿತು.

ಭೋಜನ ವಿರಾಮದ ಬಳಿಕ ಕಲಾಪ ಆರಂಭವಾದಾಗಲೂ ವಾಕ್ಸಮರ ಮುಂದುವರೆಯಿತು. ಸಿ.ಡಿ ಪ್ರಕರಣ ಕುರಿತು ಕಾಂಗ್ರೆಸ್‌ನ ಸಿ.ಎಂ. ಇಬ್ರಾಹಿಂ ಅವರಿಗೆ ಮಾತನಾಡಲು ಸಭಾಪತಿ ಅವಕಾಶ ಕಲ್ಪಿಸಿದರು. ಅವರ ತೀಕ್ಷ್ಣ ಮಾತುಗಳಿಗೆ ಬಿಜೆಪಿ ಸದಸ್ಯರು ಪ್ರತ್ಯುತ್ತರ ನೀಡಲಾರಂಭಿಸಿದರು. ಗದ್ದಲ ಹೆಚ್ಚಾಗುತ್ತಿದ್ದಂತೆಯೇ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ಕಾಗದ ಪತ್ರಗಳನ್ನು ಮಂಡಿಸಿದರು. ಬಳಿಕ ಸಭಾಪತಿ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಅವೈಜ್ಞಾನಿಕ ಟೋಲ್ ಸಂಗ್ರಹ: ಪರಿಷತ್‌ನಲ್ಲಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹೆದ್ದಾರಿಗಳಲ್ಲಿ ಅವೈಜ್ಞಾನಿಕವಾಗಿ ಟೋಲ್ ಸಂಗ್ರಹಿಸಲಾಗುತ್ತಿದೆ ಎಂದು ಆರೋಪಿಸಿ ವಿಧಾನ ಪರಿಷತ್‌ನಲ್ಲಿ ಪಕ್ಷಾತೀತವಾಗಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿಯ ಮಹಾಂತೇಶ ಕವಟಗಿಮಠ, 'ರಸ್ತೆ ನಿರ್ಮಾಣಕ್ಕೆ ತಗುಲಿದ ವೆಚ್ಚ ಎಷ್ಟು, ಎಷ್ಟು ವರ್ಷ ಟೋಲ್ ಸಂಗ್ರಹಿಸಲು ಅವಕಾಶ ನೀಡುತ್ತೀರಿ' ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಲೋಕೋಪಯೋಗಿ ಸಚಿವ ಗೋವಿಂದ ಕಾರಜೋಳ, 'ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ಸಾರ್ವಜನಿಕ –ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುತ್ತದೆ. ರಸ್ತೆ ನಿರ್ಮಿಸಲು ಖಾಸಗಿ ಸಂಸ್ಥೆಗಳು ಬ್ಯಾಂಕ್‌ಗಳಿಂದ ಸಾಲ ಪಡೆದಿರುತ್ತವೆ. ಸಾಲ ಮುಗಿಯುವರೆಗೂ ಶುಲ್ಕ ಸಂಗ್ರಹಿಸಲಾಗುತ್ತದೆ. ಕೆಲವು ರಸ್ತೆಗಳಲ್ಲಿ 10 ವರ್ಷ, 20 , 30 ವರ್ಷಗಳವರೆಗೂ ಶುಲ್ಕ ಸಂಗ್ರಹಿಸಲು ಅನುಮತಿ ನೀಡಲಾಗಿದೆ' ಎಂದರು.

ಮಧ್ಯಪ್ರವೇಶಿಸಿದ ಕಾಂಗ್ರೆಸ್ಸಿನ ಸಿ.ಎಂ. ಇಬ್ರಾಹಿಂ, 'ಟೋಲ್ ಸಂಗ್ರಹಿಸಲು ಖಾಸಗಿ ಕಂಪನಿಗಳಿಗೆ ನೀಡುತ್ತಿರುವ ಸಮಯಾವಕಾಶ ಅವೈಜ್ಞಾನಿಕ' ಎಂದು ತರಾಟೆಗೆ ತೆಗೆದುಕೊಂಡರು.

ಕಾಂಗ್ರೆಸ್ಸಿನ ಪ್ರಕಾಶ್ ರಾಥೋಡ್, ಎಂ.ನಾರಾಯಣಸ್ವಾಮಿ, 'ಈ ರೀತಿ ಟೋಲ್ ಸಂಗ್ರಹದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ' ಎಂದರು. ಜೆಡಿಎಸ್ ಮತ್ತು ಬಿಜೆಪಿಯ ಕೆಲವೂ ಸದಸ್ಯರೂ ಅದಕ್ಕೆ ಧ್ವನಿಗೂಡಿಸಿದರು.

ಫಾಸ್ಟ್ ಟ್ಯಾಗ್ ಅಳವಡಿಕೆ: 'ರಾಜ್ಯ ಹೆದ್ದಾರಿಗಳಲ್ಲಿ ಟೋಲ್‌ಗಳಲ್ಲಿ ಫಾಸ್ಟ್ ಟ್ಯಾಗ್ ಅಳವಡಿಸಲು ಗುತ್ತಿಗೆದಾರರಿಗೆ ನಿರ್ದೇಶನ ನೀಡಲಾಗಿದೆ. ಬೆಳಗಾವಿ, ಮುಧೋಳ ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ಕಬ್ಬು ಅರೆಯುವ ಸಂದರ್ಭದಲ್ಲಿ ಸುಮಾರು 4 ತಿಂಗಳು ತೊಂದರೆಯಾಗುತ್ತಿದೆ. ಕಬ್ಬು ಸಾಗಿಸುವ ಟ್ರ್ಯಾಕ್ಟರ್‌ಗಳು ಟೋಲ್‌ಗಳಲ್ಲಿ ಸಾಲುಗಟ್ಟಿ ನಿಂತಿರುತ್ತವೆ. ಅವುಗಳಿಗೆ ಬೈಪಾಸ್ ರಸ್ತೆ ನಿರ್ಮಿಸಿ, ಅನುಕೂಲ ಮಾಡಿಕೊಡುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಕಾರಜೋಳ ಹೇಳಿದರು.

ಮುದ್ರಾಂಕ ಶುಲ್ಕ ಕಡಿಮೆ ಪಡೆದು ಬೊಕ್ಕಸಕ್ಕೆ ನಷ್ಟ

ಸರ್ಕಾರಕ್ಕೆ ನಷ್ಟ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಜತೆಗೆ, ಈ ವಂಚನೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು: ಆರ್‌.ಅಶೋಕ

9 ಅಧಿಕಾರಿಗಳ ಅಮಾನತು

ಬೆಂಗಳೂರು: ಆಸ್ತಿ ನೋಂದಣಿಗೆ ಸರ್ಕಾರ ನಿಗದಿಪಡಿಸಿರುವ ನಿರ್ದಿಷ್ಟ ಮುದ್ರಾಂಕ ಶುಲ್ಕಕ್ಕಿಂತ ಕಡಿಮೆ ಪಡೆದ ಪ್ರಕರಣಗಳಲ್ಲಿ ಒಂಬತ್ತು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಬೆಳಗಾವಿಯ ಅಧಿಕಾರಿಯೊಬ್ಬರನ್ನು ಶೀಘ್ರವೇ ಅಮಾನತು ಮಾಡಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

'ರಾಜ್ಯದಾದ್ಯಂತ ಮುದ್ರಾಂಕ ಶುಲ್ಕ ಕಡಿಮೆ ಪಡೆದು ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಇದೇ ರೀತಿ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ, ಇದಕ್ಕೆ ಶೀಘ್ರವೇ ಪ್ರತ್ಯೇಕ ನಿಯಮ ಜಾರಿಗೆ ತರುವ ಚಿಂತನೆ ಇದೆ. ಸರ್ಕಾರಕ್ಕೆ ಆಗಿರುವ ನಷ್ಟವನ್ನು ಅಧಿಕಾರಿಗಳಿಂದಲೇ ತುಂಬಿಸಿಕೊಳ್ಳುವ ಬಗ್ಗೆಯೂ ಚಿಂತನೆಯಿದೆ' ಎಂದರು.

ಮುದ್ರಾಂಕ ಶುಲ್ಕ ನಷ್ಟವಾಗುತ್ತಿರುವ ಬಗ್ಗೆ ವಿಧಾನ ಪರಿಷತ್‌ನಲ್ಲಿ ಪ್ರಶ್ನೆ ಕೇಳಿದ ಬಿಜೆಪಿಯ ಎನ್. ರವಿಕುಮಾರ್, 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅನುಮೋದಿಸಿರುವ ಮಾಗಡಿ ರಸ್ತೆಯ ಕಾವೇರಿಪುರ, ಮಾರುತಿ ನಗರ, ಮೀನಾಕ್ಷಿ ನಗರ, ರಂಗನಾಥಪುರ ಮತ್ತು ಸಣ್ಣಕ್ಕಿ ಬಯಲು ಪ್ರದೇಶಗಳ 337 ಮಾರಾಟ ಪತ್ರಗಳ ನೋಂದಣಿಯಿಂದ ₹ 103.39 ಕೋಟಿ ನಷ್ಟವಾಗಿದೆ. ಬೆಳಗಾವಿ ವಿಭಾಗದಲ್ಲೂ ಇದೇ ರೀತಿಯ ಪ್ರಕರಣ ನಡೆದಿದೆ' ಎಂದು ಹೇಳಿದರು.

₹ 4.83 ಕೋಟಿ ಮೌಲ್ಯದ ಆಸ್ತಿ ಇ.ಡಿ ವಶಕ್ಕೆ

ಬೆಂಗಳೂರು: ನಕಲಿ ಆಭರಣಗಳನ್ನು ಅಡವಿಟ್ಟು ಬ್ಯಾಂಕ್ ಆಫ್ ಬರೋಡಾದ ಕೆಂಗೇರಿ ಶಾಖೆಯಿಂದ ₹ 12 ಕೋಟಿ ಮೊತ್ತದ 186 ಚಿನ್ನಾಭರಣ ಸಾಲಗಳನ್ನು ಪಡೆದು ವಂಚಿದಿಸಿದ್ದ ಪ್ರಕರಣದ ಪ್ರಮುಖ ಆರೋಪಿಗೆ ಸೇರಿದ ₹ 4.83 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ವಶಕ್ಕೆ ಪಡೆದಿದೆ.

ಎಸ್.ಕೆ. ಸುಬ್ರಮಣ್ಯ ರೆಡ್ಡಿ ಎಂಬುವವರು ಬ್ಯಾಂಕ್ ಆಫ್ ಬರೋಡಾದ ಕೆಂಗೇರಿ ಶಾಖೆಯ ವ್ಯವಸ್ಥಾಪಕ ಟಿ.ಎಲ್. ಪ್ರವೀಣ್ ಕುಮಾರ್ ನೆರವಿನಲ್ಲಿ 57 ವ್ಯಕ್ತಿಗಳ ಹೆಸರಿನಲ್ಲಿ ನಕಲಿ ಆಭರಣ ಅಡವಿಟ್ಟು ಚಿನ್ನಾಭರಣ ಸಾಲ ಪಡೆದಿದ್ದರು. ಈ ಮೊತ್ತವನ್ನು ಸಿಂಡಿಕೇಟ್ ಬ್ಯಾಂಕ್‌ನಲ್ಲಿದ್ದ ತಮ್ಮ ಸಾಲ ತೀರಿಸಲು, ಹೊಸ ಆಸ್ತಿ ಖರೀದಿಗೆ ಬಳಸಿದ್ದರು ಎಂದು ಸಿಬಿಐ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿತ್ತು.

ಕೆಟಿಪಿಪಿ ಕಾಯ್ದೆಗೆ ತಿದ್ದುಪಡಿ ● ವಿಧಾನಸಭೆಯಲ್ಲಿ ಅಂಗೀಕಾರ

₹ 2 ಕೋಟಿವರೆಗಿನ ಕಾಮಗಾರಿ ಕೆಆರ್‌ಐಡಿಎಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಂಡರ್ ಕರೆಯದೆಯೇ ₹2 ಕೋಟಿ ಮೊತ್ತದವರೆಗಿನ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಮೂಲಕ ಅನುಷ್ಠಾನಗೊಳಿಸಲು ಅವಕಾಶ ಕಲ್ಪಿಸುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ತಿದ್ದುಪಡಿ) ಕಾಯ್ದೆಗೆ (ಕೆಟಿಪಿಪಿ ಕಾಯ್ದೆ) ವಿಧಾನಸಭೆಯಲ್ಲಿ ಬುಧವಾರ ಅಂಗೀಕಾರ ನೀಡಲಾಯಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಸ್ತಾವಕ್ಕೆ ಹಣಕಾಸು ಇಲಾಖೆ ಮತ್ತು ಕಾನೂನು ಇಲಾಖೆ ತಕರಾರು ತೆಗೆದಿದ್ದವು. ಹಾಗಿದ್ದರೂ ಸದನದಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

'ಕಾಮಗಾರಿ ಅನುಷ್ಠಾನದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಮತ್ತು ಟೆಂಡರ್ ನೀಡುವಾಗ ಸ್ಪರ್ಧೆ ಇರಬೇಕು ಎಂಬ ಉದ್ದೇಶದಿಂದಲೇ ಕೆಟಿಪಿಪಿ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಆದರೆ, ಕೆಆರ್‌ಐಡಿಎಲ್‌ಗೆ 4ಜಿ ಅಡಿ ವಿನಾಯಿತಿ ನೀಡಿದರೆ ಕಾಯ್ದೆಯ ಉದ್ದೇಶವೇ ವಿಫಲವಾಗುತ್ತದೆ. ಗುತ್ತಿಗೆದಾರರು ಬೀದಿಪಾಲು ಆಗಲಿದ್ದಾರೆ' ಎಂದು ಕರ್ನಾಟಕ ರಾಜ್ಯ ಎಸ್‌.ಸಿ, ಎಸ್‌ಟಿ ಗುತ್ತಿಗೆದಾರರ ಸಂಘ ಎಚ್ಚರಿಸಿತ್ತು.

ಈ ಬಗ್ಗೆ ಪ್ರಜಾವಾಣಿಯ ಫೆ.18ರ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು.

ವಿಧಾನಸಭೆಯಲ್ಲಿ ಬುಧವಾರ ಕಾಂಗ್ರೆಸ್ ಸದಸ್ಯರ ಧರಣಿಯ ನಡುವೆಯೇ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮಸೂದೆ ಮಂಡಿಸಿದರು. ಚರ್ಚೆ ನಡೆಸದೆಯೇ ಮಸೂದೆಗೆ ಅಂಗೀಕಾರ ಪಡೆಯಲಾಯಿತು.

'ವಿ.ವಿಗಳಿಂದ ಪರಿಶಿಷ್ಟರ ನಿಧಿ ದುರ್ಬಳಕೆ: ಶೀಘ್ರ ಸಭೆ'

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಮೂಲಸೌಲಭ್ಯ ಒದಗಿಸುವುದು ಸೇರಿದಂತೆ ವಿವಿಧ ಅಗತ್ಯಗಳಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಲ್ಲಿ ಸರ್ಕಾರ ನೀಡುತ್ತಿರುವ ಅನುದಾನವನ್ನು ವಿಶ್ವವಿದ್ಯಾಲಯಗಳು ಅನ್ಯ ಉದ್ದೇಶಕ್ಕೆ ಬಳಸುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದ್ದು, ಶೀಘ್ರವೇ ಕುಲಪತಿಗಳ ವಿಶೇಷ ಸಭೆ ಕರೆಯಲಾಗುವುದು' ಎಂದು ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದರು.

'ವಿಶ್ವವಿದ್ಯಾಲಯವೊಂದರ ಕುಲಪತಿ ₹ 7 ಕೋಟಿಯನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿರುವ ಕುರಿತು ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ರಮೇಶ್ ಗೌಡ ಕೇಳಿದ ಪ್ರಶ್ನೆಗೆ ಪಶುಸಂಗೋಪನೆ ಸಚಿವ ಪ್ರಭು ಚವಾಣ್ ಪ್ರತಿಕ್ರಿಯಿಸಿ, ಈ ಬಗ್ಗೆ ಮಾಹಿತಿ ಪಡೆದು ಉತ್ತರಿಸುತ್ತೇನೆ' ಎಂದರು.

ಆಗ ಕಾರಜೋಳ, 'ಇದು ಕೇವಲ ಒಂದು ವಿಶ್ವವಿದ್ಯಾಲಯದ ಸಮಸ್ಯೆಯಲ್ಲ. ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಹೀಗೆ ಆಗುತ್ತಿದೆ' ಎಂದರು.

ರಾಜ್ಯದ ವಿವಿಧ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಎಸ್‌.ಸಿ, ಎಸ್‌.ಟಿ ವಿದ್ಯಾರ್ಥಿಗಳಿಗೆ ವಸತಿ ನಿಲಯ, ಪಠ್ಯಪುಸ್ತಕ ಸೇರಿದಂತೆ ಮೂಲಸೌಕರ್ಯ ಒದಗಿಸಲು ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಿಂದ ಸರ್ಕಾರ ಅನುದಾನ ಬಿಡುಗಡೆ ಮಾಡುತ್ತಿದೆ. ಆದರೆ, ಒಂಬತ್ತು ವಿಶ್ವವಿದ್ಯಾಲಯಗಳು ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿ ಬಂದಿರುವ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸಿಕೊಂಡಿವೆ. ಎಸ್‌.ಸಿ, ಎಸ್‌.ಟಿ ವಿದ್ಯಾರ್ಥಿಗಳ ಸೌಲಭ್ಯಕ್ಕಾಗಿ ನೀಡಿರುವ ಅನುದಾನವನ್ನು ಕುಲಪತಿಗಳ ವೈಯಕ್ತಿಕ ಖಾತೆಗೆ ವರ್ಗಾಯಿಸಿಕೊಳ್ಳಲು ಅವಕಾಶ ಇಲ್ಲ' ಎಂದರು.

ವಿರೋಧ ಪಕ್ಷದ ನಾಯಕ ಎಸ್‌.ಆರ್. ಪಾಟೀಲ, 'ಅನ್ಯ ಉದ್ದೇಶಕ್ಕೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ ಹಣ ಬಳಸಿಕೊಂಡವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಅವಕಾಶವಿದೆ. ಸರ್ಕಾರ ಶೀಘ್ರ ಕ್ರಮ ವಹಿಸಬೇಕು' ಎಂದು ಒತ್ತಾಯಿಸಿದರು.

'ಸಾಲ ಮಾಡಿ ತುಪ್ಪ ತಿಂದಿಲ್ಲ'

ಒಂದನೇ ಪುಟದಿಂದ...

'ಕಳೆದ ತ್ರೈಮಾಸಿಕದಲ್ಲಿ ಆರ್ಥಿಕ ಚಟುವಟಿಕೆಗಳು ಸುಧಾರಿಸಿದೆ. ಆದರೂ 10 ತಿಂಗಳ ಕಾಲ ನಿಸ್ತೇಜಗೊಂಡಿದ್ದ ಆರ್ಥಿಕತೆ ಕೇವಲ 3 ತಿಂಗಳಲ್ಲಿ ಪರಿಪೂರ್ಣವಾಗಿ ಚೇತರಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ಅದು ಸಾಧ್ಯವಾಗಿದೆ. ಈ ಚೇತರಿಕೆ ನಮಗೆ ಭರವಸೆಯ ಆಶಾ ಕಿರಣವಾಗಿ ಕಂಡಿದೆ. ಈ ಭರವಸೆಯ ಪರಿಸ್ಥಿತಿ ಮುಂದುವರಿಯಲು ಸಕಲ ಪ್ರಯತ್ನ ಮಾಡಲಿದ್ದೇವೆ' ಎಂದು ಹೇಳಿದರು.

ಒಂದು ಕಡೆ ಬದ್ಧತಾ ವೆಚ್ಚ ಕಡಿಮೆ ಮಾಡಬೇಕು ಎಂದು ಹೇಳುವ ವಿರೋಧ ಪಕ್ಷದವರು, ಇನ್ನೊಂದು ಕಡೆ ಎಲ್ಲ ಖಾಲಿ ಹುದ್ದೆಗಳನ್ನೂ ಭರ್ತಿ ಮಾಡಬೇಕು ಎನ್ನುತ್ತಾರೆ. ಇದು ಹೇಗೆ ಸಾಧ್ಯ? ರಾಜ್ಯದಲ್ಲಿ ಒಟ್ಟು ಇರುವ ಹುದ್ದೆಗಳ ಸಂಖ್ಯೆ 7,68,975. ಇದರಲ್ಲಿ 5,16,073 ಹುದ್ದೆಗಳು ನೇರ ನೇಮಕಾತಿ ಮೂಲಕ ಭರ್ತಿ ಆಗಿವೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿದರೆ ಸರ್ಕಾರಕ್ಕೆ ₹12,000 ಕೋಟಿ ಅಧಿಕ ವೆಚ್ಚವಾಗುತ್ತದೆ ಎಂದರು.

ಆದಾಯ ಹೆಚ್ಚಳಕ್ಕೆ ಶುಲ್ಕ ಪರಿಷ್ಕರಣೆ: ವಿವಿಧ ಇಲಾಖೆಗಳಲ್ಲಿ ನೀಡುತ್ತಿರುವ ಸೇವೆಗಳಿಗೆ ವಿಧಿಸುತ್ತಿರುವ ಶುಲ್ಕಗಳನ್ನು ಪರಿಷ್ಕರಿಸುವ ಮೂಲಕ ಸರ್ಕಾರ ತೆರಿಗೆಯೇತರ ಆದಾಯವನ್ನು ಹೆಚ್ಚಿಸಲು ಉದ್ದೇಶಿಸಿದೆ. ಇದಕ್ಕಾಗಿ ಒಂದು ಸಮಿತಿಯನ್ನೂ ರಚಿಸಲಾಗಿದೆ ಎಂದರು.

ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ನೀಡಿರುವ ಸಾಲ ವಸೂಲಿಗೆ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ, ಬೆಂಗಳೂರು ಮತ್ತು ಇತರ ಮಹಾನಗರಗಳ ಪಾಲಿಕೆಗಳಲ್ಲಿರುವ ಸರ್ಕಾರಿ ಜಮೀನನ್ನು ವಾಣಿಜ್ಯ ಉಪಯೋಗಕ್ಕಾಗಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು. ಇದರಿಂದ ಸಾಲವಲ್ಲದ ಬಂಡವಾಳ ಸ್ವೀಕೃತಿ ಹೆಚ್ಚಿಸಬಹುದು ಎಂದರು.

ಕರ್ನಾಟಕ ಮಾತ್ರವಲ್ಲ ನೆರೆಯ ತಮಿಳುನಾಡು, ಕೇರಳ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳೂ ಕೊರತೆ ಬಜೆಟ್ ಮಂಡಿಸಿವೆ. ಈ ರಾಜ್ಯಗಳೂ ರಾಜಸ್ವ ಕೊರತೆ ಎದುರಿಸುತ್ತಿವೆ ಎಂದು ಯಡಿಯೂರಪ್ಪ ಹೇಳಿದರು.

ಮುಂದಿನ ವರ್ಷವೂ ರಾಜಸ್ವ ಕೊರತೆ

2021–22 ವರ್ಷದ ಅವಧಿಯಲ್ಲಿ ಕೋವಿಡ್‌–19ರ ಪೂರ್ವ ಹಂತಗಳಿಗೆ ಮಂದಗತಿಯ ಆರ್ಥಿಕ ಚೇತರಿಕೆಯ ಕಾರಣದಿಂದಾಗಿ ರಾಜಸ್ವ ಕೊರತೆ ಉದ್ಭವಿಸಬಹುದು ಎಂದು ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ಮಸೂದೆ–2021ರಲ್ಲಿ ಪ್ರಸ್ತಾಪಿಸಲಾಗಿದೆ.

ಈ ಮಸೂದೆಗೆ ವಿಧಾನಮಂಡಲದಲ್ಲಿ ಬುಧವಾರ ಅಂಗೀಕಾರ ಪಡೆಯಲಾಯಿತು. ಈ ವರ್ಷದ ಒಟ್ಟು ಹೊಣೆಗಾರಿಕೆಗಳು(ಸಾಲ) ಅಂದಾಜು ಒಟ್ಟು ಆಂತರಿಕ ಉತ್ಪನ್ನದ ಶೇ 25ರಷ್ಟನ್ನು ಮೀರಬಹುದು. ಈ ವರ್ಷದಲ್ಲಿ ಆರ್ಥಿಕ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ 4ರ ವರೆಗೆ ಉದ್ಭವಿಸಬಹುದು. ಸಾಲ ಪಡೆದ ಮೊತ್ತದ ಆಧಾರದಲ್ಲಿ ಅಸಲು ಮತ್ತು ಬಡ್ಡಿಯಲ್ಲಿ ಹೆಚ್ಚಳ ಉಂಟಾಗಲಿದೆ ಎಂದೂ ಮಸೂದೆ ಹೇಳಿದೆ.

- **ಬದ್ಧತಾ ವೆಚ್ಚ ಹೆಚ್ಚಳ:** 2020–21 ನೇ ಸಾಲಿನಲ್ಲಿ ರಾಜ್ಯದ ಬದ್ಧತಾ ವೆಚ್ಚಗಳಾಗಿರುವ ವೇತನಗಳು, ಪಿಂಚಣಿ, ಬಡ್ಡಿ ಮರುಪಾವತಿ ಇತ್ಯಾದಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಅಂದಾಜು ₹13,405 ಕೋಟಿ ಹೆಚ್ಚಳವಾಗಿದೆ.
- **ವಿತ್ತೀಯ ಕೊರತೆ:** 2020–21 ನೇ ಸಾಲಿನಲ್ಲಿ ರಾಜ್ಯದ ವಿತ್ತೀಯ ಕೊರತೆ ₹46,072 ಕೋಟಿ ಇತ್ತು. 2021–22 ನೇ ಸಾಲಿನಲ್ಲಿ ವಿತ್ತೀಯ ಕೊರತೆ ₹59,240 ಕೋಟಿಗೆ ಏರಲಿದೆ.
- **ಸಾಲದ ಪ್ರಮಾಣ:** 2020–21 ರ ವರ್ಷಾಂತ್ಯಕ್ಕೆ ಒಟ್ಟಾರೆ ಬಾಕಿ ಇರುವ ಸಾಲ ಪ್ರಮಾಣ ₹3,68,692 ಕೋಟಿ. ಇದು ಜಿಎಸ್‌ಡಿಪಿಯ ಶೇ 20.4 ರಷ್ಟು. 2021–21 ನೇ ವರ್ಷಾಂತ್ಯಕ್ಕೆ ಒಟ್ಟಾರೆ ಬಾಕಿ ಉಳಿಯುವ ಸಾಲದ ಪ್ರಮಾಣ ₹4,57,899 ಕೋಟಿ. ಅಂದರೆ ಜಿಎಸ್‌ಡಿಪಿಯ ಶೇ.26.9 ರಷ್ಟು. ತಮಿಳುನಾಡು ಶೇ 26.7 ಮತ್ತು ಕೇರಳ ಶೇ 37.2 ರಷ್ಟು ಸಾಲ ಮಾಡಿವೆ.

'ಏಕ ಪತ್ನಿ ವ್ರತಸ್ಥ': ಬಿರುಗಾಳಿ

ಒಂದನೇ ಪುಟದಿಂದ...

ಸಚಿವ ಸುಧಾಕರ್ ಕ್ಷಮೆ ಕೇಳಬೇಕು ಎಂದು ಜೆಡಿಎಸ್‌ನ ಬಂಡೆಪ್ಪ ಕಾಶೆಂಪೂರ ಆಗ್ರಹಿಸಿದರು.

ಗದ್ದಲ ಜೋರಾಗುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಕಾಗೇರಿ,'ಯಾರೂ ಭಾವಾವೇಶಕ್ಕೆ ಒಳಗಾಗಿ ಸದಸ್ಯರ ಬಗ್ಗೆ, ಸದನದ ಗೌರವಕ್ಕೆ ಧಕ್ಕೆ ತರುವ ಹಾಗೆ ಮಾತನಾಡಬಾರದು. ನಿಮ್ಮೆಲ್ಲರಿಗೂ ಆದ ನೋವು ನನಗೂ ಆಗಿದೆ' ಎಂದು ಹೇಳಿದರು.

ಸಿ.ಡಿ ಇರೋದ್ರಿಂದಲೇ ಹೀಗೆ ಆಡ್ತಾರೆ: ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಅವರ ಸಿ.ಡಿ ಇದೆ. ಅದಕ್ಕಾಗಿಯೇ ಹೀಗೆ ಆಡುತ್ತಿದ್ದಾರೆ. ವಿಲಿ ವಿಲಿ ಒದ್ದಾಡುತ್ತಿದ್ದಾರೆ. ಎಲ್ಲ ಶಾಸಕರ ಬಗ್ಗೆ ತನಿಖೆ ಮಾಡಿ ಎಂದಿದ್ದಾರೆ. ಆದರೆ, ಶಾಸಕರ ಮನೆಯವರು ಏನಂದುಕೊಳ್ಳಬೇಕು' ಎಂದರು.

'ಈ ವಿಚಾರದಲ್ಲಿ ನ್ಯಾಯಾಲಯ ಮೆಟ್ಟಿಲು ಹತ್ತಬೇಕಾ ಎಂಬುದನ್ನು ಪರಿಶೀಲಿಸುತ್ತಿದ್ದೇವೆ. ನಾವೇನೋ ಗಂಡಸರು. ಹಳ್ಳಿಕಡೆ ಏನೂ ಅನ್ನಲ್ಲ, ಪಾಪ ಹೆಣ್ಣು ಮಕ್ಕಳ (ಶಾಸಕಿಯರು) ಕಥೆ ಏನಾಗಬೇಕು? ಅವರ ಮನೆಯವರಿಗೆ ಅವರು ಏನು ಉತ್ತರ ಕೊಡಬೇಕು' ಎಂದು ಪ್ರಶ್ನಿಸಿದರು.

ಯಾರೂ ಸತ್ಯ ಹರಿಶ್ಚಂದ್ರರಲ್ಲ: ಎಚ್‌ಡಿಕೆ

'ಇಲ್ಲಿರುವ ಯಾರೂ ಸತ್ಯ ಹರಿಶ್ಚಂದ್ರರಲ್ಲ. ಎಲ್ಲರ ಮನೆಯ ದೋಸೆಯೂ ತೂತು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

'224 ಶಾಸಕರು ಮಾತ್ರ ಅಲ್ಲ. ಈ ಭೂಮಿಯ ಮೇಲೆ ಹುಟ್ಟುವ ಎಲ್ಲ ಜೀವಿಗಳಿಗೂ ಸಹಜವಾದ ಕೆಲವು ಪ್ರಕ್ರಿಯೆಗಳು ಇರುತ್ತವೆ' ಎಂದರು.

'ನಾನು ಜೀವನದಲ್ಲಿ ಒಮ್ಮೆ ಎಡವಿದ್ದೇನೆ ಎಂದು ವಿಧಾನಸಭೆಯಲ್ಲೇ ಹೇಳಿದ್ದೇನೆ. ಈಗ ನನ್ನ ಹೆಸರು ಏಕೆ ಎಳೆದು ತಂದಿದ್ದೀರಿ? ಮಂತ್ರಿಗಳೇ ಮಾಡಿಕೊಂಡ ತಪ್ಪು ಇದು. ನ್ಯಾಯಾಲಯಕ್ಕೆ ಹೋಗಿ ಪ್ರತಿಬಂಧಕಾಜ್ಞೆ ಪಡೆಯದಿದ್ದರೆ, ಸರಿಯಾಗಿ ಇದ್ದಿದ್ದರೆ ಈ ಪರಿಸ್ಥಿತಿ ಉದ್ಭವಿಸುತ್ತಿರಲಿಲ್ಲ' ಎಂದು ಹೇಳಿದರು.

'ಬಿ–ಖರಾಬು ಜಮೀನು ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಬಿ- ಖರಾಬು ಜಮೀನನ್ನು ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಪಿ.ಆರ್.ರಮೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬಿ- ಖರಾಬು ಜಮೀನುಗಳನ್ನು ಆದ್ಯತೆಯ ಮೇರೆಗೆ ಸರ್ಕಾರಿ ಕಟ್ಟಡ, ಸರ್ಕಾರಿ ಆಸ್ಪತ್ರೆ, ರಾಜೀವ್ ಗಾಂಧಿ ವಸತಿ ನಿಗಮ, ಗೃಹ ಮಂಡಳಿ, ಕೊಳಚೆ ನಿರ್ಮೂಲನಾ ಮಂಡಳಿ, ಕೆಪಿಟಿಸಿಎಲ್ ಹೀಗೆ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ. ಬೆಂಗಳೂರು ನಗರದಲ್ಲಿ ಸುಮಾರು 5,165 ಎಕರೆ ಹಾಗೂ ರಾಜ್ಯದ ಇತರೆ ಭಾಗದಲ್ಲಿ ಸುಮಾರು 5 ಸಾವಿರ ಎಕರೆ ಬಿ- ಖರಾಬು ಜಮೀನು ಸರ್ಕಾರಿ ಸಂಸ್ಥೆಗಳಿಗೆ ನೀಡಲಾಗಿದೆ' ಎಂದರು.

'ಬಿ- ಖರಾಬು ಜಮೀನುಗಳನ್ನು ಜಿಲ್ಲಾಧಿಕಾರಿಗಳು ಹಂಚಿಕೆ ಮಾಡಲು ಅವಕಾಶ ಇಲ್ಲ. ಸರ್ಕಾರಕ್ಕೆ ಈ ಸಂಬಂಧ ಕಡತ ಬರುತ್ತಿದ್ದಂತೆಯೇ ಪರಿಶೀಲಿಸಿ ಹಂಚಿಕೆ ಮಾಡುತ್ತಿದ್ದೇವೆ. ಲ್ಯಾಂಡ್ ಲಾಕ್ಡ್ (ಸುತ್ತ ಸರ್ಕಾರಿ ರಸ್ತೆ ಇಲ್ಲದ) ಜಮೀನುಗಳನ್ನು ರೈತರಿಗೆ ಅಥವಾ ಭೂ ಮಾಲೀಕರಿಗೆ ದರ ನಿಗದಿಪಡಿಸಿ ಹಂಚಿಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ, ಒತ್ತುವರಿ ಆಗದಂತೆ ತಡೆಯಲು ರೀತಿ ಮಾಡಲಾಗುತ್ತಿದೆ. ಬೆಂಗಳೂರಿನಲ್ಲಿ ಕೆರೆ, ಕುಂಟೆ, ರಾಜಕಾಲುವೆ ಹೊರತುಪಡಿಸಿದ ಬಿ- ಖರಾಬು ಜಮೀನನ್ನು ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ' ಎಂದು ಅವರು ವಿವರಿಸಿದರು.

ಕಾಳಸಂತೆಗೆ ಪಡಿತರ ಅಕ್ಕಿ

ಒಂದನೇ ಪುಟದಿಂದ...

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಆಂಜನಪ್ಪ, 'ಆಹಾರ ಇಲಾಖೆ ಅಧಿಕಾರಿಗಳ ದೂರಿನಂತೆ ಎಫ್‌ಐಆರ್ ದಾಖಲಿಸಿ, ಲಾರಿ ಮತ್ತು ಅಕ್ಕಿಯನ್ನು ವಶಪಡಿಸಿಕೊಂಡಿದ್ದೇವೆ. ಸಬ್ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ತನಿಖೆ ನಡೆಯುತ್ತಿದ್ದು, ಈವರೆಗೆ ಆರೋಪಿಗಳು ಪತ್ತೆಯಾಗಿಲ್ಲ' ಎಂದರು.

ಪಾಲಿಶ್ ನೆಪದಲ್ಲಿ ಸಾಗಣೆ: ಕಾನೂನಿನ ಪ್ರಕಾರ, ಒಂದು ಪ್ರದೇಶಕ್ಕೆ ಹಂಚಿಕೆಯಾದ ಪಡಿತರ ಧಾನ್ಯವನ್ನು ಯಾವುದೇ ಕಾರಣ ನೀಡಿ ಇತರೆಡೆಗೆ ಸಾಗಿಸುವಂತಿಲ್ಲ. ಈ ಪ್ರರಣದಲ್ಲಿ 'ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಇಸ್ಕಾನ್‌ನ ಅಕ್ಷಯ ಪಾತ್ರ ಪ್ರತಿಷ್ಠಾನಕ್ಕೆ ಹಂಚಿಕೆಯಾಗಿದ್ದ ಅಕ್ಕಿಯನ್ನು ಪಾಲಿಶ್‌ಗಾಗಿ ಕೊಂಡೊಯ್ಯಲಾಗುತ್ತಿತ್ತು' ಎಂಬ ಕಾರಣ ನೀಡಿ ರಕ್ಷಣೆ ಪಡೆಯಲು ಆರೋಪಿಗಳು ಕಸರತ್ತು ನಡೆಸುತ್ತಿದ್ದಾರೆ.

'ಇಸ್ಕಾನ್ ಅಕ್ಷಯಪಾತ್ರ ಪ್ರತಿಷ್ಠಾನಕ್ಕೆ ಹಂಚಿಕೆಯಾಗಿದ್ದ ಅಕ್ಕಿಯನ್ನು ಕೆ.ಆರ್.ಪುರದಿಂದ ಬಂಗಾರಪೇಟೆಗೆ ಪಾಲಿಶ್ ಮಾಡಲು ಸಾಗಿಸಲಾಗುತ್ತಿತ್ತು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿ ಲಾರಿ ಬಿಡಿಸಿಕೊಳ್ಳಲು ಸಿದ್ಧತೆ ನಡೆಸಿದ್ದೇವೆ' ಎಂದು ಲಾರಿ ಮಾಲೀಕ ಆರ್.ಎಸ್. ಮಣಿ ತಿಳಿಸಿದರು.

ನಿಗಮದ ಉಗ್ರಾಣಗಳಿಂದ ಸಗಟು ಸಾಗಣೆದಾರರಿಗೆ ಹಂಚಿಕೆಯಾಗುವ ಪಡಿತರ ಧಾನ್ಯವನ್ನು ನೇರವಾಗಿ ಕಾಳಸಂತೆಗೆ ಸಾಗಿಸಲಾಗುತ್ತದೆ. ಪೊಲೀಸರು, ಆಹಾರ ಇಲಾಖೆ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದಾಗ 'ಪಾಲಿಶ್' ಕಾರಣನೀಡುತ್ತಾರೆ. ಬಂಗಾರಪೇಟೆ, ತುಮಕೂರಿನ ಅಕ್ಕಿ ಗಿರಣಿಗಳನ್ನು ತಲುಪಿದ 'ಪಡಿತರ ಅಕ್ಕಿ' ಹಿಂತಿರುಗಿ ಬರುವುದೇ ಇಲ್ಲ ಎನ್ನುತ್ತಾರೆ ಅಕ್ಕಿ ಕಳ್ಳಸಾಗಣೆ ಕುರಿತು ಸುಳಿವು ನೀಡಿದ್ದ ಮಾಹಿತಿದಾರರು.

ಮಂಗಳೂರು, ಹುಬ್ಬಳ್ಳಿಯಲ್ಲಿ ಮಳೆ

ಮಂಗಳೂರು/ಹುಬ್ಬಳ್ಳಿ: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಉತ್ತರ ಕನ್ನಡದ ಮಲೆನಾಡು ಮತ್ತು ಅರೆ ಮಲೆನಾಡು ಭಾಗಗಳಲ್ಲಿ, ಬೆಳಗಾವಿ, ಹುಬ್ಬಳ್ಳಿ–ಧಾರವಾಡದ ವಿವಿಧೆಡೆ ಬುಧವಾರ ಸಂಜೆ ಮಳೆಯಾಗಿದೆ.

ಸುಳ್ಯ ತಾಲ್ಲೂಕಿನಲ್ಲಿ ಗುಡುಗು, ಸಿಡಿಲಿನ ಆರ್ಭಟದೊಂದಿಗೆ ಧಾರಾಕಾರ ಮಳೆ ಸುರಿದಿದೆ. ಮಂಡೆಕೋಲು, ಅಜ್ಜಾವರ, ಜಾಲ್ಸೂರು ಕಡೆ ಗುಡುಗು, ಸಿಡಿಲಿನ ಅಬ್ಬರ ಜೋರಾಗಿತ್ತು. ಬೆಳ್ಳಾರೆ ಭಾಗದಲ್ಲಿ ಆಲಿಕಲ್ಲು ಮಳೆ ಬಿದ್ದಿದೆ.

ಮುಖ್ಯಮಂತ್ರಿ ಉತ್ತರಕ್ಕೆ ಸಿದ್ದರಾಮಯ್ಯ ವ್ಯಂಗ್ಯ

ಮಾನ ಉಳಿಸಿಕೊಳ್ಳಲು ಸೊಪ್ಪು ಮುಚ್ಚಿಕೊಂಡಂತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇವರ (ಬಿಜೆಪಿ) ಕೈಯಲ್ಲಿ ರಾಜ್ಯ ಸುರಕ್ಷಿತವಾಗಿರುವುದಿಲ್ಲ ಮತ್ತು ಆರ್ಥಿಕವಾಗಿ ದಿವಾಳಿ ಆಗುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಉತ್ತರಕ್ಕೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, 'ಇವರು ತುಪ್ಪನಾದ್ರೂ ತಿನ್ನಲಿ, ಬೆಣ್ಣೆನಾದ್ರೂ ತಿನ್ನಲಿ. ಅಂಕಿ–ಅಂಶ ನೋಡಿದರೆ ಗೊತ್ತಾಗುವುದಿಲ್ಲವೆ' ಎಂದು ಪ್ರಶ್ನಿಸಿದರು.

'ಬಜೆಟ್ ಮೇಲಿನ ನಮ್ಮ ಪ್ರಶ್ನೆಗಳಿಗೆ ಯಡಿಯೂರಪ್ಪ ಅವರು ತರಾತುರಿಯಲ್ಲಿ 24 ಪುಟಗಳ ಉತ್ತರ ಓದಿರುವುದು ಸಂತೆಯಲ್ಲಿ ಮಾನ ಉಳಿಸಿಕೊಳ್ಳಲು ಸೊಪ್ಪು –ಸದೆಗಳನ್ನು ಮೈಗೆ ಕಟ್ಟಿಕೊಂಡಂತಿದೆ. ನಮ್ಮ ಅನೇಕ ಪ್ರಶ್ನೆಗಳಿಗೆ ಮುಖ್ಯಮಂತ್ರಿಯವರು ಉತ್ತರವನ್ನೇ ನೀಡಿಲ್ಲ' ಎಂದರು.

ಸಿದ್ದರಾಮಯ್ಯ

'ಸಾಲ ಸಿಗುತ್ತದೆ ಎಂದು ಸಾಲ ತಂದರೆ ಆಗುವುದಿಲ್ಲ. ಸಾಲ ತೀರಿಸುವ ಶಕ್ತಿ ಇದೆಯಾ ಎಂಬುದನ್ನು ನೋಡಿಕೊಂಡು ಸಾಲ ಮಾಡಬೇಕು' ಎಂದರು.

ರಾಜಸ್ವ ವೆಚ್ಚ ಮತ್ತು ಬದ್ಧತಾ ವೆಚ್ಚ ಕಡಿಮೆ ಮಾಡುವ ಬಗ್ಗೆ ಗಂಭೀರವಾದ ಆಲೋಚನೆಗಳೇ ಇಲ್ಲ. 2022 ರ ಜೂನ್‌ನಿಂದ ಕೇಂದ್ರದಿಂದ ಬರುವ ಜಿಎಸ್‌ಟಿ ಪರಿಹಾರದ ಮೊತ್ತವೂ ನಿಂತು ಹೋಗುತ್ತದೆ. ಇದರಿಂದ ನಮ್ಮ ಮೇಲೆ ಇನ್ನಷ್ಟು ಹೊರೆ ಆಗುತ್ತದೆ. ಕೇಂದ್ರ ಸರ್ಕಾರ ಅನುದಾನವನ್ನೂ ಕಡಿತ ಮಾಡಿದೆ. ಅದನ್ನು ತರುವ ಪ್ರಯತ್ನವನ್ನೂ ಮಾಡಿಲ್ಲ ಎಂದು ಸಿದ್ದರಾಮಯ್ಯ ಹರಿಹಾಯ್ದರು.

ರಾಜ್ಯದಿಂದ ಕೇಂದ್ರಕ್ಕೆ ತೆರಿಗೆ ರೂಪದಲ್ಲಿ ₹2.50 ಲಕ್ಷ ಕೋಟಿ ಹೋಗುತ್ತದೆ. ಆದರೆ ನಮಗೆ ವಾಪಸ್ ಸಿಗುವುದು ₹30 ಸಾವಿರ ಕೋಟಿ ಮಾತ್ರ. ವಾಸ್ತವದಲ್ಲಿ ₹74 ಸಾವಿರ ಕೋಟಿ ಸಿಗಬೇಕು. ರಾಜ್ಯಕ್ಕೆ ನ್ಯಾಯಬದ್ಧವಾಗಿ ಬರಬೇಕಾದ ಹಣವನ್ನು ಪಡೆಯಲು ಇವರು ಪ್ರಯತ್ನಿಸುತ್ತಿಲ್ಲ ಎಂದರು.

ಪ್ರಜಾವಾಣಿ ಸಂದರ್ಶನ

‘ಬಿಜೆಪಿ ಶೈಲಿಯ ರಾಜಕೀಯ ತಮಿಳುನಾಡಿಗೆ ಹಿಡಿಸಲ್ಲ’

ಉದಯನಿಧಿ ಸ್ಟಾಲಿನ್ ಅವರು ಕಣ್ಣವೆ ಮಿಟುಕಿಸುವ ವೇಗದಲ್ಲಿ ಡಿಎಂಕೆಯಲ್ಲಿ ಮುಂಚೂಣಿಗೆ ಬಂದಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಪರ ಪ್ರಚಾರ ನಡೆಸಿದ್ದ ಅವರು, ಕೆಲವೇ ತಿಂಗಳಲ್ಲಿ ಪಕ್ಷದ ಯುವ ಘಟಕದ ಮುಖ್ಯಸ್ಥರಾದರು. ಈಗ ಅವರು ಪಕ್ಷದ ತಾರಾ ಪ್ರಚಾರಕ ಮತ್ತು ಏಪ್ರಿಲ್ 6ರಂದು ನಡೆಯಲಿರುವ ಚುನಾವಣೆಯಲ್ಲಿ ಅಭ್ಯರ್ಥಿ. ‘ಪ್ರಜಾವಾಣಿ’ಯ ಇ.ಟಿ.ಬಿ. ಶಿವಪ್ರಿಯನ್‌ಗೆ ಅವರು ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ..

• 2020ರ ನವೆಂಬರ್‌ನಿಂದಲೇ ಡಿಎಂಕೆ ಪರವಾಗಿ ಪ್ರಚಾರ ಆರಂಭಿಸಿದ್ದೀರಿ. ಜನರ ಪ್ರತಿಕ್ರಿಯೆ ಹೇಗಿದೆ? ನಿಮ್ಮ ಪ್ರಕಾರ, ತಮಿಳುನಾಡಿನ ಜನರ ಮನದಲ್ಲೇನಿದೆ?

ಪ್ರಚಾರ ಆರಂಭಿಸಿದಾಗಲೇ ಒಂದಲ್ಲ ಒಂದು ಕಾರಣ ಕೊಟ್ಟು ಮೂರು ದಿನ ನನ್ನನ್ನು ಪೊಲೀಸರು ವಶದಲ್ಲಿ ಇರಿಸಿಕೊಂಡಿದ್ದರು. ಮೊದಲ ದಿನ ಸಂಜೆ 6 ಗಂಟೆಗೆ ಬಿಟ್ಟಾಗ ನಾನು ನೇರವಾಗಿ ಪ್ರಚಾರ ಆರಂಭಿಸಿದೆ. ಮತ್ತೊಂದು ದಿನ ರಾತ್ರಿ 8.30ಕ್ಕೆ ಬಿಟ್ಟರು. ಆಗಲೂ ಪ್ರಚಾರಕ್ಕೆ ಹೋದೆ. ಮೂರನೇ ದಿನ ಮಧ್ಯ ರಾತ್ರಿ ಒಂದು ಗಂಟೆಗೆ ಬಿಟ್ಟರು. ಆಗ, ನನ್ನನ್ನು ಇರಿಸಿದ್ದ ಕಚೇರಿಯ ಹೊರಭಾಗದಲ್ಲಿ ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ವಶಕ್ಕೆ ಪಡೆಯುವ ಮೂಲಕ ಎಐಎಡಿಎಂಕೆ ಸರ್ಕಾರವು ನನಗೆ ದೊಡ್ಡ ಮಟ್ಟದ ಪ್ರಚಾರವನ್ನೇ ಕೊಟ್ಟಿತು. ಆಡಳಿತ ಬದಲಾಗಬೇಕು ಎಂಬ ಬಯಕೆ ಜನರಲ್ಲಿದೆ. ತಲೈವರ್ (ಎಂ.ಕೆ. ಸ್ಟಾಲಿನ್) ಮುಖ್ಯಮಂತ್ರಿಯಾಗಬೇಕು ಎಂದು ಜನರು ಬಯಸಿದ್ದಾರೆ.

• ಎಐಎಡಿಎಂಕೆ ಮತ್ತು ಬಿಜೆಪಿಯನ್ನು ಒಂದೇ ರೀತಿ ಟೀಕಿಸುತ್ತಿದ್ದೀರಿ. ಎಲ್ಲ ಭಾಷಣಗಳಲ್ಲಿಯೂ ಬಿಜೆಪಿಯ ಉಲ್ಲೇಖ ಇದ್ದೇ ಇರುತ್ತದೆ. ಜನರಲ್ಲಿ ಬಿಜೆಪಿ ವಿರೋಧಿ ಭಾವನೆ ನಿಜವಾಗಿಯೂ ಇದೆಯೇ ಅಥವಾ ವಿರೋಧ ಪಕ್ಷಗಳು ಹಾಗೆ ಬಿಂಬಿಸುತ್ತಿವೆಯೇ?

ಬಿಜೆಪಿ ವಿರೋಧಿ ಭಾವನೆ ಇರೋದು ನಿಜ. ಅದು ಗೊತ್ತಾಗಬೇಕಿದ್ದರೆ ಜನರ ಬಳಿಗೆ ಹೋಗಬೇಕು. ನರೇಂದ್ರ ಮೋದಿ ಅವರಿಗೆ ತಮಿಳುನಾಡಿನ ಜನರು 2019ರ ಲೋಕಸಭಾ ಚುನಾವಣೆಯಲ್ಲಿ ಶಿಕ್ಷೆ ಕೊಟ್ಟಿದ್ದಾರೆ. ಬಿಜೆಪಿಯ ಜನವಿರೋಧಿ ನೀತಿಗಳು, ಅವರ ವರ್ತನೆ, ಬಿಜೆಪಿ ಹೇಳಿದ್ದಕ್ಕೆಲ್ಲ ತಲೆಯಾಡಿಸುವ ಎಐಎಡಿಎಂಕೆ ಸರ್ಕಾರದ ವರ್ತನೆಗಳೆಲ್ಲವೂ ಜನರ ಭಾವನೆಯನ್ನು ಹಸಿರಾಗಿಯೇ ಇರಿಸಿವೆ. ಪೌರತ್ವ (ತಿದ್ದುಪಡಿ) ಕಾಯ್ದೆಯೇ ಇರಲಿ ಕೃಷಿ ಕಾಯ್ದೆಗಳೇ ಇರಲಿ, ತಾನು ಜನವಿರೋಧಿ ಎಂಬುದನ್ನು ಬಿಜೆಪಿ ಸ್ಪಷ್ಟಪಡಿಸುತ್ತಲೇ ಇದೆ. ಬಿಜೆಪಿ ಮತ್ತು ಎಐಎಡಿಎಂಕೆಯನ್ನು ಬೇರೆ ಬೇರೆ ಎಂದು ನೋಡಲಾಗದು. ಕೆ. ಪಳನಿಸ್ವಾಮಿ ಮತ್ತು ಒ. ಪನ್ನೀರಸೆಲ್ವಂ ಅವರನ್ನು ಒಂದಾಗಿಸಿ, ಅವರಿಬ್ಬರ ಕೈಹಿಡಿದು ಮೇಲೆತ್ತಿ ತೋರಿಸುವ ಮೂಲಕ ಎಐಎಡಿಎಂಕೆಯ ನಿಯಂತ್ರಣ ತಮ್ಮಲ್ಲಿಯೇ ಇದೆ ಎಂಬುದನ್ನು ಮೋದಿ ತೋರಿಸಿದ್ದಾರೆ. ಬಿಜೆಪಿ ಹೇಳಿದ ಜಾಗದಲ್ಲಿ ಎಐಎಡಿಎಂಕೆ ಸಹಿ ಮಾಡುತ್ತಿದೆ ಎಂದು ಜನರಿಗೆ ಹೇಳುತ್ತಿದ್ದೇನೆ. ಅವರೂ ಅದನ್ನು ಒಪ್ಪುತ್ತಿದ್ದಾರೆ.

• 2019ರ ಲೋಕಸಭಾ ಚುನಾವಣೆ ಬಳಿಕ ತಮಿಳುನಾಡಿನಲ್ಲಿ ನೆಲೆ ಕಂಡುಕೊಳ್ಳಲಾಗಿದೆ ಎಂದು ಬಿಜೆಪಿ ಹೇಳುತ್ತಿದೆ. ನಿಮ್ಮ ಅಭಿಪ್ರಾಯವೇನು?

ಅವರ ಅಸ್ತಿತ್ವದ ಪ್ರಮಾಣ ಹೆಚ್ಚಿರಬಹುದು. ಬಿಜೆಪಿ ಇಲ್ಲಿ ಕೆಲಸವೇ ಮಾಡುತ್ತಿಲ್ಲ ಅಥವಾ ಇಲ್ಲವೇ ಇಲ್ಲ ಎಂದು ನಾನು ಹೇಳುತ್ತಿಲ್ಲ. ಬಿಜೆಪಿಯ ಪ್ರತಿಪಾದನೆಗಳು ಮತ್ತು ಬಿಜೆಪಿಯ ರಾಜಕೀಯ ಶೈಲಿಯು ಇಲ್ಲಿನ ಜನರಿಗೆ ಹಿಡಿಸುತ್ತಿಲ್ಲ ಎಂದಷ್ಟೇ ನಾನು ಹೇಳುತ್ತಿರುವುದು.

• ಪಕ್ಷದ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಮಗ ಎಂಬ ಕಾರಣಕ್ಕಾಗಿಯೇ ಉದಯನಿಧಿಗೆ ಅನಗತ್ಯ ಮಹತ್ವ ನೀಡಲಾಗುತ್ತಿದೆ ಎಂಬ ಟೀಕೆ ಇದೆ. 2019ರಲ್ಲಿ ನಿಮ್ಮನ್ನು ಯುವ ವಿಭಾಗದ ಕಾರ್ಯದರ್ಶಿ ಮಾಡಲಾಯಿತು. ಈಗ ಸ್ಪರ್ಧಿಸಲು ಟಿಕೆಟ್ ನೀಡಲಾಗಿದೆ. ನಿಮ್ಮ ಪ್ರತಿಕ್ರಿಯೆ ಏನು?

ನನ್ನನ್ನು ಯುವ ವಿಭಾಗದ ಮುಖ್ಯಸ್ಥ ಮಾಡಿದ್ದನ್ನು ಹಲವರು ಟೀಕಿಸಿದ್ದರು. ಈ ಬಗ್ಗೆ ನನ್ನ ಪ್ರತಿಕ್ರಿಯೆ ಕೇಳಿದಾಗ, ನಾನು ಕೆಲಸ ಮಾಡಿ ತೋರಿಸುತ್ತೇನೆ ಎಂದಿದ್ದೆ. ಹುದ್ದೆ ಪಡೆಯುವುದು ಮುಖ್ಯವಲ್ಲ. ಹುದ್ದೆ ಪಡೆದವರು ಸಾಮರ್ಥ್ಯವನ್ನು ಸಾಬೀತು ಮಾಡಬೇಕು. ಡಿಎಂಕೆ ಯುವ ವಿಭಾಗದಲ್ಲಿ ಈಗ 22 ಲಕ್ಷ ಸದಸ್ಯರಿದ್ದಾರೆ. ಇದು ನಾನು ಎರಡು ವರ್ಷದಲ್ಲಿ ಮಾಡಿದ ಕೆಲಸ. ಈಗ ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ತಲೈವರ್ (ಸ್ಟಾಲಿನ್) ಟಿಕೆಟ್ ಕೊಟ್ಟಿದ್ದಾರೆ. ನನ್ನ ರಾಜಕೀಯ ಭವಿಷ್ಯವನ್ನು ಕ್ಷೇತ್ರದ ಜನರು ನಿರ್ಧರಿಸಲಿ. ವಂಶಾಡಳಿತದ ಕಾರಣಕ್ಕೆ ನಾನು ಇಲ್ಲಿದ್ದೇನೆಯೇ, ರಾಜಕೀಯಕ್ಕೆ ನಾನು ಸೂಕ್ತ ಅಲ್ಲವೇ ಎಂಬುದನ್ನು ಜನರು ತೀರ್ಮಾನಿಸಲಿ.

‘ವಂದೇ ಮಾತರಂ’ ಮೂಲಕ ದೇಶವನ್ನೇ ಪಶ್ಚಿಮ ಬಂಗಾಳ ಒಂದಾಗಿಸಿದೆ: ಪ್ರಧಾನಿ

ಹೊರಗಿನವರು ಯಾರು: ಮೋದಿ–ದೀದಿ ಜಗಳಬಂದಿ

ಕಾಂತಿ (ಪಶ್ಚಿಮ ಬಂಗಾಳ) (ಪಿಟಿಐ): ‘ಯಾರು ಹೊರಗಿನವರು’ ಎಂಬುದು ಪಶ್ಚಿಮ ಬಂಗಾಳ ಚುನಾವಣಾ ಪ್ರಚಾರದಲ್ಲಿ ಮತ್ತೆ ಮುನ್ನೆಲೆಗೆ ಬಂದಿದೆ. ಈ ದೇಶದ ಯಾರೂ ಹೊರಗಿನವರಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ. ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಮೋದಿಗೆ ತಿರುಗೇಟು ನೀಡಿ ‘ರಾಜ್ಯದಲ್ಲಿ ಅಶಾಂತಿ ಸೃಷ್ಟಿಸಲೆಂದೇ ಬರುವ ಗೂಂಡಾಗಳಷ್ಟೇ ಹೊರಗಿನವರು’ ಎಂದು ಹೇಳಿದ್ದಾರೆ.

‘ವಂದೇ ಮಾತರಂ’ ಮೂಲಕ ಪಶ್ಚಿಮ ಬಂಗಾಳವು ದೇಶವನ್ನು ಒಂದಾಗಿಸಿದೆ. ಅಂತಹ ನೆಲದಲ್ಲಿ ಮಮತಾ ಅವರು ಜನರಿಗೆ ‘ಹೊರಗಿನವರು’ ಎಂಬ ಹಣೆಪಟ್ಟಿ ಕಟ್ಟುತ್ತಿದ್ದಾರೆ ಎಂದು ಮೋದಿ ಹೇಳಿದ್ದಾರೆ. ಪೂರ್ವ ಮೇದಿನಿಪುರ ಜಿಲ್ಲೆಯ ಕಾಂತಿ ಎಂಬಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ‘ಮಣ್ಣಿನ ಮಗನೊಬ್ಬ’ ಮುಖ್ಯಮಂತ್ರಿ ಆಗಲಿದ್ದಾನೆ ಎಂದರು.

ಪಶ್ಚಿಮ ಬಂಗಾಳ ಎಂದರೆ ಬಂಕಿಮಚಂದ್ರ ಚಟ್ಟೋಪಾಧ್ಯಾಯ, ರವೀಂದ್ರನಾಥ ಟ್ಯಾಗೋರ್ ಮತ್ತು ಸುಭಾಷ್ ಚಂದ್ರ ಬೋಸ್ ಅವರಂತಹ ದೊಡ್ಡವರ ನಾಡು. ಈ ನಾಡಿನಲ್ಲಿ ಯಾವ ಭಾರತೀಯನೂ ಹೊರಗಿನವನಲ್ಲ ಎಂದು ಮೋದಿ ಹೇಳಿದರು.

‘ನಮ್ಮನ್ನು ಪ್ರವಾಸಿಗರು ಎನ್ನಲಾಗುತ್ತಿದೆ. ಗೇಲಿ ಮಾಡಲಾಗುತ್ತಿದೆ, ಅವಮಾನ ಮಾಡಲಾಗುತ್ತಿದೆ. ದೀದಿಯವರೇ (ಮಮತಾ ಬ್ಯಾನರ್ಜಿ), ರವೀಂದ್ರನಾಥರ ಬಂಗಾಳದ ಜನರು ಯಾರನ್ನೂ ಹೊರಗಿನವರು ಎಂದು ಪರಿಗಣಿಸುವುದಿಲ್ಲ’ ಎಂದು ಮೋದಿ, ಮಮತಾಗೆ ತಿರುಗೇಟು ನೀಡಿದರು.

ಪಶ್ಚಿಮ ಬಂಗಾಳ ಚುನಾವಣಾ ಪ್ರಚಾರದಲ್ಲಿ ‘ಹೊರಗಿನವರು–ಸ್ಥಳೀಯರು’ ಎಂಬುದು ದೊಡ್ಡ ಚರ್ಚೆಯ ವಿಷಯವಾಗಿದೆ. ದೆಹಲಿ ಅಥವಾ ಗುಜರಾತ್‌ನಿಂದ ಬಂದ ‘ಹೊರಗಿನವರು’ ರಾಜ್ಯ ಆಳಲು ಅವಕಾಶ ಕೊಡುವುದಿಲ್ಲ ಎಂದು ಮಮತಾ ಅವರು ಪದೇ ಪದೇ ಹೇಳಿದ್ದಾರೆ. ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಉದ್ದೇಶಿಸಿಯೇ ಮಮತಾ ಹೀಗೆ ಹೇಳಿದ್ದಾರೆ.

‘ಬಂಗಾಳಕ್ಕೆ ಬೇಕು ಸ್ವಂತ ಮಗಳು’ ಎಂಬ ಅಭಿಯಾನವನ್ನೂ ಟಿಎಂಸಿ ನಡೆಸಿದೆ. ಬಿಜೆಪಿ ನಾಯಕರನ್ನು ‘ಚುನಾವಣಾ ಪ್ರವಾಸಿಗರು’ ಎಂದು ಕರೆಯಲಾಗಿದೆ.

‘ನೀವು ನಂದಿಗ್ರಾಮದ ಜನರ ಹೆಸರಿಗೆ ಇಡೀ ದೇಶದ ಮುಂದೆ ಮಸಿ ಬಳಿದಿದ್ದೀರಿ. ನಿಮಗೆ ಬಹಳಷ್ಟನ್ನು ಕೊಟ್ಟ ನಂದಿಗ್ರಾಮ ಇದು. ನಂದಿಗ್ರಾಮದ ಜನರು ನಿಮ್ಮನ್ನು ಕ್ಷಮಿಸುವುದಿಲ್ಲ ಮತ್ತು ತಕ್ಕ ಉತ್ತರ ಕೊಟ್ಟೇ ಕೊಡುತ್ತಾರೆ’ ಎಂದು ಮೋದಿ ಹೇಳಿದ್ದಾರೆ. ಇದೇ 10ರಂದು ಮಮತಾ ಅವರು ಗಾಯಗೊಂಡ ಘಟನೆಯನ್ನು ಉಲ್ಲೇಖಿಸಿ ಮೋದಿ ಹೀಗೆ ಹೇಳಿದ್ದಾರೆ.

‘ಸಮಸ್ಯೆ ಸೃಷ್ಟಿಸಲು ಬಂದ ಗೂಂಡಾಗಳು ಹೊರಗಿನವರು’

ವಿಷ್ಣುಪುರ (ಪಿಟಿಐ): ಚುನಾವಣೆಯ ಸಂದರ್ಭದಲ್ಲಿ ರಾಜ್ಯದಲ್ಲಿ ಸಮಸ್ಯೆ ಸೃಷ್ಟಿಸಲು ಬೇರೆ ರಾಜ್ಯಗಳಿಂದ ಕರೆತರಲಾದ ಗೂಂಡಾಗಳನ್ನು ಮಾತ್ರ ತಮ್ಮ ಪಕ್ಷವು ‘ಹೊರಗಿನವರು’ ಎಂದು ಕರೆದಿದೆ. ವರ್ಷಗಳಿಂದ ಇಲ್ಲಿ ನೆಲೆಸಿರುವ ಯಾರನ್ನೂ ಹೊರಗಿನವರು ಎಂದಿಲ್ಲ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ವರ್ಷಗಳಿಂದ ಇಲ್ಲಿ ನೆಲೆಸಿರುವವರನ್ನು ಹೊರಗಿನವರು ಎಂದು ಏಕೆ ಹೇಳಲಿ? ಅವರು ನಮ್ಮ ರಾಜ್ಯದ ಅವಿಭಾಜ್ಯ ಅಂಗ’ ಎಂದು ಮಮತಾ ಹೇಳಿದರು.

‘ಪ್ರಧಾನಿ ಹುದ್ದೆಯ ಬಗ್ಗೆ ಅಪಾರ ಗೌರವ ಇದೆ. ಆದರೆ, ಪ್ರಧಾನಿ ಮೋದಿ ಅವರು ದೊಡ್ಡ ಸುಳ್ಳುಗಾರ ಎಂದು ಹೇಳದೆ ಬೇರೆ ವಿಧಿ ಇಲ್ಲ. ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ ₹15 ಲಕ್ಷ ಜಮಾ ಮಾಡುವ ಮೋದಿ ಅವರ ಭರವಸೆ ಏನಾಯಿತು? ಎಲ್‌ಪಿಜಿ ಸಿಲಿಂಡರ್‌ಗೆ ₹900 ಆಗಿದ್ದು ಏಕೆ? ಸೀಮೆಎಣ್ಣೆ ಕೊರತೆ ಕಾಡುತ್ತಿರುವುದಕ್ಕೆ ಕಾರಣವೇನು? ಉಜ್ವಲಾ ಯೋಜನೆಯ ಗತಿ ಏನಾಗಿದೆ’ ಎಂದು ಮಮತಾ ಪ್ರಶ್ನಿಸಿದ್ದಾರೆ.

‘ತಿಂಗಳುಗಳಿಂದ ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಬಗ್ಗೆ ಮೋದಿ ಮತ್ತು ಅಮಿತ್ ಶಾ ಅವರು ಮೌನವಾಗಿರುವುದು ಏಕೆ? ರೈತರು ಪ್ರತಿಭಟನೆ ನಡೆಸುತ್ತಿರುವ ಸ್ಥಳದಲ್ಲಿ ಕಬ್ಬಿಣದ ಮೊಳೆಗಳನ್ನು ನೆಟ್ಟದ್ದು ಏಕೆ? ಮೋದಿ ಅವರಿಗೆ ದೊಡ್ಡ ಉದ್ಯಮಿಗಳ ಬಗ್ಗೆ ಮಾತ್ರ ಕಾಳಜಿ ಇದೆಯೇ ಹೊರತು ರೈತರ ಬಗ್ಗೆ ಅಲ್ಲ’ ಎಂದು ಅವರು ಟೀಕಿಸಿದ್ದಾರೆ.

‘ನಾನು ಹೇಳಿದ್ದನ್ನು ಮಾಡಿ ತೋರಿಸಿದ್ದೇನೆ. ಮೋದಿ ಅವರು ಕೊಟ್ಟ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲರಾಗಿದ್ದಾರೆ’ ಎಂದು ಮಮತಾ ಹೇಳಿದ್ದಾರೆ.

ಅಧಿಕಾರಕ್ಕೆ ಬಂದರೆ ರಾಜ್ಯ ಸರ್ಕಾರಿ ನೌಕರರ ವೇತನ ಹೆಚ್ಚಳಕ್ಕೆ ಏಳನೇ ವೇತನ ಆಯೋಗ ರಚಿಸಲಾಗುವುದು ಎಂಬ ಬಿಜೆಪಿಯ ಭರವಸೆಯ ಬಗ್ಗೆಯೂ ಮಮತಾ ಹರಿಹಾಯ್ದಿದ್ದಾರೆ. ‘ಸರ್ಕಾರಿ ಸ್ವಾಮ್ಯದ ಉದ್ಯಮಗಳನ್ನು ಮುಚ್ಚುತ್ತಿರುವುದರ ಹಿಂದೆ ಯಾರ ಕುಮ್ಮಕ್ಕು ಇದೆ ಎಂಬುದನ್ನು ಮೊದಲು ಹೇಳಿ? ಲಕ್ಷಾಂತರ ಜನರ ಉದ್ಯೋಗವನ್ನು ನೀವು ಕಸಿದುಕೊಳ್ಳುತ್ತಿದ್ದೀರಿ. ಜನರು ನಿಮ್ಮನ್ನು ನಂಬುವುದಿಲ್ಲ’ ಎಂದರು.

ಲವ್ ಜಿಹಾದ್ ವಿರುದ್ಧ ಶಾಸನ

ಕೇರಳ ಚುನಾವಣೆಗೆ ಎನ್‌ಡಿಎ ಪ್ರಣಾಳಿಕೆ ಬಿಡುಗಡೆ

ತಿರುವನಂತಪುರ (ಪಿಟಿಐ): ಶಬರಿಮಲೆಗೆ ಸಂಬಂಧಿಸಿ ಕಾಯ್ದೆ ಮತ್ತು ಲವ್ ಜಿಹಾದ್ ವಿರುದ್ಧ ಸ್ಪಷ್ಟವಾದ ಶಾಸನ, ಪ್ರತಿ ಕುಟುಂಬದಿಂದ ಕನಿಷ್ಠ ಒಬ್ಬರಿಗೆ ಉದ್ಯೋಗ, ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್...

ಕೇರಳ ವಿಧಾನಸಭಾ ಚುನಾವಣೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಬಿಡುಗಡೆ ಮಾಡಿರುವ ಪ್ರಣಾಳಿಕೆಯಲ್ಲಿ ನೀಡಲಾಗಿರುವ ಭರವಸೆಗಳಿವು. ಕೇಂದ್ರದ ಸಚಿವ ಪ್ರಕಾಶ ಜಾವಡೇಕರ್ ಅವರು ಬುಧವಾರ ಎನ್‌ಡಿಎಯ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

‘ಬಿಜೆಪಿಯ ಪ್ರಣಾಳಿಕೆಯು ಪ್ರಗತಿಪರ, ಕ್ರಿಯಾತ್ಮಕ ಹಾಗೂ ಅಭಿವೃದ್ಧಿಗೆ ಪೂರಕವಾಗುವಂಥದ್ದು. ಕೇರಳವು ಇಂಥ ಪ್ರಣಾಳಿಕೆಗಾಗಿ ದೀರ್ಘಕಾಲದಿಂದ ಕಾಯುತ್ತಿತ್ತು’ ಎಂದು ಜಾವಡೇಕರ್ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದರು.

ಭಯೋತ್ಪಾದನೆ ಮತ್ತು ಹಸಿವುಮುಕ್ತ ಕೇರಳ ನಿರ್ಮಾಣ, ಶಬರಿಮಲೆಯ ಸಂಪ್ರದಾಯವನ್ನು ಕಾಪಾಡಲು ಶಾಸನ, ಭೂರಹಿತ ಎಸ್‌.ಸಿ, ಎಸ್‌.ಟಿ ಸಮುದಾಯದವರಿಗೆ ಐದು ಎಕರೆ ಕೃಷಿ ಭೂಮಿ, ಎಲ್ಲಾ ಬಿಪಿಎಲ್ ಕುಟುಂಬಗಳಿಗೆ ವರ್ಷದಲ್ಲಿ ಗರಿಷ್ಠ ಆರು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡುವ ಭರವಸೆಯನ್ನೂ ನೀಡಲಾಗಿದೆ.

‘ಕೇಂದ್ರದ ಯೋಜನೆಗಳನ್ನೇ ಸ್ವಲ್ಪ ಬದಲಿಸಿ ಜಾರಿ ಮಾಡುವ ಮೂಲಕ, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಯೋಜನೆಗಳ ಶ್ರೇಯಸ್ಸು ತಮ್ಮದೇ ಎಂದು ಹೇಳಿಕೊಳ್ಳುತ್ತಿದ್ದರು’ ಎಂದೂ ಜಾವಡೇಕರ್ ಆರೋಪಿಸಿದರು.

ಪ್ರಕಾಶ್ ಜಾವಡೇಕರ್ ಅವರು ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ಕೇರಳ: ಭ್ರಷ್ಟಾಚಾರದ ವಿರುದ್ಧ ಶಾ ವಾಗ್ದಾಳಿ

ಕೊಚ್ಚಿ/ಕಾಂಞಿರಪಳ್ಳಿ (ಕೇರಳ) (ಪಿಟಿಐ): ಕೇರಳ ವಿಧಾನಸಭಾ ಚುನಾವಣಾ ಪ್ರಚಾರ ಕಣದಲ್ಲಿ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ವಿರುದ್ಧ ವಾಗ್ದಾಳಿ ನಡೆಸಿದರು. ಚಿನ್ನ ಕಳ್ಳಸಾಗಣೆ ಪ್ರಕರಣದ ಪ್ರಮುಖ ಆರೋಪಿ ಜತೆ ಸಿಪಿಎಂ ಮುಖಂಡರು ನಂಟು ಹೊಂದಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಕೇರಳದ ಕಾಂಞಿರಪಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಅವರು ಸಭೆ ನಡೆಸಿದರು. ‘ಮುಖ್ಯಮಂತ್ರಿ ವಿಜಯನ್ ಅವರೇ, ಪ್ರಕರಣದ ಮುಖ್ಯ ಆರೋಪಿ ನಿಮ್ಮ ಕಚೇರಿಯಲ್ಲಿ ಕೆಲಸ ಮಾಡಿರಲಿಲ್ಲವೇ? ಈ ಪ್ರಶ್ನೆಗೆ ನೀವು ಉತ್ತರಿಸಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

ಈ ಆರೋಪಿಗಳಿಗೆ ಸಹಾಯ ಮಾಡಲು ವಿಜಯನ್ ಅವರ ಅಂದಿನ ಪ್ರಧಾನ ಕಾರ್ಯದರ್ಶಿ ಫೋನ್ ಕರೆ ಮಾಡಿದ್ದರೋ ಇಲ್ಲವೋ ಎಂದು ಶಾ ತಿಳಿಯ ಬಯಸಿದರು. ಆರೋಪಿಗಳ ಹೆಸರು ಉಲ್ಲೇಖಿಸದೇ ಮಾತನಾಡಿದ ಅವರು, ‘ಆರೋಪಿ ಮಹಿಳೆಯು ನಿಯಮಿತವಾಗಿ ಮುಖ್ಯಮಂತ್ರಿ ನಿವಾಸಕ್ಕೆ ಏಕೆ ಬರುತ್ತಿದ್ದಳು? ಈ ಆರೋಪಿ ಮಹಿಳೆ ಪ್ರಧಾನ ಕಾರ್ಯದರ್ಶಿಯ ಅನುಮತಿಯ ಮೇರೆಗೆ ರಾಜ್ಯದ ಬೊಕ್ಕಸದಿಂದ ಹಣ ಖರ್ಚು ಮಾಡಿ ವಿದೇಶ ಪ್ರವಾಸ ಮಾಡಿಲ್ಲವೇ ಎಂದು ಶಾ ಪ್ರಶ್ನಿಸಿದರು.

ಇದಕ್ಕೂ ಮುನ್ನ ಕೊಚ್ಚಿ ಸಮೀಪದ ತೃಪ್ಪುಣಿತ್ತುರ ಪಟ್ಟಣದಲ್ಲಿ ಅವರು ರೋಡ್‌ಶೋ ನಡೆಸಿದರು. ಇಲ್ಲಿ ಬಿಜೆಪಿ ಹಿರಿಯ ಮುಖಂಡ ಕೆ.ಎಸ್. ರಾಧಾಕೃಷ್ಣನ್ ಅವರು ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಎಲ್‌ಡಿಎಫ್ ಹಾಗೂ ಯುಡಿಎಫ್‌ಗೆ ಪರ್ಯಾಯದ ಹುಡುಕಾಟದಲ್ಲಿ ಕೇರಳದ ಜನರು ಇದ್ದಾರೆ ಎಂದರು.

ಕೊಲ್ಲಂ ಜಿಲ್ಲೆಯ ಪರವೂರ್‌ನ ಪುಟ್ಟಿಂಗಲ್ ದೇವಸ್ಥಾನದ ಮೈದಾನದಲ್ಲಿ ನಡೆದ ಮತ್ತೊಂದು ಸಭೆಯಲ್ಲಿ ಮಾತನಾಡಿ, ರಾಹುಲ್ ಗಾಂಧಿ ಅವರು ಕೇರಳಕ್ಕೆ ಪ್ರವಾಸಕ್ಕೆ ಆಗಮಿಸುತ್ತಾರೆ ಎಂದು ಲೇವಡಿ ಮಾಡಿದರು.

ಚುನಾವಣಾ ಕಣದಲ್ಲಿ...

- **ಭದ್ರತೆ ಹೆಚ್ಚಳ:** ಬಿಜೆಪಿ ಮುಖಂಡ ಮುಕುಲ್ ರಾಯ್ ಅವರಿಗೆ ಪಶ್ಚಿಮ ಬಂಗಾಳದಲ್ಲಿ ಭದ್ರತೆಯನ್ನು ‘ವೈ +’ ವರ್ಗದಿಂದ ‘ಝಡ್’ ವರ್ಗಕ್ಕೆ ಹೆಚ್ಚಿಸಲಾಗಿದೆ. ಅವರು ಹೊರಗೆ ಓಡಾಡುವ ಸಂದರ್ಭದಲ್ಲಿ 24–30 ಸಶಸ್ತ್ರ ಸಿಬ್ಬಂದಿ ಭದ್ರತೆ ಒದಗಿಸಲಿದ್ದಾರೆ. ಅವರ ನಿವಾಸಕ್ಕೆ ಅದೇ ರೀತಿಯ ಭದ್ರತೆ ದೊರೆಯಲಿದೆ.
- **ಪ್ರಣಾಳಿಕೆ ಬಿಡುಗಡೆ:** ಅಸ್ಸಾಂ ಗಣ ಪರಿಷತ್ (ಎಜಿಪಿ) ವಿಧಾನಸಭಾ ಚುನಾವಣೆಗೆ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಅಸ್ಸಾಂ ಒಪ್ಪಂದ ಜಾರಿಯ ಭರವಸೆ ಕೊಡಲಾಗಿದೆ. ಆದರೆ, ಮಿತ್ರ ಪಕ್ಷ ಬಿಜೆಪಿಯ ಪ್ರಣಾಳಿಕೆಯ ರೀತಿಯಲ್ಲಿಯೇ ಎಜಿಪಿ ಪ್ರಣಾಳಿಕೆಯಲ್ಲೂ ಸಿಎಎ ಬಗ್ಗೆ ಪ್ರಸ್ತಾಪವೇ ಇಲ್ಲ.
- **ಅಖಿಲ್ ಪರ ತಾಯಿ ಪ್ರಚಾರ:** ಸಿಎಎ ವಿರೋಧಿ ಹೋರಾಟಗಾರ ಅಖಿಲ್ ಗೊಗೊಯಿ ಅವರ ತಾಯಿ ಪ್ರಿಯದಾ ಗೊಗೊಯಿ (84) ಅವರು ಮಗನ ಪರವಾಗಿ ಮನೆಮನೆಗೆ ತೆರಳಿ ಪ್ರಚಾರ ನಡೆಸುತ್ತಿದ್ದಾರೆ. ಸಿಎಎ ವಿರುದ್ಧ ಪ್ರತಿಭಟನೆ ಸಂದರ್ಭದಲ್ಲಿ ಬಂಧನಕ್ಕೆ ಒಳಗಾಗಿರುವ ಅಖಿಲ್ ಅವರು ಸೆರೆಮನೆಯಿಂದಲೇ ಅಸ್ಸಾಂ ವಿಧಾನಸಭೆಯ ಶಿವಸಾಗರ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಸಾಮಾಜಿಕ ಕಾರ್ಯಕರ್ತರಾದ ಮೇಧಾ ಪಾಟ್ಕರ್ ಮತ್ತು ಸಂದೀಪ್ ಪಾಂಡೆ, ಪ್ರಿಯದಾ ಜತೆಗೂಡಿದ್ದಾರೆ.
- **ಸೌರವ್ ಬಿಜೆಪಿ ಸೇರಲಿ:** ಆಡಳಿತಾರೂಢ ಟಿಎಂಸಿಯನ್ನು ‘ಕ್ಲೀನ್ ಬೌಲ್’ ಮಾಡಬೇಕಿದ್ದರೆ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಅವರು ಬಿಜೆಪಿ ಸೇರಬೇಕು ಎಂದು ಮಾಜಿ ಕ್ರಿಕೆಟಿಗ ಹಾಗೂ ಮೊಯ್ನಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಶೋಕ್ ದಿಂಡಾ ಹೇಳಿದ್ದಾರೆ. 2019ರಲ್ಲಿ ಬಿಸಿಸಿಐ ಅಧ್ಯಕ್ಷರಾದ ಬಳಿಕ ಸೌರವ್ ಅವರು ಬಿಜೆಪಿ ಜತೆಗೆ ನಂಟು ಹೊಂದಿದ್ದಾರೆ ಎನ್ನಲಾಗಿದೆ. ಆದರೆ, ಪಶ್ಚಿಮ ಬಂಗಾಳದ ಅತ್ಯಂತ ಜನಪ್ರಿಯ ಕ್ರೀಡಾ ತಾರೆ ಸೌರವ್ ಅವರು ಯಾವುದೇ ಪಕ್ಷ ಸೇರುವುದಾಗಿ ಮಾತು ಕೊಟ್ಟಿಲ್ಲ.
- **ಮುಖ್ಯಮಂತ್ರಿ ಆಗಬೇಕೆಂದಿಲ್ಲ:** ರಾಜ್ಯದ ಮುಖ್ಯಮಂತ್ರಿ ಹುದ್ದೆಯ ಬೆನ್ನು ಬಿದ್ದಿಲ್ಲ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಗೌರವ್ ಗೊಗೊಯಿ ಹೇಳಿದ್ದಾರೆ. ಮೂರು ಬಾರಿ ಅಸ್ಸಾಂನ ಮುಖ್ಯಮಂತ್ರಿಯಾಗಿದ್ದ ತರುಣ್ ಗೊಗೊಯಿ ಅವರ ಮಗ ಗೌರವ್. ತಮ್ಮ ತಂದೆ ಪ್ರತಿನಿಧಿಸುತ್ತಿದ್ದ ತಿತಾಬೊರ್ ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ, ಇದು ತಂದೆಯ ಕೊನೆಯಾಸೆಯಾಗಿತ್ತು ಎಂದು ಗೌರವ್ ಹೇಳಿದ್ದಾರೆ. ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ ಅಧಿಕಾಕ್ಕೆ ಬಂದರೆ ಗೌರವ್ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಹೇಳಲಾಗುತ್ತಿದೆ.

ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಚಿತ್ರಬಂಧ

ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಬಂಪರ್ ಬಹುಮಾನ*

ONE PLUS 7 PRO ಮೊಬೈಲ್

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ. ಈ ಸ್ಪರ್ಧೆಯು ಒಂದು ವಾರಕ್ಕೆ ಮೂರು ದಿನಗಳು ಮಾತ್ರ ಪ್ರಕಟವಾಗುವುದು.

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಜಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8 ರೊಳಗೆ 9246020020 ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

*ಷರತ್ತುಗಳು ಅನ್ವಯ

ನಿನ್ನೆಯ ಉತ್ತರ: A761 B943 C285

‘ಮಮತಾ ಬರ್ಮುಡಾ ಹಾಕಿಕೊಳ್ಳಲಿ’

ಪುರೂಲಿಯಾ: ‘ಮಮತಾ ಬ್ಯಾನರ್ಜಿ ಅವರು ಬರ್ಮುಡಾ ಧರಿಸಲಿ’ ಎಂದು ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ ದಿಲೀಪ್ ಘೋಷ್ ಹೇಳಿದ್ದು ಭಾರಿ ವಿವಾದಕ್ಕೆ ಕಾರಣವಾಗಿದೆ. ಟಿಎಂಸಿ ನಾಯಕರು ಇದನ್ನು ವಿಕೃತ ಎಂದಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲೂ, ದಿಲೀಪ್‌ರದ್ದು ವಿಕೃತ ಮನಸ್ಸು ಎಂದು ಟೀಕಿಸಲಾಗಿದೆ.

ದಿಲೀಪ್ ಘೋಷ್

ಪಶ್ಚಿಮ ಬಂಗಾಳದ ಪುರೂಲಿಯಾದಲ್ಲಿ ಮಂಗಳವಾರ ನಡೆದಿದ್ದ ಪ್ರಚಾರ ಸಭೆಯಲ್ಲಿ ದಿಲೀಪ್ ಅವರು ಮಾತನಾಡಿದ್ದರು. ‘ಮಮತಾ ಬ್ಯಾನರ್ಜಿ ಅವರ ಕಾಲಿನ ಪ್ಲಾಸ್ಟರ್ ಅನ್ನು ಕತ್ತರಿಸಲಾಗಿದೆ. ಈಗ ಕ್ರೇಪ್ ಬ್ಯಾಂಡ್ ಹಾಕಲಾಗಿದೆ. ಅವರು ಈಗ ಎಲ್ಲರಿಗೂ ತಮ್ಮ ಕಾಲನ್ನು ತೋರಿಸುತ್ತಿದ್ದಾರೆ. ಅವರು ಸೀರೆ ಉಡುತ್ತಾರೆ, ಆದರೆ ಅವರ ಕಾಲು ಎಲ್ಲರಿಗೂ ಕಾಣುತ್ತದೆ. ಈ ರೀತಿ ಸೀರೆ ಉಡುವವರನ್ನು ನಾನು ನೋಡಿಯೇ ಇಲ್ಲ. ಕಾಲನ್ನು ಎಲ್ಲರಿಗೂ ತೋರಿಸಲೇಬೇಕು ಎಂದು ನಿಮ್ಮ ಮನಸ್ಸಿನಲ್ಲಿ ಇದ್ದರೆ, ಬರ್ಮುಡಾ ಹಾಕಿಕೊಳ್ಳಿ. ಆಗ ಎಲ್ಲರೂ ಕಾಲನ್ನು ಚೆನ್ನಾಗಿ ನೋಡುತ್ತಾರೆ’ ಎಂದು ದಿಲೀಪ್ ಹೇಳಿದ್ದರು.

‘ಸೀರೆ ಏಕೆ ಉಟ್ಟಿದ್ದೀರಿ? ನಿಮ್ಮ ಕಾಲು ಕಾಣುವಂತೆ ಬರ್ಮುಡಾ ಹಾಕಿಕೊಳ್ಳಿ ಎಂದು ಮಮತಾ ದೀದಿ ಅವರಿಗೆ ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ ಹೇಳಿದ್ದಾರೆ. ಪಶ್ಚಿಮ ಬಂಗಾಳವನ್ನು ಗೆಲ್ಲುತ್ತೇವೆ ಎಂದು ವಿಕೃತ ಮನಸ್ಸಿನ ಈ ಕೋತಿಗಳು ಎಣಿಸಿವೆ’ ಎಂದು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಟ್ವೀಟ್ ಮಾಡಿದ್ದಾರೆ.

ಬೆಳಗಾವಿ: ಸತೀಶ ಜಾರಕಿಹೊಳಿ ಸ್ಪರ್ಧೆ

ಬೆಂಗಳೂರು: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸತೀಶ ಜಾರಕಿಹೊಳಿ ಸ್ಪರ್ಧಿಸಲಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಬೆಳಗಾವಿ ಸೇರಿದಂತೆ ಮುಂಬರುವ ಉಪಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಗೆಲುವು ನಿಶ್ಚಿತ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಪಕ್ಷ ಅವಕಾಶ ಕೊಟ್ಟರೆ ಸ್ಪರ್ಧೆ: ಶ್ರದ್ಧಾ ಅಂಗಡಿ

ಬೆಳಗಾವಿ: ‘ಪಕ್ಷ ಟಿಕೆಟ್ ನೀಡಿದರೆ ಸ್ಪರ್ಧಿಸಲು ಮಾನಸಿಕವಾಗಿ ಸಿದ್ಧಳಿದ್ದೇನೆ. ಪಕ್ಷದ ನಿರ್ಧಾರಕ್ಕೆ ಬದ್ಧ’ ಎಂದು ದಿವಂಗತ ಸುರೇಶ ಅಂಗಡಿ ಪುತ್ರಿ ಹಾಗೂ ಸಚಿವ ಜಗದೀಶ ಶೆಟ್ಟರ್ ಸೊಸೆ ಶ್ರದ್ಧಾ ಅಂಗಡಿ ತಿಳಿಸಿದರು.

ಇಲ್ಲಿನ ಸಾಂಬ್ರಾ ವಿಮಾನನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, ‘ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ನಮ್ಮ ಕುಟುಂಬಕ್ಕೆ ಟಿಕೆಟ್ ನೀಡಬೇಕು ಎಂಬ ಒತ್ತಡವಿದೆ. ಈ ವಿಷಯ ಈಚೆಗೆ ನಡೆದ ಪಕ್ಷದ ಸಮನ್ವಯ ಸಮಿತಿ ಸಭೆಯಲ್ಲೂ ಚರ್ಚೆಯಾಗಿದೆ. ಮನವರಿಕೆಯನ್ನೂ ಮಾಡಿಕೊಡಲಾಗಿದೆ. ಇತರ ಅಭ್ಯರ್ಥಿಗಳ ಹೆಸರುಗಳೂ ಪ್ರಸ್ತಾಪವಾಗಿವೆ. ಹೈಕಮಾಂಡ್ ಯಾವ ನಿರ್ಧಾರ ಕೈಗೊಳ್ಳುತ್ತದೆ ಎನ್ನುವುದು ಇನ್ನೆರಡು ದಿನಗಳಲ್ಲಿ ಗೊತ್ತಾಗಲಿದೆ’ ಎಂದರು.

‘ತಂದೆ ಜನರೊಂದಿಗೆ ಒಳ್ಳೆಯ ಸಂಪರ್ಕ ಇಟ್ಟುಕೊಂಡಿದ್ದರು. ಅವರಿಲ್ಲದಿದ್ದರೂ ಜನರು ನಮ್ಮನ್ನು ಕಾರ್ಯಕ್ರಮಗಳಿಗೆ ಕರೆಯುತ್ತಿದ್ದಾರೆ. ಗೌರವ ಕೊಡುತ್ತಿದ್ದಾರೆ. ಚುನಾವಣೆಗೆ ಸ್ಪರ್ಧಿಸಬೇಕೆಂಬ ಒತ್ತಡ ಅಭಿಮಾನಿಗಳಿಂದಲೂ ಇದೆ’ ಎಂದು ಹೇಳಿದರು.

‘ನಾನು ದೆಹಲಿಗೆ ಹೋಗಿರಲಿಲ್ಲ. ಬೆಂಗಳೂರಿಗೆ ಹೋಗಿದ್ದೆ. ಟಿಕೆಟ್ ವಿಚಾರದಲ್ಲಿ ವರಿಷ್ಠರು ಕರೆ ಮಾಡಿ ಮಾತಾಡಿಲ್ಲ’ ಎಂದು ಪ್ರತಿಕ್ರಿಯಿಸಿದರು.

ರವಿಕಾಂತ ಪಾಟೀಲ ಜೆಡಿಎಸ್ ಸೇರ್ಪಡೆ

ಸಿಂದಗಿ (ವಿಜಯಪುರ): ಇಂಡಿ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೂರು ಬಾರಿ ಜಯಗಳಿಸಿದ್ದ ಮಾಜಿ ಶಾಸಕ ರವಿಕಾಂತ ಪಾಟೀಲ ಜೆಡಿಎಸ್ ಸೇರ್ಪಡೆಯಾದರು.

ಇಲ್ಲಿಯ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ಬುಧವಾರ ನಡೆದ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಪಕ್ಷದ ಜಿಲ್ಲಾ ಉಸ್ತುವಾರಿ ಹಣಮಂತ ಮಾವಿನಮರದ, ಜಿಲ್ಲಾ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ಯಂಡಿಗೇರಿ ಪಕ್ಷದ ಧ್ವಜವನ್ನು ನೀಡಿ ಪಕ್ಷಕ್ಕೆ ಸ್ವಾಗತಿಸಿದರು.

ಮಾಲಾ, ಪ್ರತಾಪಗೌಡ ನಾಮಪತ್ರ ಸಲ್ಲಿಕೆ

ರಾಯಚೂರು/ಬೀದರ್: ಮಸ್ಕಿ ವಿಧಾನ ಸಭಾ ಕ್ಷೇತ್ರದ ಉಪ ಚನಾವಣೆಗೆ ಬಿಜೆಪಿ ಟಿಕೆಟ್ ಘೋಷಣೆಗೂ ಮುನ್ನವೇ ಪ್ರತಾಪಗೌಡ ಪಾಟೀಲ ನಾಮಪತ್ರ ಸಲ್ಲಿಸಿದರು. ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಸಹ ಉಮೇದುವಾರಿಕೆ ಸಲ್ಲಿಸಿದರು.

ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಮಾಲಾ (ಮಲ್ಲಮ್ಮ) ನಾರಾಯಣರಾವ್, ಹಿಂದೂಸ್ತಾನ್ ಜನತಾ ಪಾರ್ಟಿಯ ವೆಂಕಟೇಶ ಸ್ವಾಮೀಜಿ ಹಾಗೂ ಆಲ್ ಇಂಡಿಯಾ ಮುಸ್ಲಿಮ್ ಲೀಗ್ (ಸೆಕ್ಯುಲರ್)ನಿಂದ ಫರ್ಜಾನಾ ಬೇಗಂ ನಾಮಪತ್ರ ಸಲ್ಲಿಸಿದರು.

ಈವರೆಗೆ ಮಸ್ಕಿಗೆ ಇಬ್ಬರು ಹಾಗೂ ಬಸವಕಲ್ಯಾಣಕ್ಕೆ ನಾಲ್ವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದಂತಾಗಿದೆ.

ಮಾಲಾ ಬಳಿ 1 ಕೆ.ಜಿ ಚಿನ್ನ, 10 ಕೆ.ಜಿ ಬೆಳ್ಳಿ

ಬೀದರ್: ಬಸವಕಲ್ಯಾಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾಲಾ (ಮಲ್ಲಮ್ಮ) ನಾರಾಯಣರಾವ್ ಅವರು ಒಂದು ಕೆ.ಜಿ ಚಿನ್ನ, 10 ಕೆ.ಜಿ ಬೆಳ್ಳಿ ಹೊಂದಿದ್ದಾರೆ. ಚಿನ್ನ–ಬೆಳ್ಳಿಯ ಮೌಲ್ಯ ₹75 ಲಕ್ಷ ಎಂದು ಅವರು ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಇವರು ಹಾಗೂ ಇಬ್ಬರು ಪುತ್ರರ ಹೆಸರಿನಲ್ಲಿ ಒಟ್ಟಾರೆ 10 ಎಕರೆ ಕೃಷಿ ಜಮೀನು, ಬೀದರ್‌ನ ಕೆಎಚ್‌ಬಿ ಕಾಲೊನಿ, ಯಾದಗಿರಿಯಲ್ಲಿ ನಿವೇಶನ ಹಾಗೂ ಬೆಂಗಳೂರಿನಲ್ಲಿ ಮನೆ ಇದೆ. ಇವರ ಕುಟುಂಬದ ಒಟ್ಟಾರೆ ಸ್ಥಿರ ಮತ್ತು ಚರ ಆಸ್ತಿಯ ಮೌಲ್ಯ ₹7.02 ಕೋಟಿ.

ಪ್ರತಾಪಗೌಡ ಆಸ್ತಿ ಹೆಚ್ಚಳ

ರಾಯಚೂರು: ಮಸ್ಕಿ ಕ್ಷೇತ್ರಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಪ್ರತಾಪಗೌಡ ಪಾಟೀಲ ಅವರು, ಶಾಸಕರಾಗಿ ಮೊದಲ ಬಾರಿ ಆಯ್ಕೆಯಾದ ಅವಧಿಯಿಂದ ಈವರೆಗೆ ಆಸ್ತಿ ಒಟ್ಟು ₹5 ಕೋಟಿಯಷ್ಟು ಹೆಚ್ಚಳವಾಗಿದೆ.

ಸ್ಥಿರಾಸ್ತಿ ಮತ್ತು ಚರಾಸ್ತಿ ಒಟ್ಟು ₹5.92 ಕೋಟಿ ಇದೆ ಎಂದು ಅವರು ಪ್ರಮಾಣಪತ್ರದಲ್ಲಿ ಉಲ್ಲೇಖಿಸಿದ್ದಾರೆ. 2008 ರಲ್ಲಿ ಮೊದಲ ಬಾರಿ ಚುನಾವಣೆಗೆ ಸ್ಪರ್ಧಿಸುವಾಗ ಅವರ ಒಟ್ಟು ಆಸ್ತಿ ₹98 ಲಕ್ಷ ಇತ್ತು.

ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ₹1.62 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾಗಿ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಸಂದರ್ಶನ ಎದುರಿಸಲು ಬೇಕು

ಇಂಗ್ಲಿಷ್ ಸಂಭಾಷಣೆ ಕಲೆ

ಶ್ರೀಧರ್ ಎಸ್.

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅರ್ಹತೆ ಪಡೆದ ನಂತರ ಸಂದರ್ಶನಗಳನ್ನು ಎದುರಿಸಬೇಕಾಗುತ್ತದೆ. ಇದು ಆಯ್ಕೆ ಪ್ರಕ್ರಿಯೆಯ ಪ್ರಮುಖ ಭಾಗವೂ ಒಂದು. ಆದರೆ ಇಂಗ್ಲಿಷ್‌ನಲ್ಲಿ ಮಾತನಾಡಲು ಕೆಲವರಿಗೆ ಪಾಂಡಿತ್ಯ ಇರುವುದಿಲ್ಲ. ಹೀಗಾಗಿ ಇಂತಹ ಸ್ಪರ್ಧಾರ್ಥಿಗಳು ಸಂದರ್ಶನದಲ್ಲಿ ಹಿನ್ನಡೆ ಅನುಭವಿಸುವ ಸಾಧ್ಯತೆ ಹೆಚ್ಚು.

ಬ್ಯಾಂಕ್ ಪರೀಕ್ಷೆ ತೆಗೆದುಕೊಂಡರೆ ಲಿಖಿತಪರೀಕ್ಷೆ (ಸಿಡಬ್ಲುಇ) ಗಿಂತ ಸಾಕಷ್ಟು ಸಮಯವನ್ನು ಸಂದರ್ಶನಕ್ಕೆ ತಯಾರಾಗಲು ಮೀಸಲಿಡುವುದು ಸೂಕ್ತ. ಪ್ರಿಲಿಮ್ಸ್ ಹಾಗೂ ಮೇನ್ಸ್ ಪರೀಕ್ಷೆಯಲ್ಲಿ ಅರ್ಹತೆ ಗಳಿಸಿದ ನಂತರ ಸಂದರ್ಶನಕ್ಕೆ ತಯಾರಿ ನಡೆಸುವುದಕ್ಕಿಂತ ಸಮಯ ಸಿಕ್ಕಾಗಲೆಲ್ಲ ಸಿದ್ಧತೆ ನಡೆಸಿದರೆ ಅನುಕೂಲ.

ಸಂದರ್ಶನ ಎದುರಿಸುವಾಗ ಇಂಗ್ಲಿಷ್‌ನಲ್ಲಿ ಸುಲಲಿತವಾಗಿ ಮಾತನಾಡುವುದು ಹೇಗೆ ಎಂಬುದರ ಬಗ್ಗೆ ಕೆಲವು ಸಲಹೆಗಳು ಇಲ್ಲಿವೆ.

> ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಂದರ್ಶನ ಎದುರಿಸಬೇಕಾದರೆ ಇಂಗ್ಲಿಷ್‌ನಲ್ಲಿ ಸುಲಲಿತವಾಗಿ ಮಾತನಾಡುವುದು ಕೂಡ ಮುಖ್ಯ. ಸರಳ ಹಾಗೂ ಸುಲಭ ಸಂವಹನವನ್ನು ರೂಢಿಸಿಕೊಂಡರೆ ಆಯ್ಕೆ ಕಟ್ಟಿಟ್ಟ ಬುತ್ತಿ.

ಮಾತನಾಡುವಾಗ ಒಂದೇ ರೀತಿಯ ವೇಗವನ್ನು ಕಾಯ್ದುಕೊಳ್ಳಿ

ಇಂಗ್ಲಿಷ್ ಅನ್ನು ನಿರರ್ಗಳವಾಗಿ ಮಾತನಾಡಲು ಬಂದರೆ ಆ ಭಾಷೆಯ ಮೇಲೆ ಚೆನ್ನಾಗಿ ಹಿಡಿತವಿದೆ ಎಂದು ಕೆಲವರು ಅಂದುಕೊಳ್ಳಬಹುದು. ಆದರೆ ಇದು ತಪ್ಪು. ಗಡಿಬಿಡಿಯಲ್ಲಿ ಇಂಗ್ಲಿಷ್ ಮಾತನಾಡುವುದಕ್ಕಿಂತ ಸಂದರ್ಶನದುದ್ದಕ್ಕೂ ನಿಗದಿತ ವೇಗವನ್ನು ಅಂದರೆ ಮಧ್ಯಮ ವೇಗವನ್ನು ಕಾಯ್ದುಕೊಂಡು ಮಾತನಾಡುವುದು ಸೂಕ್ತ. ನಮ್ಮ ಮಾತೃಭಾಷೆಯಲ್ಲಿ ಮಾತನಾಡಿದಂತೆ ಇದೂ ಕೂಡ. ಇದರಿಂದ ವೇಗವಾಗಿ ಮಾತನಾಡಿ ತಪ್ಪು ನುಸುಳುವುದು ಅಥವಾ ನಿಧಾನವಾಗಿ ಮಾತನಾಡಿ ಭಾಷೆಯ ಮೇಲೆ ಹಿಡಿತವಿಲ್ಲ ಎಂದು ತೋರಿಸಿಕೊಳ್ಳುವುದು ತಪ್ಪುತ್ತದೆ.

ಸಂದರ್ಶನದಲ್ಲಿ ಮಾತಿನ ಮೇಲೆ ಹಿಡಿತ ಹಾಗೂ ನಿರರ್ಗಳತೆ ತುಂಬಾ ಮುಖ್ಯ. ಈ ನಿರರ್ಗಳತೆಯು ಮೃದುವಾದ ಮಾತು, ನಿರಂತರ ಮಾತಿನ ಹರಿವು ಹಾಗೂ ಸುಸಂಬದ್ಧತೆಯ ಮೇಲೆ ನಿರ್ಧರಿಸಬಹುದು.

ಮೃದುತ್ವ: ಇದು ಅಲ್ಪವಿರಾಮ, ಮಧ್ಯೆ ಮಧ್ಯೆ ಬಿಡುವು ಕೊಡುವುದು, ಪುನರುಚ್ಚರಿಸುವುದು ಹಾಗೂ ನಮಗೆ ನಾವೇ ಸರಿಪಡಿಸಿಕೊಳ್ಳುವುದನ್ನು ಅವಲಂಬಿಸಿದೆ. ಇದು ಸ್ಪರ್ಧಾರ್ಥಿಯ ಅಥವಾ ಅಭ್ಯರ್ಥಿಯ ಮಾತಿನ ಮೃದುತ್ವವನ್ನು ಹೇಳುತ್ತದೆ. ಹೀಗಾಗಿ ಸ್ಪರ್ಧಾರ್ಥಿಯು ಸುದೀರ್ಘವಾದ ವಿರಾಮ ನೀಡುವುದನ್ನು, ಪುನರುಚ್ಚಾರ ಮಾಡುವುದನ್ನು ಬಿಡಬೇಕು.

ಮಾತಿನ ಹರಿವು: ಕೆಲವೊಂದು ಸಂಕೀರ್ಣವಾದ ಪ್ರಶ್ನೆಗಳಿಗೆ ವಿವರವಾದ ಹಾಗೂ ಉದ್ದವಾದ ಉತ್ತರ ನೀಡುವಾಗ ನಿರಂತರ ಮಾತಿನ ಹರಿವು ಅಭ್ಯರ್ಥಿಯ ಸಾಮರ್ಥ್ಯವನ್ನು ಒರೆಗೆ ಹಚ್ಚುತ್ತದೆ. ಉದ್ದವಾದ ಉತ್ತರದ ಅಗತ್ಯವಿದ್ದಾಗ ಅಭ್ಯರ್ಥಿಯು ಒಂದೇ ಶಬ್ದದ ಉತ್ತರ ನೀಡುವುದನ್ನು ಅಥವಾ ಚಿಕ್ಕದಾಗಿ ಉತ್ತರಿಸುವುದನ್ನು ಬಿಡಬೇಕು.

ಸುಸಂಬದ್ಧತೆ: ಮಾತನಾಡುವಾಗ ಸ್ಪರ್ಧಾರ್ಥಿಯು ಒಂದು ಸೈದ್ಧಾಂತಿಕವಾದ ರೀತಿಯಲ್ಲಿ ಮಾತನಾಡಬೇಕು. ಇದು ನಿಮ್ಮ ಸಾಂಸ್ಥಿಕ ಕೌಶಲವನ್ನು ಪ್ರತಿಬಿಂಬಿಸುತ್ತದೆ. ಇದರ ಜೊತೆಗೆ ನಮ್ಮ ನಿಲುವನ್ನು ಜನರಿಗೆ ಹೇಗೆ ಮನದಟ್ಟು ಮಾಡಿಕೊಡುತ್ತೀರಿ ಎಂಬುದರ ದ್ಯೋತಕವಿದು.

ವ್ಯಾಕರಣ ಹಾಗೂ ಕಾಲದ ನಿಯಮಗಳ ಬಗ್ಗೆ ಯೋಚಿಸುವುದನ್ನು ಬಿಡಿ

ವ್ಯಾಕರಣ ಹಾಗೂ ಕಾಲಗಳ ಬಗ್ಗೆ ಜಾಸ್ತಿ ಯೋಚಿಸುತ್ತ ಹೋದರೆ ಮಾತಿನ ಓಘದ ಮೇಲೆ ಪರಿಣಾಮ ಬೀರಬಹುದು. ಶಬ್ದ ಭಂಡಾರದ ಕೊರತೆಯಿದ್ದರೆ, ಅಂದರೆ ಸೂಕ್ತವಾದ ಶಬ್ದಗಳು ತಕ್ಷಣಕ್ಕೆ ನೆನಪಿಗೆ ಬರದಿದ್ದರೆ ಅಂಥವರು ಚಿಕ್ಕದಾದ ಹಾಗೂ ಸರಳವಾದ ವಾಕ್ಯಗಳಲ್ಲಿ ಮಾತನಾಡುವುದು ಉತ್ತಮ. ಇದರಿಂದ ತಪ್ಪು ಮಾಡುವುದು ಕಡಿಮೆಯಾಗಿ ತಮ್ಮ ನಿಲುವನ್ನು ಸಮರ್ಥವಾಗಿ, ಸ್ಪಷ್ಟವಾಗಿ ಹೇಳಲು ಸಾಧ್ಯ. ಹಾಗೆಯೇ ಪ್ರಸೆಂಟ್ ಕಂಟಿನ್ಯುಯಸ್ ಟೆನ್ಸ್‌ನಲ್ಲಿ ಮಾತನಾಡುವುದು ಸೂಕ್ತವಲ್ಲ. ಇದರ ಬಳಕೆ ಯಾವತ್ತೂ ಕಷ್ಟ.

ಇನ್ನೊಂದು ವಾಕ್ಯಕ್ಕೆ ಜೋಡಿಸುವಂತಹ ಶಬ್ದಗಳನ್ನು ಬಳಸಬಹುದು. ಕೆಲವೊಂದು ಶಬ್ದಗಳನ್ನು, ನುಡಿಗಟ್ಟುಗಳನ್ನು ಬಳಸಿದರೆ ಮಾತಿನ ನಿರಂತರತೆಯನ್ನು ಕಾಪಾಡಿಕೊಳ್ಳಬಹುದು. ಮಧ್ಯೆ ಏನೂ ಮಾತಿಲ್ಲದೆ ಮೌನವಾಗಿ ಕೂರುವುದನ್ನು ತಪ್ಪಿಸಬಹುದು.

ಮಾತನಾಡುವಾಗ ಮಧ್ಯೆ ಯೋಚಿಸುವುದಕ್ಕೆ ಸಮಯ ಬೇಕಿದ್ದರೆ ಅದೇ ವಿಷಯವನ್ನು ವಿಸ್ತರಿಸಲು ಕೆಲವು ವಾಕ್ಯಗಳನ್ನು ಬಳಸಬಹುದು. ಉದಾಹರಣೆಗೆ 'ಸಿಮಿಲರ್ ಟು ಅಥವಾ ಸಚ್ ಆ್ಯಸ್' ಆದರೆ ಇದನ್ನು ಹೆಚ್ಚು ಬಳಸಬೇಡಿ. ಸ್ಪರ್ಧಾರ್ಥಿಗೆ ಆತ್ಮವಿಶ್ವಾಸದ ಕೊರತೆಯಿರಬಹುದು ಎಂದು ಸಂದರ್ಶನ ನಡೆಸುವವರು ತಿಳಿದುಕೊಳ್ಳಬಹುದು.

ವಿದೇಶಿ ಉಚ್ಚಾರಣೆ ಬೇಡ

ಸಂದರ್ಶಕರ ಮೇಲೆ ಪ್ರಭಾವ ಬೀರಲು ಕೆಲವರು ವಿದೇಶಿ ಉಚ್ಚಾರಣೆಯಲ್ಲಿ ಮಾತನಾಡಲು ಪ್ರಯತ್ನಿಸಬಹುದು. ಆದರೆ ಇದು ಖಂಡಿತ ಕೂಡದು. ಇದು ಸ್ಪರ್ಧಾರ್ಥಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಹೀಗಾಗಿ ನಿಮ್ಮದೇ ಆದ ರೀತಿಯಲ್ಲಿ ಮಾತನಾಡಿ. ಮಾತು ವಿಚಿತ್ರವಾಗಿದೆಯಲ್ಲ ಎಂಬ ಭಾವನೆ ಬರುವಂತಿರಬಾರದು.

ನಿಮಗೆ ಗೊತ್ತಿಲ್ಲದ ವಿಶೇಷಣಗಳನ್ನು ಬಳಸಲು ಹೋಗಬೇಡಿ. ಯಾವುದೋ ಶಬ್ದವನ್ನು ಸರಿಯಾಗಿ ಉಚ್ಚರಿಸಲು ಬರದಿದ್ದರೆ ಅದನ್ನು ಬಳಸುವುದು ಸೂಕ್ತವಲ್ಲ.

ಪರೀಕ್ಷೆಯಲ್ಲಿ ಯಶಸ್ಸಿಗೆ ಇತಿಹಾಸದ ಅಧ್ಯಯನ

ಬಿ.ಆರ್. ಮೋಹನ್‌ಕುಮಾರ್

ಇತಿಹಾಸವನ್ನು ಓದುವುದು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಮಾತ್ರವಲ್ಲ, ಪ್ರಾಚೀನ ಕಾಲದಿಂದ ಹಿಡಿದು ಸ್ವಾತಂತ್ರ್ಯದ ನಂತರ ಹಾಗೂ ಪ್ರಸ್ತುತ ಭಾರತ ಹೇಗೆ ರೂಪುಗೊಂಡಿದೆ ಎಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲು ಅವಶ್ಯಕ. ಇತಿಹಾಸ ಎಲ್ಲಾ ಅನ್ವಯಿಕ ಶಾಸ್ತ್ರಗಳೊಂದಿಗೆ ಕ್ರಮಬದ್ಧವಾಗಿ ಸಂಬಂಧ ಹೊಂದಿದ್ದು, ಆ ವಿಭಾಗಗಳಲ್ಲಿ ಕಾಲಕಾಲಕ್ಕೆ ಜರುಗುವ ಮಹತ್ವದ ಘಟನಾವಳಿಗಳು, ತ್ಯಾಗ ಬಲಿದಾನಗಳು, ಸಾಧನೆಗಳು, ತಿರುವುಗಳು, ಸಂಶೋಧನೆಗಳ ಫಲ ಇವುಗಳೆಲ್ಲವನ್ನೂ ದಾಖಲಿಸುತ್ತದೆ. ಇದು ಕೇವಲ ಚಕ್ರವರ್ತಿ, ರಾಜರು, ರಾಜಕೀಯ ನಾಯಕರ ಕಥೆಯಾಗಿರದೇ, ಆ ಕಾಲಘಟ್ಟದಲ್ಲಿನ ಮಹತ್ತರ ವಿಷಯಗಳಾಗಿದ್ದು, ಕಾಲಾನುಕ್ರಮಣಿಕೆಯಲ್ಲಿ ಹೊಂದಿಸಿಕೊಂಡು, ಪ್ರಸ್ತುತದೊಂದಿಗೆ ತುಲಾನಾತ್ಮಕ ಅಧ್ಯಯನ ಮಾಡಿದರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಖಂಡಿತ.

ಇತಿಹಾಸದಿಂದ ಪ್ರತಿ ಪರೀಕ್ಷೆಯಲ್ಲಿ ಕನಿಷ್ಠ 15 ರಿಂದ 20 ಪ್ರಶ್ನೆಗಳನ್ನು ಕೇಳಲಾಗುತ್ತಿದ್ದು, ವಿಷಯವನ್ನು ಕ್ರಮಬದ್ಧವಾಗಿ ಓದುವುದರಿಂದ ಉತ್ತಮ ಅಂಕಗಳನ್ನು ಪಡೆಯಬಹುದು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದುವ ಮುನ್ನ ಪಠ್ಯಕ್ರಮದ ಪ್ರತಿಯನ್ನು ಇಟ್ಟುಕೊಂಡು, ಹಲವಾರು ಬಾರಿ ಓದಿ ಮನನ ಮಾಡಿಕೊಂಡು, ಓದಲು ಬೇಕಾಗುವ ಪುಸ್ತಕಗಳನ್ನು ಸಂಗ್ರಹಿಸಿಟ್ಟುಕೊಳ್ಳಬೇಕು. ಇತಿಹಾಸದ ಮೂಲ ವಿಷಯಗಳಿಗೆ ರಾಜ್ಯ ಸರ್ಕಾರದ 6 ರಿಂದ 12ನೇ ತರಗತಿಯವರೆಗಿನ ಪಠ್ಯ ಪುಸ್ತಕಗಳು (ktbs.kar.nic.in ನಲ್ಲಿ ಲಭ್ಯ), ಎರಡು ಮಾಧ್ಯಮಗಳಲ್ಲಿ ಲಭ್ಯವಿದ್ದು, ಇಂಗ್ಲಿಷ್ ಮಾಧ್ಯಮದಲ್ಲಿರುವ ಹಳೆಯ ಮತ್ತು ಹೊಸ ರೆಫರೆನ್ಸ್ 5 ರಿಂದ 10ನೇ ತರಗತಿವರೆಗಿನ ಪಠ್ಯಪುಸ್ತಕಗಳನ್ನು ಮೂರು-ನಾಲ್ಕು ಬಾರಿ ಓದಬೇಕು. ನಂತರ ಹೆಚ್ಚಿನ ಮತ್ತು ವಿಸ್ತಾರವಾದ ವಿಷಯ ಅಧ್ಯಯನಕ್ಕೆ ರೆಫರೆನ್ಸ್ ಪುಸ್ತಕಗಳನ್ನು ಓದಬೇಕು.

- India's Ancient Past – R.S. Sharma
- History & Medieval India- Statistic Satish Chandra
- India's Struggle for Independence – Bipin Chandra
- A Brief History & Modern India – Spectrum
- A concise History of Karnataka- Dr. Surya U. Kamath

ಮೇಲಿನ ಎಲ್ಲಾ ಪುಸ್ತಕಗಳು ಇಂಗ್ಲಿಷ್ ಮಾಧ್ಯಮದ ಅಭ್ಯರ್ಥಿಗಳಿಗೆ ಲಭ್ಯ. ಈ ಪುಸ್ತಕಗಳು ಯುಪಿಎಸ್‌ಸಿ ಮಟ್ಟದಲ್ಲಿದ್ದು ಎಲ್ಲಾ ಪರೀಕ್ಷೆಗಳಿಗೂ ಓದಬಹುದು.

ಕನ್ನಡದ ಮಾಧ್ಯಮದಲ್ಲಿ ಈ ಕೆಳಗಿನ ಪುಸ್ತಕಗಳು ಲಭ್ಯ.

- ಕೆಎನ್‌ಎ ರವರ ಪುಸ್ತಕಗಳು
- ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಭಾರತದ ಇತಿಹಾಸ – ಡಾ. ಕೆ. ಸದಾಶಿವ
- ಸಮಗ್ರ ಕರ್ನಾಟಕ ಇತಿಹಾಸ - ಪಾಲಾಕ್ಷ
- ಕರ್ನಾಟಕ ಕೈಗನ್ನಡಿ - ಸೂರ್ಯನಾಥ ಕಾಮತ್
- ಕರ್ನಾಟಕ ಏಕೀಕರಣ ಇತಿಹಾಸ - ಎಚ್.ಎಸ್. ಗೋಪಾಲರಾವ್
- ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು – ಚಿ. ಶಂಕರರಾವ್
- ಸಮಗ್ರ ಸ್ಪರ್ಧಾ ಇತಿಹಾಸ - ಸೋಮಪ್ಪ ಎಸ್. ದುಂಡಿಗೇರಿ

ಇತಿಹಾಸವನ್ನು ಓದುವಾಗ ಕಾಲಾನುಕ್ರಮ (ಕ್ರೊನೊಲಜಿ) ಗಳ ಬಗ್ಗೆ ಪಟ್ಟಿ ಮಾಡಿ. ಅದರಲ್ಲಿ ಇಸವಿ, ರಾಜಮನೆತನ, ಪ್ರಮುಖ ರಾಜರು, ರಾಜ ಲಾಂಛನಗಳು, ಸುಧಾರಣೆಗಳು, ಕಲೆ ಮತ್ತು ವಾಸ್ತುಶಿಲ್ಪ ಮತ್ತು ಇತರ ಪ್ರಮುಖ ವಿಷಯಗಳನ್ನು ಕೋಷ್ಟಕ ರೂಪದಲ್ಲಿ ತಯಾರಿಸಿ ಓದುವ ಸ್ಥಳದಲ್ಲಿ ಅಂಟಿಸಿ ಪದೇ ಪದೇ ನೋಡುವುದರಿಂದ ಇಡೀ ಮಾಹಿತಿಯನ್ನು ಕಾಲಾನುಕ್ರಮದಲ್ಲಿ ನೆನಪಿನಲ್ಲಿಟ್ಟುಕೊಳ್ಳಬಹುದು. ಪ್ರಾಚೀನ, ಮಧ್ಯಕಾಲಿನ ಮತ್ತು ಆಧುನಿಕ ಇತಿಹಾಸಗಳ ಬಗ್ಗೆ ವಿವಿಧ ಕೋಷ್ಟಕಗಳನ್ನು ವಿವಿಧ ಬಣ್ಣಗಳಲ್ಲಿ ನೋಡಲು ಮತ್ತು ಓದಲು ಸುಂದರವಾಗಿ ಕಾಣುವಂತೆ ರಚಿಸಿಕೊಳ್ಳಬಹುದು.

ಕೀ ವರ್ಡ್‌ಗಳನ್ನು ಗುರುತಿಸಿ ಗೆರೆಯನ್ನು ಎಳೆದುಕೊಳ್ಳಿ, ಫ್ಲೋ ಚಾರ್ಟ್‌ಗಳನ್ನು ಕೂಡ ತಯಾರಿಸಿ ಮಾಹಿತಿಯನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬಹುದು.

ಪ್ರತಿ ಅಧ್ಯಾಯದ ನಂತರ ಅದಕ್ಕೆ ಸಂಬಂಧಪಟ್ಟಂತೆ ಯಾವ ಪ್ರಶ್ನೆಗಳು ಬರಬಹುದೆಂಬ ಊಹೆಯನ್ನು ಮಾಡಿ, ಅಂತಹ ಪ್ರಶ್ನೆಗಳಿಗೆ ತಯಾರಿ ಮಾಡಿಕೊಳ್ಳಿ. ಪರೀಕ್ಷೆಗೆ ಮುನ್ನ ಪುನರ್‌ಮನನ ಮಾಡಿ, ಹಳೆಯ ಪ್ರಶ್ನೆಪತ್ರಿಕೆಗಳನ್ನು ಬಿಡಿಸುವುದರಿಂದ, ಗುಂಪು ಚರ್ಚೆಯಿಂದ ಅಭ್ಯರ್ಥಿಗಳಲ್ಲಿ ಆತ್ಮ ವಿಶ್ವಾಸ ಮೂಡಿ, ಯಾವುದೇ ಆಂತಕವಿಲ್ಲದೆ ಪರೀಕ್ಷೆಗಳನ್ನು ಯಶಸ್ವಿಯಾಗಿ ಬರೆಯಬಹುದು.

(ನಿರ್ದೇಶಕರು, ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ, ಬೆಂಗಳೂರು)

ಪ್ರಜಾವಾಣಿ ಉದ್ಯೋಗ ವಾರ್ತೆ

ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳದಲ್ಲಿ ಉದ್ಯೋಗ

ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿಯಮಿತ, ಬೆಂಗಳೂರು ವಿವಿಧ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆ: ಲೆಕ್ಕಿಗರು, ಪ್ರಥಮ ದರ್ಜೆ ಗುಮಾಸ್ತರು, ವಿಕ್ರಯ ಸಹಾಯಕರು, ಬೆರಳಚ್ಚುಗಾರರು, ಜವಾನರು

ಹುದ್ದೆಗಳ ಸಂಖ್ಯೆ: 43

ಸ್ಥಳ: ಬೆಂಗಳೂರು

ವಯೋಮಿತಿ: ಕನಿಷ್ಠ 18 ಹಾಗೂ ಗರಿಷ್ಠ 35. ಪ್ರವರ್ಗ 2ಎ, 2ಬಿ, 3ಬಿ, 3ಎ ಅಭ್ಯರ್ಥಿಗಳಿಗೆ 38 ವರ್ಷ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ1 ರ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು.

ಅರ್ಜಿ ಶುಲ್ಕ: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ 1 ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹ 500 ಮತ್ತು ₹ 30 ಅಂಚೆಶುಲ್ಕ. ಇತರ ವರ್ಗದ ಅಭ್ಯರ್ಥಿಗಳಿಗೆ ₹ 1000 ಹಾಗೂ ₹ 30 ಅಂಚೆ ಶುಲ್ಕ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 5, 2021

ಹೆಚ್ಚಿನ ಮಾಹಿತಿಗೆ: http://www.recruitapp.in/ksccf2021/

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ತ್ರಿಕೋನಮಿತಿಯ ಪ್ರಸ್ತಾವನೆ

ಗಣಿತ

ಎಸ್ಸೆಸ್ಸೆಲ್ಸಿ

ಪೀಠಿಕೆ

ಲಂಬಕೋನ ತ್ರಿಭುಜಗಳು ಉಂಟಾಗುವಂತೆ ಕಲ್ಪಿಸಿಕೊಳ್ಳಬಹುದಾದ ನಮ್ಮ ಪರಿಸರದಲ್ಲಿನ ಸಂದರ್ಭಗಳಲ್ಲಿ ಒಂದು ಶಾಲೆಯ ವಿದ್ಯಾರ್ಥಿಗಳು ಕುತುಬ್ ಮಿನಾರ್ ಅನ್ನು ವೀಕ್ಷಿಸಲು ಹೋಗಿದ್ದಾರೆ ಎಂದು ಊಹಿಸಿಕೊಳ್ಳಿ. ಇದೀಗ ವಿದ್ಯಾರ್ಥಿಯು ಮಿನಾರ್‌ನ ತುದಿಯಲ್ಲಿ ನೋಡುತ್ತಿದ್ದರೆ ಒಂದು ಲಂಬಕೋನ ತ್ರಿಭುಜ ಉಂಟಾಗುವಂತೆ ಕಲ್ಪಿಸಿಕೊಳ್ಳಬಹುದು.



ವಿದ್ಯಾರ್ಥಿಯು ನೈಜವಾಗಿ ಮಿನಾರ್ ಅನ್ನು ಅಳತೆ ಮಾಡದೆ ಅದರ ಎತ್ತರ ಕಂಡು ಹಿಡಿಯಲು ಸಾಧ್ಯವೇ?. ಈ ಮೇಲೆ ತಿಳಿಸಿದ ಸಂದರ್ಭದಲ್ಲಿ ಗಣಿತದ ಒಂದು ಶಾಖೆಯಾಗಿರುವ ತ್ರಿಕೋನ ಮಿತಿಯಲ್ಲಿನ ಕೆಲವು ಗಣಿತದ ತಂತ್ರಗಳನ್ನು ಬಳಸಿ ದೂರ ಮತ್ತು ಎತ್ತರವನ್ನು ಕಂಡುಹಿಡಿಯಬಹುದು.

ಆಂಗ್ಲ ಭಾಷೆಯಲ್ಲಿ ತ್ರಿ ಕೋ ೀ ನ ಮಿ ತಿ ಯ ನ್ನು Trigonomentry ಎಂದು ಕರೆಯುತ್ತಾರೆ. Trigonomentry ಎಂಬ ಪದವು ಗ್ರೀಕ್ ಪದಗಳಾದ Tri ಅಂದರೆ ಮೂರು gon ಅಂದರೆ ಬಾಹುಗಳು ಮತ್ತು metron ಅಂದರೆ ಅಳತೆ ಪದಗಳಿಂದ ಉಂಟಾಗಿದೆ.

ವಾಸ್ತವವಾಗಿ ತ್ರಿಕೋನ ಮಿತಿ ಎಂದರೆ ತ್ರಿಭುಜದ ಬಾಹುಗಳು ಮತ್ತು ಕೋನಗಳ ನಡುವಿನ ಸಂಬಂಧವನ್ನು ಅಭ್ಯಸಿಸುವುದಾಗಿದೆ. ಈಜಿಪ್ಟ್ ಮತ್ತು ಬ್ಯಾಬಿಲೋನಾದಲ್ಲಿ ಮೊಟ್ಟ ಮೊದಲ ಬಾರಿಗೆ ತ್ರಿಕೋನ ಮಿತಿಯ ಬಳಕೆಯ ಬಗ್ಗೆ ಉಲ್ಲೇಖವಾಗಿದೆ. ಪುರಾತನ ಗ್ರೀಕ್ ಖಗೋಳಶಾಸ್ತ್ರಜ್ಞರು ಭೂಮಿ ಮತ್ತು ಚಂದ್ರನ ನಡುವಿನ ಅಂತರವನ್ನು ಕಂಡುಹಿಡಿಯಲು ಈ ವಿಧಾನವನ್ನು ಬಳಸಿಕೊಂಡಿರುತ್ತಾರೆ. ಇಂದಿಗೂ ಸಹ ತ್ರಿಕೋನಮಿತಿಯ ಪರಿಕಲ್ಪನೆಗಳನ್ನು ಆಧರಿಸಿ ಹಲವಾರು ಉನ್ನತ ತಂತ್ರಜ್ಞಾನವನ್ನು ಎಂಜಿನಿಯರಿಂಗ್ ಮತ್ತು ಭೌತ ವಿಜ್ಞಾನ ವಿಭಾಗಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

ತ್ರಿಕೋನಮಿತಿಯ ಅನುಪಾತಗಳು

ಚಿತ್ರದಲ್ಲಿ ತೋರಿಸಿರುವಂತೆ ಲಂಬಕೋನ ತ್ರಿಭುಜ ABC ಯನ್ನು ಪರಿಗಣಿಸೋಣ.

ಇಲ್ಲಿ ⌊A ಲಘುಕೋನ ಕೋನ A ಗೆ ಸಂಬಂಧಿಸಿದಂತೆ BC ಯ A ಸ್ಥಾನವು ⌊A ಎದುರಿಗಿದೆ. ಅದನ್ನು A ಕೋನಕ್ಕೆ ಅಭಿಮುಖವಾದ ಬಾಹು ಎನ್ನುತ್ತೇವೆ. AC ಯು ಲಂಬಕೋನ ತ್ರಿಭುಜದ ವಿಕರ್ಣ ಮತ್ತು AB ಯು ⌊A ರ ಒಂದು ಭಾಗವಾಗಿದೆ. ಆದ್ದರಿಂದ ಅದನ್ನು ⌊A ಪಾಶ್ವಬಾಹು ಎನ್ನುತ್ತೇವೆ.



ಲಂಬಕೋನ ತ್ರಿಭುಜ ABC ಯಲ್ಲಿ ಕೋನಕ್ಕೆ ಸಂಬಂಧಿಸಿದ ತ್ರಿಕೋನ ಮಿತಿ ಅನುಪಾತಗಳನ್ನು ಈ ಕೆಳಕಂಡಂತೆ ವ್ಯಾಖ್ಯಾನಿಸುತ್ತೇವೆ.

⌊A ದ ಜ್ಯಾ (Sine of ⌊A) = $\frac{\text{⌊A ಗೆ ಅಭಿಮುಖ ಬಾಹು}}{\text{ವಿಕರ್ಣ}} = \frac{BC}{AC}$

⌊A ಕೋಟಿ ಜ್ಯಾ (coSine of ⌊A) = $\frac{\text{⌊A ಗೆ ಪಾರ್ಶ್ವ ಬಾಹು}}{\text{ವಿಕರ್ಣ}} = \frac{AB}{AC}$

⌊A ದ ಸ್ಪರ್ಶಕ (tongent of ⌊A) = $\frac{\text{⌊A ಗೆ ಅಭಿಮುಖ ಬಾಹು}}{\text{⌊A ಗೆ ಪಾರ್ಶ್ವಬಾಹು}} = \frac{BC}{AB}$

⌊A ದ ಛೇದಕ (Cosecont of of ⌊A) = $\frac{1}{\text{sine of ⌊A}} = \frac{\text{ವಿಕರ್ಣ}}{\text{⌊A ಗೆ ಪಾರ್ಶ್ವಬಾಹು}} = \frac{AC}{AB}$

⌊A ದ ಕೋಟಿ ಸ್ಪರ್ಶಕ (Cosecont of of ⌊A) = $\frac{1}{\text{(tongent of ⌊A}} = \frac{\text{⌊A ಗೆ ಪಾರ್ಶ್ವಬಾಹು}}{\text{⌊A ಗೆ ಅಭಿಮುಖ ಬಾಹು}} = \frac{AB}{BC}$

ಮೇಲೆ ವ್ಯಾಖ್ಯಾನಿಸಲ್ಪಟ್ಟ ಅನುಪಾತಗಳನ್ನು ಕ್ರಮವಾಗಿ sinA, cosA, tanA, cosecC, secA ಮತ್ತು cotA ಎಂದು ಸಂಕ್ಷಿಪ್ತವಾಗಿ ಬರೆಯುತ್ತೇವೆ.

ಹಾಗೆ $tonA = \frac{Sin\ A}{COSA}$ ಮತ್ತು $cota = \frac{COSA}{Sin\ A}$

ಆದ್ದರಿಂದ ಲಂಬಕೋನ ತ್ರಿಭುಜದಲ್ಲಿ ಲಂಬಕೋನದ ತ್ರಿಕೋನಮಿತಿಯ ಅನುಪಾತಗಳು ಕೋನ ಮತ್ತು ಬಾಹುವಿನ ಉದ್ದಗಳ ನಡುವಿನ ಸಂಬಂಧವನ್ನು ವ್ಯಕ್ತಪಡಿಸಬಹುದಾಗಿದೆ. ಕೋನ c ಗೆ ಸಂಬಂಧಿಸಿದಂತೆ ತ್ರಿಕೋನಮಿತಿಯ ಅನುಪಾತಗಳನ್ನು ವ್ಯಾಖ್ಯಾನಿಸಬಹುದು. ಸಂಕೇತ sinA ಎಂಬುದು A ಕೋನದ ಜ್ಯಾದ ಸಂಕ್ಷಿಪ್ತ ರೂಪವಾಗಿ ಬಳಸಲಾಗುತ್ತದೆ. sin A ಎಂಬುದು sin ಮತ್ತು A ಗಳ ನಡುವಿನ ಗುಣಲಬ್ಧದಲ್ಲಿ A ಯಿಂದ ಬೇರ್ಪಟ್ಟ sin ಗೆ ಯಾವುದೇ ಅರ್ಥವಿಲ್ಲ. ಇನ್ನುಳಿದ ತ್ರಿಕೋನಮಿತಿ ಅನುಪಾತಗಳಿಗೂ ಈ ಮೇಲಿನ ವ್ಯಾಖ್ಯಾನ ಅನ್ವಯಿಸುತ್ತದೆ.

(ಮುಂದುವರಿಯುವುದು)



ಪ್ರಜಾವಾಣಿ ನೋಡಿಯೊ

https://bit.ly/2OV7lVi

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮ ಭೌತಶಾಸ್ತ್ರ ವಿಭಾಗದ 'ಓಮ್ಸ್ ಲಾ' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ತ್ರಿಭುಜದ ಕ್ಷೇತ್ರಫಲ

ಗಣಿತ

ದ್ವಿತೀಯ ಪಿಯುಸಿ

(x,y), (x_2,y_2) ಮತ್ತು (x_3, y_3)ಗಳು ತ್ರಿಭುಜ ಮೂರು ಶೃಂಗ ಬಿಂದುಗಳಾಗಿದ್ದು, ಈ ಹೇಳಿಕೆಯನ್ನು ನಿರ್ಧಾರಕ ರೂಪದಲ್ಲಿ ವ್ಯಕ್ತಪಡಿಸಿದರೆ

$$\Delta = {}^1/_2 \begin{vmatrix} x_1 & y_1 & 1 \\ x_2 & y_2 & 1 \\ x_3 & y_3 & 1 \end{vmatrix}$$

ವಿಸ್ತೀರ್ಣವು ಧನ ಪರಿಮಾಣ ಆಗಿರುವುದರಿಂದ ನಾವು ಯಾವಾಗಲೂ ನಿರ್ಧಾರಕದ ಬೆಲೆಯನ್ನು ಧನಾತ್ಮಕ ಬೆಲೆ ಎಂದು ಪರಿಗಣಿಸುತ್ತೇವೆ. ವಿಸ್ತೀರ್ಣವನ್ನು ಕೊಟ್ಟಾಗ ನಿರ್ಧಾರಕದ ಧನ ಮತ್ತು ಋಣ ಮೌಲ್ಯಗಳನ್ನು ಬಳಸಿ ಮುಂದುವರಿಯಬೇಕು. ಏಕ ರೇಖಾತ್ಮಕ ಬಿಂದುಗಳಿಂದ ಉಂಟಾದ ತ್ರಿಭುಜದ ವಿಸ್ತೀರ್ಣವು ಸೊನ್ನೆಯಾಗಿರುತ್ತದೆ.

ಉದಾಹರಣೆ: 1 – ಒಂದು ತ್ರಿಭುಜದ ಶೃಂಗ ಬಿಂದುಗಳು (3,8), (-4,2) ಮತ್ತು (5,1) ಆದಾಗ ಅದರ ಕ್ಷೇತ್ರಫಲವನ್ನು ಕಂಡು ಹಿಡಿಯಿರಿ.

ಪರಿಹಾರ: $\Delta = {}^1/_2 \begin{vmatrix} 3 & 8 & 1 \\ -4 & 2 & 1 \\ 5 & 1 & 1 \end{vmatrix}$

$$= {}^1/_2\ [3(2-1) - 8(-45) + 1(-4-10]$$

$$= \frac{61}{2}$$

ಉದಾಹರಣೆ: ನಿರ್ಧಾರಕಗಳನ್ನು ಬಳಸಿಕೊಂಡು (3,1) ಮತ್ತು (9,3) ಬಿಂದುಗಳಿಂದ ಉಂಟಾದ ಸರಳರೇಖೆಯ ಸಮೀಕರಣವನ್ನು ಕಂಡುಹಿಡಿಯಿರಿ.

ಪರಿಹಾರ: AB ಎಂಬುದು ಸರಳರೇಖೆ ಆದರೆ P(x,y) ಯಾವುದೇ ಬಿಂದುವಾಗಿರಲಿ

$$\begin{vmatrix} 3 & 1 & 1 \\ 9 & 3 & 1 \\ x & y & 1 \end{vmatrix} = 0$$

$$3\begin{vmatrix} 3 & 1 \\ y & 1 \end{vmatrix} - 1\begin{vmatrix} 9 & 1 \\ x & 1 \end{vmatrix} + 1\begin{vmatrix} 9 & 3 \\ x & y \end{vmatrix} = 0$$

$$9 - 3y - 9 + x + 9y - 3x = 0$$

$$6y - 2x = 0$$

$$3y - x = 0$$

ಲಾಘವಗಳು ಅಥವಾ ಸಹಗುಣಕ ಮತ್ತು ಸಹಪರ್ವತನಗಳು

ನಿರ್ಧಾರಗಳಲ್ಲಿ a_{ij} ನ ಲಾಘವವು i ನ ಅಡ್ಡಸಾಲು j ಕಂಬಸಾಲುಗಳನ್ನು ಹೊರತುಪಡಿಸಿ ಉಳಿದಿರುವ ಉಪಕೋಶದ ನಿರ್ಧಾರಕವಾಗಿರುತ್ತದೆ. a_{ij}ನ ಲಾಘವವನ್ನು m_{ij} ಎಂದು ಸೂಚಿಸುತ್ತೇವೆ. ನಿರ್ಧಾರಕದ ದರ್ಜೆ n ಆಗಿದ್ದಾಗ ಲಾಘವವು x-1 ದರ್ಜೆ ನಿರ್ಧಾರಕವಾಗಿರುತ್ತದೆ.

ಸಂಗತಕೋಶ ಮತ್ತು ಕೋಶದ ಪ್ರತಿಲೋಮ

- $A = a_{ij}$ ಒಂದು ಚೌಕಕೋಶವಾಗಿರಲಿ (A_{ij}) ಯು a_{ij} ನ ಸಹಗುಣಕ ಕೋಶವಾಗಿದೆ. (A_{ij}) ಅದಲು ಬದಲು ಕೋಶವನ್ನು ಸಂಗತಕೋಶ ಎನ್ನುತ್ತೇವೆ. ಅದನ್ನು adj Aನಿಂದ ಸೂಚಿಸಿದೆ.
- A ಒಂದು n ದರ್ಜೆಯ ಚೌಕುಳಿ ಕೋಶವಾಗಿದ್ದರೆ ಇಲ್ಲಿ A(adjA) = (adjA) A ಆಗುವುದು. ಇಲ್ಲಿ I ಎಂಬುದು ಏಕಮಾನ ಕೋಶವಾಗಿದೆ.
- A ಒಂದು ಚೌಕುಳಿಕೋಶವಾಗಿದ್ದು ಅದರ ನಿರ್ಧಾರಕವು |A| = 0 ಆಗಿದ್ದರೆ ಅಂತಹ ಕೋಶವನ್ನು ವೈಶೇಷಿತ ಕೋಶವೆಂದು ಕರೆಯುತ್ತೇವೆ.
- A ಒಂದು ಚೌಕುಳಿಕೋಶವಾಗಿದ್ದು ಅದರ ನಿರ್ಧಾರಕವು |A| ≠ 0 ಆಗಿದ್ದರೆ ಅಂತಹ ಕೋಶವನ್ನು ಅವೈಶೇಷಿತ ಕೋಶವೆಂದು ಕರೆಯುತ್ತೇವೆ.
- A ಮತ್ತು B ಗಳು ಒಂದೇ ದರ್ಜೆಯ ಅವೈಶೇಷಿತ ಕೋಶಗಳಾದಾಗ AB ಮತ್ತು BA ಗಳು ಸಹ ಅದೇ ದರ್ಜೆಯ ಅವೈಶೇಷಿತ ಕೋಶವಾಗಿರುತ್ತವೆ.
- ಯಾವುದೇ ಕೋಶಗಳ ಗುಣಲಬ್ಧದ ನಿರ್ಧಾರವು ಅವುಗಳ ನಿರ್ಧಾರಕಗಳ ಗುಣಲಬ್ಧಕ್ಕೆ ಸಮನಾಗಿರುವುದು |AB| = |A||B| ಅಂದರೆ A ಮತ್ತು B ಗಳು ಒಂದು ದರ್ಜೆಯ ಚೌಕುಳಿಕೋಶಗಳಾಗಿವೆ.
- A ಒಂದು ಚೌಕುಳಿಕೋಶವಾಗಿದ್ದು ಅದನ್ನು ತಲೆ ಕೆಳಗು ಮಾಡಬಹುದಾದರೆ A ಒಂದು ಅವೈಶೇಷಿತ ಕೋಶವಾಗಿರುತ್ತದೆ.

ಉದಾಹರಣೆ: $A = \begin{bmatrix} 3 & 1 \\ -1 & 2 \end{bmatrix}$ ಆದಾಗ A^2-5A + 7I = 0 ಎಂದು ತೋರಿಸಿ. ಅದರಿಂದ A^{-1} ಅನ್ನು ಕಂಡು ಹಿಡಿಯಿರಿ.

ಪರಿಹಾರ: $A^2 = A.A = \begin{bmatrix} 3 & 1 \\ -1 & 2 \end{bmatrix} \begin{bmatrix} 3 & 1 \\ -1 & 2 \end{bmatrix} = \begin{bmatrix} 8 & 5 \\ -5 & 3 \end{bmatrix}$

$$A^2 - 5A + 7I = \begin{bmatrix} 8 & 5 \\ -5 & 3 \end{bmatrix}\begin{bmatrix} 15 & 5 \\ -5 & 10 \end{bmatrix} + \begin{bmatrix} 7 & 0 \\ 0 & 7 \end{bmatrix}$$

$$= \begin{bmatrix} 8-15+7 & 5-5 \\ -5+5 & 3-10+7 \end{bmatrix} = \begin{bmatrix} 0 & 0 \\ 0 & 0 \end{bmatrix}$$

ಆದ್ದರಿಂದ $A^2 - 5A + 7I = 0$

$A.A - 5A = 7I$

A^{-1} ನಿಂದ ಪ್ರತಿ ಪದವನ್ನು ಗುಣಿಸಿದಾಗ

$$(A^{-1}A)A - 5A\,A^{-1} = -7A^{-1}$$

$$A - 5A = 7A^{-1'}$$

$$A^{-1} = \frac{1}{7}[5I - A]$$

$$A^{-1} = \frac{1}{7}\left[5\begin{bmatrix} 1 & 0 \\ 0 & 1 \end{bmatrix} - \begin{bmatrix} 3 & 1 \\ -1 & 2 \end{bmatrix}\right]$$

$$A^{-1} = \frac{1}{7}\left[\begin{bmatrix} 5 & 0 \\ 0 & 5 \end{bmatrix} - \begin{bmatrix} 3 & 1 \\ -1 & 2 \end{bmatrix}\right]$$

$$A^{-1} = \frac{1}{7}\begin{bmatrix} 2 & -1 \\ 1 & 3 \end{bmatrix}$$

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

https://bit.ly/3soDEKM

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ನ್ಯೂಕ್ಲಿ_ ನ್ಯೂಕ್ಲಿಯರ್ ಸೈಜ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಕೆಲವರಿಗೆ ಯಾವಾಗಲೂ ಬೆಲೆ ತಿಳಿದಿರುತ್ತದೆ,
ಆದರೆ ಮೌಲ್ಯ ತಿಳಿದಿರುವುದಿಲ್ಲ.

–ಆಸ್ಕರ್ ವೈಲ್ಡ್

ಅನಿಲ್ ದೇಶಮುಖ್: ಸಚಿವ ಸ್ಥಾನ ತೊರೆದು ನೈತಿಕ ರಾಜಕಾರಣ ಎತ್ತಿ ಹಿಡಿಯಲಿ

ನಮ್ಮ ವ್ಯವಸ್ಥೆಯಲ್ಲಿ ರಾಜಕಾರಣಿಗಳು, ಪೊಲೀಸರು ಮತ್ತು ಅಪರಾಧಿಗಳ ನಡುವಣ ಅಪವಿತ್ರ ಮೈತ್ರಿಯು ಸಾಮಾನ್ಯ ಜನರಿಗೆ ಜುಗುಪ್ಸೆ ಹುಟ್ಟಿಸುವಷ್ಟು ಗಾಢವಾಗಿದೆ. ರಾಜಕಾರಣಿಗಳ ನೈತಿಕತೆ, ಪೊಲೀಸರ ವೃತ್ತಿಪರತೆ ಪಾತಾಳಕ್ಕೆ ಕುಸಿದಿವೆ. ಎಲ್ಲರೂ ಹೀಗೆ ಎಂದೇನೂ ಅಲ್ಲ; ಆದರೆ, ಇಂಥವರ ಸಂಖ್ಯೆ ಹೆಚ್ಚು ಎಂಬುದು ವಾಸ್ತವ. ಅಧಿಕಾರಸ್ಥರ ಅನೈತಿಕತೆಯು ಜನರ ಮನಸ್ಸಿನಿಂದ ಮಾಸದಂತೆ ಮಾಡುವ ವಿದ್ಯಮಾನಗಳು ಪದೇ ಪದೇ ನಡೆಯುತ್ತಿವೆ. ಮಹಾರಾಷ್ಟ್ರದ ಗೃಹ ಸಚಿವ ಅನಿಲ್ ದೇಶಮುಖ್ ಅವರ ಮೇಲೆ ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್‌ವೀರ್ ಸಿಂಗ್ ಮಾಡಿರುವ ಲಂಚ ಮತ್ತು ಸುಲಿಗೆಯ ಆರೋಪ ಈ ಸಾಲಿಗೆ ಸೇರುವ ತೀರಾ ಇತ್ತೀಚಿನ ಪ್ರಕರಣ.

ನ್ಯಾಯಯುತ ಮತ್ತು ನಿಷ್ಠುರ ತನಿಖೆ ನಡೆಸುವ ಮೂಲಕ ತಮ್ಮ ವಿಶ್ವಾಸಾರ್ಹತೆಯ ಮರುಸ್ಥಾಪನೆಗೆ ತನಿಖಾ ಸಂಸ್ಥೆಗಳಿಗೆ ಇದು ಉತ್ತಮ ಅವಕಾಶ

ಸಚಿನ್ ವಾಜೆ ಎಂಬ ವಿವಾದಾತ್ಮಕ ಹಿನ್ನೆಲೆಯ ಪೊಲೀಸ್ ಅಧಿಕಾರಿಯ ಸುತ್ತಲೂ ಈ ಪ್ರಕರಣ ಗಿರಕಿ ಹೊಡೆಯುತ್ತಿದೆ. 'ಎನ್‌ಕೌಂಟರ್'ನಲ್ಲಿ ತೀರಾ ಪಳಗಿದವರು ಎಂಬ ಹೆಸರನ್ನು ಈ ಅಧಿಕಾರಿ ಪಡೆದುಕೊಂಡಿದ್ದರು. ಆದರೆ, ಯುವಕನೊಬ್ಬನ ಕಸ್ಟಡಿ ಸಾವಿಗೆ ಸಂಬಂಧಿಸಿ ಅಮಾನತಾಗಿದ್ದರು. ಬಳಿಕ, ಶಿವಸೇನಾವನ್ನು ಸೇರಿ ರಾಜಕಾರಣಿಯಾಗಿದ್ದರು. ಪ್ರಕರಣದಿಂದ ಖುಲಾಸೆ ಆಗದಿದ್ದರೂ ಅಮಾನತಾಗಿ 16 ವರ್ಷಗಳ ಬಳಿಕ ಅವರನ್ನು ಸೇವೆಗೆ ಸೇರಿಸಿಕೊಂಡಿದ್ದೇ ಒಂದು ವಿವಾದ. ಉದ್ಯಮಿ ಮುಕೇಶ್ ಅಂಬಾನಿ ಮನೆಯ ಸಮೀಪ ಸ್ಫೋಟಕ ತುಂಬಿದ್ದ ಕಾರು ಇರಿಸಿದ್ದ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯು ವಾಜೆ ಅವರನ್ನು ಬಂಧಿಸಿದೆ. ತಿಂಗಳಿಗೆ ₹100 ಕೋಟಿ ಸುಲಿಗೆಯ ಹೊಣೆಯನ್ನು ಈ ಅಧಿಕಾರಿಗೆ ದೇಶಮುಖ್ ವಹಿಸಿದ್ದರು ಎಂದು ಪರಮ್‌ವೀರ್ ಸಿಂಗ್ ಹೇಳಿದ್ದಾರೆ. ಅಂಬಾನಿ ಮನೆ ಮುಂದೆ ನಿಲ್ಲಿಸಲಾಗಿದ್ದ ಕಾರಿನ ಮಾಲೀಕ ಮನ್‌ಸುಖ್ ಹಿರೇನ್ ಅಸಹಜ ಸಾವಿನ ಹಿಂದೆಯೂ ವಾಜೆ ಕೈವಾಡ ಇದೆ ಎಂಬ ಆರೋಪವೂ ಕೇಳಿಬಂದಿದೆ.

ಆರೋಪ ಹೊರಿಸಿದವರು ಮತ್ತು ಆರೋಪಿ ಇಬ್ಬರ ವಿಶ್ವಾಸಾರ್ಹತೆಯೂ ಪ್ರಶ್ನಾರ್ಹ ಎಂಬುದು ವಿಷಾದಕರ ಸತ್ಯ. ಗೃಹ ಸಚಿವ ಸ್ಥಾನದಲ್ಲಿರುವ ವ್ಯಕ್ತಿಯ ಮೇಲೆ ಮುಂಬೈ ನಗರದ ಪೊಲೀಸ್ ಆಯುಕ್ತ ಹುದ್ದೆಯಲ್ಲಿದ್ದ ಅಧಿಕಾರಿಯು ಮಾಡಿದ ಆರೋಪ ಗಂಭೀರವಾದುದು. ಈ ಆರೋಪದಿಂದ ಮುಕ್ತವಾಗುವವರೆಗೆ ಸಚಿವ ಸ್ಥಾನದಿಂದ ದೂರ ಇರುವುದು ನೈತಿಕತೆ ಇರುವ ರಾಜಕಾರಣಿ ಮಾಡಬೇಕಾದ ಮೊದಲ ಕೆಲಸ. 'ತಿಂಗಳಿಗೆ ₹100 ಕೋಟಿ ಸುಲಿಗೆ ಮಾಡುವ ಹೊಣೆಯನ್ನು ತಮ್ಮ ಅಧೀನದ ಅಧಿಕಾರಿಯೊಬ್ಬರಿಗೆ ಸಚಿವರು ವಹಿಸಿದ್ದಾರೆ' ಎಂಬುದನ್ನು ಪೊಲೀಸ್ ಆಯುಕ್ತ ಸ್ಥಾನದಿಂದ ಹೊರಹೋಗುವವರೆಗೂ ಮುಚ್ಚಿಟ್ಟದ್ದು ಸಣ್ಣ ಅಪರಾಧ ಏನಲ್ಲ. ಅಂತಹ ವ್ಯಕ್ತಿ ಮುಂಬೈನಂತಹ ಮಹಾನಗರದ ಪೊಲೀಸ್ ಆಯುಕ್ತ ಹುದ್ದೆಯಲ್ಲಿ ಮಾತ್ರವಲ್ಲ, ಸರ್ಕಾರದ ಯಾವುದೇ ಹುದ್ದೆಯಲ್ಲಿ ಇರುವುದಕ್ಕೂ ಅರ್ಹರಲ್ಲ. ದೇಶಮುಖ್, ಪರಮ್‌ವೀರ್ ಮತ್ತು ವಾಜೆ ಅವರ ಬಗ್ಗೆ ಸಮಗ್ರವಾದ ತನಿಖೆ ನಡೆಸಬೇಕಾಗಿದೆ. ಆದರೆ, ತನಿಖೆಯ ಬಗ್ಗೆ ವಿಶ್ವಾಸವೇ ಇಲ್ಲದ ಸ್ಥಿತಿ ನಿರ್ಮಾಣ ಆಗಿರುವುದು ದುರದೃಷ್ಟಕರ. ಮಹಾರಾಷ್ಟ್ರದಲ್ಲಿರುವ ರಾಜಕೀಯ ಪರಿಸ್ಥಿತಿಯೂ ಇದಕ್ಕೆ ಒಂದು ಕಾರಣ. ಸೈದ್ಧಾಂತಿಕವಾಗಿ ಭಿನ್ನ ನೆಲೆಯ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್‌ನ ಮೈತ್ರಿಕೂಟವಾದ ಮಹಾ ವಿಕಾಸ ಅಘಾಡಿಯು ಕೇಂದ್ರದ ಆಡಳಿತಾರೂಢ ಬಿಜೆಪಿಗೆ ಸಡ್ಡು ಹೊಡೆದೇ ಅಧಿಕಾರಕ್ಕೆ ಬಂದಿದೆ. ಇದು ಬಿಜೆಪಿ ನಾಯಕರ ಅಹಂಗೆ ಬಹುದೊಡ್ಡ ಹೊಡೆತ ನೀಡಿದೆ. ಹಾಗಾಗಿ, ಈ ಸರ್ಕಾರವನ್ನು ಉರುಳಿಸುವುದು ಹೇಗೆ ಎಂಬ ಕಾರ್ಯತಂತ್ರವನ್ನು ಬಿಜೆಪಿ ಹೆಣೆಯುತ್ತಲೇ ಇದೆ ಎಂಬ ಆರೋಪದಲ್ಲಿ ಹುರುಳಿಲ್ಲದೇ ಇಲ್ಲ. ಕೇಂದ್ರ ಮತ್ತು ಮಹಾರಾಷ್ಟ್ರದ ನಡುವೆ ಒಕ್ಕೂಟ ವ್ಯವಸ್ಥೆಗೆ ತಕ್ಕುದಾದ ಸಂಬಂಧ ಇಲ್ಲ. ಕೇಂದ್ರ ಮತ್ತು ಮಹಾರಾಷ್ಟ್ರ ಸರ್ಕಾರಗಳು ಪರಸ್ಪರರ ಮುಖಭಂಗಕ್ಕೆ ಕಾನೂನುಜಾರಿ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡ ಹಲವು ವಿದ್ಯಮಾನಗಳು ನಡೆದಿವೆ. ಹಾಗಾಗಿ, ಕೇಂದ್ರದ್ದೇ ಆಗಲಿ ರಾಜ್ಯದ್ದೇ ಆಗಲಿ ತನಿಖಾ ಸಂಸ್ಥೆಗಳ ಬಗ್ಗೆ ಸಂಪೂರ್ಣ ನಂಬಿಕೆ ಇಡುವಂತೆ ಇಲ್ಲ ಎಂಬುದು ಬೇಸರದ ಸಂಗತಿ. ಇಂತಹ ಜಟಿಲ ಸನ್ನಿವೇಶವನ್ನು ಸವಾಲು ಎಂದು ಪರಿಗಣಿಸಿ, ನ್ಯಾಯಯುತ ಮತ್ತು ನಿಷ್ಠುರ ತನಿಖೆ ನಡೆಸುವ ಮೂಲಕ ತಮ್ಮ ವಿಶ್ವಾಸಾರ್ಹತೆಯ ಮರುಸ್ಥಾಪನೆಗೆ ತನಿಖಾ ಸಂಸ್ಥೆಗಳಿಗೆ ಇದು ಉತ್ತಮ ಅವಕಾಶ.

ದಿನದ ಟ್ವೀಟ್

ಕ್ಷಯರೋಗದ ಸಂಕಷ್ಟ

ಮಾರ್ಚ್ 24, ವಿಶ್ವ ಕ್ಷಯರೋಗ ದಿನ: ಭಾರತದಲ್ಲಿ ಟಿ.ಬಿ. ತಂದೊಡ್ಡಿರುವ ಸಂಕಷ್ಟವನ್ನು ನಮಗೆ ನೆನಪಿಸುವ ಪ್ರಮುಖ ದಿನ.

1. ಇದು ಪ್ರತಿವರ್ಷ 4 ಲಕ್ಷ ಭಾರತೀಯರನ್ನು ಕೊಲ್ಲುತ್ತದೆ.

2. ಆರಂಭದಲ್ಲೇ ಪತ್ತೆಯಾದರೆ ಟಿ.ಬಿ.ಗೆ ಚಿಕಿತ್ಸೆ ಸುಲಭ.

3. ಕೋವಿಡ್– 19 ಮನಸ್ಸು ಮತ್ತು ಸಂಪನ್ಮೂಲಗಳನ್ನು ವಿಚಲಿತಗೊಳಿಸಿದೆ: ಹೀಗಾಗಿ, ಜಾಗತಿಕವಾಗಿ ಕ್ಷಯರೋಗದ ಪತ್ತೆಹಚ್ಚುವಿಕೆ ಕಾರ್ಯ ಶೇ 25ರಷ್ಟು ಕುಸಿದಿದ್ದರಿಂದ, ಹೆಚ್ಚಿನ ಸಾವಿಗೆ ಕಾರಣವಾಗಬಹುದು.

ಪ್ರೊ. ಶಮಿಕಾ ರವಿ, ಅರ್ಥಶಾಸ್ತ್ರಜ್ಞೆ

25 ವರ್ಷಗಳ ಹಿಂದೆ

ಸೋಮವಾರ, 25-3-1996

• ದಳದ ಜತೆ ಮೈತ್ರಿಗೆ ಬಿಎಸ್‌ಪಿ ನಕಾರ

ನವದೆಹಲಿ, ಮಾರ್ಚ್ 24 (ಪಿಟಿಐ)– ಮುಂಬರುವ ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆ ದಿನ ಹತ್ತಿರ ಬರುತ್ತಿದ್ದರೂ ವಿವಿಧ ರಾಜಕೀಯ ಪಕ್ಷಗಳ ಮಧ್ಯೆ ಹೊಂದಾಣಿಕೆ ಕಸರತ್ತು ಇನ್ನೂ ಮುಗಿದಿಲ್ಲ. ದಳ-ಬಿಎಸ್‌ಪಿ ಮೈತ್ರಿ ಮುರಿದು ಬಿದ್ದಿದ್ದು ಇಂದಿನ ವಿದ್ಯಮಾನ.

ರಾಷ್ಟ್ರ ಮಟ್ಟದಲ್ಲಿ ಯಾವುದೇ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ ಎಂದು ಭಾರತೀಯ ಜನತಾ ಪಕ್ಷ ಸ್ಪಷ್ಟಪಡಿಸಿದ್ದು ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ಬಹುಜನ ಸಮಾಜ ಪಕ್ಷ ತಳ್ಳಿಹಾಕಿದೆ. ಈ ನಡುವೆ, ಉತ್ತರ ಪ್ರದೇಶದಲ್ಲಿ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳುವ ಕುರಿತಂತೆ ಜನತಾದಳ ಮತ್ತು ಸಮಾಜವಾದಿ ಜನತಾಪಕ್ಷಗಳು ಇಂದು ಸಭೆ ನಡೆಸಿದವು.

• ಕಾಂಗ್ರೆ ಒಳಗಿನ ದುಷ್ಟಶಕ್ತಿ ತೊಲಗಿಸಲು ರಾವ್ ಪಣ

ನವದೆಹಲಿ, ಮಾರ್ಚ್ 24 (ಪಿಟಿಐ)– ಪಕ್ಷದೊಳಗೇ ಇರುವ ದುಷ್ಟಶಕ್ತಿಗಳನ್ನು ತೊಲಗಿಸಿ ಹೊಸ ರಕ್ತದೊಂದಿಗೆ ಪಕ್ಷವನ್ನು ಪುನರ್‌ರಚಿಸುವುದಾಗಿ ಕಾಂಗ್ರೆ ಅಧ್ಯಕ್ಷರೂ ಆಗಿರುವ ಪ್ರಧಾನಿ ಪಿ.ವಿ. ನರಸಿಂಹರಾವ್ ಇಂದು ಇಲ್ಲಿ ಘೋಷಿಸಿದರು.

ದೆಹಲಿ ಪ್ರದೇಶ ಕಾಂಗ್ರೆ ಸಮಿತಿ ಏರ್ಪಡಿಸಿದ್ದ ಸಂಕಲ್ಪ ರ‍್ಯಾಲಿಯಲ್ಲಿ ಅವರು ಮಾತನಾಡುತ್ತಿದ್ದರು. ಹವಾಲ ಹಗರಣವನ್ನು ಪ್ರಸ್ತಾಪಿಸದೆ ಮಾತನಾಡಿದ ಅವರು, ಪಕ್ಷದೊಳಗೆ ಕೆಲವು ದುಷ್ಟಶಕ್ತಿಗಳಿವೆ. ಅವುಗಳನ್ನು ತೊಲಗಿಸಬೇಕಾಗಿದೆ ಮತ್ತು ಪಕ್ಷದೊಳಕ್ಕೆ ಹೊಸ ಮುಖಗಳ ಸೇರ್ಪಡೆಯಾಗಬೇಕಿದೆ ಎಂದರು.

50 ವರ್ಷಗಳ ಹಿಂದೆ

ಗುರುವಾರ, 25-3-1971

• ಹೆಚ್ಚು ಉದ್ಯೋಗಾವಕಾಶಕ್ಕೆ 50 ಕೋಟಿ ರೂ.

ನವದೆಹಲಿ, ಮಾರ್ಚ್ 24– ಹೆಚ್ಚು ಉದ್ಯೋಗಾವಕಾಶಗಳನ್ನು ಕಲ್ಪಿಸುವ ರಾಷ್ಟ್ರವ್ಯಾಪಕ ಕಾರ್ಯಕ್ರಮಕ್ಕೆ 50 ಕೋಟಿ ರೂಪಾಯಿಗಳನ್ನು ಒದಗಿಸಿರುವುದಾಗಿ ಇಂದು ಲೋಕಸಭೆಯಲ್ಲಿ ತಾತ್ಕಾಲಿಕ ಆಯವ್ಯಯವನ್ನು ಮಂಡಿಸಿದ ಕೇಂದ್ರ ಹಣಕಾಸು ಮಂತ್ರಿ ಶ್ರೀ ವೈ.ಬಿ.ಚವಾಣ್ ಹೇಳಿದರು.

1971-72ನೇ ಸಾಲಿನ ಈ ತಾತ್ಕಾಲಿಕ ಆಯವ್ಯಯದಲ್ಲಿ ಯಾವ ಹೊಸ ತೆರಿಗೆಗಳನ್ನೂ ಸೂಚಿಸಿಲ್ಲ. ಒಟ್ಟು 240 ಕೋಟಿ ರೂಪಾಯಿಗಳ ಕೊರತೆ ಇರುವುದೆಂದು ಸಚಿವರು ಅಂದಾಜು ಮಾಡಿದ್ದಾರೆ.

ಓಟ್ ಆನ್ ಅಕೌಂಟ್ ಅನ್ನು ಸೂಚಿಸುವುದೇ ಇಂದು ತಮ್ಮ ಉದ್ದೇಶ ಮಾತ್ರವಾಗಿದೆ ಎಂದು ಕೇಂದ್ರ ಅರ್ಥ ಸಚಿವರು ಹೇಳಿದರು.

• ರಾಜ್ಯದಲ್ಲಿ ಸಂಯುಕ್ತರಂಗ ಸರ್ಕಾರ ರಚನೆಗೆ ಯತ್ನ

ಬೆಂಗಳೂರು, ಮಾರ್ಚ್ 24– ಸಂಸ್ಥಾ ಕಾಂಗ್ರೆಸ್ ಪಕ್ಷ ಹಾಗೂ ವಿಧಾನಸಭೆಯ ಕಾಂಗ್ರೆಸ್ಸೇತರ ಪಕ್ಷಗಳು ಸೇರಿ ಬಹುಮತ ಬಲ ಕೂಡಿಕೆ ಸಾಧ್ಯವಾಗಿ ಒಪ್ಪಂದಕ್ಕೆ ಬಂದಲ್ಲಿ ರಾಜ್ಯದಲ್ಲಿ ಸಂಯುಕ್ತರಂಗದ ಸರ್ಕಾರ ರಚಿಸಲು ಪ್ರಯತ್ನಗಳು ನಡೆಯುತ್ತಿವೆ.

ಆಡಳಿತ ಕಾಂಗ್ರೆಸ್ಸಿಗೇ ಸೇರಿದ್ದು ವಾಪಸಾಗಿರುವವರು ಬೆಂಬಲ ನೀಡುವರೆಂದು ನಿರೀಕ್ಷಿಸಲಾಗಿರುವ ಕಾಂಗ್ರೆಸ್ಸೇತರ ಪಕ್ಷಗಳ ಸದಸ್ಯರು ಹಾಗೂ ಸಂಸ್ಥಾ ಕಾಂಗ್ರೆಸ್ ಪಕ್ಷದ ಸದಸ್ಯರು ಸೇರಿದ ಸಂಖ್ಯೆ 103ಕ್ಕೇರಿದೆಯೆಂದು ಸಂಸ್ಥಾ ಕಾಂಗ್ರೆಸ್ ಪಕ್ಷದ ವಕ್ತಾರರೊಬ್ಬರು ರಾತ್ರಿ 'ಪ್ರಜಾವಾಣಿ'ಗೆ ತಿಳಿಸಿದರು.

ಬಡತನ ನಿರ್ಮೂಲನೆಗೆ ಚೀನಾ ಅನುಸರಿಸಿದ ಮಾರ್ಗದಲ್ಲಿ ಭಾರತಕ್ಕೆ ಮುಖ್ಯ ಪಾಠಗಳಿವೆ

ಚೀನಾದಲ್ಲಿ 'ಗರೀಬಿ ಹಟಾವೊ'

ವಿಶ್ಲೇಷಣೆ

ಸುಧೀಂದ್ರ ಕುಲಕರ್ಣಿ

2017ರಲ್ಲಿ ಚೀನಾಕ್ಕೆ ಭೇಟಿ ನೀಡಿದ್ದಾಗ ನಾನು ಭಾರತದ ಈಶಾನ್ಯ ರಾಜ್ಯಗಳ ಜೊತೆ ನಿಕಟ ಐತಿಹಾಸಿಕ ಸಂಬಂಧ ಹೊಂದಿರುವ ಯುನಾನ್ ಪ್ರಾಂತ್ಯಕ್ಕೆ ಹೋಗಿದ್ದೆ. ನನ್ನನ್ನು ಅಲ್ಲಿ ಸುತ್ತಾಡಿಸಿದ ಗೈಡ್, ದುಬಾಷಿ ಬಹಳ ಚೆನ್ನಾಗಿ ವಿಷಯ ಮಂಡನೆ ಮಾಡಬಲ್ಲವನಾಗಿದ್ದ. ಕಮ್ಯುನಿಸ್ಟ್ ಪಕ್ಷದ ಸದಸ್ಯನಾದ ಅವನು ಯುನಾನ್ ಸರ್ಕಾರದ ವಿದೇಶ ಸಂಬಂಧಗಳ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ನಾನು ಅವನ ಕೆಲಸದ ಬಗ್ಗೆ ಕೇಳಿದೆ. 'ವಿದೇಶಿ ಅತಿಥಿಗಳು ಇಲ್ಲದಿದ್ದಾಗ ನಾನು ಕಚೇರಿಯಲ್ಲಿ ಅನುವಾದಕನಾಗಿ ಕೆಲಸ ಮಾಡುತ್ತೇನೆ. ವರ್ಷದಲ್ಲಿ ಎರಡು ತಿಂಗಳು ದೂರದ ಹಳ್ಳಿಗಳಿಗೆ ಹೋಗಿ, ಬಡತನ ಹೋಗಲಾಡಿಸಲು ಸರ್ಕಾರ ರೂಪಿಸಿದ ಯೋಜನೆಗಳ ಕೆಲಸ ಮಾಡಬೇಕಾಗುತ್ತದೆ' ಎಂದ.

ಆಶ್ಚರ್ಯಚಕಿತನಾಗಿ ನಾನು 'ಕೆಲಸ ಖುಷಿಕೊಡುತ್ತದೆಯೇ' ಎಂದು ಕೇಳಿದೆ. 'ಹೌದು. ಚೀನಾ ಶ್ರೀಮಂತವಾಗಿದೆ. ಆದರೆ ಬಡವರು ಇನ್ನೂ ಬಹಳ ಜನ ಇದ್ದಾರೆ. ಈ ದಶಕದ ಅಂತ್ಯದೊಳಗೆ ಕಡುಬಡತನ ತೊಲಗಬೇಕು ಎಂದು ನಮ್ಮ ಅಧ್ಯಕ್ಷ ಷಿ ಜಿನ್‌ಪಿಂಗ್ ನಿರ್ಣಯಿಸಿದ್ದಾರೆ. ಬಹಳ ಬದ್ಧತೆ ಇರುವ, ಕಷ್ಟಪಟ್ಟು ಕೆಲಸ ಮಾಡುವ ಪಕ್ಷದ ಕಾರ್ಯಕರ್ತರನ್ನು ಈ ಉದ್ದೇಶಕ್ಕಾಗಿ ಕಳುಹಿಸಲಾಗುತ್ತದೆ' ಎಂದು ಹೇಳಿದ.

ಇದಾದ ಸರಿಸುಮಾರು ನಾಲ್ಕು ವರ್ಷಗಳ ನಂತರ, ಚೀನಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಷಿ ಅವರು ಫೆಬ್ರುವರಿ 25ರಂದು, 'ಬಡತನದ ವಿರುದ್ಧದ ಹೋರಾಟದಲ್ಲಿ ಚೀನಾ ದೇಶವು ಸಂಪೂರ್ಣ ವಿಜಯ ಸಾಧಿಸಿದೆ. ಬಡತನ ನಿರ್ಮೂಲನೆ ಆಗುವುದರೊಂದಿಗೆ ಚೀನಾ ಇನ್ನೊಂದು ಪವಾಡ ಸೃಷ್ಟಿಸಿದೆ' ಎಂದು ಘೋಷಿಸಿದರು. ಅಳಿದುಳಿದ 10 ಕೋಟಿ ಗ್ರಾಮೀಣ ಬಡವರನ್ನು ಕಳೆದ ಎಂಟು ವರ್ಷಗಳಲ್ಲಿ ಕಡುಬಡತನದಿಂದ ಮೇಲಕ್ಕೆತ್ತಲಾಗಿದೆ. ಬಡತನದ ಪಟ್ಟಿಯಿಂದ 1.30 ಲಕ್ಷ ಹಳ್ಳಿಗಳ ಹೆಸರು ಹೊರಬಂದಿದೆ.

1970ರ ದಶಕದ ಕೊನೆಯ ಭಾಗದಲ್ಲಿ ದೇಶವನ್ನು ಮಾರುಕಟ್ಟೆ ಪರ ಆರ್ಥಿಕ ಸುಧಾರಣೆಗಳಿಗೆ ಡೆಂಗ್ ಷಿಯೋಪಿಂಗ್ ಅವರು ತೆರೆದ ನಂತರ, 80 ಕೋಟಿ ಜನ ಬಡತನದಿಂದ ಬಿಡಿಸಿಕೊಂಡಿದ್ದಾರೆ. ಇಷ್ಟು ಸಣ್ಣ ಅವಧಿಯಲ್ಲಿ ಇಷ್ಟೊಂದು ಜನರನ್ನು ಬಡತನದಿಂದ ಹೊರತರಲು ಯಾವ ದೇಶಕ್ಕೂ ಸಾಧ್ಯವಾಗಿಲ್ಲ. 'ಬಡತನದ ಎಲ್ಲ ರೂಪಗಳನ್ನು, ಎಲ್ಲ ಕಡೆಗಳಲ್ಲೂ ಕೊನೆಗಾಣಿಸಿ' ಎಂಬುದು ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಒಂದು. ಇದನ್ನು 2030ರೊಳಗೆ ಸಾಧಿಸಬೇಕಿದೆ. ಈ ಗುರಿಯನ್ನು ಚೀನಾ ಹತ್ತು ವರ್ಷ ಮೊದಲೇ ಸಾಧಿಸಿದೆ.

ದುರದೃಷ್ಟಕರ ಸಂಗತಿಯೆಂದರೆ, ಈ ಬಗ್ಗೆ ಭಾರತದ ರಾಜಕೀಯ ವಲಯಗಳಲ್ಲಿ ಅಥವಾ ಮಾಧ್ಯಮಗಳಲ್ಲಿ ಹೆಚ್ಚಿನ ಚರ್ಚೆ ಆಗಿಲ್ಲ. ಹಿಂದಿನ ವರ್ಷ ಗಾಲ್ವನ್ ಕಣಿವೆಯಲ್ಲಿ ನಡೆದ ಸಂಘರ್ಷವು ಭಾರತದಲ್ಲಿ ಚೀನಾ ವಿರೋಧಿ ಮನೋಭಾವವನ್ನು ಸೃಷ್ಟಿಸಿದೆ. ವಿಶ್ವಾಸದ ಕೊರತೆಯನ್ನು ತುಂಬಲು ಚೀನಾ ಮಾಡಬೇಕಿರುವುದು ಬಹಳ ಇದೆ. ಆದರೆ, ಹಲವು ರಂಗಗಳಲ್ಲಿ ಚೀನಾ ಸಾಧಿಸುತ್ತಿರುವ ಯಶಸ್ಸಿನ ವಿಚಾರದಲ್ಲಿ ನಾವು ಕುರುಡಾಗಬಾರದು.

2012ರಲ್ಲಿ ಅಧಿಕಾರ ವಹಿಸಿಕೊಂಡ ಷಿ ಅವರು 'ಗರೀಬಿ ಹಟಾವೊ'ವನ್ನು ತಮ್ಮ ರಾಜಕೀಯ ಆದ್ಯತೆಯನ್ನಾಗಿಸಿಕೊಂಡರು. ಮುಖ್ಯವಾಗಿ ಮೂರು ಕಾರಣಗಳಿಂದಾಗಿ ಅವರು ಇದನ್ನು ಮಾಡಿದರು – ರಾಷ್ಟ್ರೀಯ ಕಾರಣ, ಪಕ್ಷಕ್ಕೆ ಸಂಬಂಧಿಸಿದ ಕಾರಣ ಹಾಗೂ ವೈಯಕ್ತಿಕ ಕಾರಣ. ಮಾವೊ ನಂತರದ ಕಾಲಘಟ್ಟದಲ್ಲಿ ಆರ್ಥಿಕ ಬೆಳವಣಿಗೆ ಚೀನಾದಲ್ಲಿ ದೊಡ್ಡ ಪ್ರಮಾಣದಲ್ಲಿ ಇತ್ತಾದರೂ, ಆರ್ಥಿಕ ಅಸಮಾನತೆ ತೀವ್ರವಾಗಿತ್ತು. ಇಂದಿಗೂ ಅಲ್ಲಿ ಆದಾಯದ ಅಂತರ ತೀವ್ರವಾಗಿದೆ. ಹಾಗಾಗಿ, ಕಮ್ಯುನಿಸ್ಟ್ ಪಕ್ಷದ ಆಡಳಿತವಿರುವ, ತನ್ನನ್ನು ಸಮಾಜವಾದಿ ಎಂದು ಕರೆದುಕೊಳ್ಳುವ ರಾಷ್ಟ್ರಕ್ಕೆ ಸಾಮಾಜಿಕ-ಆರ್ಥಿಕ ಸಂರಚನೆಯ ಬುಡದಲ್ಲಿರುವವರ ಪರಿಸ್ಥಿತಿ ಉತ್ತಮಪಡಿಸುವುದು ಅಗತ್ಯವಾಗುತ್ತದೆ.

ಬಡತನ ಉಳಿದುಕೊಳ್ಳುವುದು ಕಮ್ಯುನಿಸ್ಟ್ ಆಡಳಿತಗಾರರು ಅಧಿಕಾರದಲ್ಲಿ ಏಕಿರಬೇಕು ಎಂಬ ಪ್ರಶ್ನೆಯನ್ನು ಮುಂದಕ್ಕೆ ತರಬಹುದಾಗಿತ್ತು. ಪಕ್ಷವು ಅಧಿಕಾರದ ಮೇಲೆ ಹೊಂದಿರುವ ಪಾರಮ್ಯವನ್ನು ಕಳೆದುಕೊಳ್ಳಬಹುದಿತ್ತು. ಹಾಗಾಗಿ ಚೀನಾದ ಪಾಲಿಗೆ 'ಗರೀಬಿ ಹಟಾವೊ' ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದ ಹೊಣೆಯಾಗಿತ್ತು. ವೈಯಕ್ತಿಕವಾಗಿ ಷಿ ಅವರಿಗೆ ಬಡತನ ವಿರೋಧಿ ಅಭಿಯಾನವು ಭಾವನಾತ್ಮಕ ಹಾಗೂ ರಾಜಕೀಯ ಉದ್ದೇಶ ಹೊಂದಿದೆ. ಷಿ ಅವರು ಹರೆಯದಲ್ಲಿ ಬಡತನವನ್ನು ಅನುಭವಿಸಿದವರು. ಸಾಂಸ್ಕೃತಿಕ ಕ್ರಾಂತಿಯ ಸಂದರ್ಭದಲ್ಲಿ ಷಿ ಅವರ ತಂದೆಯನ್ನು ಮಾವೊ ದೌರ್ಜನ್ಯಕ್ಕೆ ಗುರಿಮಾಡಿ, ಜೈಲಿಗೆ ತಳ್ಳಿದಾಗ ಷಿ ಅವರು ಏಳು ವರ್ಷಗಳ ಕಾಲ ಒಂದು ಹಳ್ಳಿಯ ಗುಹೆಯಲ್ಲಿ ಇದ್ದರು. ಚೀನಾ ಹಿಂದುಳಿದಿದ್ದನ್ನು ಹಾಗೂ ಜನರಲ್ಲಿನ ನೋವನ್ನು ಕಮ್ಯುನಿಸ್ಟ್ ಪಕ್ಷದ ಯುವ ಕಾರ್ಯಕರ್ತನಾಗಿ ಷಿ ಅವರು ಕಂಡಿದ್ದರು. ಹಾಗಾಗಿ, ದೇಶದ ಅತ್ಯುನ್ನತ ಹುದ್ದೆ ಸಿಕ್ಕಿದ ನಂತರ, ಅಳಿದುಳಿದ ಬಡತನವನ್ನು ತೊಲಗಿಸುವುದು ಅವರಿಗೆ ವೈಯಕ್ತಿಕವಾಗಿ ಪ್ರೀತಿಯ ಕೆಲಸವಾಯಿತು. ಈಗ ಸಿಕ್ಕಿರುವ ಯಶಸ್ಸು ಷಿ ಅವರಿಗೆ 2022ರಲ್ಲಿ ಕೊನೆಯಾಗಲಿರುವ ತಮ್ಮ ಎರಡನೆಯ ಅವಧಿಯ ನಂತರವೂ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಡುತ್ತದೆ.

ಭಾರತ ಮತ್ತು ಚೀನಾದ ಆಡಳಿತ ವ್ಯವಸ್ಥೆ ಹಾಗೂ ರಾಜಕೀಯ ಪರಿಸ್ಥಿತಿ ಬೇರೆಯಾಗಿದ್ದರೂ ಬಡತನ ನಿರ್ಮೂಲನೆಗೆ ಚೀನಾ ಅನುಸರಿಸಿದ ಮಾರ್ಗದಲ್ಲಿ ಭಾರತಕ್ಕೆ ಮುಖ್ಯ ಪಾಠಗಳಿವೆ. ಅತ್ಯುನ್ನತ ಹಂತದಲ್ಲಿ ಗಟ್ಟಿ ರಾಜಕೀಯ ಇಚ್ಛಾಶಕ್ತಿ ಇಲ್ಲದಿದ್ದರೆ, ಸರ್ಕಾರ ಹಾಗೂ ಜನರ ಸಂಘಟಿತ ಪ್ರಯತ್ನ ಇಲ್ಲದಿದ್ದರೆ, ಹೊಸ ಕಾರ್ಯತಂತ್ರಗಳು ಇಲ್ಲದಿದ್ದರೆ ಯಾವುದೇ ಐತಿಹಾಸಿಕ ಬದಲಾವಣೆ ಸಾಧಿಸಲು ಆಗದು ಎಂಬುದು ಒಂದು ಪಾಠ. ಷಿ ಅವರು ಪಕ್ಷದ ಹಾಗೂ ಸರ್ಕಾರದ ಪೂರ್ಣ ಶಕ್ತಿಯನ್ನು ಬಳಸಿ ಜಗತ್ತು ಹಿಂದೆಂದೂ ಕಾಣದ ಪ್ರಮಾಣದಲ್ಲಿ ಬಡತನ ವಿರೋಧಿ ಅಭಿಯಾನ ಶುರು ಮಾಡಿದರು. ಷಿ ಅವರು ಖುದ್ದಾಗಿ 50ಕ್ಕೂ ಹೆಚ್ಚು ಕಡೆ ಭೇಟಿ ನೀಡಿ ಪರಿಶೀಲಿಸಿದರು. ಅವರ ಭೇಟಿಗಳ ದೃಶ್ಯಾವಳಿಗಳು ಯೂಟ್ಯೂಬ್‌ನಲ್ಲಿ ಲಭ್ಯವಿವೆ.

250 ಬಿಲಿಯನ್ ಅಮೆರಿಕನ್ ಡಾಲರ್‌ನಷ್ಟು (ಸುಮಾರು ₹ 18 ಲಕ್ಷ ಕೋಟಿ) ಹಣವನ್ನು ಬಡತನ ನಿರ್ಮೂಲನೆಗಾಗಿ ಕಳೆದ ಎಂಟು ವರ್ಷಗಳಲ್ಲಿ ವೆಚ್ಚ ಮಾಡಲಾಯಿತು. ಬಡತನದ ವಿರುದ್ಧ ಹೋರಾಡಲು ಬದ್ಧತೆಯುಳ್ಳ, ಪಕ್ಷದ 30 ಲಕ್ಷಕ್ಕೂ ಹೆಚ್ಚು ಕಾರ್ಯಕರ್ತರನ್ನು, ಸಂಶೋಧಕರನ್ನು, ಸರ್ಕಾರಿ ಅಧಿಕಾರಿಗಳನ್ನು ನಗರ ಮತ್ತು ಪಟ್ಟಣಗಳಿಂದ ಹಳ್ಳಿಗಳಿಗೆ ಕಳುಹಿಸಲಾಯಿತು. ಬಡತನ ನಿರ್ಮೂಲನ ಕಾರ್ಯಕ್ರಮಗಳಲ್ಲಿ ಭ್ರಷ್ಟಾಚಾರ ಕೊನೆಗೊಳಿಸುವ ಬಗ್ಗೆ ಷಿ ಮತ್ತೆ ಮತ್ತೆ ಮಾತನಾಡಿದರು. ಪಕ್ಷವು ಸಾವಿರಾರು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿತು. ಬಡತನ ನಿರ್ಮೂಲನೆಗಾಗಿ ರೂಪಿಸಿದ ವಿಶೇಷ ಕಾರ್ಯತಂತ್ರವು ಹೆಚ್ಚಿನ ಯಶಸ್ಸನ್ನು ತಂದುಕೊಟ್ಟಿತು.

ಈ ಕಾರ್ಯತಂತ್ರವು ಬಡ ಹಳ್ಳಿಗಳನ್ನು ಗುರುತಿಸಿದ್ದು ಮಾತ್ರವಲ್ಲದೆ, ಬಡ ಕುಟುಂಬಗಳನ್ನು ಹಾಗೂ ವ್ಯಕ್ತಿಗಳನ್ನು ಗುರಿಯಾಗಿರಿಸಿಕೊಂಡಿತ್ತು. ನಂತರ, ದತ್ತಾಂಶ ವಿಶ್ಲೇಷಣೆ ಹಾಗೂ ಇತರ ಡಿಜಿಟಲ್ ತಂತ್ರಜ್ಞಾನಗಳ ಸಹಾಯದಿಂದ ಯೋಜನೆಯನ್ನು ಅನುಷ್ಠಾನಕ್ಕೆ ತರುವಂತೆ ಸ್ಥಳೀಯ ನಾಯಕರಿಗೆ ತಿಳಿಸಲಾಯಿತು. ಕೃಷಿ ಸುಧಾರಣೆ, ಸ್ಥಳೀಯ ಹಾಗೂ ಗೃಹ ಕೈಗಾರಿಕೆಗಳು, ಹೂಡಿಕೆ ಮತ್ತು ಮಾರುಕಟ್ಟೆ ಬೆಂಬಲದ ಖಾತರಿ, ಆರೋಗ್ಯ ಸೇವೆ, ಶಿಕ್ಷಣ, ಕೌಶಲ ಅಭಿವೃದ್ಧಿ ಇವೆಲ್ಲ ಈ ಕಾರ್ಯಕ್ರಮದಲ್ಲಿದ್ದವು.

ಚೀನಾದ ಸರ್ಕಾರದ ಪ್ರಚಾರಾಂದೋಲನದಲ್ಲಿ ಕೆಲವು ಉತ್ಪ್ರೇಕ್ಷೆಗಳು ಇದ್ದಿರಬಹುದು ಎಂಬುದು ನಿಜ. ಆದರೆ, ನಮ್ಮ ನೆರೆಯ ದೇಶವು ತನ್ನ ಮತ್ತು ಇಡೀ ಮನುಕುಲದ ಪಾಲಿಗೆ ಮಹತ್ವದ್ದಾಗಿರುವುದನ್ನು ಸಾಧಿಸಿದೆ ಎಂಬುದನ್ನು ಪೂರ್ವಗ್ರಹ ಹೊಂದಿಲ್ಲದ, ಚೀನಾದ ಹಳ್ಳಿ-ನಗರಗಳನ್ನು ಕಂಡವರು ಹೇಳಬಲ್ಲರು. ಚೀನಾದಲ್ಲಿ ಪ್ರಜಾತಂತ್ರವಿಲ್ಲ, ಅದು ಆ ದೇಶದ ದೊಡ್ಡ ದೌರ್ಬಲ್ಯ ಎಂಬುದು ನಿಜ. ಹೀಗಿದ್ದರೂ, ಬಡ ದೇಶವಾಗಿದ್ದ ಅದು ಅರ್ಧ ಶತಮಾನಕ್ಕಿಂತ ಕಡಿಮೆ ಅವಧಿಯಲ್ಲಿ ಎರಡನೆಯ ಅತ್ಯಂತ ಸಂಪದ್ಭರಿತ ರಾಷ್ಟ್ರವಾಗಿ ಪ್ರಶಂಸಾರ್ಹ ರೀತಿಯಲ್ಲಿ ಬೆಳೆದಿದೆ. ನಾವು ಅವರ ಯಶಸ್ಸನ್ನು ಒಪ್ಪಿಕೊಳ್ಳಬೇಕು, ಬಡತನದ ವಿರುದ್ಧದ ಹೋರಾಟದಲ್ಲಿ ನಮಗೆ ಸೂಕ್ತವಾದ ಪಾಠಗಳನ್ನು ಕಲಿತುಕೊಳ್ಳಬೇಕು.

ಚುರುಮುರಿ



ಜಾತ್ರೆ ಜಂಜಾಟ

• ಸಿ.ಎನ್.ರಾಜು

ಚಟ್ನಿಹಳ್ಳಿಯಲ್ಲಿ ಮಂತ್ರಿಗಳು ಗ್ರಾಮ ವಾಸ್ತವ್ಯ ಮಾಡಿದ್ದರು. ಊರಿನ ಸೆಂಚುರಿ ಗೌಡ ತಿಮ್ಮಜ್ಜನನ್ನು ಇಬ್ಬರು ಎತ್ತಿಕೊಂಡು ಬಂದು ಮಂತ್ರಿ ಬಳಿ ಕೂರಿಸಿದರು.

'ಏನಜ್ಜಾ ನಿನ್ನ ಅಹವಾಲು?' ಮಂತ್ರಿ ಕೇಳಿದರು.

'ಕೊರೊನಾ ಕಾಟ ಅಂತ ಹೋದ ವರ್ಷನೂ ಮಾರಮ್ಮನ ಜಾತ್ರೆ ಮಾಡಲಿಲ್ಲ, ಈ ವರ್ಷ ಮಾಡಿ' ಅರ್ಜಿ ಕೊಟ್ಟ ತಿಮ್ಮಜ್ಜ.

'ಕೊರೊನಾ ಉಲ್ಬಣ ಆಗಿದೆ, ಜಾತ್ರೆಗಳಿಗೆ ಅನುಮತಿ ಕೊಡೋದಿಲ್ಲ. ಪರಿಸ್ಥಿತಿ ಸುಧಾರಿಸಿದ ಮೇಲೆ ಮಾಡ್ರೀ...' ಅಂದರು.

'ಅಲ್ಲೀತನಕ ನಾನು ಇರ್ತೀನೊ, ಸಾಯ್ತೀನೊ ಬದುಕಿದ್ದಾಗಲೇ ಮಾರಮ್ಮನ ತೇರಿನ ಮೇಲೆ ಧವನ-ಬಾಳೆಹಣ್ಣು ಎಸೆದು ತಾಯಿಗೆ ಕೈ ಮುಗಿಬೇಕು' ತಿಮ್ಮಜ್ಜ ಕೊನೆ ಆಸೆ ಹೇಳಿಕೊಂಡ.

'ನೀನು ಸಾಯ್ತಿ ಅಂತ ಜಾತ್ರೆ ಮಾಡಿದ್ರೆ ಕೊರೊನಾ ನುಗ್ಗಿ ಊರಿನವರನ್ನೆಲ್ಲಾ ಸಾಯಿಸ್ತದೆ...' ಮಂತ್ರಿ ಬೆಂಬಲಿಗ ಪಂಚಾಯಿತಿ ಮೆಂಬರ್ ಶಿವಲಿಂಗ ಸಿಡುಕಿದ.

'ಹಾಗಂತ ಊರಿಗೆ ಬೇಲಿ ಹಾಕ್ಕೊಂಡು ಬಾಳಕ್ಕಾಗುತ್ತಾ, ದೇವರ ಕಾರ್ಯ ಮಾಡೋದು ಬೇಡ್ವಾ, ಮಾರಮ್ಮ ಮುನಿಸಿಕೊಂಡ್ರೆ ಊರು ಉಳೀತದೇನ್ಲಾ?' ತಿಮ್ಮಜ್ಜ ರೇಗಿದ.

'ದೇವರ ಕಾರ್ಯ ಮಾಡಲೇಬೇಕು ಸಾರ್, ಸಾಮಾಜಿಕ ಅಂತರ ಕಾಪಾಡಿಕೊಂಡು, ಮಾಸ್ಕ್ ಹಾಕ್ಕೊಂಡು, ಸ್ಯಾನಿಟೈಸರ್‌ನಲ್ಲಿ ಕೈ ತೊಳೆದುಕೊಂಡು ತೇರು ಎಳೀತೀವಿ...' ಅಂದ ಜಾತ್ರಾ ಸಮಿತಿ ಸದಸ್ಯ ಪರಮೇಶಿ.

'ಪರ್ಮಿಷನ್ ಕೊಡಕ್ಕಾಗಲ್ಲರೀ...' ಮಂತ್ರಿ ಖಡಕ್ಕಾಗಿ ಹೇಳಿದ್ರು.

'ತಿಮ್ಮಜ್ಜ ಸತ್ತರೆ ಸರ್ಕಾರವೇ ಹೊಣೆ. ಮುಂದಿನ ಜಾತ್ರೆವರೆಗೂ ಅಜ್ಜನನ್ನು ಬದುಕಿಸಿ, ವೃದ್ಧಾಪ್ಯ ವೇತನ ಪಡೆಯುವಂತೆ ಕಾಪಾಡೋದು ನಿಮ್ಮ ಜವಾಬ್ದಾರಿ' ಅಂತ ಜನ ಕೂಗಾಡಿದರು.

'ಇನ್ಮೇಲೆ ತಿಮ್ಮಜ್ಜನ ಯೋಗಕ್ಷೇಮವನ್ನು ಸರ್ಕಾರ ನೋಡಿಕೊಳ್ಳುತ್ತದೆ' ಎಂದ ಮಂತ್ರಿ, 'ಪ್ರತಿದಿನ ತಿಮ್ಮಜ್ಜನ ಆರೋಗ್ಯ ತಪಾಸಣೆ ಮಾಡಿ ನನಗೆ ರಿಪೋರ್ಟ್ ಕೊಡಿ' ಎಂದು ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಲಸಿಕೆ ಹಾಕಿಸಲು ತಿಮ್ಮಜ್ಜನನ್ನು ಅಧಿಕಾರಿಗಳು ಆಸ್ಪತ್ರೆಗೆ ಕರೆದೊಯ್ದರು.

ಸಂಗತ

ವಾಯುಗುಣ ಶುದ್ಧೀಕರಿಸಲಿದೆ ಒಣ ಹುಲ್ಲು!

ಪೆಟ್ರೋಲಿಯಂ ಇಂಧನದ ಹಂಗಿಲ್ಲದಂತೆ ಮಾಡಲಿದೆ ಕಂಪ್ರೆಸ್ಡ್ ಬಯೊಗ್ಯಾಸ್

• ಶ್ರೀಗುರು

ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆ ಇಸ್ರೊದವರು ಹಾರಿಸಿದ ರಾಕೆಟ್‌ಗಳಂತೆ ಮೇಲಕ್ಕೇರುತ್ತಿರುವಾಗ ಜರ್ಮನಿಯ ವರ್ಬಿಯೋ ಕಂಪನಿಯು ವಾಹನ ಸವಾರರಿಗೆ, ಗೃಹಿಣಿಯರಿಗೆ ಸಂತಸದ ಸುದ್ದಿ ನೀಡಿದೆ. ಅದೇನೆಂದರೆ, ನಿಮ್ಮ ವಾಹನಗಳನ್ನು ಓಡಿಸಲು ಇನ್ನು ಮುಂದೆ ಪೆಟ್ರೋಲ್, ಡೀಸೆಲ್ ಬೇಕಿಲ್ಲ! ಬದಲಿಗೆ ಭತ್ತದ ಗದ್ದೆಯ ಒಣ ಹುಲ್ಲೇ ಸಾಕು!

ಪಂಜಾಬ್‌ನ ಸಂಗ್ರೂರ ಜಿಲ್ಲೆಯ ಭೂತಲ್ ಕಲನ್ ಹಳ್ಳಿಯ ಭತ್ತದ ಗದ್ದೆಯ ನಡುವೆಯೇ ಭತ್ತದ ಕೂಳೆಯಿಂದ ಒತ್ತಡೀಕರಿಸಿದ ಜೈವಿಕ ಅನಿಲ (ಕಂಪ್ರೆಸ್ಡ್ ಬಯೊ ಗ್ಯಾಸ್) ತಯಾರಿಸುವ ಘಟಕ ಸ್ಥಾಪಿಸಿರುವ ಕಂಪನಿ, ಎರಡು ಟನ್ ಭತ್ತದ ಹುಲ್ಲಿನಿಂದ ವರ್ಷವಿಡೀ ಕಾರು ಓಡಿಸಬಹುದು ಎಂಬ ಭರವಸೆ ನೀಡಿದೆ. ಹಾಗೇನಾದರೂ ಆದಲ್ಲಿ ಎರಡು ನೇರ ಲಾಭಗಳಿವೆ. ಒಂದು, ದಿನೇ ದಿನೇ ದುಬಾರಿಯಾಗುತ್ತಿರುವ ಪೆಟ್ರೋಲ್, ಡೀಸೆಲ್‌ಗಳನ್ನು ಮರೆತು, ಬಯೊಗ್ಯಾಸ್ ಬಳಸಿ ಹಾಯಾಗಿ ವಾಹನ ಓಡಿಸಬಹುದು. ಎರಡನೆಯದು, ದೆಹಲಿ, ಹರಿಯಾಣ, ಪಂಜಾಬ್‌ನಲ್ಲಿ ಭತ್ತದ ಕೂಳೆ ಸುಡುವುದನ್ನು ನಿಲ್ಲಿಸಿ, ಹಬ್ಬುತ್ತಿರುವ ವಾಯುಮಾಲಿನ್ಯವನ್ನು ತಡೆಯಬಹುದು.

ಯೋಜಿಸಿದಂತೆ ಎಲ್ಲವೂ ನಡೆದರೆ, ಬರುವ ಜೂನ್ ವೇಳೆಗೆ ಕಂಪನಿ ಸ್ಥಾಪಿಸುವ ಬಯೊಗ್ಯಾಸ್ ಘಟಕಗಳು ಕಾರ್ಯಾರಂಭ ಮಾಡಿ ಇಂಧನ ಸಮಸ್ಯೆಯನ್ನು ತಕ್ಕ ಮಟ್ಟಿಗೆ ಪರಿಹರಿಸುತ್ತವೆ. ಭತ್ತದ ಕೂಳೆಯಿಂದ ತಯಾರಾಗುವ ಕಂಪ್ರೆಸ್ಡ್ ಬಯೊಗ್ಯಾಸ್ ಈಗ ಬಳಕೆಯಲ್ಲಿರುವ ಪೆಟ್ರೋಲಿಯಂ ಇಂಧನ ಮೂಲದ ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (CNG) ಅನ್ನು ರಿಪ್ಲೇಸ್ ಮಾಡುತ್ತದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೆರಡೂ ಸರಿಯಾಗಿ ಯೋಚಿಸಿದರೆ ಇನ್ನೆರಡು ವರ್ಷಗಳಲ್ಲಿ 5,000 ಸಿಬಿಜಿ ಘಟಕಗಳು ತಲೆ ಎತ್ತುತ್ತವೆ.

ಕೇಂದ್ರ ಸರ್ಕಾರವು ಸತತ್ (SATAT)- ಸಸ್ಟೇನಬಲ್ ಆಲ್ಟರ್ನೇಟಿವ್ ಟುವರ್ಡ್ಸ್ ಅಫೋರ್ಡಬಲ್ ಟ್ರಾನ್ಸ್‌ಪೋರ್ಟೇಶನ್ ಯೋಜನೆಯ ಅಡಿ ಈ ಸಾಲಿನಲ್ಲಿ 900 ಕಂಪ್ರೆಸ್ಡ್ ಬಯೊಗ್ಯಾಸ್ ಘಟಕಗಳನ್ನು ದೇಶದ ವಿವಿಧೆಡೆ ಸ್ಥಾಪಿಸಲು ಜೆಬಿಮ್, ಅದಾನಿ ಗ್ಯಾಸ್, ಪೆಟ್ರೊನೆಟ್ ಎಲ್‌ಎನ್‌ಜಿ ಟೊರೆಂಟ್ ಗ್ಯಾಸ್‌ನಂಥ ಬೃಹತ್ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದು, ಮೂವತ್ತು ಸಾವಿರ ಕೋಟಿ ರೂಪಾಯಿಗಳನ್ನು ವ್ಯಯಿಸಲಿದೆ. 2023ರ ವೇಳೆಗೆ ದೇಶದಾದ್ಯಂತ ಒಟ್ಟು 15 ದಶಲಕ್ಷ ಮೆಟ್ರಿಕ್ ಟನ್ ಅನಿಲವನ್ನು ಉತ್ಪಾದಿಸುವ ಗುರಿಯೂ ಇದ್ದು ಲಕ್ಷಾಂತರ ಉದ್ಯೋಗಾವಕಾಶಗಳು ತೆರೆದುಕೊಳ್ಳಲಿವೆ.

ಸಿಬಿಜಿಯನ್ನು ಕೃಷಿ ತ್ಯಾಜ್ಯ, ಜಾನುವಾರು ಸಗಣಿ, ಹಿಂಡಿ ಬಿಸಾಕಿದ ಕಬ್ಬಿನ ಚರಟ, ಡಿಸ್ಟಿಲರಿ ಘಟಕಗಳ ತ್ಯಾಜ್ಯ, ಗಟಾರದ ನೀರು, ಊರು- ನಗರಗಳ ಘನ ತ್ಯಾಜ್ಯ, ಕಾರ್ಖಾನೆಗಳ ಸಂಸ್ಕರಿಸಬಹುದಾದ ತ್ಯಾಜ್ಯ ಮತ್ತು ಅರಣ್ಯ ತ್ಯಾಜ್ಯಗಳನ್ನು ಬಳಸಿ ತಯಾರಿಸಲಾಗುತ್ತದೆ. ಅಡುಗೆ ಅನಿಲದಷ್ಟೇ ದಹನ ಸಾಮರ್ಥ್ಯ (ಕ್ಯಾಲೋರಿಫಿಕ್ ವ್ಯಾಲ್ಯು) ಹೊಂದಿರುವ ಸಿಬಿಜಿಯನ್ನು ವಾಹನ, ಕಾರ್ಖಾನೆ, ಅಡುಗೆ ಮತ್ತು ಇತರ ವಾಣಿಜ್ಯ ಅಗತ್ಯಗಳಿಗೆ ಅನಾಯಾಸವಾಗಿ ಬಳಸಬಹುದು.

ಅಂದುಕೊಂಡಂತೆ ಕೆಲಸ ನಡೆದರೆ ಇದೇ ವರ್ಷಾಂತ್ಯಕ್ಕೆ ಕಚ್ಚಾ ತೈಲದ ಆಮದನ್ನು ಶೇ 10ರಷ್ಟು ಕಡಿಮೆ ಮಾಡಬಹುದಾಗಿದೆ. ಉತ್ಪಾದನೆಗೆ ಬೇಕಾದ ತಂತ್ರಜ್ಞಾನ ಪಡೆಯಲು ಇಂಡಿಯನ್ ಆಯಿಲ್, ಪ್ರಜ್ ಇಂಡಸ್ಟ್ರೀಸ್, ಭಾರತ್ ಬಯೊಗ್ಯಾಸ್ ಮತ್ತು ಸಿಇಐಡಿ ಕನ್‌ಸಲ್ಟೆಂಟ್‌ಗಳ ಜೊತೆಯೂ ಒಪ್ಪಂದಕ್ಕೆ ಸಹಿ ಮಾಡಿರುವ ಕೇಂದ್ರ ಸರ್ಕಾರ, ನಿರೀಕ್ಷಿತ ಬಂಡವಾಳ ಸಿಕ್ಕೇ ಸಿಗುತ್ತದೆ ಎಂಬ ಉಮೇದಿನಲ್ಲಿದೆ. ಯೋಜನೆಯನ್ನು ಯಶಸ್ವಿಗೊಳಿಸಲು ಸ್ಪಷ್ಟ ಕ್ರಿಯಾಯೋಜನೆ ತಯಾರಾಗಿದ್ದು, ಸಿಬಿಜಿ ತಯಾರಿಕೆಯಿಂದ ಪೆಟ್ರೋಲಿಯಂ ಉತ್ಪನ್ನಗಳ ಆಮದಿಗೆ ನಾವು ಮಾಡುತ್ತಿರುವ ಖರ್ಚಿನಲ್ಲಿ ಶೇ 40ರಷ್ಟನ್ನು ಉಳಿಸಬಹುದೆಂಬ ಲೆಕ್ಕಾಚಾರವಿದೆ.

ಈಗಾಗಲೇ ಪ್ರಾಯೋಗಿಕ ಕಾರ್ಯಾಚರಣೆ ಶುರು ಮಾಡಿರುವ ಜರ್ಮನಿಯ ವರ್ಬಿಯೋ, ಉತ್ತರ ಭಾರತದ ಭತ್ತದ ಬೆಳೆಗಾರರಿಂದ ಭತ್ತದ ಹುಲ್ಲು ಖರೀದಿಸಲು ಟನ್‌ಗೆ ₹ 600 ನಿಗದಿ ಮಾಡಿ, ಹುಲ್ಲನ್ನು ಸುಡದೆ ತಮಗೇ ನೀಡುವಂತೆ ಮನವಿ ಮಾಡಿದೆ. ದಿನಕ್ಕೆ 350 ಟನ್ ಬೆಳೆ ತ್ಯಾಜ್ಯವನ್ನು ಬಳಸಿಕೊಂಡು 33 ಟನ್ ಸಿಬಿಜಿಯನ್ನು ಉತ್ಪಾದಿಸಿ ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ.

ಅನಿಲ ಉತ್ಪಾದನೆಯ ನಂತರ ಉಳಿಯುವ ತ್ಯಾಜ್ಯದಿಂದ ವಾರ್ಷಿಕ 5 ಕೋಟಿ ಟನ್ ಜೈವಿಕ ಗೊಬ್ಬರ ತಯಾರಿಸಬಹುದು. ಬೆಳೆ ಬೆಳೆಯಲು ಇದನ್ನು ಉಪಯೋಗಿಸಿದರೆ ಇಳುವರಿ ಶೇ 20ರಷ್ಟು ಹೆಚ್ಚುತ್ತದೆ ಎಂದಿರುವ ಪಂಜಾಬ್ ಅಗ್ರಿ ಯೂನಿವರ್ಸಿಟಿಯ ವಿಜ್ಞಾನಿಗಳು, ತ್ಯಾಜ್ಯದಲ್ಲಿ ಉಳಿಯುವ ಸಿಲಿಕಾ, ಬೆಳೆ ಪ್ರಮಾಣವನ್ನು ಹೆಚ್ಚಿಸುವುದಲ್ಲದೆ ಭಾರದ ಲೋಹಗಳಾದ ಆರ್ಸೆನಿಕ್, ಕ್ಯಾಡ್ಮಿಯಂ, ಸೀಸಗಳು ಸಸ್ಯಕ್ಕೆ ಸೇರ್ಪಡೆಯಾಗದಂತೆ ನೋಡಿಕೊಂಡು ರಸಗೊಬ್ಬರಗಳ ಬಳಕೆಯನ್ನೂ ತಡೆಯುತ್ತದೆ ಎಂದು ಖಚಿತವಾಗಿ ಹೇಳುತ್ತಾರೆ. ಜೈವಿಕ ಗೊಬ್ಬರದಲ್ಲಿ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಜಾಸ್ತಿ ಇರುವುದರಿಂದ ಹೊಲಗದ್ದೆಗಳಿಗೆ ಹೆಚ್ಚಿನ ನೀರೂ ಬೇಕಾಗುವುದಿಲ್ಲ.

ಪ್ಯಾರಿಸ್ ಒಪ್ಪಂದಕ್ಕೆ ಸಹಿ ಹಾಕಿ ವಾಯುಗುಣ ಶುದ್ಧೀಕರಣಕ್ಕೆ ಪಣ ತೊಟ್ಟಿರುವ ನಾವು, ಸಿಬಿಜಿ ಬಳಕೆಯಿಂದ ಪೆಟ್ರೋಲಿಯಂ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಲು ಸಿಕ್ಕಿರುವ ಸದವಕಾಶವನ್ನು ಯಾವ ಕಾರಣಕ್ಕೂ ಕೈಚೆಲ್ಲಬಾರದು.

ವಾಚಕರ ವಾಣಿ

ಮೀಸಲಾತಿಯ ಮಿತಿ ಮೀರದಿರಲಿ

ಈಗಿನ ದಿನಗಳಲ್ಲಿ ವಿಶೇಷವಾಗಿ ಮಧ್ಯಮ ವರ್ಗದ ಜನರು ಸರ್ಕಾರಿ ನೌಕರಿಯ ಮೇಲೆ ಅವಲಂಬಿತರಾಗಿಲ್ಲ. ಆದರೆ ಎಲ್ಲರೂ ಮೀಸಲಾತಿ ಬಯಸುತ್ತಿರುವುದು ಶೈಕ್ಷಣಿಕ ಸೀಟುಗಳಿಗಾಗಿ. ಉತ್ತಮ ಸರ್ಕಾರಿ ಸಂಸ್ಥೆಗಳಲ್ಲಿ ತುಂಬಾ ಸ್ಪರ್ಧೆ ಇದೆ. ಈಗಿರುವ ಶೇ 50ರ ಪರಿಮಿತಿಯನ್ನು ಮೀರಿ ಮೀಸಲಾತಿಯನ್ನು ನೀಡಬೇಕೆಂದು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ. ಅಂದರೆ ಜನರಲ್ ಕೆಟಗರಿ ಸೀಟುಗಳು ಇನ್ನೂ ಕಡಿಮೆಯಾಗುತ್ತವೆ.

ಜನರಲ್ ಕೆಟಗರಿಯೆಂದರೆ ಅದು ಬರೀ ಪ್ರಬಲ ಜಾತಿಯವರಿಗೆ ಸಂಬಂಧಿಸಿದ್ದು ಎನ್ನುವ ಭ್ರಮೆ ಬಹುಜನರಿಗೆ ಇದೆ. ಯಾವುದೇ ಮೀಸಲಾತಿ ಕೆಟಗರಿ ಇದ್ದರೂ ಜನರಲ್ ಕೆಟಗರಿಯಲ್ಲಿ ಸೀಟು ಲಭ್ಯವಿದ್ದರೆ ಅದಕ್ಕೆ ಆದ್ಯತೆ ನೀಡಲಾಗುತ್ತದೆ. ಅಂದಾಗಲೇ ಮೀಸಲಾತಿಗೆ ಅರ್ಥ ಬರುವುದು. ಇದು ಬಹುಜನರಿಗೆ ತಿಳಿದಿಲ್ಲವೆಂದೆನಿಸುತ್ತದೆ. ಆರ್ಥಿಕವಾಗಿ ಹಿಂದುಳಿದವರಿಗಾಗಿ ಈಗಾಗಲೇ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಅಂದರೆ ಇಲ್ಲಿಯವರೆಗೆ ಯಾವ ಜಾತಿಗಳಿಗೆ ಮೀಸಲಾತಿ ಇರಲಿಲ್ಲವೋ ಅವರಿಗಾಗಿ ಇನ್ನೊಂದು ಕೆಟಗರಿ ಮಾಡಿ ಮೀಸಲಾತಿ ನೀಡಿದಂತಾಯಿತು. ನಮ್ಮದು 3ಬಿ ಕೆಟಗರಿಯಾದರೂ ಹೆಚ್ಚಿನ ಆದಾಯದ ಕಾರಣ ಜನರಲ್ ಕೆಟಗರಿಯಲ್ಲಿ ಬರುತ್ತೇವೆ ಮತ್ತು ಇದೇ ರೀತಿ ಎಲ್ಲ ಕೆಟಗರಿಯವರೂ ಕೆನೆಪದರ ನಿಯಮದ ಪ್ರಕಾರ ಜನರಲ್ ಕೆಟಗರಿಯಲ್ಲಿ ಸ್ಪರ್ಧಿಸಬೇಕು. ಜನರಲ್ ಕೆಟಗರಿಯ ಸೀಟುಗಳು ಎಲ್ಲರಿಗೂ ಸಂಬಂಧಿಸಿದ ಕಾರಣ ಇವು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಿರಬೇಕು.

ಪ್ರೊ. ಶಶಿಧರ್ ಪಾಟೀಲ್, ಬಾಗಲಕೋಟೆ

ನಿಸ್ವಾರ್ಥ ಸೇವೆ, ಅನುಕರಣೀಯ ಪ್ರೋತ್ಸಾಹ

'ಮಕ್ಕಳ ಸೆಳೆದ ರೇಖಾ ಬಾಂಡ್' (ಪ್ರ.ವಾ., ಮಾರ್ಚ್ 24) ಖಂಡಿತಾ ಒಳ್ಳೆಯ ಸುದ್ದಿ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಶಿಕ್ಷಕಿ ರೇಖಾ ಪ್ರಭಾಕರ್ ಅವರು ಸರ್ಕಾರಿ ಶಾಲೆ ಸೇರುವ ಮಕ್ಕಳಿಗೆ ಸ್ವಂತ ಹಣದಲ್ಲಿ ಒಂದು ಸಾವಿರ ರೂಪಾಯಿ ಮೌಲ್ಯದ ಬ್ಯಾಂಕ್ ಠೇವಣಿಯ ಬಾಂಡ್ ಯೋಜನೆ ಜಾರಿಗೆ ತಂದಿರುವುದು ಶ್ಲಾಘನೀಯ. ಮಕ್ಕಳ ಹೆಸರಿನಲ್ಲಿ ಹತ್ತು ವರ್ಷದ ಅವಧಿಗೆ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟು, ಬಾಂಡ್ ಅನ್ನು ಮಕ್ಕಳ ಪೋಷಕರಿಗೆ ನೀಡುವ ಮೂಲಕ ಕೂಲಿ ಕಾರ್ಮಿಕರ ಮಕ್ಕಳಿಗೆ ವಿದ್ಯೆ ಕಲಿಯಲು ಪ್ರೋತ್ಸಾಹ ನೀಡುತ್ತಿರುವುದು ಅನುಕರಣೀಯ.

ಅವರ ಪತಿ ಸಹ ಪತ್ನಿಯ ಕೈಂಕರ್ಯಕ್ಕೆ ಕೈಜೋಡಿಸಿರುವುದು ಮೆಚ್ಚುವಂತಹದ್ದು. ಶಾಲೆಗೆ ಮಕ್ಕಳು ಬಂದರೇನು ಬಿಟ್ಟರೇನು ಎಂದುಕೊಳ್ಳುವವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಈ ಕಾಲದಲ್ಲಿ ಅಪರೂಪವಾಗಿರುವ ರೇಖಾ ಅವರ ನಿಸ್ವಾರ್ಥ ಸೇವೆ ಅಭಿನಂದನಾರ್ಹ.

ಅನುರಾಧ ಆರ್. ತಾಪ್ಸೆ, ದಾವಣಗೆರೆ

ಪರಿಸರ ಪ್ರಜ್ಞೆ: ಬೇಕಾಗಿದೆ ಜನಾಂದೋಲನ

'ಘಟ್ಟ ಉಳಿದರೆ ಘಟ ಉಳಿದೀತು!' ಅಖಿಲೇಶ್ ಚಿಪ್ಪಳಿ ಅವರ ವಿಶ್ಲೇಷಣೆಯು (ಪ್ರ.ವಾ., ಮಾರ್ಚ್ 24) ಪರಿಸರದ ನೆಲೆಯಲ್ಲಿ ಎಲ್ಲರ ಕಣ್ಣು ತೆರೆಸುವಂತಿದೆ. ಅಭಿವೃದ್ಧಿಯ ಹೆಸರಿನಲ್ಲಿ ವಿನಾಶದತ್ತ ಸಾಗುತ್ತಿರುವ ಪರಿಸರ, ಜೀವವೈವಿಧ್ಯ, ಸಸ್ಯಸಂಕುಲದ ಕುರಿತು ಪ್ರಕಟಗೊಂಡ ಇಂತಹ ನೂರಾರು ಲೇಖನಗಳು, ವ್ಯಕ್ತವಾದ ಸಾವಿರಾರು ಅಭಿಪ್ರಾಯಗಳು ಆಡಳಿತಾರೂಢರು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಎಚ್ಚರಿಸದಿರುವುದು ಅಚ್ಚರಿಯನ್ನು ಉಂಟುಮಾಡುತ್ತದೆ. ಪರಿಸರ ಉಳಿಯಲಿ ಬಿಡಲಿ ಅವೈಜ್ಞಾನಿಕವಾದರೂ ಬೃಹತ್ ಯೋಜನೆಗಳನ್ನು ಹುಟ್ಟುಹಾಕುವಲ್ಲಿ ತಮಗೆ ದಕ್ಕಬಹುದಾದ ಲಾಭ, ಎಲ್ಲ ಮಾಫಿಯಾ ಬಳಗಕ್ಕೆ ಮಣೆಹಾಕಿ ಭರಪೂರ ಉಣಬಡಿಸುವ ಹುನ್ನಾರವೇ ಮುಖ್ಯವಾದಾಗ ಅಂತಹ ಮನಃಸ್ಥಿತಿಯನ್ನು ಬದಲಾಯಿಸುವುದೆಂತು?

ಪಶ್ಚಿಮಘಟ್ಟಗಳ ಮೇಲೆ ನಡೆಯುತ್ತಿರುವ ನಿರಂತರ ದಬ್ಬಾಳಿಕೆಗೆ ಕೊನೆಯೆಂಬುದೇ ಇಲ್ಲವಾಗಿದೆ. ಪರಿಣಾಮ ಶೂನ್ಯವಾಗಿರುವ, ಸಾವಿರಾರು ಕೋಟಿ ಹಣವನ್ನು ಈಗಾಗಲೇ ನುಂಗಿ ನೀರು ಕುಡಿದಿರುವ ಎತ್ತಿನಹೊಳೆ ಯೋಜನೆ, ಕುಡಿಯುವ ನೀರಿನ ನೆಪದಲ್ಲಿ ಈಗ ಪ್ರಸ್ತಾಪವಾಗಿರುವ ಬೇಡ್ತಿ ವರದಾ ನದಿ ಜೋಡಣೆ, ಸರಕು ಸಾಗಣೆಗೆ ಘಟ್ಟವನ್ನು ಕೊರೆದು ನಿರ್ಮಿಸಲು ಯೋಜಿಸಿದ ಚತುಷ್ಪಥ ಮಾರ್ಗ, ರಸ್ತೆ ಅಗಲೀಕರಣ, ಭೂಹಂಚಿಕೆಯ ನೆಪವೊಡ್ಡಿ ಕಡಿತಲೆಗೆ ತಲೆಯೊಡ್ಡುವ ಲಕ್ಷಗಟ್ಟಲೆ ಹೆಕ್ಟೇರ್ ಅರಣ್ಯ... ಒಂದೆರಡಲ್ಲ. ಪಶ್ಚಿಮಘಟ್ಟವನ್ನು ಬಗೆದು ಹಸಿರು ಅಳಿಸಲು ಸಾಧ್ಯವಾಗುವಂತಹ ಎಲ್ಲ ಯೋಜನೆಗಳು ಆತುರದ ತುದಿಗಾಲಲ್ಲಿ ನಿಂತಿವೆ. ಪರಿಸರ ತಜ್ಞರ, ಪರಿಸರ ಪ್ರೇಮಿಗಳ, ಭೂವಿಜ್ಞಾನಿಗಳ, ಸ್ಥಳೀಯರ ಅನುಭವದ ವಿಚಾರಗಳಿಗೆ, ವರದಿಗಳಿಗೆ ಚಿಕ್ಕಾಸಿನ ಬೆಲೆಯೂ ಇಲ್ಲದಂತಾಗಿದೆ. ಯೋಜನೆಗಳು ವಿಫಲವಾದಾಗ ಉತ್ತರದಾಯಿತ್ವದ ಪ್ರಶ್ನೆಯೂ ಏಳುವುದಿಲ್ಲ. ಪರಿಸರದಿಂದಾಗಿ ನಾವು ಎನ್ನುವ ಪ್ರಜ್ಞೆ ಇಂತಹವರ ತಲೆಗೆ ಹೊಕ್ಕುವುದು ಯಾವಾಗ? ಇವೆಲ್ಲದರ ವಿರುದ್ಧ ದೊಡ್ಡಮಟ್ಟದ ಸಾರ್ವತ್ರಿಕ ಜನಾಂದೋಲನ ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ.

ಧರ್ಮಾನಂದ ಶಿರ್ವ, ಬೆಂಗಳೂರು

ಔದಾರ್ಯದ ಮನಸ್ಸಿಗೆ ಸೌಜನ್ಯಪೂರ್ಣ ಪ್ರಣಾಮ

'ಮಕ್ಕಳ ಸೆಳೆದ ರೇಖಾ ಬಾಂಡ್' ಸುದ್ದಿ ಓದಿದ ಮೇಲೆ ಮನಸ್ಸು ಉಲ್ಲಸಿತವಾಯಿತು. ಪ್ರತಿನಿತ್ಯ ಮಠಾಧೀಶರ, ರಾಜಕಾರಣಿಗಳ, ಸರ್ಕಾರಿ ಅಧಿಕಾರಿಗಳ, ಅಧರ್ಮೀಯರ, ಅಪರಾಧಿಗಳ ಕಂತೆ ಕಂತೆ ಸುದ್ದಿ ಓದುವುದೇ ಭಾಗ್ಯವೆಂದುಕೊಂಡವನಿಗೆ ಏನೋ ಹೊಸದು ಘಟಿಸುತ್ತಿದೆ ಎನ್ನಿಸಿತು. ಪ್ರತಿಫಲಾಪೇಕ್ಷೆಯಿಲ್ಲದೇ ತಾನು ದುಡಿವ ಶಿಕ್ಷಣ ಇಲಾಖೆಯ ಪ್ರಗತಿ ಬಯಸಿ, ಸ್ವಂತ ಹಣದಿಂದ ಮಕ್ಕಳ ಹೆಸರಿನಲ್ಲಿ ಸಾವಿರ ರೂಪಾಯಿ ಮೌಲ್ಯದ ಬಾಂಡ್ ಮಾಡಿಸಿಕೊಡುವುದು ಸಾಮಾನ್ಯ ಕೆಲಸವಲ್ಲ.

ಸಂಸಾರ, ನೆಂಟರಿಷ್ಟರು, ಸಮಾಜಕ್ಕೆ ಸದಾ ಹೆದರಿ ಬಾಳಬೇಕಾದ ವಾತಾವರಣ ಇನ್ನೂ ಉಳಿದಿರುವ ಪರಿಸ್ಥಿತಿಯಲ್ಲಿ ಸಾಮಾನ್ಯ ಹೆಣ್ಣುಮಗಳೊಬ್ಬಳು ಔದಾರ್ಯದ ಮನಸ್ಸು ತೋರಿ, ಗ್ರಾಮೀಣ ಭಾಗದ ಮಕ್ಕಳ ವಿದ್ಯಾಭಿವೃದ್ಧಿಗೆ ಪಣ ತೊಟ್ಟಿರುವುದು ಅಸಾಮಾನ್ಯ ಕೆಲಸವೇ ಸರಿ. ಕಾಸಿಗೆ ಜೊಲ್ಲು ಸುರಿಸುತ್ತಾ ಲಂಚಕ್ಕೆ ಕೈಯೊಡ್ಡುವ ಜನರ ನಡುವೆ ಹೊಸನಗರ ತಾಲ್ಲೂಕಿನ ಶಿಕ್ಷಕಿ ರೇಖಾ ಪ್ರಭಾಕರ್ ಭವಿಷ್ಯದ ಆಶಾಕಿರಣ. ಅವರಿಗೆ ಸೌಜನ್ಯಪೂರ್ಣ ಪ್ರಣಾಮಗಳು.

ರಿಪ್ಪನ್‌ಪೇಟೆ ನಟರಾಜ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ–ಪಾಕಿಸ್ತಾನ ಸೌಹಾರ್ದದತ್ತ ಪಯಣ?

ಭಾರತ–ಪಾಕಿಸ್ತಾನದ ಸಂಬಂಧ ಯಾವಾಗ, ಯಾವ ರೂಪ ತಳೆಯುತ್ತದೆ ಎಂದು ಊಹಿಸುವುದೇ ಕಷ್ಟ. ಇನ್ನೇನು ಪರಿಸ್ಥಿತಿ ಸುಧಾರಿಸಿತು ಎನ್ನುವಷ್ಟರಲ್ಲಿ ನಡೆಯುವ ಒಂದು ಘಟನೆ, ಅವರೆಗಿನ ಎಲ್ಲಾ ಬೆಳವಣಿಗೆಗಳನ್ನು ಮಣ್ಣುಪಾಲು ಮಾಡುತ್ತದೆ.

ಒಂದೇ ಇತಿಹಾಸ, ಸಂಸ್ಕೃತಿ, ಭಾಷೆಗಳನ್ನು ಹಂಚಿಕೊಂಡು ಬೆಳೆದಿರುವ ಈ ರಾಷ್ಟ್ರಗಳ ನಡುವೆ, ಶಾಂತಿ ಸ್ಥಾಪನೆಯ ಪ್ರಯತ್ನಗಳೆಲ್ಲವೂ ವಿವಿಧ ಕಾರಣಗಳಿಂದ ವಿಫಲವಾಗಿವೆ. ಕೆಲವೊಮ್ಮೆ ಪಾಕಿಸ್ತಾನದ ಸೇನೆಯ ಮುಖ್ಯಸ್ಥರು, ಇನ್ನೂ ಕೆಲವೊಮ್ಮೆ ಭಯೋತ್ಪಾದಕ ಸಂಘಟನೆಗಳು ಮತ್ತೆ ಕೆಲವೊಮ್ಮೆ ಇನ್ಯಾವುದೋ ರಾಷ್ಟ್ರ ಮಧ್ಯಪ್ರವೇಶ ಮಾಡಿ ಶಾಂತಿ ಸ್ಥಾಪನೆಯ ಪ್ರಯತ್ನಗಳನ್ನು ಹಾಳುಗೆಡವುತ್ತಾ ಬಂದಿವೆ. ಆದರೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜಕೀಯ, ಆರ್ಥಿಕ ಬದಲಾವಣೆಗಳಾದಾಗಲೆಲ್ಲಾ ಭಾರತ–ಪಾಕಿಸ್ತಾನ ಶಾಂತಿ ಸ್ಥಾಪನೆಯ ಪ್ರಯತ್ನಗಳನ್ನು ಮಾಡಿವೆ ಎಂಬುದು ಇತಿಹಾಸ.

ಇತ್ತೀಚಿನ ಕೆಲವು ವರ್ಷಗಳಲ್ಲಿ ಭಾರತ–ಪಾಕ್ ಸಂಬಂಧ ಸಂಪೂರ್ಣ ಹದಗೆಟ್ಟಿತ್ತು. ಬಾಲಾಕೋಟ್ ದಾಳಿಯ ನಂತರ ಈ ಅಣ್ವಸ್ತ್ರ ರಾಷ್ಟ್ರಗಳ ನಡುವೆ ಪೂರ್ಣಪ್ರಮಾಣದ ಯುದ್ಧವೇ ನಡೆಯುವುದೇನೋ ಎಂಬಂಥ ಸ್ಥಿತಿ ನಿರ್ಮಾಣವಾಗಿತ್ತು. ಆದರೆ, ಕೊರೊನಾ ಸಂಕಷ್ಟದಿಂದ ಇಡೀ ಜಗತ್ತಿನ ಆರ್ಥಿಕತೆ ಏರುಪೇರಾಗಿದೆ. ಇಂಥ ಸ್ಥಿತಿಯಲ್ಲಿ ಮತ್ತೆ ಭಾರತ–ಪಾಕಿಸ್ತಾನ ಶಾಂತಿಸ್ಥಾಪನೆಯ ಪ್ರಸ್ತಾವವನ್ನು ಮುಂದಿಟ್ಟಿವೆ. ಅಷ್ಟೇ ಅಲ್ಲ ಎರಡೂ ರಾಷ್ಟ್ರಗಳು ಆ ದಿಸೆಯಲ್ಲಿ ಒಂದೊಂದು ಹೆಜ್ಜೆಗಳನ್ನೂ ಮುಂದಿಟ್ಟಿವೆ.

ಸಂಬಂಧದಲ್ಲಿ ಆಗಿರುವ ಈ ಬದಲಾವಣೆಗೆ ಕೊರೊನಾ ಅಥವಾ ಆರ್ಥಿಕತೆ ಒಂದೇ ಕಾರಣ ಎಂಬುದನ್ನು ವಿಶ್ಲೇಷಕರು ಒಪ್ಪುವುದಿಲ್ಲ. ಭಾರತ-ಚೀನಾ ಸಂಘರ್ಷ, ಅಮೆರಿಕದಲ್ಲಿ ಆಗಿರುವ ರಾಜಕೀಯ ಬದಲಾವಣೆಗಳು, ಏಷ್ಯಾವನ್ನು ಕುರಿತ ಬೈಡನ್ ನೀತಿ, ಚೀನಾದ ವಿಸ್ತರಣಾವಾದವನ್ನು ತಡೆಯುವ ಸಂಘಟಿತ ಯೋಜನೆ, ಅಫ್ಗಾನಿಸ್ತಾನದ ಹಿತಾಸಕ್ತಿ... ಹೀಗೆ ಹಲವು ವಿಚಾರಗಳ ಪರಿಣಾಮವಾಗಿ ಈ ಬೆಳವಣಿಗೆಗಳು ನಡೆದಿವೆ ಎಂದು ವಿಶ್ಲೇಷಕರು ಹೇಳುತ್ತಾರೆ.

ಏನೇ ಇದ್ದರೂ, ಭಾರತದ ಜತೆಗಿನ ಸಂಬಂಧ ಸುಧಾರಣೆಯ ವಿಚಾರವಾಗಿ ಪಾಕಿಸ್ತಾನದ ಪ್ರಧಾನಿ ಹಾಗೂ ಸೇನಾ ಮುಖ್ಯಸ್ಥರು ಒಂದೇ ಧ್ವನಿಯಲ್ಲಿ ಮಾತನಾಡಿರುವುದು ಈ ಬಾರಿಯ ವಿಶೇಷವಾಗಿದೆ. 'ಶಾಂತಿ ಸ್ಥಾಪನೆಗೆ ಬದ್ಧ' ಎಂದು ಇಬ್ಬರೂ ಹೇಳಿದ್ದಾರೆ. ಜಮ್ಮು ಕಾಶ್ಮೀರದಲ್ಲಿ ಕದನ ವಿರಾಮವನ್ನು ಕುರಿತು ಉಭಯ ರಾಷ್ಟ್ರಗಳ ನಡುವೆ 2003ರಲ್ಲಿ ಏರ್ಪಟ್ಟಿದ್ದ ಒಪ್ಪಂದಕ್ಕೆ ಬದ್ಧವಾಗಿರಲು ಎರಡೂ ರಾಷ್ಟ್ರಗಳು ಕಳೆದ ತಿಂಗಳು ಒಪ್ಪಿವೆ. ಅಷ್ಟೇ ಅಲ್ಲ ಈ ಮಾತುಕತೆಯ ನಂತರ ಗುಂಡಿನ ಚಕಮಕಿಯೂ ಗಣನೀಯವಾಗಿ ಕಡಿಮೆಯಾಗಿದೆ.

ನದಿ ನೀರು ಹಂಚಿಕೆ, ಭಾರತವು ಕೈಗೊಳ್ಳಲು ಉದ್ದೇಶಿಸಿರುವ ಜಲವಿದ್ಯುತ್ ಯೋಜನೆಗಳು ಮುಂತಾದ ವಿಚಾರಗಳ ಬಗ್ಗೆ ಉಭಯ ರಾಷ್ಟ್ರಗಳ ನಡುವೆ ಮೂರು ವರ್ಷಗಳಿಂದ ಸ್ಥಗಿತಗೊಂಡಿದ್ದ ಮಾತುಕತೆ ಮತ್ತೆ ಆರಂಭವಾಗಿದೆ. ಪಾಕ್ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಕೋವಿಡ್ ಇದೆ ಎಂಬ ಸುದ್ದಿ ಕಳೆದ ವಾರ ಬರುತ್ತಿದ್ದಂತೆಯೇ, 'ಅವರು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ' ಎಂಬ ಸಂದೇಶವನ್ನು ಮೋದಿ ಅವರು ಟ್ವೀಟ್ ಮೂಲಕ ನೀಡಿದ್ದರು.

ಪಾಕ್ ಜನರಿಗೆ ಶುಭಾಶಯ: ಮಾರ್ಚ್ 23 ಅನ್ನು 'ಪಾಕಿಸ್ತಾನ ದಿನ'ವಾಗಿ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಇಮ್ರಾನ್ ಖಾನ್ ಅವರಿಗೆ ಪತ್ರ ಬರೆದು ಶುಭಾಶಯ ಕೋರಿದ್ದಾರೆ.

ಈ ಪತ್ರವೂ ಎರಡು ರಾಷ್ಟ್ರಗಳ ನಡುವೆ ಸಂಬಂಧ ಸುಧಾರಿಸುತ್ತಿರುವುದರ ಮುನ್ಸೂಚನೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ, 'ಇದು ಪ್ರತಿ ವರ್ಷ ನಡೆಯುವ ಸಾಮಾನ್ಯ ಪ್ರಕ್ರಿಯೆ' ಎಂದು ಸರ್ಕಾರ ಹೇಳಿದೆ.

'ಭಾರತವು ಪಾಕಿಸ್ತಾನದ ಜತೆಗೆ ಸೌಹಾರ್ದ ಸಂಬಂಧವನ್ನು ಬಯಸುತ್ತದೆ. ಆದರೆ ಅದಕ್ಕೆ ಭಯೋತ್ಪಾದನೆ, ಹಗೆತನಗಳಿಂದ ಮುಕ್ತವಾಗಿರುವ ವಾತಾವರಣ ಇರುವುದು ಅಗತ್ಯ' ಎಂದು ಮೋದಿ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಬದಲಾವಣೆ ಹಠಾತ್ ಆಗಿರುವುದಲ್ಲ. ಎರಡೂ ರಾಷ್ಟ್ರಗಳನ್ನು ಹತ್ತಿರ ತರುವುದರ ಹಿಂದೆ ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಮಧ್ಯಸ್ಥಿಕೆ ಇದೆ ಎಂದು ವರದಿಯಾಗಿದೆ. ಆದರೆ, ಆ ಬಗ್ಗೆ ಯುಎಇ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಆಧಾರ: ರಾಯಿಟರ್ಸ್, ಬ್ಲೂಮ್‌ಬರ್ಗ್

ಭಾರತ–ಪಾಕಿಸ್ತಾನ ನಡುವಣ ವಾಘಾ‌ಅಟ್ಟಾರಿ ಗಡಿಯಲ್ಲಿ 2020ರ ಜನವರಿ 26ರಂದು ಗಣರಾಜ್ಯೋತ್ಸವದ ಅಂಗವಾಗಿ ನಡೆದಿದ್ದ 'ಬೀಟಿಂಗ್ ರಿಟ್ರೀಟ್'ನಲ್ಲಿ ಭಾರತದ ಯೋಧರು ಮತ್ತು ಪಾಕಿಸ್ತಾನದ ಯೋಧರು ಭಾಗಿಯಾಗಿದ್ದರು ಪಿಟಿಐ ಚಿತ್ರ

ತೆರೆಮರೆ ಕಸರತ್ತು

ಭಾರತ ಮತ್ತು ಪಾಕಿಸ್ತಾನದ ನಡುವಣ ಸಂಬಂಧವನ್ನು ಸುಧಾರಿಸಲು ಹಲವು ರಾಷ್ಟ್ರಗಳು ನೇಪಥ್ಯದಲ್ಲಿ ಯತ್ನಿಸುತ್ತಿವೆ. ಅಂತಹ ರಾಷ್ಟ್ರಗಳಲ್ಲಿ ಯುಎಇ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಜೋ ಬೈಡನ್ ಮುಂದಾಳತ್ವದ ಅಮೆರಿಕವೂ ಇಂತಹ ಯತ್ನಗಳನ್ನು ನಡೆಸುತ್ತಿದೆ. ಆದರೆ ಯುಎಇ ಮತ್ತು ಅಮೆರಿಕದ ಉದ್ದೇಶಗಳು ಬೇರೆ ಬೇರೆ ಇದ್ದಂತಿವೆ.

ಏಷ್ಯಾದ ರಾಜಕಾರಣದಿಂದ ಮಧ್ಯ ಪ್ರಾಚ್ಯದ ದೇಶಗಳು ದೂರವೇ ಇದ್ದವು. ಆದರೆ ಈಚಿನ ವರ್ಷಗಳಲ್ಲಿ ಇಲ್ಲಿನ ಆಗುಹೋಗುಗಳಲ್ಲಿ ಮಧ್ಯಪ್ರವೇಶ ಮಾಡುತ್ತಿವೆ. ಯುಎಇ ಹೀಗೆ ಮಧ್ಯಪ್ರವೇಶ ಮಾಡಿದ್ದು ಭಾರತ-ಪಾಕಿಸ್ತಾನದ ವಿಚಾರದಲ್ಲಿಯೇ. 2019ರ ಫೆಬ್ರುವರಿಯಲ್ಲಿ ಬಾಲಾಕೋಟ್ ದಾಳಿಯ ನಂತರದ ಸೇನಾ ಕಾರ್ಯಾಚರಣೆಯಲ್ಲಿ ಭಾರತದ ಪೈಲಟ್ ಅಭಿನಂದನ್ ವರ್ಧಮಾನ್ ಅವರನ್ನು ಪಾಕಿಸ್ತಾನದ ಸೇನೆ ಸೆರೆಹಿಡಿದಿತ್ತು. ಆದರೆ ಕೆಲವೇ ದಿನಗಳಲ್ಲಿ ಅಭಿನಂದನ್ ಅವರನ್ನು ಪಾಕಿಸ್ತಾನ ಬಿಡುಗಡೆ ಮಾಡಿತು. ಅಭಿನಂದನ್ ಅವರನ್ನು ಬಿಡುಗಡೆ ಮಾಡುವಲ್ಲಿ ಸೌದಿ ಅರೇಬಿಯಾ ಮತ್ತು ಯುಎಇ ಮಹತ್ವದ ಪಾತ್ರವಹಿಸಿದ್ದವು ಎಂದು ಹಲವು ಮಾಧ್ಯಮಗಳು ಆಗ ವರದಿ ಮಾಡಿದ್ದವು. ಆನಂತರದಲ್ಲಿ ಪಾಕಿಸ್ತಾನ ಮತ್ತು ಭಾರತದ ಸಂಬಂಧ ಮತ್ತಷ್ಟು ಬಿಗಡಾಯಿಸಿತ್ತು. ಎರಡೂ ದೇಶಗಳು ತಮ್ಮ-ತಮ್ಮ ರಾಜತಾಂತ್ರಿಕರನ್ನು ವಾಪಸ್ ಕರೆಸಿಕೊಂಡಿದ್ದವು. ಆದರೆ ಈಚೆಗೆ ಈ ಪರಿಸ್ಥಿತಿ ಸುಧಾರಿಸುತ್ತಿದೆ.

ಭಾರತ ಮತ್ತು ಪಾಕಿಸ್ತಾನವು 2003ರ ಕದನ ವಿರಾಮವನ್ನು ಮುಂದುವರಿಸಲು ಒಪ್ಪಂದ ಮಾಡಿಕೊಂಡಿವೆ. ಇದನ್ನು ಮೊದಲು ಸ್ವಾಗತಿಸಿದ್ದು ಯುಎಇ. ಕದನ ವಿರಾಮ ಮುಂದುವರಿಕೆ ಒಪ್ಪಂದ ಮಾಡಿಕೊಂಡ ವಿಷಯ ಬಹಿರಂಗವಾದ ಮರುದಿನವೇ ಯುಎಇ ವಿದೇಶಾಂಗ ಸಚಿವ ಶೇಕ್ ಅಬ್ದುಲ್ಲಾ ಬಿನ್ ಝಾಯೆದ್ ಅವರು ಭಾರತಕ್ಕೆ ಒಂದು ದಿನದ ಭೇಟಿ ನೀಡಿದ್ದರು. 'ಈ ಭೇಟಿಯಲ್ಲಿ ಸಮಾನ ಹಿತಾಸಕ್ತಿಯ ವಿಚಾರಗಳು ಮತ್ತು ಅಂತರರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಿದೆವು' ಎಂದು ಯುಎಇ ಹೇಳಿಕೆ ಬಿಡುಗಡೆ ಮಾಡಿತ್ತು.

ಭಾರತ ಮತ್ತು ಪಾಕಿಸ್ತಾನವು ಈ ಒಪ್ಪಂದಕ್ಕೆ ಬರಲು ತೆರೆಮರೆಯಲ್ಲಿ ಯುಎಇ ಸಭೆ ನಡೆಸಿದೆ. ಈ ಪ್ರಯತ್ನ ಹಲವು ತಿಂಗಳಿನಿಂದ ನಡೆಯುತ್ತಿದೆ ಎಂದು ಈ ವಿಚಾರದಲ್ಲಿ ಭಾಗಿಯಾಗಿದ್ದ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ ಎಂದು ಮೂಲಗಳು ಹೇಳಿವೆ.



ನಾಲ್ಕು ಗುರಿಗಳ ನೀಲನಕ್ಷೆ

ಭಾರತ–ಪಾಕಿಸ್ತಾನ ನಡುವಣ ಬಿಕ್ಕಟ್ಟು ಪರಿಹಾರಕ್ಕೆ ಯುಎಇ ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿದೆ ಎನ್ನಲಾಗಿದೆ. ಈ ನೀಲನಕ್ಷೆಯಲ್ಲಿ ನಾಲ್ಕು ಪ್ರಮುಖ ಗುರಿಗಳಿವೆ. ಇದಕ್ಕೆ ಅನುಗುಣವಾಗಿಯೇ ಕೆಲಸ ನಡೆಯುತ್ತಿದೆ ಎಂದು ಉನ್ನತ ಮೂಲಗಳು ಹೇಳಿವೆ.

1. ಕದನವಿರಾಮ ಪಾಲನೆ: 2003ರ ಕದನ ವಿರಾಮ ಒಪ್ಪಂದ ಪಾಲಿಸುವುದು ಮೊದಲ ಗುರಿ. ಈ ಪ್ರಕಾರ ಈಗ ಒಮ್ಮತಕ್ಕೆ ಬರಲಾಗಿದೆ. ಇದರ ಮಧ್ಯೆಯೇ, ಇಮ್ರಾನ್ ಖಾನ್ ಅವರ ವಿಮಾನವು ಭಾರತದ ವಾಯುಗಡಿಯ ಮೇಲೆ ಹಾದುಹೋಗಲು ಭಾರತ ಸರ್ಕಾರವು ಅನುಮತಿ ನೀಡಿತ್ತು. ಇದನ್ನು ಒಂದು ಸ್ವಾಗತಾರ್ಹ ಬೆಳವಣಿಗೆ ಎಂದು ಹಲವು ನಾಯಕರು ಹೇಳಿದ್ದರು.

2. ರಾಜತಾಂತ್ರಿಕರ ನೇಮಕ: ಎರಡೂ ದೇಶಗಳು ರಾಜತಾಂತ್ರಿಕ ಅಧಿಕಾರಿಗಳನ್ನು ನೇಮಕ ಮಾಡಬೇಕು ಎಂಬುದು ಈ ನೀಲನಕ್ಷೆಯ ಎರಡನೇ ಪ್ರಮುಖ ಗುರಿ. ಈ ಸಂಬಂಧ ತೆರೆಮರೆಯಲ್ಲಿ ಮಾತುಕತೆಗಳು ನಡೆಯುತ್ತಿವೆ. ರಾಜತಾಂತ್ರಿಕ ಅಧಿಕಾರಿಗಳ ನೇಮಕ ನಡೆದರೆ, ಎರಡೂ ದೇಶಗಳ ಮಧ್ಯೆ ರಾಜತಾಂತ್ರಿಕ ಚಟುವಟಿಕೆಗಳು ಆರಂಭವಾಗುತ್ತವೆ.

3. ವಾಣಿಜ್ಯ ಸಂಬಂಧ: ಭಾರತ-ಪಾಕಿಸ್ತಾನ ನಡುವಣ ವಾಣಿಜ್ಯ ಸಂಬಂಧವನ್ನು ಮತ್ತೆ ಆರಂಭಿಸುವುದು ಈ ನೀಲನಕ್ಷೆಯ ಮೂರನೆಯ ಗುರಿಯಾಗಿದೆ. ಇದು ಈ ನೀಲನಕ್ಷೆಯ ಅತ್ಯಂತ ಮಹತ್ವದ ಗುರಿ ಎನ್ನಲಾಗಿದೆ. ಈ ಗುರಿಯನ್ನು ಸಾಧಿಸಲು ಮೊದಲ ಎರಡು ಗುರಿಗಳು ಪೂರಕ ಅಂಶಗಳು ಮಾತ್ರ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಭಾರತ-ಪಾಕಿಸ್ತಾನದ ಹಲವು ದಶಕಗಳಿಂದ ನಡೆಯುತ್ತಿದ್ದ ವ್ಯಾಪಾರ ಸಂಬಂಧವು ಈಗ ನಿಂತುಹೋಗಿದೆ. ವ್ಯಾಪಾರ ಸಂಬಂಧ ಸ್ಥಗಿತವಾಗಿರುವ ಕಾರಣ, ಎರಡೂ ದೇಶಗಳ ಮಧ್ಯೆ ಸರಕು ಸಾಗಣೆ ಇಲ್ಲವಾಗಿದೆ. ಇದರಿಂದ ಭಾರತ-ಇರಾನ್, ಭಾರತ-ಅಫ್ಗಾನಿಸ್ತಾನ ಮತ್ತು ಭಾರತ-ಮಧ್ಯಪ್ರಾಚ್ಯ ದೇಶಗಳ ನಡುವಣ ವಾಣಿಜ್ಯ-ಸರಕು ಸಾಗಣೆಗೆ ಅಡಚಣೆಯಾಗಿದೆ. ಇದಕ್ಕಾಗಿ ಈಗ ಸಮುದ್ರಮಾರ್ಗವನ್ನೇ ಅವಲಂಬಿಸಲಾಗಿದೆ.

4. ಜಮ್ಮು-ಕಾಶ್ಮೀರ: ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಈ ನೀಲನಕ್ಷೆಯ ಅಂತಿಮ ಗುರಿಯಾಗಿದೆ. ಲಡಾಖ್‌ನಲ್ಲಿ ಭಾರತ-ಚೀನಾ ನಡುವಣ ಗಡಿ ಸಂಘರ್ಷಕ್ಕೆ ಈಗ ತಾತ್ಕಾಲಿಕ ತಡೆ ಬಿದ್ದಿದೆ. ಪಾಕಿಸ್ತಾನ-ಭಾರತ ನಡುವಣ ಗಡಿ ಸಮಸ್ಯೆಯೂ ಪರಿಹಾರವಾದರೆ, ಈ ಪ್ರದೇಶದಲ್ಲಿ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ ಎಂಬುದು ಈ ಗುರಿಯ ಹಿಂದಿನ ದೂರದ ಆಲೋಚನೆ. ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು ಎಂದು ಯುಎಇ ಮತ್ತು ಅಮೆರಿಕ ಇಂಗಿತ ವ್ಯಕ್ತಪಡಿಸಿವೆ. ಈ ರಾಷ್ಟ್ರಗಳು ಮಾತುಕತೆಯಲ್ಲಿ ಮಧ್ಯಸ್ಥಿಕೆ ವಹಿಸಲು ಭಾರತ ಅವಕಾಶ ನೀಡುತ್ತದೆಯೇ ಎಂಬುದೇ ದೊಡ್ಡ ಪ್ರಶ್ನೆ.

ಈ ಬಿಕ್ಕಟ್ಟಿನ ಮಧ್ಯಸ್ಥಿಕೆ ವಹಿಸುವುದರಿಂದ ಅಮೆರಿಕಕ್ಕೆ ಲಾಭವಿದೆ. ಏಷ್ಯಾ ಪ್ರದೇಶದಲ್ಲಿ ಚೀನಾದ ಪ್ರಾಬಲ್ಯಕ್ಕೆ ಈ ಮೂಲಕ ಅಮೆರಿಕವು ಪೆಟ್ಟು ನೀಡಿದಂತಾಗುತ್ತದೆ. ತಾಲಿಬಾನ್ ಉಗ್ರರ ಉಪಟಳದಿಂದ ತತ್ತರಿಸಿರುವ ಅಫ್ಗಾನಿಸ್ತಾನದ ವಿವಿಧ ಕ್ಷೇತ್ರಗಳಲ್ಲಿ ಮೇಲುಗೈ ಸಾಧಿಸಲು ಭಾರತ-ಪಾಕಿಸ್ತಾನ ಪೈಪೋಟಿ ನಡೆಸುತ್ತಿವೆ. ಅಲ್ಲಿ, ಮೂಲಸೌಕರ್ಯ ಅಭಿವೃದ್ಧಿಪಡಿಸಲು ಭಾರತವು ದೊಡ್ಡಮಟ್ಟದ ಹಣ ವಿನಿಯೋಗಿಸಿದೆ. ಪಾಕಿಸ್ತಾನವೂ ನೆರವಾಗಿದೆ. 'ಅಫ್ಗಾನಿಸ್ತಾನದಲ್ಲಿ ಶಾಂತಿ ನೆಲೆಸಲು ವಹಿಸುತ್ತಿರುವಷ್ಟೇ ಆಸ್ಥೆಯನ್ನು, ಪಾಕಿಸ್ತಾನವು ತನ್ನ ಇತರ ಗಡಿಯತ್ತಲೂ ವಹಿಸಬೇಕು' ಎಂದು ಅಮೆರಿಕವು ಈಚೆಗಷ್ಟೇ ಹೇಳಿತ್ತು. ಅಮೆರಿಕದ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವಧಿಯಲ್ಲಿ ಇಲ್ಲವಾಗಿದ್ದ ನೆರವು, ಜೋ ಬೈಡನ್ ಅವಧಿಯಲ್ಲಿ ಮರಳುವ ಸಾಧ್ಯತೆ ಇರುವ ಕಾರಣ ಪಾಕಿಸ್ತಾನವೂ ಅಮೆರಿಕದ ಸಲಹೆಗೆ ತಲೆಬಾಗುವ ಸಾಧ್ಯತೆಗಳು ಅತ್ಯಧಿಕವಾಗಿವೆ.



ಮಾನವ ಹಕ್ಕುಗಳ ಉಲ್ಲಂಘನೆ

ಪೊಲೀಸರ ವಿರುದ್ಧವೇ ಹೆಚ್ಚು ದೂರು: ಕೇಂದ್ರ

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಬರುವ ದೂರುಗಳಲ್ಲಿ ಪೊಲೀಸರ ವಿರುದ್ಧದ ದೂರುಗಳೇ ಹೆಚ್ಚು. 2015-16ನೇ ಸಾಲಿನಿಂದ 2020-21ನೇ ಸಾಲಿನ ಫೆಬ್ರುವರಿ 28ರವರೆಗೆ ಮಾನವ ಹಕ್ಕುಗಳ ಉಲ್ಲಂಘನೆಯ 5 ಲಕ್ಷಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ. ಇವುಗಳಲ್ಲಿ 1.4 ಲಕ್ಷಕ್ಕೂ ಹೆಚ್ಚು ದೂರು ಪೊಲೀಸರ ವಿರುದ್ಧವೇ ಬಂದಿವೆ. ಆದರೆ, 2015-16ಕ್ಕೆ ಹೋಲಿಸಿದರೆ ಈಗ ಪೊಲೀಸರ ವಿರುದ್ಧ ಬರುತ್ತಿರುವ ದೂರುಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಕೇಂದ್ರ ಗೃಹ ಸಚಿವಾಲಯವು ಸಂಸತ್ತಿನಲ್ಲಿ ಮಂಡಿಸಿರುವ ವರದಿಯಲ್ಲಿ ಈ ಮಾಹಿತಿ ಇದೆ

ಪೊಲೀಸರ ವಿರುದ್ಧದ ದೂರುಗಳ ಇಳಿಕೆ



ಪೊಲೀಸರ ವಿರುದ್ಧದ ದೂರುಗಳ ಇಳಿಕೆ



- 2019-20ನೇ ಸಾಲಿನಿಂದ ಶಾಲೆಗಳ ವಿರುದ್ಧವೂ ದೂರುಗಳು ದಾಖಲಾಗಿವೆ. 2019-20ರಲ್ಲಿ 499 ಮತ್ತು 2020-21ರಲ್ಲಿ 1,112 ದೂರುಗಳು ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳ ವಿರುದ್ಧ ದಾಖಲಾಗಿವೆ.
- ಮಾಫಿಯಾ/ಭೂಗತ ಜಗತ್ತಿನ ವಿರುದ್ಧ ಬರುವ ದೂರುಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ
- ಮಹಿಳೆಯರಿಗೆ ಸಂಬಂಧಿಸಿದಂತೆ ಬರುವ ದೂರುಗಳ ಸಂಖ್ಯೆಯಲ್ಲೂ ಇಳಿಕೆಯಾಗಿದೆ

ಉತ್ತರ ಪ್ರದೇಶದಲ್ಲಿ ಗರಿಷ್ಠ

ಆರು ವರ್ಷದಲ್ಲಿ ಉತ್ತರಪ್ರದೇಶಲ್ಲಿ ಗರಿಷ್ಠ ಸಂಖ್ಯೆಯ ದೂರುಗಳು ದಾಖಲಾಗಿವೆ. 5.23 ಲಕ್ಷ ದೂರುಗಳಲ್ಲಿ ಉತ್ತರ ಪ್ರದೇಶ ಒಂದರಲ್ಲೇ 2.03 ಲಕ್ಷ ಪ್ರಕರಣಗಳು ದಾಖಲಾಗಿವೆ. 2020-21ನೇ ಸಾಲಿನಲ್ಲೂ ಉತ್ತರ ಪ್ರದೇಶದಲ್ಲಿ ಗರಿಷ್ಠ ಸಂಖ್ಯೆಯ ದೂರುಗಳು ದಾಖಲಾಗಿವೆ. ಈ ಸಾಲಿನಲ್ಲಿ ಹೆಚ್ಚು ದೂರು ದಾಖಲಾದ ರಾಜ್ಯಗಳ ವಿವರ ಹೀಗಿದೆ...



ಆಧಾರ: ರಾಜ್ಯಸಭೆ ಪ್ರಜಾವಾಣಿ ಗ್ರಾಫಿಕ್ಸ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಧ್ಯವಯಸ್ಸಿನ ವ್ಯಕ್ತಿಯೊಬ್ಬನನ್ನು ಗುಂಪೊಂದು ಥಳಿಸುತ್ತಿರುವ ದೃಶ್ಯವಿರುವ ವಿಡಿಯೊ ಒಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. 'ಮನೆಯಲ್ಲಿ ದೇವರಿಗೆ ಆರತಿ ಮಾಡುತ್ತಿದ್ದ ಈ ವ್ಯಕ್ತಿಯನ್ನು ಹೊರಗೆ ಎಳೆದುತಂದು, ಅವರ ಮಗಳ ಕಣ್ಣಮುಂದೆಯೇ ಥಳಿಸಲಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ ದೇವರ ಪೂಜೆ ಮಾಡುವುದೂ ಅಪರಾಧವೇ' ಎಂಬ ಸಂದೇಶವನ್ನೂ ಈ ವಿಡಿಯೊದ ಜತೆಗೆ ಹರಿಯಬಿಡಲಾಗಿದೆ.

ಆದರೆ, ಈ ವಿಡಿಯೊ ಬಗ್ಗೆ ಸ್ಪಷ್ಟನೆ ನೀಡಿರುವ ಕೋಲ್ಕತ್ತ ಪೊಲೀಸರು, ಇದು ಬಾಲಕಿಯೊಬ್ಬಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ವ್ಯಕ್ತಿಯನ್ನು ಆಕೆಯ ಕುಟುಂಬದವರು ಥಳಿಸಿದ ಸಂದರ್ಭದ ವಿಡಿಯೊ ಎಂದು ಸರಣಿ ಟ್ವೀಟ್‌ಗಳ ಮೂಲಕ ಹೇಳಿದ್ದಾರೆ. ಇದೇ ವಿಡಿಯೋ 2017ರಲ್ಲೂ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. 'ಪೂಜೆ ಸಂದರ್ಭದಲ್ಲಿ ಬರುವ ಗಂಟೆಯ ಸದ್ದಿನಿಂದ ಕಿರಿಕಿರಿಯಾಗುತ್ತದೆ ಎಂಬ ಕಾರಣಕ್ಕೆ ಮುಸ್ಲಿಮರು ಹಿಂದೂ ಪೂಜಾರಿಯನ್ನು ಥಳಿಸುತ್ತಿದ್ದಾರೆ' ಎಂದು ಆಗ ಅಡಿಬರಹ ನೀಡಲಾಗಿತ್ತು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಕೊನೆಯ ಪರೀಕ್ಷೆ

ಮಹೋಷಧಕುಮಾರ ಅಮರಾದೇವಿಯನ್ನು ಮನಸಾ ಒಪ್ಪಿಕೊಂಡ. ಆಕೆಯ ಮನೆಯಿಂದ ಹೊರಡುವ ಮೊದಲು ಒಂದು ವೀಳ್ಯದೆಲೆಯ ಚೀಲದಲ್ಲಿ ಸಾವಿರ ನಾಣ್ಯಗಳನ್ನು ಹಾಗೂ ಹೊಸ-ಬಟ್ಟೆಗಳನ್ನು ಹಾಕಿ ಆಕೆಗೆ ಕೊಟ್ಟ. 'ಭದ್ರೆ, ನೀನು ನನ್ನನ್ನು ಮದುವೆಯಾಗಲು ಇಷ್ಟಪಟ್ಟರೆ, ನನ್ನ ಜೊತೆ ಮಿಥಿಲೆಗೆ ಬಾ. ನಿನ್ನ ಗೆಳತಿಯರೊಡನೆ ಸ್ನಾನ ಮಾಡಿ, ಈ ಹೊಸಬಟ್ಟೆಗಳನ್ನುಟ್ಟುಕೊಂಡು ಬಾ' ಎಂದು ಹೇಳಿದ. ನಂತರ ಕುಮಾರ ಅಮರಾದೇವಿಯ ತಂದೆತಾಯಿಯರಿಗೆ ಸಾಕಷ್ಟು ಹಣವನ್ನು ಕೊಟ್ಟು ಅವರನ್ನು ಎಲ್ಲ ಋಣಗಳಿಂದ ನಿಶ್ಚಿಂತರನ್ನಾಗಿ ಮಾಡಿದ. ಆಕೆಯನ್ನು ಜೊತೆಯಲ್ಲಿ ಕರೆದುಕೊಂಡು ಮಿಥಿಲೆಗೆ ಬಂದ. ಅವಳನ್ನು ರಾಜಭವನಕ್ಕೆ ಕರೆದೊಯ್ಯದೆ ದ್ವಾರಪಾಲಕನ ಮನೆಯಲ್ಲಿ ಉಳಿಸಿದ. ದ್ವಾರಪಾಲಕನ ಹೆಂಡತಿಗೆ ಆಕೆಯನ್ನು ಗಮನಿಸಲು ಹೇಳಿ ತಾನು ಅರಮನೆಗೆ ಬಂದ. ಆಮೇಲೆ ತನ್ನ ಕೆಲವು ಸ್ನೇಹಿತರನ್ನು ಕರೆದು ಅವರಿಗೆ ಸಾವಿರ ಹೊನ್ನು ಕೊಟ್ಟು ದ್ವಾರಪಾಲಕನ ಮನೆಯಲ್ಲಿರುವ ಹುಡುಗಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸಿ ಎಂದು ಹೇಳಿದ. ಅವರು ಭರ್ಜರಿ ವೇಷಗಳನ್ನು ತೊಟ್ಟು ಶ್ರೀಮಂತರಂತೆ ದ್ವಾರಪಾಲಕನ ಮನೆಗೆ ಬಂದು ಆಕೆಗೆ ಹಣದಾಸೆ ತೋರಿಸಿ ಮದುವೆಯಾಗುವಂತೆ ಕೇಳಿದರು. ಆಕೆ ಅವರನ್ನು ತಿರಸ್ಕರಿಸಿ, 'ನಿಮ್ಮ ಹಣ ನನ್ನ ಸ್ವಾಮಿಯ ಕಾಲಧೂಳಿಗೂ ಸಮನಲ್ಲ' ಎಂದಳು. ಆನಂತರವೂ ಮತ್ತೆ ಬೇರೆಯವರನ್ನು ಮೂರು ಬಾರಿ ಕಳುಹಿಸಿದ. ಆಕೆ ಅವರನ್ನೆಲ್ಲ ತಿರಸ್ಕರಿಸಿಬಿಟ್ಟಳು. ನಾಲ್ಕನೆಯ ಬಾರಿ ಆಕೆಯ ಕೈಗಳನ್ನು ಕಟ್ಟಿ ಅರಮನೆಗೆ ಕರೆದುಕೊಂಡು ಬರಲು ಅಪ್ಪಣೆ ಮಾಡಿದ. ಅವಳನ್ನು ಸೇವಕರು ಎಳೆದುಕೊಂಡು ಬಂದರು.

ಮಹೋಷಧಕುಮಾರ ತನ್ನ ವೇಷವನ್ನು ಸಂಪೂರ್ಣವಾಗಿ ಬದಲಿಸಿಕೊಂಡು ಅತುಲ ಐಶ್ವರ್ಯದ ಮಧ್ಯೆ, ಆಢ್ಯ ಜನರ ಮಧ್ಯೆ ಕುಳಿತಿದ್ದ. ಅವನನ್ನು ದರ್ಜಿ ಎಂದು ತಿಳಿದಿದ್ದ ಅಮರಾದೇವಿ ಅವನ ಗುರುತು ಹಿಡಿಯಲಿಲ್ಲ. ಅವನು ಕ್ರೂರವಾಗಿ ನೋಡಿ, 'ನನ್ನನ್ನು ಮದುವೆಯಾಗಲೇಬೇಕು' ಎಂದು ಕೇಳಿದಾಗ ಆಕೆ ಮೊದಲು ನಕ್ಕಳು ನಂತರ ಜೋರಾಗಿ ಅಳತೊಡಗಿದಳು. ಅತ್ತದ್ದು, ನಕ್ಕದ್ದು ಯಾಕೆ ಎಂದು ಕೇಳಿದಾಗ, 'ನಿಮ್ಮ ಅತುಲ ಸಂಪತ್ತನ್ನು ಕಂಡಾಗ, ಈ ಸಂಪತ್ತು ನಿಮಗೆ ಹಾಗೆಯೇ ದೊರೆತಿಲ್ಲ. ಅದು ಹಿಂದಿನ ಜನ್ಮಗಳಲ್ಲಿ ನೀವು ಮಾಡಿದ ಪುಣ್ಯ ಕರ್ಮಗಳ ಫಲ ಎನ್ನಿಸಿತು. ಅಷ್ಟು ಒಳ್ಳೆಯ ಕರ್ಮಗಳನ್ನು ಮಾಡಿದ ವ್ಯಕ್ತಿಯನ್ನು ಕಂಡೆನಲ್ಲ ಎಂಬ ಸಂತೋಷದಿಂದ ನಕ್ಕೆ. ಆದರೆ ಈ ಜನ್ಮದಲ್ಲಿ ಬೇರೆಯವರಿಗೆ ಎಂದು ಮೀಸಲಾಗಿದ್ದ ಅಸಹಾಯಕ ಹೆಣ್ಣನ್ನು ಹೀಗೆ ಬಲಾತ್ಕಾರವಾಗಿ ಎಳೆದು ತಂದಿರಲ್ಲ, ಬೇರೆಯವರ ವಸ್ತುವನ್ನು ದೋಚುತ್ತಿದ್ದೀರಲ್ಲ, ಇದರಿಂದ ನಿಮ್ಮ ಪುಣ್ಯ ಕರಗಿ ನರಕಕ್ಕೆ ಹೋಗುವುದು ನಿಶ್ಚಯ. ಒಂದು ಒಳ್ಳೆಯ ಜೀವ ನರಕಕ್ಕೆ ಹೋಗುತ್ತದಲ್ಲ ಎಂದು ಚಿಂತಿಸಿ ಅತ್ತೆ' ಎಂದಳು. ಆಕೆಯ ಮನಸ್ಸಿನ ಸ್ಥಿರತೆಗೆ ಮಹೋಷಧಕುಮಾರ ಮಾರುಹೋದ. ಮತ್ತೆ ಆಕೆಯನ್ನು ದ್ವಾರಪಾಲಕನ ಮನೆಗೆ ಕಳುಹಿಸಿದ. ನಂತರ ದರ್ಜಿ ವೇಷದಲ್ಲಿ ಹೋಗಿ ಆಕೆಯೊಡನೆ ಸಮಯ ಕಳೆದ. ಮರುದಿನ ತಾಯಿ ಉದುಂಬರಾದೇವಿಗೆ ತಾನು ಹುಡುಗಿಯನ್ನು ಆಯ್ಕೆ ಮಾಡಿದ್ದನ್ನು ತಿಳಿಸಿದ. ಆಕೆ ರಾಜನಿಗೆ ಹೇಳಿ, ಅಮರಾದೇವಿಯನ್ನು ಅರಮನೆಗೆ ಕರೆಯಿಸಿ ಸರ್ವಾಲಂಕಾರ ಭೂಷಿತೆಯನ್ನಾಗಿ ಮಾಡಿ, ನಗರದಲ್ಲಿ ಮೆರವಣಿಗೆ ಮಾಡಿಸಿ, ಸಂಭ್ರಮದಿಂದ ಸರ್ವಜನರ ಸಮ್ಮುಖದಲ್ಲಿ ಮದುವೆ ಮಾಡಿದಳು. ನಂತರ ಬೋಧಿಸತ್ವನಾದ ಮಹೋಷಧಕುಮಾರ ಮತ್ತು ಅಮರಾದೇವಿ ರಾಜನ ಅರ್ಥ ಮತ್ತು ಧರ್ಮದ ಅನುಶಾಸಕರಾದರು. ❖

ದಿನ ಭವಿಷ್ಯ

ಗುರುವಾರ 25 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ದ್ವಾದಶೀ ಗಂ. 56-35 (ಬೆ.ಘ್ರಾ. 5-05) ಗುರುವಾರ ನಿತ್ಯ ನಕ್ಷತ್ರ ಆಶ್ಲೇಷ ಗಂ. 32-43 (ರಾ. 7-32) ಸುಕರ್ಮ ನಾಮ ಯೋಗ ಗಂ. 1-1 ಉಪರಿ ಧೃತಿ ಗಂ. 55-45 ಬವ ಕರಣ ಗಂ. 27-16 ವಿಷ ಗಂ. 3-54 ಅಮೃತ ಗಂ. 27-52 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-24 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 1 8

ಮೇಷ: ಉದ್ಯೋಗದಲ್ಲಿ ನೆಮ್ಮದಿ ತರುವ ದಿನ. ಶುಭ ಸುದ್ದಿಯೊಂದು ಕೇಳಿಬರಲಿದೆ. ಭೂ ಖರೀದಿ ಮಾಡುವ ಸಾಧ್ಯತೆ. ಗೊಂದಲದ ಮನಃಸ್ಥಿತಿ. ಹಿರಿಯರ ಸಾಂತ್ವನದ ಮಾತುಗಳಿಂದಾಗಿ ಆತ್ಮಸ್ಥೈರ್ಯ ವೃದ್ಧಿ.

ವೃಷಭ: ವಿವಾಹಾಪೇಕ್ಷಿತರಿಗೆ ವಿವಾಹ ಕೂಡಿಬರುವ ಸಾಧ್ಯತೆ. ಹೆಚ್ಚಿನ ಯಶಸ್ಸಿಗಾಗಿ ವಿದ್ಯಾರ್ಥಿಗಳಿಂದ ಹೆಚ್ಚಿನ ಶ್ರಮ ಅಗತ್ಯ. ಸಾಲದಿಂದ ಮುಕ್ತಿ ಹೊಂದಲಿದ್ದೀರಿ. ಕನ್ಯೆಯರಿಗೆ ಮಾನಸಿಕ ಗೊಂದಲದ ದಿನ.

ಮಿಥುನ: ಕಮಿಷನ್ ವ್ಯವಹಾರದಿಂದ ಹೆಚ್ಚಿನ ಆದಾಯ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಚಂಚಲತೆ. ವಯೋವೃದ್ಧರಿಗೆ ಆರೋಗ್ಯದಲ್ಲಿ ಏರಿಳಿತ. ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದು ಒಳ್ಳೆಯದು.

ಕರ್ಕಾಟಕ: ಕೌಟುಂಬಿಕ ಕಲಹಗಳು ಇತ್ಯರ್ಥ. ಬಹು ನಿರೀಕ್ಷಿತ ವ್ಯವಹಾರವೊಂದರಲ್ಲಿ ಯಶಸ್ಸು. ಸಂಗಾತಿಯ ನೆಮ್ಮದಿಯ ಮಾತುಗಳಿಂದ ಸಂತೋಷಗೊಳ್ಳುವಿರಿ. ಮಕ್ಕಳ ಆರೋಗ್ಯದೆಡೆಗೆ ಗಮನವಿರಲಿ.

ಸಿಂಹ: ಸೈನಿಕರಿಗೆ, ಆರಕ್ಷಣಾ ಕೆಲಸದಲ್ಲಿ ತೊಡಗಿಕೊಂಡವರಿಗೆ ಬಿಡುವಿಲ್ಲದ ದಿನ. ಜೀವನದಲ್ಲಿ ಸಾಧನೆಯೊಂದನ್ನು ಮಾಡಿದ ತೃಪ್ತಿ. ಶಿಕ್ಷಣ ಕ್ಷೇತ್ರದಲ್ಲಿರುವವರಿಗೆ ಉನ್ನತ ಪದವಿಯನ್ನು ಹೊಂದುವ ಲಕ್ಷಣ ಕಂಡುಬರುತ್ತಿದೆ.

ಕನ್ಯಾ: ಕನ್ಯೆಯರಿಗೆ ವಿಶೇಷ ಉಡುಗೊರೆ ಸ್ವೀಕರಿಸುವ ಅವಕಾಶ. ಕಾರ್ಯನೈಪುಣ್ಯತೆಯಿಂದಾಗಿ ಸ್ನೇಹಿತರ ನಡುವೆ ಗೌರವಕ್ಕೆ ಪಾತ್ರರಾಗಲಿದ್ದೀರಿ. ಉದ್ಯೋಗ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ. ರೈತರಿಗೆ ಸಂತೋಷದ ದಿನ.

ತುಲಾ: ಸಾಮಾಜಿಕ ಗೌರವ ಪ್ರಾಪ್ತಿ. ವ್ಯಾಪಾರಸ್ಥರಿಗೆ ಉತ್ತಮ ಲಾಭ. ರಾಜಕೀಯ ವ್ಯಕ್ತಿಗಳಿಗೆ ಇರುಸು ಮುರುಸು. ಸಾಂಸಾರಿಕವಾಗಿ ಸಮಾಧಾನ. ತಾಂತ್ರಿಕ ವಿದ್ಯಾರ್ಥಿಗಳಿಗೆ ನೈಪುಣ್ಯತೆಯ ಬಗ್ಗೆ ಹೆಮ್ಮೆಯ ದಿನ.

ವೃಶ್ಚಿಕ: ರಾಜಕಾರಣಿಗಳಿಗೆ ಒತ್ತಡದ ದಿನ. ಕಾರ್ಯಬಾಹುಳ್ಯದಿಂದ ಸ್ವಲ್ಪ-ಮಟ್ಟಿನ ವಿರಾಮ ದೊರಕಿ ಮಾನಸಿಕ ನೆಮ್ಮದಿ. ಸಂಸಾರದೊಂದಿಗೆ ಸಂತಸದ ಪ್ರಯಾಣ. ಸಾರ್ವಜನಿಕ ರಂಗದಲ್ಲಿ ಇರುವವರಿಗೆ ಪುರಸ್ಕಾರ.

ಧನು: ಸರ್ಕಾರಿ ನೌಕರಿಯಲ್ಲಿರುವವರಿಗೆ ಕಾರ್ಯ ಒತ್ತಡ ಕಡಿಮೆಯಾಗಿ ಮನಸ್ಸಿಗೆ ನಿರಾಳತೆ ಮೂಡಿಬರಲಿದೆ. ಮಿತ್ರ ವೃಂದದವರಿಂದ ಶುಭ ವಾರ್ತೆ. ಮಿತ ವ್ಯಯ ಮಾಡುವಿರಿ. ಆರ್ಥಿಕ ಅನುಕೂಲತೆ ಕೂಡಿಬರಲಿದೆ.

ಮಕರ: ಕಾರ್ಖಾನೆ, ಕೃಷಿ ಕ್ಷೇತ್ರದ ಕೆಲಸಗಾರರಿಗೆ ಕಾರ್ಯಸಿದ್ಧಿಯಿಂದಾಗಿ ಸಮಾಧಾನಕರ ದಿನ. ವಿಶೇಷ ಸಮಾರಂಭವೊಂದರಲ್ಲಿ ಭಾಗವಹಿಸುವ ಸಾಧ್ಯತೆ. ವಾತ ಸಂಬಂಧಿ ಬಾಧೆಯಿಂದ ಸುಧಾರಿಸಿಕೊಳ್ಳಲಿದ್ದೀರಿ.

ಕುಂಭ: ಮನಸ್ಸಿನಲ್ಲಿ ಗೊಂದಲಕರ ವಾತಾವರಣ ಕಂಡುಬರುತ್ತದೆ. ಸಮಾಧಾನಕರ ನಡವಳಿಕೆಯಿಂದಾಗಿ ಸಂಸಾರದಲ್ಲಿ ಸಂತಸ ಮೂಡಿಬರಲಿದೆ. ಮಕ್ಕಳಿಂದ ಸಂತೋಷದ ಸುದ್ದಿಯನ್ನು ಕೇಳಲಿದ್ದೀರಿ.

ಮೀನ: ನ್ಯಾಯ ತೀರ್ಮಾನ ಮಾಡುವಲ್ಲಿ ಹೆಚ್ಚಿನ ಮುತುವರ್ಜಿ ವಹಿಸುವಿರಿ. ತೈಲ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಹಿನ್ನಡೆ. ಸರ್ಕಾರಿ ನೌಕರರಿಗೆ ಸಹೋದ್ಯೋಗಿಗಳಿಂದ ಸಕಾಲಿಕ ನೆರವಿನಿಂದಾಗಿ ಸಂತೋಷದ ವಾತಾವರಣ.

ನಿಮ್ಮ ಜನ್ಮದಿನ 25-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲಿದ್ದೀರಿ. ಹಿತಶತ್ರುಗಳ ಕುತಂತ್ರದ ಬಗ್ಗೆ ಸಂಗಾತಿಯಿಂದ ಸಕಾಲಿಕ ಸಲಹೆ ದೊರಕಲಿದೆ. ಕೆಲಸ ಕಾರ್ಯಗಳಲ್ಲಿ ಧೈರ್ಯದಿಂದ ಮುನ್ನುಗ್ಗುವುದರಿಂದ ಕಾರ್ಯಸಾಧನೆ ಮಾಡಲಿದ್ದೀರಿ.

ಪದಬಂಧ 4547 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಭೇದ ಭಾವವಿಲ್ಲದಿರುವಿಕೆ (5)
4.ಆ ಮೋದಕ ತಿಂದಿದ್ದಕ್ಕೇ ಈ ಸಂತೋಷ! (3)
5.ಸನ್ಮತಿಯುಳ್ಳವನ ಬುದ್ಧಿ (2)
7.ವಿವಿಧದಲ್ಲಿರುವ ರೀತಿ (2)
10.ಕಮರಿಯೊಳಗೆ ಬಿದ್ದಿರುವ ಗಜ! (2)
13.ನೂಪುರ ಖರೀದಿಸಿದ ಪಟ್ಟಣ (2)
15.ವಿಕ್ರಯಿಸು ಎಂದಾಗ ಬೀಸಿದ ಗಾಳಿ (3)
16.ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ

1.ಅಕ್ಷರಗಳನ್ನು ಬಲ್ಲವನೀತ (4)
2.ದರ್ಶನವಿದ್ದಾಗ ನೀಡಿರುವ ದೃಷ್ಟಾಂತ (4)
3.ಮತ ನೀಡುವಾಗ ಆವರಿಸಿದ ಕತ್ತಲು (2)
4.ಪೂಜೆ ಮಾಡುವವನು (4)
6.ಹೀಗೆ ಮುಷ್ಟಿಯಿಂದ ಹೊಡೆ (2)
8.ಹೆಚ್ಚು ಹಣವುಳ್ಳವ (4)
9.ಮಾನವಿರುವಾತನಿಗೆ ಮೂಡಿದ ಶಂಕೆ (4)
11.ಪುಢಾರಿ ಹತ್ತಿರವಿರುವ ಶತ್ರು (2)
12.ತೆಳ್ಳಗಿನ ಸೊಂಟವಿದು (4)
14.ವಿರಮಿಸುತ್ತಿರುವಾಗಲೇ ಮೂಡಿದ ಸೂರ್ಯ (2)



4546ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅರಸ 3.ದಿನಾಂಕ 4.ಮಡದಿ 6.ಆಟ 7.ನವ 11.ಹುಸಿ 13.ಕ್ಷೀರ 14.ಹಿರಿಯ 15.ಕರಣ 16.ತೆವರಿ

ಮೇಲಿಂದ ಕೆಳಕ್ಕೆ: 1.ಅಕಳಂಕ 2.ಸಮನ್ವಯ 3.ದಿಟ 5.ದಿನ 6.ಅಜಾನುಬಾಹು 8.ವರ್ಣವಿಕಾರ 9.ಆತ್ಮೀಯತೆ 10.ಮದಕರಿ 12.ಸಿಹಿ 13.ಕ್ಷೀಣ

ಸುಡೊಕು 4933

4			9		1		3	
	9							4
8		3	4		5	9		
7								8
	8		1	6	2		9	
		9	7			2		
		8		1			4	
9	6	4	8		7	1		5
	1			9			8	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4932 ಸುಡೊಕು

6	2	4	9	1	7	3	5	8
5	1	3	8	4	6	9	2	7
9	7	8	2	5	3	4	1	6
7	4	9	5	3	8	1	6	2
1	8	6	4	2	9	7	3	5
2	3	5	6	7	1	8	4	9
4	9	2	3	8	5	6	7	1
3	6	1	7	9	2	5	8	4
8	5	7	1	6	4	2	9	3

ಅರ್ನಬ್ ಬಂಧಿಸುವುದಾದರೆ ಮೊದಲೇ ನೋಟಿಸ್ ನೀಡಿ

ಮುಂಬೈ (ಪಿಟಿಐ): ಟೆಲಿವಿಷನ್ ರೇಟಿಂಗ್ ಪಾಯಿಂಟ್ (ಟಿಆರ್‌ಪಿ) ತಿರುಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಿಪಬ್ಲಿಕ್ ಟಿವಿಯ ಪ್ರಧಾನ ಸಂಪಾದಕ ಅರ್ನಬ್ ಗೋಸ್ವಾಮಿ ಅವರನ್ನು ಬಂಧಿಸುವುದಾದರೆ, ಮೂರು ದಿನಗಳ ಮೊದಲೇ ಅವರಿಗೆ ನೋಟಿಸ್ ನೀಡುವಂತೆ ಬಾಂಬೆ ಹೈಕೋರ್ಟ್ ಬುಧವಾರ ಮುಂಬೈ ಪೊಲೀಸರಿಗೆ ನಿರ್ದೇಶನ ನೀಡಿದೆ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಹೆಚ್.ಎಸ್. ಪ್ರಭಾ
ಮಾಜಿ ಸಚಿವರು ಮತ್ತು ಸಂಸದರಾದ ದಿವಂಗತ ಹೆಚ್.ಸಿ ಶ್ರೀಕಂಠಯ್ಯರವರ ಪುತ್ರಿ ಹಾಗೂ ಶ್ರೀ ಎಂ. ಕೃಷ್ಣಪ್ಪ ರವರ ಧರ್ಮಪತ್ನಿ
ಜನನ: 25-01-1952 | ಮರಣ: 24-03-2021
ನಿಮ್ಮ ನೆನಪು ಸದಾ ನಮ್ಮ ಮನದಲ್ಲಿ ಹಸಿರಾಗಿದೆ ಹಾಗೂ ಅದು ನಮ್ಮೆಲ್ಲರ ಆತ್ಮದಲ್ಲಿ ನಿರಂತರವಾಗಿ ನೆನೆಪಿನಲ್ಲಿರುತ್ತದೆ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರ ಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.
ಶ್ರದ್ಧಾಂಜಲಿ ಕೋರುವವರು: ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಶಿವಗಣಾರಾಧನೆ

ಶ್ರೀ ಹೆಚ್.ವಿ. ನಂಜೇಗೌಡ B.A
(Rtd Supt Gr1 P.W.D)
ಜನನ: 23.5.1928 – ನಿಧನ : 16.3.2021
ತಾ॥ 16.3.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶಿವಗಣಾರಾಧನೆ ತಾ॥ 26.3.2021 ನೇ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ
ದುಃಖತಪ್ತರು: ಕುಟುಂಬ ವರ್ಗದವರು
ವಿಜಯನಗರ, ಬೆಂಗಳೂರು
ಮೊ: 9844980365, 8197824470

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀ ಬಿಳುಮನೆ ರಾಮದಾಸ್‌ರವರು
ಸಾಹಿತಿ ಮತ್ತು ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ
ಮರಣ: 25–03–2020
ನಿಮ್ಮ ಪ್ರೀತಿ ಮತ್ತು ಹಾಸ್ಯಪ್ರಜ್ಞೆಯ ಸ್ಮರಣೆಯೊಂದಿಗೆ ನಿಮ್ಮ ಸಹೋದರ, ಸಹೋದರಿಯರು ಮತ್ತು ಕುಟುಂಬವರ್ಗದವರು.

SAD DEMISE

D.N. KRISHNAPPA
DOB: 22-06-1932
DOD: 23-03-2021
Bereaved Family:
SMT NALINI KRISHNAPPA & FAMILY

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

2024ರ ವೇಳೆಗೆ 25,000 ಶಾಲೆಗಳಲ್ಲಿ ಅನುಷ್ಠಾನ

ಮೌಲ್ಯಮಾಪನ: ಸಾಮರ್ಥ್ಯ ಆಧಾರಕ್ಕೆ ಸಿಬಿಎಸ್‌ಇ ಚಾಲನೆ

ನವದೆಹಲಿ (ಪಿಟಿಐ): 6 ರಿಂದ 10ನೇ ತರಗತಿಗಳ ಇಂಗ್ಲಿಷ್ (ಓದುವುದು), ವಿಜ್ಞಾನ ಹಾಗೂ ಗಣಿತ ವಿಷಯಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಾಮರ್ಥ್ಯ ಆಧಾರಿತ ಮೌಲ್ಯಮಾಪನ ಕಾರ್ಯಕ್ರಮಕ್ಕೆ ಸಿಬಿಎಸ್‌ಇ ಬುಧವಾರ ಚಾಲನೆ ನೀಡಿತು.

'ಈ ಮೌಲ್ಯಮಾಪನ ಕಾರ್ಯಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ನಿರೂಪಿತ ಕಲಿಕಾ ಮಾದರಿಗೆ ಅನುಗುಣವಾಗಿ ಇರಲಿದೆ. ಪ್ರಸ್ತುತ ಸಿಬಿಎಸ್‌ಇ ಅನುಸರಿಸುತ್ತಿರುವ ಮೌಲ್ಯಮಾಪನ ವ್ಯವಸ್ಥೆಯ ಬದಲಾಗಿ ನೂತನ ಮೌಲ್ಯಮಾಪನ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲಾಗುವುದು. ಈ ಪ್ರಕ್ರಿಯೆ ಮುಂದಿನ 2–3 ವರ್ಷಗಳಲ್ಲಿ ಕಾರ್ಯಗತವಾಗುವುದು' ಎಂದು ಸಿಬಿಎಸ್‌ಇ ಚೇರಮನ್ ಮನೋಜ್ ಅಹುಜಾ ಹೇಳಿದರು.

'ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಯ ಆಶಯವನ್ನು ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಒಳಗೊಂಡಿದೆ. 21ನೇ ಶತಮಾನದ ನಿರೀಕ್ಷೆಗಳಿಗೆ ನಮ್ಮ ವಿದ್ಯಾರ್ಥಿಗಳನ್ನು ತಯಾರು ಮಾಡುವ ಗುರಿ ಹೊಂದಿದೆ. ಕಂಠಪಾಠಕ್ಕೆ ಒತ್ತು ನೀಡುವ ಕಲಿಕೆಗಿಂತ ಸಾಮರ್ಥ್ಯ ಆಧಾರಿತ ಶಿಕ್ಷಣಕ್ಕೆ ಎನ್‌ಇಪಿಯಲ್ಲಿ ಮಹತ್ವ ನೀಡಲಾಗಿದೆ' ಎಂದು ಹೇಳಿದರು.

'ಬ್ರಿಟಿಷ್ ಕೌನ್ಸಿಲ್ ಹಾಗೂ ಬ್ರಿಟನ್‌ನ ಮೂರು ಸಂಸ್ಥೆಗಳಾದ ಕೇಂಬ್ರಿಜ್, ಎನ್‌ಎಆರ್‌ಐಸಿ ಹಾಗೂ ಅಲ್ಫಾ ಪ್ಲಸ್ ಸಹಯೋಗದಲ್ಲಿ ಸಿಬಿಎಸ್‌ಇ 'ಸಾಮರ್ಥ್ಯ ಆಧಾರಿತ ಮೌಲ್ಯಮಾಪನ ಕಾರ್ಯಕ್ರಮ'ವನ್ನು ಸಿದ್ಧಪಡಿಸಲಿದೆ. ಈ ನಿಟ್ಟಿನಲ್ಲಿ ಕಾರ್ಯವೂ ಆರಂಭವಾಗಿದೆ' ಎಂದರು.

'ಈ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ 40 ಜನ ಮೌಲ್ಯಮಾಪನ ಡಿಸೈನರ್ಸ್, 180 ಜನ ಪರೀಕ್ಷಾ ವಿಷಯ ಸಿದ್ಧಪಡಿಸುವವರು ಹಾಗೂ 360 ಜನ ಮಾಸ್ಟರ್ ಮೆಂಟರ್‌ಗಳಿಗೆ ತರಬೇತಿ ನೀಡಲಾಗುತ್ತಿದೆ. ಮಾದರಿ ಪ್ರಶ್ನೆಗಳ ಕೋಶ ಹಾಗೂ ಮಾದರಿ ಪಾಠಗಳ ಕಾರ್ಯಯೋಜನೆಗಳನ್ನು ಇವರು ಸಿದ್ಧಪಡಿಸುವರು' ಎಂದರು.

'ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರದಲ್ಲಿನ ಸಹಭಾಗಿತ್ವ ಭಾರತ ಮತ್ತು ಬ್ರಿಟನ್ ನಡುವಿನ ಉತ್ತಮ ಸಂಬಂಧಕ್ಕೆ ಸಾಕ್ಷಿ' ಎಂದು ಬ್ರಿಟಿಷ್ ಕೌನ್ಸಿಲ್‌ನ ಭಾರತ ಶಾಖೆಯ ನಿರ್ದೇಶಕ ಬಾರ್ಬರಾ ವಿಕ್‌ಹ್ಯಾಮ್ ಅಭಿಪ್ರಾಯಪಟ್ಟರು.

'ಸುಧಾರಿತ ಈ ಮೌಲ್ಯಮಾಪನ ಕಾರ್ಯಕ್ರಮದಿಂದ ಸಿಬಿಎಸ್‌ಇ ಶಾಲೆಗಳಲ್ಲಿ ಬೋಧನೆ ಹಾಗೂ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ಹೆಚ್ಚುವುದು' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

2024ರ ವೇಳೆಗೆ ಜಾರಿಗೆ ಕ್ರಮ

ನೂತನ 'ಸಾಮರ್ಥ್ಯ ಆಧಾರಿತ ಮೌಲ್ಯಮಾಪನ ಕಾರ್ಯಕ್ರಮ'ವನ್ನು ಮೊದಲ ಹಂತದಲ್ಲಿ ಆಯ್ದ ಕೇಂದ್ರೀಯ ವಿದ್ಯಾಲಯಗಳು, ನವೋದಯಗಳು, ಚಂಡೀಗಡದ ಶಾಲೆಗಳಲ್ಲಿ ಜಾರಿಗೊಳಿಸಲಾಗುವುದು ಎಂದು ಸಿಬಿಎಸ್‌ಇ ಮೂಲಗಳು ಹೇಳಿವೆ.

2024ರ ವೇಳೆಗೆ ಸಿಬಿಎಸ್‌ಇಯ 25,000 ಶಾಲೆಗಳು ಹಾಗೂ ಎಲ್ಲ ಖಾಸಗಿ ಶಾಲೆಗಳಲ್ಲಿಯೂ ಈ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತದೆ ಎಂದು ಇವೇ ಮೂಲಗಳು ಹೇಳಿವೆ.

ಮುಖ್ಯಾಂಶಗಳು
- ಬ್ರಿಟಿಷ್ ಕೌನ್ಸಿಲ್ ಸೇರಿ ಬ್ರಿಟನ್‌ನ ಮೂರು ಸಂಸ್ಥೆಗಳ ಸಹಯೋಗ
- 360 ಜನ ಮಾಸ್ಟರ್ ಮೆಂಟರ್‌ಗಳಿಗೆ ತರಬೇತಿ
- ಬೋಧನೆ–ಕಲಿಕಾ ಗುಣಮಟ್ಟ ಹೆಚ್ಚಳ ನಿರೀಕ್ಷೆ

> ನೂತನ ಮೌಲ್ಯಮಾಪನ ಕಾರ್ಯಕ್ರಮದ ಯಶಸ್ಸಿಗಾಗಿ ಸಿಬಿಎಸ್‌ಇ ಜೊತೆ ರಚನಾತ್ಮಕವಾಗಿ ಕಾರ್ಯನಿರ್ವಹಿಸಲು ನಾವು ಉತ್ಸುಕರಾಗಿದ್ದೇವೆ
> **ಬಾರ್ಬರಾ ವಿಕ್‌ಹ್ಯಾಮ್**, ಬ್ರಿಟಿಷ್ ಕೌನ್ಸಿಲ್‌ನ ಭಾರತ ಶಾಖೆಯ ನಿರ್ದೇಶಕ



ಕೊರೊನಾ ತಡೆ: ಹಬ್ಬಗಳ ನಿಯಂತ್ರಣಕ್ಕೆ ಸೂಚನೆ

ನವದೆಹಲಿ: ದೇಶದಾದ್ಯಂತ ಪುನಃ ಕೊರೊನಾ ಅಲೆ ಕಾಣಿಸಿಕೊಂಡಿರುವ ಕಾರಣ ಸಾಮೂಹಿಕ ಜಾತ್ರೆ, ಉತ್ಸವ ಮತ್ತು ಹಬ್ಬಗಳ ಆಚರಣೆಯ ಮೇಲೆ ನಿರ್ಬಂಧ ಹೇರಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳನ್ನು ಸೂಚಿಸಿದೆ.

ಈ ಸಂಬಂಧ ಬುಧವಾರ ಆಯಾ ರಾಜ್ಯಗಳ ಮುಖ್ಯ ಕಾರ್ಯದರ್ಶಿ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿಕಾರಿಗಳಿಗೆ ಪತ್ರ ಬರೆದಿರುವ ಆರೋಗ್ಯ ಸಚಿವಾಲಯ, ಕೊರೊನಾ ವಿರುದ್ಧದ ಸಮರವು ನಿರ್ಣಾಯಕ ಘಟ್ಟದಲ್ಲಿದ್ದು, ಎಲ್ಲರೂ ಕೈಜೋಡಿಸಬೇಕು ಎಂದು ಕೋರಿದೆ.

ಮುಂದಿನ ದಿನಗಳಲ್ಲಿ ಆಚರಿಸಲಾಗುವ ಹೋಳಿ, ಶಬ್ಬೇ-ಬಾರಾತ್, ಬಿಹು, ಈಸ್ಟರ್, ಈದ್-ಉಲ್-ಫಿತ್ರ್ ಮತ್ತಿತರ ಸಾಲುಸಾಲು ಹಬ್ಬಗಳ ವೇಳೆ ಜನರು ಒಂದೆಡೆ ಸೇರದಂತೆ ತಡೆಯುವ ನಿಟ್ಟಿನಲ್ಲಿ ಸ್ಥಳೀಯವಾಗಿ ನಿಯಂತ್ರಣ ಹೇರಬೇಕು. ವಿಪತ್ತು ನಿರ್ವಹಣಾ ಕಾಯ್ದೆ–2005ರ ಸೆಕ್ಷನ್–22ರ ಅಡಿ ಸಾಮೂಹಿಕ ಸಭೆ– ಸಮಾರಂಭಗಳಿಗೆ ಅನುಮತಿ ನಿರಾಕರಿಸಿ ಕಾಯಿಲೆಯ ಪರಿಣಾಮಕಾರಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದೆ.

ಇಸ್ರೇಲ್ ಸಂಸತ್ ಚುನಾವಣೆ: ಅತಂತ್ರ ಸ್ಥಿತಿ

ಮತ್ತೆ ರಾಜಕೀಯ ಬಿಕ್ಕಟ್ಟು

ಜೆರುಸಲೇಂ (ಪಿಟಿಐ, ಎಪಿ, ರಾಯಿಟರ್ಸ್): ಇಸ್ರೇಲ್‌ನಲ್ಲಿ ಮತ್ತೊಮ್ಮೆ ರಾಜಕೀಯ ಬಿಕ್ಕಟ್ಟು ಎದುರಾಗಿದೆ. ಸಂಸತ್ ಚುನಾವಣೆಯ ಮತ ಎಣಿಕೆ ಶೇಕಡ 90ರಷ್ಟು ಪೂರ್ಣಗೊಂಡಿದ್ದು, ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯುವ ಸಾಧ್ಯತೆಗಳಿಲ್ಲ.

ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಮೈತ್ರಿಕೂಟಕ್ಕೂ ಸ್ಪಷ್ಟ ಬಹುಮತ ದೊರೆಯುವ ಲಕ್ಷಣಗಳು ಗೋಚರಿಸುತ್ತಿಲ್ಲ. ಹೀಗಾಗಿ, ಅವರ ರಾಜಕೀಯ ಭವಿಷ್ಯ ಸಹ ಅನಿಶ್ಚಿತತೆಯಿಂದ ಕೂಡಿದೆ.

ಇಸ್ರೇಲ್‌ನಲ್ಲಿ ಎರಡು ವರ್ಷಗಳಲ್ಲಿ ಈಗಾಗಲೇ ನಾಲ್ಕು ಚುನಾವಣೆಗಳು ನಡೆದಿದ್ದು, ಐದನೇ ಚುನಾವಣೆ ನಡೆಯುವ ಸಾಧ್ಯತೆಗಳಿವೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ನೆತನ್ಯಾಹು ಅವರು ಲಿಕುದ್ ಪಕ್ಷ ಅತಿ ದೊಡ್ಡ ಏಕೈಕ ಪಕ್ಷವಾಗಿ ಹೊರಹೊಮ್ಮಿದ್ದು, 30 ಸ್ಥಾನಗಳಲ್ಲಿ ಜಯಗಳಿಸಿದೆ. 120 ಸದಸ್ಯರನ್ನು ಹೊಂದಿರುವ ಇಸ್ರೇಲ್ ಸಂಸತ್‌ನಲ್ಲಿ ಬಹುಮತ ಹೊಂದಲು 61 ಸ್ಥಾನಗಳ ಅಗತ್ಯವಿದೆ.

ನಟ ಅಮೀರ್ ಖಾನ್‌ಗೆ ಕೋವಿಡ್

ಮುಂಬೈ (ಪಿಟಿಐ): ಬಾಲಿವುಡ್ ನಟ ಅಮೀರ್ ಖಾನ್ ಅವರಿಗೆ ಕೋವಿಡ್–19 ದೃಢಪಟ್ಟಿದೆ. ಸದ್ಯ ಆರಾಮವಾಗಿದ್ದು, ಮನೆಯಲ್ಲೇ ಕ್ವಾರಂಟೈನ್‌ನಲ್ಲಿದ್ದಾರೆ.

ನಟ ಕ್ಷೇಮವಾಗಿದ್ದು, ಅವರ ಸಂಪರ್ಕಕ್ಕೆ ಬಂದವರು ಕೋವಿಡ್-19 ಪರೀಕ್ಷೆ ಮಾಡಿಸಿ ಸ್ವಯಂ ಕ್ವಾರಂಟೈನ್‌ಗೆ ಒಳಗಾಗುವಂತೆ ಅಮೀರ್ ಖಾನ್ ವಕ್ತಾರರು ತಿಳಿಸಿದ್ದಾರೆ.

ಸೋಮವಾರ ನಡೆದ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಜೊತೆಗೆ ಅಮೀರ್ ಖಾನ್ ವೇದಿಕೆ ಹಂಚಿಕೊಂಡಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

ಭವಿಷ್ಯ
Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ ಪರಿಹಾರಕ್ಕೆ ಶ್ರೀಕಾಂತ್ ದಾಸ್. 8217472895

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

★ಕೆಲಸವಾದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★॥(ಉಚಿತ ಭವಿಷ್ಯ)॥★ ದುರ್ಗಾಅಂಜನಂ ಜ್ಯೋತಿಷ್ಯಾಲಯ ಸಂತಾನಭಾಗ್ಯ, ದಾಂಪತ್ಯ,ಪ್ರೀತಿಯಲ್ಲಿ ಮೋಸ, (ಸ್ತ್ರೀ ಪುರುಷ ವಶೀಕರಣ) ಸಮಸ್ಯೆ ಏನೇಯಿರಲಿ ಕ್ಷಣಮಾತ್ರದಲ್ಲಿ ಪರಿಹಾರ. 8197357241

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ವಶೀಕರಣ ಸ್ಪೆಷಲಿಸ್ಟ್, ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಿಲ್ಲ, ಸ್ತ್ರೀ ಪುರುಷ ವಶೀಕರಣ, ದಾಂಪತ್ಯ ಕಲಹ, ಇನ್ನಿತರ ಪರಿಹಾರದಲ್ಲಿ ಚಾಲೆಂಜ್ ನಂ: 8884226140

ವಶೀಕರಣ ಮಾಂತ್ರಿಕರು, ಪಂಚವಟಿರುದ್ರಾ ದೇವಿಯ ಪವಾಡ ಶಕ್ತಿಗಳಿಂದ ಸ್ತ್ರೀ, ಪುರುಷ ವಶೀಕರಣ, ಶತ್ರುನಾಶ, ಸಾಲಬಾಧೆ, ವ್ಯವಹಾರ, ದಾಂಪತ್ಯ. ಕೇವಲ 1 ಗಂಟೆಯಲ್ಲಿ ಪರಿಹಾರ. 9148244231

ಉದ್ಯೋಗಾವಕಾಶ
Drivers

ಬೈಕ್ ರೈಡರ್ಸ್ ಬೇಕಾಗಿದ್ದಾರೆ! ನೀವು ಬೈಕ್ ಹೊಂದಿದ್ದೀರಾ ಪಾರ್ಟ್ ಟೈಮ್ ಅಥವಾ ಫುಲ್ ಟೈಮ್ ಕೆಲಸ ಹುಡುಕುತ್ತಿದ್ದೀರಾ ಬೇಕಾದ ದಾಖಲೆಗಳು ಬೈಕ್.ಆರ್ ಸಿ. ಡಿಎಲ್.ಹಾಗೂ ಆಂಡ್ರಾಯ್ಡ್ ಮೊಬೈಲ್ ಹೊಂದಿರಬೇಕು. ಕೂಡಲೇ ಕರೆ ಮಾಡಿ 080-47096073

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9886275111

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129

ಮಹಿಳೆಯರಿಗೆ ಮಹಿಳೆಯರಿಗೆ ಮಹಿಳೆಯರಿಗೆ ಮನೆಯಿಂದಲೇ ಕಾಲ್ ಸೆಂಟರ್ ಮಾಡುವಂತಹ ಕೆಲಸ. ಹೆಚ್ಚಿನ ಮಾಹಿತಿಗೆ ನಿಮ್ಮ ಹೆಸರು ಊರಿನ ಹೆಸರು ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ. 9916766429

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕುಳಿತು ಬುಕ್ ಬರೆಯುವ ಫಾರಂ ತುಂಬುವ ಮೂಲಕ ಗಳಿಸಿ 15,000-25,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9972387417, 9844978728

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಕೆಲಸಕ್ಕೆ ಬೇಕಾಗಿದ್ದಾರೆ. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ + OT 15,800-86,000 8884054160, 9739544856 .

ತಕ್ಷಣ ಬೇಕಾಗಿದ್ದಾರೆ VOLVO, TVS, TOYOTA, ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ಗಳಿಗೆ ಯುವಕಯುವತಿಯರು ವಸತಿಯೂಟದೊಂದಿಗೆ 15,800/- 55000/-. 8951036487, 8951036488

ಬೇಕಾಗಿದ್ದಾರೆ: 25000ಮಂತ್ಲಿ, ಆಫೀಸ್,ಶಾಪ್ಸ್, ಮಾಲ್ಗಳು, ಮೆಡಿಕಲ್ಸ್ ಗಳಲ್ಲಿ ಕಂಪನಿಯ ವಾಹನಗಳೊಂದಿಗೆ ಅಡ್ವಟೈಸ್ ಮಾಡಲು. ಊಟ,ವಸತಿಉಚಿತ, ಬೆಂಗಳೂರು (ಷರತ್ತುಗಳಿವೆ). 8904379634, 9513670249

ಪ್ರವಾಸ
Travel

★ಶ್ರೇಯಸ್ ಟೂರ್ಸ್★ 16.04.2021,18.05.2021 23ದಿನಗಳು ಈಶಾನ್ಯ ಭಾರತದ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಪ್ರವಾಸ.16.04.2021, 08.05.2021,18.05.2021 12ದಿನಗಳು ಗೌಹಾತಿ,ಕಾಜಿರಂಗ, ಶಿಲ್ಲಾಂಗ್,ಬೊಂಡಿಲಾ,ತವಾಂಗ್, ಚಿರಾಪುಂಜಿ.,26.04.2021, 30.05.2021 12ದಿನಗಳು ದೀಮಾಪುರಿ,ಕೊಹಿಮಾ, ಇಂಪಾಲ್,ಐಜಾಲ್, ಉನಕೋಟಿ,ಅಗರ್ತಲಾ, ಮಾತಬರಿ.,08.05.2021 8ದಿನಗಳು ಗ್ಯಾಂಗ್‌ಟಕ್, ಡಾರ್ಜಲಿಂಗ್,ಮಿರಿಕ್,ನಾಂಚಿ, ಲಾಚುಂಗ್,.05.06.2021 10ದಿನಗಳು ದೆಹಲಿ, ಸಿಮ್ಲಾ, ಕುಲುಮನಾಲಿ, 5ದೇವಿಯರು, ವೈಷ್ಣೋದೇವಿ,ಅಮೃತಸರ್, ವಾಘಗಡಿ,ಕುರುಕ್ಷೇತ್ರ. 9743351212/ 9902050065/ 9206979202

★20.04.2021 8 ದಿನಗಳು* ವಿಮಾನದಲ್ಲಿ ಗುಜರಾತ್, ಭಾವನಗರ್,ಸೋಮನಾಥ, 04.05.2021 12ದಿನಗಳು ವೈಷ್ಣೋದೇವಿ,ಸಿಮ್ಲಾ,ಮನಾಲಿ, ಸಪ್ತಶಕ್ತಿಪೀಠಗಳು ಆರ್.ಗಾಂಧಿ ಟೂರ್ಸ್.9945445809/ 9902433500

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಮಹಾರಾಷ್ಟ್ರ: ಕೇಂದ್ರ ಆರೋಗ್ಯ ಸಚಿವಾಲಯ ಹೇಳಿಕೆ

ಎರಡು ಬಾರಿ ರೂಪಾಂತರಿತ ವೈರಸ್ ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಎರಡು ಬಾರಿ ರೂಪಾಂತರಗೊಂಡಿರುವ ಕೊರೊನಾ ವೈರಸ್‌ನ ತಳಿಗಳು ಮಹಾರಾಷ್ಟ್ರದಲ್ಲಿ ಪತ್ತೆಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಬುಧವಾರ ದೃಢಪಡಿಸಿದೆ.

ಎರಡು ಬಾರಿ ರೂಪಾಂತರಗೊಂಡಿರುವ ಕಾರಣ, ವ್ಯಕ್ತಿಯ ದೇಹದಲ್ಲಿರುವ ರೋಗ ನಿರೋಧಕಶಕ್ತಿಗೂ ಈ ವೈರಸ್ ಮಣಿಯುವುದಿಲ್ಲ. ಅಲ್ಲದೇ, ರೋಗನಿರೋಧಕ ಶಕ್ತಿಯು ಹೆಚ್ಚು ನಿಷ್ಕ್ರಿಯಗೊಳ್ಳಲು ಸಹ ರೂಪಾಂತರಿತ ವೈರಸ್ ಕಾರಣವಾಗುವುದು ಎಂದೂ ಸಚಿವಾಲಯ ವಿಶ್ಲೇಷಿಸಿದೆ.

ಆದರೆ, ಮಹಾರಾಷ್ಟ್ರದಲ್ಲಿ ಕಳೆದ ಕೆಲವು ದಿನಗಳಿಂದ ಕೋವಿಡ್ ಪ್ರಕರಣಗಳು ಹೆಚ್ಚಾಗಲು, ಎರಡು ಬಾರಿ ರೂಪಾಂತರಗೊಂಡಿರುವ ಈ ವೈರಸ್ ಕಾರಣ ಎಂದು ಸಚಿವಾಲಯ ಹೇಳಿಲ್ಲ. ಇಂಥ ನಿರ್ಧಾರಕ್ಕೆ ಬರಲು ಸಾಕಷ್ಟು ವೈಜ್ಞಾನಿಕ ಪುರಾವೆಗಳು ಇಲ್ಲ ಎಂದು ಹೇಳಿದೆ.

'ಮಹಾರಾಷ್ಟ್ರದಲ್ಲಿ ಈಗ ವರದಿಯಾಗಿರುವ ಪ್ರಕರಣಗಳ ಪೈಕಿ, ವಿಶ್ಲೇಷಣೆಗೆ ಒಳಪಡಿಸಿರುವ ಶೇ 15–20ರಷ್ಟು ಮಾದರಿಗಳಲ್ಲಿ ಮಾತ್ರ ಎರಡು ಬಾರಿ ರೂಪಾಂತರಿತ ವೈರಸ್ ಕಂಡು ಬಂದಿದೆ' ಎಂದು ನ್ಯಾಷನಲ್ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್‌ನ ನಿರ್ದೇಶಕ ಸುಜಿತ್ ಸಿಂಗ್ ಹೇಳಿದರು.

'ಇಷ್ಟು ಅಲ್ಪ ಪ್ರಮಾಣದ ಮಾದರಿ ವಿಶ್ಲೇಷಣೆಯನ್ನು ಆಧಾರವಾಗಿಟ್ಟುಕೊಂಡು, ಕೋವಿಡ್ ಪ್ರಕರಣಗಳ ಹೆಚ್ಚಳಕ್ಕೆ ರೂಪಾಂತರಿತ ವೈರಸ್ ಕಾರಣ ಎಂದು ಹೇಳಲಾಗದು' ಎಂದು ಹೇಳಿದರು.

ನಾಗಪುರದ ಎಂಟು ವಾರ್ಡ್‌ಗಳಿಗೆ ಸಂಬಂಧಿಸಿದ ಮಾದರಿಗಳ ಪೈಕಿ ಶೇ 20 ಮಾದರಿಗಳಲ್ಲಿ ಈ ರೂಪಾಂತರಿತ ವೈರಸ್ ಪತ್ತೆಯಾಗಿದೆ ಎಂದು ಸಚಿವಾಲಯ ಹೇಳಿದೆ.

ಕೋವಿಡ್: 2,298 ಪ್ರಕರಣ, 12 ಸಾವು

ಬೆಂಗಳೂರು: ರಾಜ್ಯದಲ್ಲಿ ಸತತ ಎರಡನೇ ದಿನ ಕೋವಿಡ್ ಪೀಡಿತರ ಸಂಖ್ಯೆ 2 ಸಾವಿರದ ಗಡಿ ದಾಟಿದೆ. 24 ಗಂಟೆಗಳ ಅವಧಿಯಲ್ಲಿ 2,298 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದ್ದು, 12 ಮಂದಿ ಸಾವಿಗೀಡಾಗಿದ್ದಾರೆ.

ಬೆಂಗಳೂರಿನಲ್ಲಿ 1,398 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿಯೂ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, 20 ಜಿಲ್ಲೆಗಳಲ್ಲಿ ಸೋಂಕಿತರ ಸಂಖ್ಯೆ ಎರಡಂಕಿ ತಲುಪಿದೆ. ಬೆಂಗಳೂರಿನಲ್ಲಿ 7 ಮಂದಿ, ಮೈಸೂರಿನಲ್ಲಿ ಇಬ್ಬರು, ಕೊಪ್ಪಳ, ಕಲಬುರ್ಗಿ ಹಾಗೂ ಧಾರವಾಡದಲ್ಲಿ ತಲಾ ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. 48 ಗಂಟೆಗಳಲ್ಲಿ 4,308 ಪ್ರಕರಣಗಳು ಖಚಿತಪಟ್ಟ ಪರಿಣಾಮ ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿಕೆ ಕಂಡಿದೆ. ಸದ್ಯ 16,886 ಮಂದಿ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ (143) ಹೆಚ್ಚಳವಾಗಿದೆ. ರಾಜ್ಯದಲ್ಲಿ ಈವರೆಗೆ ಸೋಂಕಿತರಾದವರ ಸಂಖ್ಯೆ 9.75 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣ ಶೇ 2.12ಕ್ಕೆ ತಲುಪಿದ್ದು, ಮರಣ ಪ್ರಮಾಣ ಶೇ 0.52 ರಷ್ಟಿದೆ. ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದ್ದು, ಒಂದು ದಿನದ ಅವಧಿಯಲ್ಲಿ 1.08 ಲಕ್ಷ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ.

ಬೆಂಗಳೂರಿನಲ್ಲಿ ಈವರೆಗೆ ಸೋಂಕಿತರಾದವರ ಸಂಖ್ಯೆ 4.21 ಲಕ್ಷ ದಾಟಿದೆ. ಕಲಬುರ್ಗಿಯಲ್ಲಿ ಸತತ ಎರಡನೇ ದಿನ ಹೊಸ ಪ್ರಕರಣಗಳ ಸಂಖ್ಯೆ ನೂರರ ಗಡಿ (118) ದಾಟಿದೆ. ತುಮಕೂರು (94), ಬೀದರ್ (82) ಉಡುಪಿ (79), ಮೈಸೂರು (74), ಹಾಸನ (60), ದಕ್ಷಿಣ ಕನ್ನಡದಲ್ಲಿ (54) ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ದೃಢಪಟ್ಟಿವೆ.

ಒಂದೇ ಮನೆಯಲ್ಲಿ 13 ಜನರಿಗೆ ಸೋಂಕು

ಬಾಗಲಕೋಟೆ: ಇಲ್ಲಿನ ಹಳೆ ಬಾಗಲಕೋಟೆಯ ಮಾರವಾಡಿ ಗಲ್ಲಿಯಲ್ಲಿ ಒಂದೇ ಕುಟುಂಬದ 13 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಹೀಗಾಗಿ ಸೋಂಕು ದೃಢಪಟ್ಟವರ ಮನೆಯ ಸುತ್ತಲಿನ 100 ಮೀಟರ್ ವ್ಯಾಪ್ತಿಯಲ್ಲಿ ಕಂಟೈನ್ಮೆಂಟ್ ವಲಯ ನಿರ್ಮಿಸಲಾಗಿದೆ. ಕಂಟೈನ್‌ಮೆಂಟ್ ವಲಯಕ್ಕೆ ಜಿಲ್ಲಾಧಿಕಾರಿ ಕ್ಯಾಪ್ಟನ್ ಡಾ.ಕೆ. ರಾಜೇಂದ್ರ ಮತ್ತು ಜಿಲ್ಲಾ ಪಂಚಾಯ್ತಿ ಸಿಇಒ ಟಿ.ಭೂಬಾಲನ್ ಬುಧವಾರ ಬೇಟಿ ನೀಡಿ ಪರಿಶೀಲಿಸಿದರು.

ಕೋವಿಡ್ 2ನೇ ಅಲೆ ಭೀತಿ ಉಂಟಾಗಿದೆ. ಒಂದೇ ಕುಟುಂಬದ 13 ಜನರಿಗೆ ಸೋಂಕು ತಗುಲಿರುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಸೋಂಕಿತರ ಟ್ರಾವೆಲ್ ಹಿಸ್ಟರಿ ಕಲೆ ಹಾಕಲಾಗಿದೆ. ಸೋಂಕು ತಗುಲಿದ ಮನೆಯ ಮೂವರು ಸದಸ್ಯರು ಹಾಗೂ ಡ್ರೈವರ್ ಸೇರಿ ಸಾಂಗ್ಲಿಗೆ ಹೋಗಿ ಮಾರ್ಚ್ 14 ರಂದು ಬಾಗಲಕೋಟೆಗೆ ಬಂದಿದ್ದಾರೆ. ಅವರ ಸಂಪರ್ಕದಿಂದ ಮನೆಯವರಿಗೆಲ್ಲ ಸೋಂಕು ಹರಡಿರುವ ಬಗ್ಗೆ ಶಂಕೆ ವ್ಯಕ್ತವಾಗುತ್ತಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕೋವಿಡ್: ಹೊಸ ಅಧಿಸೂಚನೆ ಬಗ್ಗೆ ರಾಜ್ಯ ಸರ್ಕಾರದ ಮಾಹಿತಿ

₹10 ಸಾವಿರ ತನಕ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ನಿಯಮ ಪಾಲಿಸದವರ ವಿರುದ್ಧ ಕ್ರಮ ಕೈಗೊಳ್ಳುವ ಸಂಬಂಧ ಬುಧವಾರ ಹೊಸ ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಧಾರ್ಮಿಕ, ರಾಜಕೀಯ ಸಮಾವೇಶಗಳಲ್ಲಿ ಮಾಸ್ಕ್ ಧರಿಸದಿದ್ದರೆ ಮತ್ತು ಅಂತರ ಕಾಪಾಡದಿದ್ದರೆ ಆಯೋಜಕರನ್ನೇ ಜವಾಬ್ದಾರಿ ಮಾಡಲಾಗುವುದು ಎಂದು ತಿಳಿಸಿದೆ.

ಮಾಸ್ಕ್ ಧರಿಸದ ಮತ್ತು ಅಂತರ ಕಾಪಾಡದವರ ವಿರುದ್ಧ ಬಿಬಿಎಂಪಿ ಮತ್ತು ನಗರಸಭೆ ವ್ಯಾಪ್ತಿಯಲ್ಲಿ ₹250 ಮತ್ತು ಇತರ ಪ್ರದೇಶಗಳಲ್ಲಿ ₹100 ದಂಡ ವಿಧಿಸಲಾಗುವುದು. ಬಿಬಿಎಂಪಿ ವ್ಯಾಪ್ತಿಯಲ್ಲಿ ಮಾರ್ಷಲ್‌ಗಳು, ಇತರೆಡೆ ಹೆಡ್ ಕಾನ್‌ಸ್ಟೆಬಲ್ ಹುದ್ದೆಗೂ ಮೇಲಿನ ಅಧಿಕಾರಿಗಳು, ಆರೋಗ್ಯ ನಿರೀಕ್ಷಕರು, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಬಿಲ್ ಕಲೆಕ್ಟರ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ದಂಡ ವಸೂಲಿ ಮಾಡುವ ಅಧಿಕಾರ ನೀಡಲಾಗಿದೆ ಎಂದು ಸರ್ಕಾರ ವಿವರಿಸಿದೆ.

ಕಾರ್ಯಕ್ರಮಗಳಲ್ಲಿ ನಿಗದಿಗಿಂತ ಹೆಚ್ಚು ಜನ ಸೇರಿ ನಿಯಮ ಉಲ್ಲಂಘನೆ ಆಗದಂತೆ ನೋಡಿಕೊಳ್ಳುವುದು ಆ ಜಾಗದ ಮಾಲೀಕರ ಜವಾಬ್ದಾರಿ. ಇಂತಹ ಉಲ್ಲಂಘನೆಗಳಿಗೆ ಹವಾನಿಯಂತ್ರಿತವಲ್ಲದ ಸಭಾಂಗಣಗಳಿಗೆ ₹5 ಸಾವಿರ, ಧಾರ್ಮಿಕ, ರಾಜಕೀಯ ರ‍್ಯಾಲಿಗಳು, ಹವಾನಿಯಂತ್ರಿತ ಸಭಾಂಗಣ, ಸ್ಟಾರ್ ಹೋಟೆಲ್‌ಗಳು, ಬ್ರಾಂಡೆಡ್ ಅಂಗಡಿಗಳು, ಹೊರಾಂಗಣ ಕಾರ್ಯಕ್ರಮಗಳಿಗೆ ₹10 ಸಾವಿರ ದಂಡ ವಿಧಿಸಲಾಗುತ್ತದೆ. ಸಭಾಂಗಣದ ಮಾಲೀಕರು ಅಥವಾ ಆಯೋಜಕರು ಈ ದಂಡ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದೆ.

ಮಾಹಿತಿ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಅಧಿಸೂಚನೆ ಬಗ್ಗೆ ಸಾಕಷ್ಟು ಪ್ರಚಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿತು.

ಕಾಶಪ್ಪನವರ ವಿರುದ್ಧ ಎಫ್‌ಐಆರ್: ಇದೇ ಫೆ. 21ರಂದು ಪಂಚಮಸಾಲಿ ಸಮುದಾಯದ ರ‍್ಯಾಲಿಯಲ್ಲಿ ನಿಯಮ ಉಲ್ಲಂಘಿಸಿದ್ದಕ್ಕಾಗಿ ಪಂಚಮಸಾಲಿ ಮಹಾಸಭಾದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ವಿರುದ್ಧ ಸದಾಶಿವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.

ರ‍್ಯಾಲಿಯಲ್ಲಿ 80 ಸಾವಿರ ಜನ ಜಮಾಯಿಸಿದ್ದರು ಮತ್ತು ಕಾಶಪ್ಪನವರ ಅವರು ಮೇಕ್ರಿ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದ ತನಕ 4 ಸಾವಿರ ಬಂಬಲಿಗರೊಂದಿಗೆ ತೆರಳುವ ಮೂಲಕ ನಿಯಮ ಉಲ್ಲಂಘಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವಂತೆ ನೋಡಿಕೊಳ್ಳಬೇಕು ಎಂದು ಸದಾಶಿವನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮತ್ತು ವಿಚಾರಣಾ ನ್ಯಾಯಾಲಯಕ್ಕೆ ಪೀಠ ನಿರ್ದೇಶನ ನೀಡಿತು.

ಕ್ರೈಸ್ತ ಸನ್ಯಾಸಿಯರಿಗೆ ಕಿರುಕುಳ: ಕೇರಳ ಸಿ.ಎಂ ಆಕ್ಷೇಪ

ತಿರುವಲ್ಲ (ಕೇರಳ) (ಪಿಟಿಐ): ಉತ್ತರ ಪ್ರದೇಶದ ಝಾನ್ಸಿಯಲ್ಲಿ ರೈಲು ಪ್ರಯಾಣದ ವೇಳೆ ಕ್ರೈಸ್ತ ಸನ್ಯಾಸಿನಿಯರಿಗೆ ಬಜರಂಗದಳದ ಕಾರ್ಯಕರ್ತರು ಕಿರುಕುಳ ನೀಡಿರುವುದನ್ನು ತೀವ್ರವಾಗಿ ಖಂಡಿಸಿರುವ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಈ ಸಂಬಂಧ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಪಿಣರಾಯಿ ವಿಜಯನ್

ಈ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿರುವ ವಿಜಯನ್, 'ಸಂವಿಧಾನವು ಖಾತ್ರಿಪಡಿಸಿರುವ ವೈಯಕ್ತಿಕ ಹಕ್ಕುಗಳ ಸ್ವಾತಂತ್ರ್ಯವನ್ನು ಅಡ್ಡಿಪಡಿಸುವ ಮತ್ತು ಹಕ್ಕುಗಳನ್ನು ದುರ್ಬಲಗೊಳಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದರು.

ಸಚಿವ ಅಮಿತ್ ಶಾ ಅವರು ಸಹ ಘಟನೆಯನ್ನು ಖಂಡಿಸಿದ್ದು, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.

ಷೇರುಪೇಟೆ ವಹಿವಾಟು

▼ 871



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,815
ಇಂದಿನ ಅಂತ್ಯ	14,549
▼	266
ದಿನದ ಕನಿಷ್ಠ	14,535

ವಿನಿಮಯ ದರ

$ ಡಾಲರ್	72.55
£ ಪೌಂಡ್	99.61
€ ಯುರೊ	85.90
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹385
12 ಮೊಟ್ಟೆಗೆ	₹52
ಮೈಸೂರು	
100 ಮೊಟ್ಟೆಗೆ	₹388

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1555)
ಸೋಯಾ (ರಿಫೈನ್ಡ್)	₹1262 (1285)
ಸೂರ್ಯಕಾಂತಿ (ರಿಫೈನ್ಡ್)	₹1750 (1700)
ಪಾಮೋಲಿನ್	₹1215(1237)

ಕೋವಿಡ್: ಸೂಚ್ಯಂಕ 871 ಅಂಶ ಕುಸಿತ

ಮುಂಬೈ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿರುವುದರಿಂದ ಷೇರುಪೇಟೆಗಳ ವಹಿವಾಟು ಬುಧವಾರ ಭಾರಿ ಕುಸಿತ ಕಂಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 871 ಅಂಶ ಕುಸಿತ ಕಂಡು 49,180 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ಫೆಬ್ರುವರಿ 26ರ ನಂತರ ದಿನದ ವಹಿವಾಟಿನ ಗರಿಷ್ಠ ಕುಸಿತ ಇದಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 266 ಅಂಶಗಳಷ್ಟು ಕಡಿಮೆಯಾಗಿ 14,549 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ.'ಜಾಗತಿಕ ವಿದ್ಯಮಾನಗಳು ಮತ್ತು ಕೋವಿಡ್ ಪ್ರಕರಣಗಳ ಹೆಚ್ಚಳದಿಂದಾಗಿ ಷೇರುಪೇಟೆಯಲ್ಲಿ ಮಾರಾಟದ ಒತ್ತಡ ಕಂಡುಬಂದಿತು. ಔಷಧ ವಲಯವನ್ನು ಬಿಟ್ಟು ಉಳಿದೆಲ್ಲ ವಲಯಗಳು ಮಾರಾಟದ ಒತ್ತಡಕ್ಕೆ ಒಳಗಾದವು' ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 12 ಪೈಸೆ ಇಳಿಕೆಯಾಗಿ ಒಂದು ಡಾಲರ್‌ಗೆ ₹ 72.55ಕ್ಕೆ ತಲುಪಿತು.

ಕರಗಿತು ₹ 3.27 ಲಕ್ಷ ಕೋಟಿ: ನಕಾರಾತ್ಮಕ ವಹಿವಾಟಿನಿಂದ ಹೂಡಿಕೆದಾರರ ಸಂಪತ್ತು ₹ 3.27 ಲಕ್ಷ ಕೋಟಿಗಳಷ್ಟು ಕರಗಿತು. ಷೇರುಪೇಟೆಯ ಬಂಡವಾಳ ಮೌಲ್ಯ ₹ 202.48 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಹೊಸ ಬಿಎಂಡಬ್ಲ್ಯು 220ಐ ಸ್ಪೋರ್ಟ್

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಬಿಎಂಡಬ್ಲ್ಯು ಕಂಪನಿಯು ತನ್ನ '2 ಸೀರೀಸ್ ಗ್ರ್ಯಾನ್ ಕೂಪೆ'ಯ ಹೊಸ '220ಐ ಸ್ಪೋರ್ಟ್' ಪೆಟ್ರೋಲ್ ಅವತರಣಿಕೆಯನ್ನು ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆ ₹ 37.9 ಲಕ್ಷ.

ಚೆನ್ನೈನ ಘಟಕದಲ್ಲಿ ತಯಾರಾಗಿರುವ ಇದು ಬುಧವಾರದಿಂದಲೇ ವಿತರಣಾ ಕೇಂದ್ರಗಳಲ್ಲಿ ಲಭ್ಯವಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ಪ್ರೀಮಿಯಂ ಸೆಗ್ಮೆಂಟ್‌ನಲ್ಲಿ ಪೆಟ್ರೋಲ್ ಮಾದರಿಗಳ ಜನಪ್ರಿಯತೆ ಹೆಚ್ಚಾಗುತ್ತಿದ್ದು, ಸ್ಟೈಲ್ ಮತ್ತು ಕಾರ್ಯಕ್ಷಮತೆ ಒಳಗೊಂಡಿರುವ ಬಿಎಂಡಬ್ಲ್ಯು ಜಗತ್ತನ್ನು ಪ್ರವೇಶಿಸಲು ಬಯಸುವವರಿಗೆ ಹೊಸ 220ಐ ಸ್ಪೋರ್ಟ್ ಪ್ರಮುಖ ಆಯ್ಕೆ' ಎಂದು ಬಿಎಂಡಬ್ಲ್ಯು ಗ್ರೂಪ್ ಇಂಡಿಯಾದ ಅಧ್ಯಕ್ಷ ವಿಕ್ರಮ್ ಪವ್ಹಾ ಹೇಳಿದ್ದಾರೆ.

ವಾಟ್ಸ್‌ಆ್ಯಪ್‌ನ ಪರಿಷ್ಕೃತ ಖಾಸಗಿತನ ನೀತಿ ಹಾಗೂ ಸೇವಾ ನಿಯಮ

ವಾಟ್ಸ್‌ಆ್ಯಪ್ ವಿರುದ್ಧ ತನಿಖೆಗೆ ಸ್ಪರ್ಧಾ ಆಯೋಗ ಆದೇಶ

ನವದೆಹಲಿ (ಪಿಟಿಐ): ವಾಟ್ಸ್‌ಆ್ಯಪ್‌ನ ಪರಿಷ್ಕೃತ ಖಾಸಗಿತನ ನೀತಿ ಹಾಗೂ ಸೇವಾ ನಿಯಮಗಳ ಬಗ್ಗೆ ತನಿಖೆ ನಡೆಸುವಂತೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ತನ್ನ ತನಿಖಾ ವಿಭಾಗಕ್ಕೆ ಆದೇಶಿಸಿದೆ.

ಈ ನೀತಿ ಹಾಗೂ ಸೇವಾ ನಿಯಮಗಳು ಸ್ಪರ್ಧಾ ಕಾನೂನುಗಳ ಉಲ್ಲಂಘನೆಯಂತೆ ಮೇಲ್ನೋಟಕ್ಕೆ ಕಾಣಿಸುತ್ತಿವೆ ಎಂದು ಸಿಸಿಐ ಹೇಳಿದೆ.

ಬಳಕೆದಾರರಿಗೆ ಇಷ್ಟವಿಲ್ಲದಿದ್ದರೂ ತಮ್ಮ ಕೆಲವು ಮಾಹಿತಿಯನ್ನು ಹಂಚಿಕೊಳ್ಳುವುದಕ್ಕೆ ವಾಟ್ಸ್‌ಆ್ಯಪ್‌ಗೆ ಒಪ್ಪಿಗೆ ನೀಡಬೇಕಿರುವುದರ ಪೂರ್ಣ ಪರಿಣಾಮಗಳ ಕುರಿತು ವಿಸ್ತೃತ ತನಿಖೆ ಆಗಬೇಕಿದೆ ಎಂದು ಸಿಸಿಐ ಹೇಳಿದೆ. 60 ದಿನಗಳಲ್ಲಿ ತನಿಖೆ ನಡೆಸಿ, ವರದಿ ಸಲ್ಲಿಸಬೇಕು ಎಂದು ಸೂಚಿಸಿದೆ.

ವಾಟ್ಸ್‌ಆ್ಯಪ್‌ನ ಪರಿಷ್ಕೃತ ನಿಯಮಗಳ ಕುರಿತು ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳನ್ನು ಗಮನಿಸಿ ಸಿಸಿಐ ಸ್ವಯಂಪ್ರೇರಿತವಾಗಿ ಈ ಕ್ರಮ ಕೈಗೊಂಡಿದೆ. 'ವಾಟ್ಸ್‌ಆ್ಯಪ್‌ಗೆ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಇದೆ. ಒಪ್ಪಿಕೊಳ್ಳಿ, ಅದಾಗದಿದ್ದರೆ ಹೊರಗೆ ನಡೆಯಿರಿ ಎಂಬ ಧೋರಣೆಯುಳ್ಳ ನೀತಿಯ ಬಗ್ಗೆ ವಿವರವಾದ ತನಿಖೆ ಆಗಬೇಕಿದೆ' ಎಂದು ಸಿಸಿಐ ಅಭಿಪ್ರಾಯ ವ್ಯಕ್ತಪಡಿಸಿದೆ.

'ಫೇಸ್‌ಬುಕ್ ಜೊತೆ ನಾವು ಮಾಹಿತಿ ಹಂಚಿಕೊಳ್ಳುವ ಶಕ್ತಿ–ವ್ಯಾಪ್ತಿಯನ್ನು ಹೊಸ ನೀತಿಯು ಹೆಚ್ಚು ಮಾಡುವುದಿಲ್ಲ. ಬದಲಿಗೆ, ನಾವು ಹೇಗೆ ಮಾಹಿತಿ ಸಂಗ್ರಹಿಸುತ್ತೇವೆ, ಅದನ್ನು ಹೇಗೆ ಬಳಸುತ್ತೇವೆ ಹಾಗೂ ಹೇಗೆ ಹಂಚಿಕೊಳ್ಳುತ್ತೇವೆ ಎಂಬ ವಿಚಾರಗಳು ಹೆಚ್ಚು ಪಾರದರ್ಶಕ ಆಗುತ್ತವೆ' ಎಂದು ವಾಟ್ಸ್‌ಆ್ಯಪ್ ಹೇಳಿತ್ತು.

ಇಂತಹ ಹೇಳಿಕೆಗಳ ಸತ್ಯಾಸತ್ಯತೆಯನ್ನು ಕೂಡ ತನಿಖೆಯ ಸಂದರ್ಭದಲ್ಲಿ ಪರಿಶೀಲನೆಗೆ ಒಳಪಡಿಸಲಾಗುವುದು ಎಂದು ಸಿಸಿಐ ಹೇಳಿದೆ.

ಸ್ಪರ್ಧಾ ಆಯೋಗ ಹೇಳಿದ್ದು...

- ಬಳಕೆದಾರರು ತಾವಾಗಿಯೇ ಒಪ್ಪಿಗೆ ನೀಡದೆ, ಅವರ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವ ಕ್ರಮವು ನ್ಯಾಯಸಮ್ಮತವಲ್ಲ.
- ತಮ್ಮ ಮಾಹಿತಿಯನ್ನು ಹಂಚಿಕೊಳ್ಳುವ ವಿಚಾರದಲ್ಲಿ ಬಳಕೆದಾರರಿಗೆ ಒಪ್ಪಿಕೊಳ್ಳುವ ಅಥವಾ ಒಪ್ಪಿಕೊಳ್ಳದೆ ಇರುವ ಆಯ್ಕೆ ನೀಡಲಾಗದು ಎಂಬುದಕ್ಕೆ ಸಮರ್ಥನೆಯೇ ಇಲ್ಲ.
- ಬಳಕೆದಾರರು ತಮ್ಮ ವೈಯಕ್ತಿಕ ಮಾಹಿತಿಯ ಮಾಲೀಕರೂ ಹೌದು. ಮಾಹಿತಿಯನ್ನು ನಿರ್ದಿಷ್ಟವಾಗಿ ಯಾವ ಉದ್ದೇಶಕ್ಕೆ ಹಂಚಿಕೊಳ್ಳಲಾಗುತ್ತದೆ ಎಂಬುದನ್ನು ತಿಳಿಯುವ ಹಕ್ಕು ಅವರಿಗಿದೆ.
- ಖಾಸಗಿತನದ ನೀತಿ, ಸೇವಾ ನಿಯಮಗಳ ಕೆಲವು ವಿವರಗಳು ಅರ್ಥವಾಗದಂತೆ ಇವೆ.

ಬಳಕೆದಾರರ ಈ ಹಿಂದಿನ ಮಾಹಿತಿಗಳನ್ನು ಕೂಡ ಫೇಸ್‌ಬುಕ್ ಮಾಲೀಕತ್ವದ ಇತರ ಕಂಪನಿಗಳ ಜೊತೆ ಹಂಚಿಕೊಳ್ಳಲಾಗುತ್ತದೆಯೇ ಎಂಬುದು ಸ್ಪಷ್ಟವಿಲ್ಲ. ಫೇಸ್‌ಬುಕ್‌ನ ಇತರ ಆ್ಯಪ್‌ಗಳನ್ನು ಬಳಸದ, ವಾಟ್ಸ್‌ಆ್ಯಪ್ ಮಾತ್ರ ಬಳಸುವ ಗ್ರಾಹಕರ ಮಾಹಿತಿಗಳನ್ನೂ ಹಂಚಿಕೊಳ್ಳಲಾಗುತ್ತದೆಯೇ ಎಂಬುದು ಸ್ಪಷ್ಟವಾಗುತ್ತಿಲ್ಲ ಎಂದು ಆಯೋಗ ಹೇಳಿದೆ.

ಮಾಹಿತಿ ಹಂಚಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟ ನಿಯಮಗಳನ್ನು ಒಪ್ಪಿಕೊಳ್ಳದಿರುವ ಅಥವಾ ಅದಕ್ಕೆ ವಿರೋಧ ವ್ಯಕ್ತಪಡಿಸುವ ಆಯ್ಕೆಯನ್ನು ಬಳಕೆದಾರರಿಗೆ ನೀಡಿಲ್ಲ. ಇದು ವಾಟ್ಸ್‌ಆ್ಯಪ್ ಬಳಕೆದಾರರ ಪಾಲಿಗೆ ನ್ಯಾಯಸಮ್ಮತವಾಗಿರುವಂತೆ ಮೇಲ್ನೋಟಕ್ಕೆ ಕಾಣುತ್ತಿಲ್ಲ ಎಂದು ಆಯೋಗ ಅಭಿಪ್ರಾಯ ವ್ಯಕ್ತಪಡಿಸಿದೆ.

ಜಿಎಸ್‌ಟಿಗೆ ಪೆಟ್ರೋಲ್: 10 ವರ್ಷಗಳಲ್ಲಿಯೂ ಕಷ್ಟ: ಸುಶೀಲ್ ಮೋದಿ

ನವದೆಹಲಿ (ಪಿಟಿಐ): 'ಪೆಟ್ರೋಲ್, ಡೀಸೆಲ್ ಅನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವುದು ಮುಂದಿನ ಎಂಟರಿಂದ 10 ವರ್ಷಗಳವರೆಗೆ ಸಾಧ್ಯವಿಲ್ಲ. ಏಕೆಂದರೆ ವಾರ್ಷಿಕ ₹ 2 ಲಕ್ಷ ಕೋಟಿ ವರಮಾನ ನಷ್ಟ ಎದುರಿಸಲು ಯಾವ ರಾಜ್ಯವೂ ಸಿದ್ಧವಿಲ್ಲ' ಎಂದು ಬಿಜೆಪಿ ಸದಸ್ಯ ಸುಶೀಲ್ ಕುಮಾರ್ ಮೋದಿ ರಾಜ್ಯಸಭೆಯಲ್ಲಿ ಹೇಳಿದ್ದಾರೆ.

'ಪ್ರತಿಪಕ್ಷಗಳ ನಾಯಕರಿಗೆ ಸಾರ್ವಜನಿಕವಾಗಿ ಹೇಳಿಕೆಗಳನ್ನು ನೀಡುವುದು ಬಹಳ ಸುಲಭ. ಆದರೆ, ಜಿಎಸ್‌ಟಿ ಮಂಡಳಿಯ ಎದುರು ಯಾರೊಬ್ಬರೂ ವಿಷಯ ಪ್ರಸ್ತಾಪಿಸುವುದೇ ಇಲ್ಲ' ಎಂದು ಅವರು ಹೇಳಿದ್ದಾರೆ.

ಸದಾ ಸೇವೆ ಒದಗಿಸಲು ಅನುಕೂಲವಾಗುವಂತೆ ಬ್ಯಾಂಕ್‌ಗಳ ಕ್ರಮ

ಬ್ಯಾಂಕರ್‌ಗಳಿಂದ 'ಸೆಲ್ಫಿ ವಿತ್ ಎಟಿಎಂ'!

● ಸದಾಶಿವ ಎಂ.ಎಸ್

ಕಾರವಾರ: ವಾರಾಂತ್ಯ, ರಜಾ ದಿನಗಳು, ಹಬ್ಬಗಳ ಸಂದರ್ಭದಲ್ಲಿ ಎ.ಟಿ.ಎಂ. ನಿರ್ವಹಣೆಯಿಲ್ಲದೇ 'ಹಣವಿಲ್ಲ', 'ಸೇವೆಗೆ ಅಲಭ್ಯ' ಮುಂತಾದ ಫಲಕಗಳು ಕಾಣಿಸುವುದು ಸಾಮಾನ್ಯ. ಇದನ್ನು ದೂರ ಮಾಡುವ ನಿಟ್ಟಿನಲ್ಲಿ ಕೆನರಾ ಸೇರಿದಂತೆ ವಿವಿಧ ಬ್ಯಾಂಕ್‌ಗಳು 'ಸೆಲ್ಫಿ ವಿತ್ ಎಟಿಎಂ' (ಎಟಿಎಂ ಜೊತೆ ಸೆಲ್ಫಿ) ಜಾರಿ ಮಾಡಿವೆ.

ಬ್ಯಾಂಕ್‌ನ ಶಾಖಾ ವ್ಯವಸ್ಥಾಪಕರು ಹಾಗೂ ಪ್ರಾದೇಶಿಕ ವ್ಯವಸ್ಥಾಪಕರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿರುವ ಐದು ಎಟಿಎಂಗಳಿಗೆ ಪ್ರತಿ ಭಾನುವಾರ ಅಥವಾ ರಜಾ ದಿನಗಳಲ್ಲಿ ಭೇಟಿ ನೀಡುತ್ತಾರೆ. ಅವು ಚಾಲನೆಯಲ್ಲಿರುವುದನ್ನು ಖಾತ್ರಿಪಡಿಸಿಕೊಂಡು ಎಟಿಎಂ ಯಂತ್ರದ ಮುಂದೆ ನಿಂತು ಮೊಬೈಲ್ ಫೋನ್‌ನಲ್ಲಿ 'ಸೆಲ್ಫಿ' ತೆಗೆದುಕೊಳ್ಳುತ್ತಾರೆ. ಬಳಿಕ ಅದನ್ನು ಕೇಂದ್ರೀಕೃತ ವ್ಯವಸ್ಥೆಯ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಕಳುಹಿಸಿ ದೃಢಪಡಿಸುತ್ತಾರೆ.

ವಿವಿಧ ಬ್ಯಾಂಕ್‌ಗಳ ಅಧಿಕಾರಿಗಳು ಎಟಿಎಂ ಕೇಂದ್ರಗಳಲ್ಲಿ ಸೆಲ್ಫಿ ತೆಗೆದುಕೊಳ್ಳುತ್ತಿರುವುದು

ಕೆಲವು ಖಾಸಗಿ ಬ್ಯಾಂಕ್‌ಗಳಲ್ಲಿ ಈಗಾಗಲೇ ಈ ಪದ್ಧತಿ ಜಾರಿಯಲ್ಲಿದ್ದು, ರಾಷ್ಟ್ರೀಕೃತ ಬ್ಯಾಂಕ್‌ಗಳೂ ಅನುಸರಿಸುತ್ತಿವೆ. ಈ ಕ್ರಮದಿಂದ ದೂರುಗಳ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಕೆಯಾಗಿದೆ ಎಂದು ಬ್ಯಾಂಕ್ ಅಧಿಕಾರಿಗಳು ಹೇಳುತ್ತಾರೆ.

'ಉತ್ತರ ಕನ್ನಡದಲ್ಲಿ ಖಾಸಗಿ, ರಾಷ್ಟ್ರೀಕೃತ, ಕೆ.ಡಿ.ಸಿ.ಸಿ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ವಿವಿಧ ಹಣಕಾಸು ಸಂಸ್ಥೆಗಳ ಸುಮಾರು 290 ಎಟಿಎಂಗಳಿವೆ. ಕೋವಿಡ್ ಸಂಬಂಧ ಲಾಕ್‌ಡೌನ್ ಆದ ಬಳಿಕ ಸಾರ್ವಜನಿಕರು ಹಣಕಾಸು ವ್ಯವಹಾರಗಳಿಗೆ ಎಟಿಎಂ ಕೇಂದ್ರಗಳನ್ನು ಹೆಚ್ಚು ಅವಲಂಬಿಸಿದರು. ಆದರೆ, ಆಗಿನಿಂದ ದೂರುಗಳೂ ಹೆಚ್ಚಾದವು. ಅದನ್ನು ಕಡಿಮೆ ಮಾಡಲು ಈ ಪದ್ಧತಿಯನ್ನು ಜಾರಿ ಮಾಡಲಾಯಿತು. ಈಗ ಶೇ 98ರಷ್ಟು ದೂರುಗಳು ಕಡಿಮೆಯಾಗಿವೆ' ಎನ್ನುತ್ತಾರೆ ಉತ್ತರ ಕನ್ನಡ ಜಿಲ್ಲಾ ಸಹವರ್ತಿ ಬ್ಯಾಂಕ್‌ನ ವ್ಯವಸ್ಥಾಪಕ ಪೀರ್‌ಸಾಬ್ ಪಿಂಜರ್.

ವಿನಿತಾ ಕಟ್ಟಿದ ಆರೋಗ್ಯಸೇವಾ ಉದ್ಯಮ

ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೀನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

ವ್ಯಕ್ತಿಯ ಬದುಕಿನ ದಿಕ್ಕನ್ನು ನಿರ್ಧರಿಸುವುದು ಶಿಕ್ಷಣ. ಈ ಮಾತಿನಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ ಡಾ. ವಿನಿತಾ ಶರ್ಮಾ ಅವರನ್ನು ಭೇಟಿಯಾಗಿ! ವೈದ್ಯರಾಗಿರುವ ವಿನಿತಾ 'ಡರ್ಮಾಗ್ಲೊ ಲೇಸರ್ ಕ್ಲಿನಿಕ್' ಉದ್ಯಮ ಸ್ಥಾಪಿಸಿ ಯಶಸ್ವಿಯಾಗಿ ನಡೆಸುತ್ತಿದ್ದಾರೆ. ರಾಜಸ್ಥಾನದ ಜೋಧಪುರ ಸಮೀಪದ ಚಿಕ್ಕ ಹಳ್ಳಿಯ ವಿನಿತಾ ಜೈಪುರದಲ್ಲಿ ಎಂಬಿಬಿಎಸ್ ಪದವಿ ಪಡೆದು, ಲಂಡನ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ರಾಜಸ್ಥಾನ, ಹರಿಯಾಣ, ಮಧ್ಯಪ್ರದೇಶ ಇತ್ಯಾದಿ ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಸರಿಯಾಗಿ ಸಿಗುತ್ತಿಲ್ಲ. ಅಂಥದ್ದರಲ್ಲಿ ವಿನಿತಾ ವೈದ್ಯಕೀಯ ಪದವಿ ಪಡೆದಿದ್ದಾದರೂ ಹೇಗೆ? 'ಬದುಕಿನಲ್ಲಿ ಯಶಸ್ಸು ಕಾಣಬೇಕಾದರೆ ಶಿಕ್ಷಣ ಬೇಕು ಎಂದು ನನ್ನ ತಂದೆ ದೃಢವಾಗಿ ನಂಬಿದ್ದರು. ಮೊದಲು ಶಿಕ್ಷಣ, ಮಿಕ್ಕಿದ್ದೆಲ್ಲ ನಂತರ ಎನ್ನುವುದು ಅವರ ಮಂತ್ರವಾಗಿತ್ತು' ಎನ್ನುತ್ತಾರೆ ವಿನಿತಾ.

ತಮ್ಮ 'ಡರ್ಮಾಗ್ಲೊ' ಪಯಣದ ಬೇರಿರುವುದೇ ತಮ್ಮ ಪುಟ್ಟ ಹಳ್ಳಿಯಲ್ಲಿ ಎನ್ನುತ್ತಾರೆ ಅವರು. 'ನನ್ನ ತಂದೆ ರೇಡಿಯಾಲಜಿಸ್ಟ್. ನನ್ನ ಅಜ್ಜ ಸಹ ವೈದ್ಯರು. ಅಜ್ಜಿಗೆ ಅಲೋಪಥಿಯಲ್ಲಿ ನಂಬಿಕೆ ಇರಲಿಲ್ಲ. ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳನ್ನು ಅವರು ಪಥ್ಯ ಮತ್ತು ಗಿಡಮೂಲಿಕೆಗಳಿಂದಲೇ ಗುಣಪಡಿಸಿಕೊಳ್ಳುತ್ತಿದ್ದರು. ಆಧುನಿಕ ವೈದ್ಯ ಪದ್ಧತಿಯನ್ನು ಅವರು ಸದಾ ಪ್ರಶ್ನಿಸುತ್ತಿದ್ದರು. ನನ್ನ ತಂದೆಗೆ ಆಯುರ್ವೇದದಲ್ಲಿ ನಂಬಿಕೆ ಇರಲಿಲ್ಲ. ಹಾಗಾಗಿ ಎರಡು ವಿಭಿನ್ನ ನೋಟಗಳು ನನ್ನಲ್ಲಿ ಬೆಳೆದವು. ಆರೋಗ್ಯ ಮತ್ತು ಚಿಕಿತ್ಸೆಯ ಬಗ್ಗೆ ಹೊಸ ಆಲೋಚನೆಗಳಿಗೆ ನಾನು ತೆರೆದುಕೊಳ್ಳಲು ಸಾಧ್ಯವಾಯಿತು' ಎಂದು ಅವರು ಹೇಳುತ್ತಾರೆ.

ವಿನಿತಾ ಅವರ ಅನುಭವದ ಆಧಾರದಿಂದಲೇ ಇಂದು 'ಡರ್ಮಾಗ್ಲೊ' ಇಂದು ಗ್ರಾಹಕರಿಗೆ ಸಮಗ್ರ ಚಿಕಿತ್ಸೆ ನೀಡುತ್ತಿದೆ. ಇಲ್ಲಿ ಅತ್ಯಾಧುನಿಕ ಚಿಕಿತ್ಸಾ ಪದ್ಧತಿ ಮತ್ತು ಸಾಂಪ್ರದಾಯಿಕ ಪದ್ಧತಿಯ ಸಮ್ಮಿಲನವನ್ನು ಕಾಣಬಹುದು. ಉನ್ನತ ಶಿಕ್ಷಣ ಮತ್ತು ಜೀವನಾನುಭವದ ನೆರವಿನಿಂದ ಡಾ. ವಿನಿತಾ 2010ರಲ್ಲಿ ಡರ್ಮಾಗ್ಲೋ ಆರಂಭಿಸಿದರು. ಬೆರಳೆಣಿಕೆಯಷ್ಟು ವೈದ್ಯರಿಗೆ ಮಾತ್ರ ಸಾಧ್ಯವಾಗುವಂತೆ ರೋಗಿಗಳೊಂದಿಗೆ ಆತ್ಮೀಯತೆ ಬೆಳೆಸಿಕೊಂಡರು.

'ನನ್ನ ಕ್ಲಿನಿಕ್‌ನಲ್ಲಿ ನಾನೊಬ್ಬಳೇ ವೈದ್ಯೆ. ಹಾಗಾಗಿ ನನ್ನ ರೋಗಿಗಳೊಂದಿಗೆ ವೈಯಕ್ತಿಕ ಮಟ್ಟದ ಸಂಪರ್ಕ ಇದೆ. ರೋಗಿಗಳಿಗೆ ಅವರ ಎದುರು ಇರುವ ಎಲ್ಲ ಸಾಧ್ಯತೆಗಳ ಬಗ್ಗೆ ನಾನು ಮುಕ್ತವಾಗಿ ತಿಳಿಸುತ್ತೇನೆ. ವಾಣಿಜ್ಯ ದೃಷ್ಟಿಕೋನ ಇದರಲ್ಲಿ ಇರುವುದಿಲ್ಲ. ಈ ಎರಡು ಅಂಶಗಳು ಸಂಬಂಧ ಬೆಳೆಸುವುದರಲ್ಲಿ ಪ್ರಮುಖ ಪಾತ್ರ ವಹಿಸಿವೆ' ಎಂದು ಅವರು ಹೇಳುತ್ತಾರೆ.

'ಕೋವಿಡ್–19 ಒಂದು ಚಂಡಮಾರುತದಂತೆ ಬಂತು. ಲಾಕ್‌ಡೌನ್ ಮತ್ತು ಭಯದಿಂದಾಗಿ ಜನರು ಕ್ಲಿನಿಕ್‌ಗೆ ಬರುವುದನ್ನು ಕಡಿಮೆ ಮಾಡಿದರು. ಅದೊಂದು ಬಿಕ್ಕಟ್ಟಿನ ಪರಿಸ್ಥಿತಿಯಾಗಿತ್ತು. ಆದರೆ ನಾವು ಅದನ್ನು ಚೆನ್ನಾಗಿ ನಿಭಾಯಿಸಿದೆವು. ನಮ್ಮ ಉದ್ಯೋಗಿಗಳನ್ನು ನಾವು ಚೆನ್ನಾಗಿ ನೋಡಿಕೊಂಡರೆ ಅವರು ನಮ್ಮೊಂದಿಗೆ ದೀರ್ಘಾವಧಿಗೆ ಇರುತ್ತಾರೆ. ಹಾಗಾಗಿ ನಾನು ನನ್ನ ಉದ್ಯೋಗಿಗಳ ವೇತನ ಕಡಿಮೆ ಮಾಡಲಿಲ್ಲ. ಅವರು ನನ್ನೊಂದಿಗೆ ದೃಢವಾಗಿ ನಿಂತರು. ಕೋವಿಡ್ ಹಂತ ದಾಟಿದ ನಂತರ, ಯಾವ ಪರಿಸ್ಥಿತಿಯನ್ನಾದರೂ ನಿಭಾಯಿಸಬಲ್ಲೆ ಎಂಬ ಆತ್ಮವಿಶ್ವಾಸ ನನಗೆ ಬಂದಿದೆ' ಎಂದು ಡಾ. ವಿನಿತಾ ಹೇಳುತ್ತಾರೆ.

'ಮಾರುಕಟ್ಟೆ ತಂತ್ರಗಳಲ್ಲಿ ನನಗೆ ನಂಬಿಕೆಯೇ ಇರಲಿಲ್ಲ. ನಮ್ಮ ಸೇವೆ ಉತ್ತಮವಾಗಿದ್ದರೆ ಜನ ಖಂಡಿತ ಬರುತ್ತಾರೆ ಎಂದು ನಂಬಿದ್ದೆ. ಜನರಿಗೆ ನಮ್ಮ ಸೇವೆಗಳ ಬಗ್ಗೆ ತಿಳಿಸುವುದು ಅಗತ್ಯ. ಸಮುದಾಯಕ್ಕೆ ಅದರಿಂದ ಆಗುವ ಪ್ರಯೋಜನಗಳ ಅರಿವು ಬರಬೇಕು' ಎಂಬುದು ಅವರು ಕಂಡುಕೊಂಡ ವಿಚಾರ. ಸ್ವಂತ ಉದ್ಯಮ ನಡೆಸಬೇಕೆನ್ನುವ ಎಲ್ಲರಿಗೂ ಒಂದು ಕಿವಿಮಾತು. 'ಶಿಕ್ಷಣ ಅಂದರೆ ಕೇವಲ ಡಿಗ್ರಿ ಅಲ್ಲ; ಉದ್ಯಮಕ್ಕೆ ಅಗತ್ಯವಿರುವ ಕೌಶಲ್ಯವೂ ಬೇಕು'.

ಡಾ. ವಿನಿತಾ ಶರ್ಮಾ

ಮುಂಬೈ ಧಾರಣೆ

ಶೇಂಗಾ

24-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1565 (1565)
ಒಂದು ವಾರದ ಡೆಲಿವರಿ	1555 (1560)
ಸೋಯಾ ಕಚ್ಚಾ	1255 (1270)
ಪಾಮ್ ವಾರದ ಡೆಲಿವರಿ	1213 (1235)
ಸೂರ್ಯಕಾಂತಿ ಎಣ್ಣೆ ಕಚ್ಚಾ	1700 (1700)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
44,650 (44,700)
ಬೆಳ್ಳಿ ಕೆ.ಜಿ 65,000 (65,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	345
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಕಾರ್ಕಳ	
ಹೊಸತು	35000-40500
ಪುತ್ತೂರು	
ಕೋಕ	9500-24000
ಹೊಸತು	28500-40500
ಸಿದ್ದಾಪುರ	
ಬಿಳಿಗೋಟು	23108-29409
ಚಾಲಿ	34299-36539
ಕೋಕ	20399-29608
ಕೆಂಪುಗೋಟು	27889-29289
ರಾಶಿ	39389-41899
ತಟ್ಟಿಬೆಟ್ಟೆ	30600-40799
ಶಿರಸಿ	
ಬೆಟ್ಟೆ	24899-40299
ಬಿಳಿಗೋಟು	16191-30813
ಚಾಲಿ	29499-37599
ರಾಶಿ	32892-42399
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	39330-43619
ಗೊರಬಲು	14009-31699
ರಾಶಿ	37609-43000
ಸರಕು	49690-61440

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10000	9850	9800	127.6ಸೆಂಟ್ಸ್
ಎಸಿ	4060	3800	3800	
ಆರ್‌ಪಿ	5200	5100	5100	
ಆರ್‌ಸಿ	3000	3050	2900	1377 ಡಾಲರ್ಸ್

ಕರ್ಣಾಟಕ ಬ್ಯಾಂಕ್ ಹೆಚ್ಚುವರಿ ನಿರ್ದೇಶಕರಾಗಿ ಡಾ.ರವೀಂದ್ರನ್

ಮಂಗಳೂರು: ಕರ್ಣಾಟಕ ಬ್ಯಾಂಕ್‌ನ ಹೆಚ್ಚುವರಿ ನಿರ್ದೇಶಕರನ್ನಾಗಿ ಡಾ.ಡಿ.ಎಸ್. ರವೀಂದ್ರನ್ ಅವರನ್ನು ನೇಮಕ ಮಾಡಲಾಗಿದೆ. ಏಪ್ರಿಲ್ 1ರಿಂದ ಬ್ಯಾಂಕಿನ ನಿರ್ದೇಶಕ ಮಂಡಳಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ. 1986ರ ಬ್ಯಾಚಿನ ಐಎಫ್‌ಎಸ್ ಅಧಿಕಾರಿಯಾಗಿರುವ ಡಾ.ರವೀಂದ್ರನ್, ಕರ್ನಾಟಕ ಸರ್ಕಾರದ ಹಣಕಾಸು ವಿಭಾಗದ ಖಜಾನೆ–2 ರ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ.

ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: ಮೊದಲ ದಿನ ಕರ್ನಾಟಕಕ್ಕೆ ಮೂರು ಪದಕ

ಹರಿಯಾಣ ಕ್ರೀಡಾಪಟುಗಳ ಪಾರಮ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರಿಯಾಣದ ಕ್ರೀಡಾಪಟುಗಳು ಇಲ್ಲಿ ಬುಧವಾರ ಆರಂಭಗೊಂಡ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪಾರಮ್ಯ ಮೆರೆದರು. ರಾಜ್ಯ ಅಥ್ಲೆಟಿಕ್ಸ್ ಸಂಸ್ಥೆ ಮತ್ತು ಭಾರತ ಪ್ಯಾರಾ ಅಥ್ಲೆಟಿಕ್ಸ್ ಸಮಿತಿಯ ಆಶ್ರಯದಲ್ಲಿ ಕಂಠೀರವ ಮತ್ತು ವಿದ್ಯಾನಗರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದ ಪುರುಷರ ವಿಭಾಗದಲ್ಲಿ ಹರಿಯಾಣ 11 ಚಿನ್ನ ಗಳಿಸಿದರೆ ಮಹಿಳಾ ವಿಭಾಗದಲ್ಲಿ ಎರಡು ಚಿನ್ನ ಗೆದ್ದುಕೊಂಡಿತು.

ಪುರುಷರ ಶಾಟ್‌ಪಟ್‌ನ 13 ವಿಭಾಗಗಳ ಪೈಕಿ ಐದನ್ನು ಹೊರತುಪಡಿಸಿ ಉಳಿದೆಲ್ಲದರಲ್ಲಿ ಹರಿಯಾಣ ಅಥ್ಲೀಟ್‌ಗಳು ಚಿನ್ನ ಗೆದ್ದರು. ಲಾಂಗ್‌ಜಂಪ್‌ನ ಏಳು ವಿಭಾಗಗಳ ಪೈಕಿ ಮೂರು ಚಿನ್ನ ಆ ರಾಜ್ಯದ ಪಾಲಾದವು.

ಫಲಿತಾಂಶಗಳು: ಪುರುಷರ ಶಾಟ್‌ಪಟ್ (ಎಫ್ 12/13): ಆಶಿಶ್ ಸಿಂಗ್ ನೇಗಿ (ಉತ್ತರಾಖಂಡ್)-1, ಅಂತರ: 10.46 ಮೀ, ಸಂದೀಪ್ ಜಿಂಝೂರ್ (ಹರಿಯಾಣ)-2, ಖುಷಿಕಾಂತ್ ಶರ್ಮಾ (ದೆಹಲಿ)-3; ಎಫ್ 53: ಕುನಾಲ್ (ಹರಿಯಾಣ)-1. ಅಂತರ: 8.12 ಮೀ, ಅಭಿಜಿತ್ ಪಾಟೀಲ್ (ಸರ್ವಿಸಸ್)-2, ಅನ್ಮೋಲ್ ವಸಿಷ್ಠ (ಉತ್ತರ ಪ್ರದೇಶ)-3; ಎಫ್-20: ಅಮನ್ (ಹರಿಯಾಣ)-1. ಅಂತರ: 8.15 ಮೀ, ಶಂಕರ್ ಸತ್ಯನ್ (ತಮಿಳುನಾಡು)-2, ಅಕ್ಷಯ್ ಭಟ್ನಾಗರ್ (ರಾಜಸ್ಥಾನ್)-3; ಎಫ್-33: ದೇವಶಿ ಸಚನ್ (ಹರಿಯಾಣ)-1. ಅಂತರ: 5.63 ಮೀ, ಈಶ್ವರ ಎಚ್.ಎಂ (ಕರ್ನಾಟಕ)-2; ಎಫ್-32: ಹರ್ವಿಂದರ್ ಸಿಂಗ್ (ಹರಿಯಾಣ)-1. ಅಂತರ: 5.84 ಮೀ; ಎಫ್-34: ನಿತಿನ್ ಚೌಧರಿ (ಗುಜರಾತ್)-1. ಅಂತರ: 6.15 ಮೀ, ನೀರಜ್ ರಾಣಾ (ಹರಿಯಾಣ)-2, ಸತೀಶ ಎ.ವಿ (ಕರ್ನಾಟಕ)-3; ಎಫ್-11: ಮೋನು ಘಂಗಸ್ (ಹರಿಯಾಣ)-1. ಅಂತರ: 10.83 ಮೀ, ವಿನಯ್ ಕುಮಾರ್ (ಹರಿಯಾಣ)-2, ಅಮಿತ್ ಕುಮಾರ್ (ಹರಿಯಾಣ)-3; ಎಫ್-35: ಅರವಿಂದ್ (ಹರಿಯಾಣ)-1. ಅಂತರ: 14.07 ಮೀ, ಸುಮಿತ್ ಕುಮಾರ್ (ಹರಿಯಾಣ)-2, ಸೂರ್ಯ ಟಿ.ಡಿ (ಕರ್ನಾಟಕ)-3; ಎಫ್-36: ದೀಪಕ್ ರವೀಶ್ (ಹರಿಯಾಣ)-1. ಅಂತರ: 10.32 ಮೀ, ಮನೀಷ್ ಕುಮಾರ್ (ದೆಹಲಿ)-2, ಸೋನೈ ಎಂ (ತಮಿಳುನಾಡು)-3; ಎಫ್ 61-63: ಸಂಜಯ್ ವಿ (ತಮಿಳುನಾಡು)-1. ಅಂತರ: 8.45 ಮೀ, ಕೃಷ್ಣೇಂದು (ಕೇರಳ)-2; ಎಫ್-37: ಮನು (ಹರಿಯಾಣ)-1. ಅಂತರ: 12.94 ಮೀ, ಮಯಾಂಕ್ (ಹರಿಯಾಣ)-2, ಮದನ್‌ಲಾಲ್ (ರಾಜಸ್ಥಾನ್)-3; ಎಫ್-40: ಸುರೇಂದ್ರನಾಥ್ (ಆಂಧ್ರಪ್ರದೇಶ)-1. ಅಂತರ: 7.49 ಮೀ, ರೊಂಗಾಲಿ ರವಿ (ಆಂಧ್ರಪ್ರದೇಶ)-2, ಶೇಕ್ ಕಲೇಶ ಬಾಷ (ಆಂಧ್ರಪ್ರದೇಶ)-3; ಎಫ್-55: ನೀರಜ್ ಯಾದವ್ (ದೆಹಲಿ)-1. ಅಂತರ: 10.14 ಮೀ, ಮನೀಷ್ ಧಾಕ (ಹರಿಯಾಣ)-2, ಸುರ್ಜೀತ್ ರೋಹಿಲಾ (ಹರಿಯಾಣ)-3; ಲಾಂಗ್ ಜಂಪ್ ಟಿ-12: ಸುಜಿತ್ (ಕೇರಳ)-1. ದೂರ: 6.88 ಮೀ, ಬಾಲಕೃಷ್ಣ (ಆಂಧ್ರಪ್ರದೇಶ)-2, ಅಂಕುರ್(ದೆಹಲಿ)-3; ಟಿ-36: ಸೋಂಬೀರ್ (ಹರಿಯಾಣ)-1. ದೂರ: 4.87 ಮೀ, ವಿಕಾಸ್ (ದೆಹಲಿ)-2, ಮನೀಷ್ ಕುಮಾರ್ (ದೆಹಲಿ)-3; ಟಿ-13: ವಿಷ್ಣು ಕಾಂತ್ (ಉತ್ತರ ಪ್ರದೇಶ)-1. ದೂರ: 6.59 ಮೀ, ತಂಗರಾಜ್ (ತಮಿಳುನಾಡು)-2, ಪಂಕಜ್ ಭುಯಿ (ಒಡಿಶಾ)-3; ಟಿ-20 ಗೋಕುಲ್ ಶ್ರೀನಿವಾಸ್ (ತಮಿಳುನಾಡು)-1. ದೂರ: 4.56 ಮೀ, ಸಾಯಿ ಕೃಷ್ಣ (ಜಾರ್ಖಂಡ್)-2, ರಯಾನ್ ಫ್ರಾನ್ಸಿಸ್ (ಜಾರ್ಖಂಡ್)-3; ಟಿ-45, 46, 47: ಅಜಯ್ ಸಿಂಗ್ (ಹರಿಯಾಣ)-1. ದೂರ: 6.70 ಮೀ, ದೀಪಕ್ ಗುಜರಾತ್ (ಗುಜರಾತ್)-2, ಮೊಹಮ್ಮದ್ (ಕೇರಳ)-3; ಟಿ-37: ಅರುಣ್ ಶರ್ಮಾ (ಹರಿಯಾಣ)-1. ದೂರ: 4.61 ಮೀ, ಮುಖೇಶ್ (ಹರಿಯಾಣ)-2, ರಮೇಶ್ ಪಟ್ಟಂ (ಛತ್ತೀಸ್‌ಗಢ್)-3; ಟಿ-42, 61-63: ಶೈಲೇಶ್ ಕುಮಾರ್ (ಬಿಹಾರ)-1. ದೂರ: 5.32 ಮೀ, ಇಂಜಮುರಿ ಶ್ಯಾಮ್ (ಆಂಧ್ರಪ್ರದೇಶ)-2, ದತ್ತಾತ್ರೇಯ (ಮಹಾರಾಷ್ಟ್ರ)-3. **ಮಹಿಳೆಯರ ಶಾಟ್‌ಪಟ್ ಎಫ್-55:** ಶತಾಬ್ದಿ (ರಾಜಸ್ಥಾನ್)-1. ಅಂತರ: 6.14 ಮೀ, ಸಾಕ್ಷಿ ಕಸಾನ (ದೆಹಲಿ)-2, ಅರುಣ್‌ಮೊಳಿ (ತಮಿಳುನಾಡು)-3; ಎಫ್-34: ಭಾಗ್ಯಶ್ರೀ (ಮಹಾರಾಷ್ಟ್ರ)-1. ಅಂತರ: 6.82 ಮೀ, ಎಫ್-45-46: ರೂಪಾ (ತಮಿಳುನಾಡು)-1. ಅಂತರ: 7.14 ಮೀ, ಭವಾನಿ (ಆಂಧ್ರಪ್ರದೇಶ)-2, ಅಲಿಯಾ ಖಾಣ್ (ಗುಜರಾತ್)-3; ಎಫ್-40: ನಿಶಾ (ರಾಜಸ್ಥಾನ್)-1. ಅಂತರ: 4.91 ಮೀ, ಚೋಟಿ ಮೆಹ್ರಾ (ಛತ್ತೀಸ್‌ಗಢ್)-2, ಅಕುತಯ್ ಭಗತ್ (ಮಹಾರಾಷ್ಟ್ರ)-3; ಎಫ್-1; ರಶ್ಮಿಲಾ (ಹರಿಯಾಣ)-1. ಅಂತರ: 5.30 ಮೀ, ಅಲ್ಬಕ (ಅಂಡಮಾನ್)-2, ಜಯಾ ಬೆನ್ (ಗುಜರಾತ್)-3; ಎಫ್ 56-57: ಶರ್ಮಿಳಾ (ಹರಿಯಾಣ)-1. ಅಂತರ: 7.40 ಮೀ, ಪೂನಂ ಶರ್ಮಾ (ಹರಿಯಾಣ)-2, ಸಂತೋಷಿ (ಹರಿಯಾಣ)-3.

ಪುರುಷರ ಟಿ–12 ವಿಭಾಗದ ಲಾಂಗ್‌ಜಂಪ್‌ನಲ್ಲಿ ಚಿನ್ನ ಗೆದ್ದ ಕೇರಳದ ಸುಜಿತ್ – ಪ್ರಜಾವಾಣಿ ಚಿತ್ರ

ನಿಯಮ ಉಲ್ಲಂಘನೆ, ಸೌಲಭ್ಯ ಕೊರತೆ: ನೋಟಿಸ್

ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಅಂಗವಿಕಲರಿಗೆ ಸೂಕ್ತ ಸೌಲಭ್ಯಗಳನ್ನು ಒದಗಿಸಿಲ್ಲ ಮತ್ತು ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿದೆ ಎಂಬ ಶಂಕೆಯ ಮೇಲೆ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಭಾರತ ಪ್ಯಾರಾಲಿಂಪಿಕ್ ಸಮಿತಿಯಿಂದ (ಪಿಸಿಐ) ಸ್ಪಷ್ಟನೆ ಕೇಳಿದೆ.

ನಗರದಲ್ಲಿ ಬುಧವಾರ ಆರಂಭಗೊಂಡಿರುವ ಕೂಟದಲ್ಲಿ ಟೋಕಿಯೊ ಪ್ಯಾರಾಲಿಂಪಿಕ್ಸ್‌ಗೆ ಆಯ್ಕೆಯೂ ನಡೆಯಲಿದೆ. ಚೆನ್ನೈನಲ್ಲಿ ನಡೆಯಬೇಕಾಗಿದ್ದ ಕ್ರೀಡಾಕೂಟವನ್ನು ಮೂರು ದಿನಗಳ ಹಿಂದೆ ಚೆನ್ನೈಯಿಂದ ಬೆಂಗಳೂರಿಗೆ ವರ್ಗಾಯಿಸಲಾಗಿತ್ತು. ಕಂಠೀರವ ಮತ್ತು ವಿದ್ಯಾನಗರದ ಕ್ರೀಡಾಂಗಣದಲ್ಲಿ ಸ್ಪರ್ಧೆಗಳು ನಡೆಯುತ್ತಿವೆ. ಪ್ಯಾರಾ ಅಥ್ಲೀಟ್‌ಗಳಿಗೆ ಅನುಕೂಲಕ್ಕೆ ಬೇಕಾದ ತಯಾರಿ ನಡೆಸಿಲ್ಲ ಎಂದಿರುವ ಸಾಯ್ ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕು ಎಂದು ಸೂಚಿಸಿದೆ.

‘ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಅಂಗವಿಕಲ ಕ್ರೀಡಾಪಟುಗಳಿಗಾಗಿ ಒದಗಿಸಬೇಕಾದ ಸೌಲಭ್ಯಗಳಲ್ಲಿ ಲೋಪವಾಗಿದೆ. ಕೋವಿಡ್ ತಡೆಗೆ ಸಂಬಂಧಿಸಿದ ಎಸ್‌ಒಪಿಯನ್ನು ಪಾಲಿಸಿಲ್ಲ ಎಂಬುದು ಗಮನಕ್ಕೆ ಬಂದಿದೆ. ಹೀಗಾಗಿ ಸ್ಪಷ್ಟನೆ ಕೇಳಲಾಗಿದೆ. ಎಲ್ಲ ಬಗೆಯ ಸುರಕ್ಷಾ ಕ್ರಮಗಳನ್ನು ಕೈಗೊಂಡು ಮುಂದುವರಿಯುವಂತೆ ತಿಳಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ಸಾಯ್ ತಿಳಿಸಿದೆ.

ಮೂರು ದಿನಗಳ ಕೂಟದಲ್ಲಿ 27 ರಾಜ್ಯಗಳ 900 ಅಥ್ಲೀಟ್‌ಗಳು ಪಾಲ್ಗೊಳ್ಳುತ್ತಿದ್ದು ರಿಯೊ ಪ್ಯಾರಾಲಿಂಪಿಕ್ಸ್‌ನ ಹೈಜಂಪ್‌ನ ಟಿ-42 ವಿಭಾಗದಲ್ಲಿ ಚಿನ್ನ ಗೆದ್ದಿರುವ ಮರಿಯಪ್ಪನ್ ತಂಗವೇಲು ಮತ್ತು ಎಫ್44 ವಿಭಾಗದ ಜಾವೆಲಿನ್‌ನಲ್ಲಿ ವಿಶ್ವ ದಾಖಲೆ ಹೊಂದಿರುವ ಸಂದೀಪ್ ಚೌಧರಿ ಸ್ಪರ್ಧಾಳುಗಳಲ್ಲಿ ಪ್ರಮುಖರು.

‘ಸುರಕ್ಷಾ ಕ್ರಮಗಳಲ್ಲಿ ಲೋಪ ಆಗಲಿಲ್ಲ’: ಚಾಂಪಿಯನ್‌ಷಿಪ್‌ನಲ್ಲಿ ಎಲ್ಲ ರೀತಿಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಮತ್ತು ಯಾವ ಲೋಪವೂ ಆಗದಂತೆ ನೋಡಿಕೊಳ್ಳಲಾಗಿದೆ ಎಂದು ಪಿಸಿಐನ ತಾಂತ್ರಿಕ ಸಮಿತಿ ಅಧ್ಯಕ್ಷ ಸತ್ಯನಾರಾಯಣ ಅವರು ‘ಪ್ರಜಾವಾಣಿ’ಗೆ ತಿಳಿಸಿದರು. ಆದರೂ ನೋಟಿಸ್ ಸ್ಪಷ್ಟನೆ ಕೇಳಿದ್ದಾರೆ. ಇದಕ್ಕೆ ಸೂಕ್ತ ಉತ್ತರ ನೀಡಲಾಗಿದೆ. ಕ್ರೀಡಾಪಟುಗಳಿಗೆ ಎಲ್ಲ ಬಗೆಯ ಸೂಚನೆಗಳನ್ನು ನೀಡಲಾಗಿದೆ. ಆದರೂ ಕೆಲವರು ವೈಯಕ್ತಿಕ ಸುರಕ್ಷತೆಯ ಕಡೆಗೆ ಗಮನ ನೀಡುವಲ್ಲಿ ಉದಾಸೀನ ಮಾಡಿರಬಹುದು. ಅಂತರ ಕಾಯ್ದುಕೊಳ್ಳಲು, ಮಾಸ್ಕ್ ಧರಿಸಲು ಮತ್ತು ಸ್ಯಾನಿಟೈಸರ್ ಬಳಸಲು ಸೂಚಿಸಲಾಗಿದೆ. ಎಲ್ಲ ಕಡೆ ಫಲಕ ಅಂಟಿಸಲಾಗಿದೆ. ಈ ಎಲ್ಲ ಅಂಶಗಳನ್ನು ಒಳಗೊಂಡ ಸ್ಪಷ್ಟನೆಯನ್ನು ಸಾಯ್‌ಗೆ ನೀಡಲಾಗಿದೆ’ ಎಂದು ಅವರು ವಿವರಿಸಿದರು.

ಪದಕ ಗೆದ್ದ ಕರ್ನಾಟಕದ ಅಥ್ಲೀಟ್‌ಗಳು

ಶಾಟ್‌ಪಟ್‌ನ ಎಫ್–33 ವಿಭಾಗದಲ್ಲಿ ಈಶ್ವರ ಎಚ್.ಎಂ (3.41 ಮೀ.) ಬೆಳ್ಳಿ, ಎಫ್–34 ವಿಭಾಗದಲ್ಲಿ ಸತೀಶ್ ಎ.ವಿ. (3.20 ಮೀ.) ಹಾಗೂ ಎಫ್–35 ವಿಭಾಗದಲ್ಲಿ ಸೂರ್ಯ ಟಿ.ಡಿ. (8.23 ಮೀ.) ಕಂಚಿನ ಪದಕಗಳನ್ನು ಗೆದ್ದರು.

ಟಿ20 ರ‍್ಯಾಂಕಿಂಗ್: ಕೊಹ್ಲಿ, ರೋಹಿತ್ ಶರ್ಮಾಗೆ ಬಡ್ತಿ

ದುಬೈ: ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತು ಆರಂಭಿಕ ಬ್ಯಾಟ್ಸ್‌ಮನ್ ರೋಹಿತ್ ಶರ್ಮಾ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಬುಧವಾರ ಬಿಡುಗಡೆ ಮಾಡಿರುವ ಟಿ20 ರ‍್ಯಾಂಕಿಂಗ್ ಪಟ್ಟಿಯಲ್ಲಿ ಬಡ್ತಿ ಕಂಡಿದ್ದಾರೆ. ಕೊಹ್ಲಿ ಒಂದು ಸ್ಥಾನದ ಏರಿಕೆಯೊಂದಕ್ಕೆ ನಾಲ್ಕನೇ ಸ್ಥಾನಕ್ಕೆ, ರೋಹಿತ್ ನಾಲ್ಕು ಸ್ಥಾನಗಳ ಏರಿಕೆಯೊಂದಿಗೆ 14ನೇ ಕ್ರಮಾಂಕಕ್ಕೆ ತಲುಪಿದ್ದಾರೆ.

ಇಂಗ್ಲೆಂಡ್ ಎದುರಿನ ಸರಣಿಯ ಕೊನೆಯ ಪಂದ್ಯದಲ್ಲಿ ಆರಂಭಿಕ ಬ್ಯಾಟ್ಸ್‌ಮನ್ ಆಗಿ ಕಣಕ್ಕೆ ಇಳಿದು 52 ಎಸೆತಗಳಲ್ಲಿ 80 ರನ್ ಗಳಿಸಿದ ಕೊಹ್ಲಿ ಈಗ ಗರಿಷ್ಠ ರ‍್ಯಾಂಕ್ ಹೊಂದಿರುವ ಭಾರತದ ಆಟಗಾರ ಎನಿಸಿದ್ದಾರೆ. ಕೆ.ಎಲ್.ರಾಹುಲ್ ಅವರನ್ನು ಹಿಂದಿಕ್ಕಿ ಕೊಹ್ಲಿ ಮುನ್ನುಗ್ಗಿದ್ದಾರೆ.

ಭಾರತ ಮತ್ತು ಇಂಗ್ಲೆಂಡ್ ನಡುವಿನ ಸರಣಿಯ ಕೊನೆಯ ಎರಡು ಪಂದ್ಯಗಳು ಮತ್ತು ಅಫ್ಗಾನಿಸ್ತಾನ–ಜಿಂಬಾಬ್ವೆ ನಡುವಿನ ಮೂರು ಪಂದ್ಯಗಳ ಸರಣಿಯನ್ನು ರ‍್ಯಾಂಕಿಂಗ್‌ಗೆ ಪರಿಗಣಿಸಲಾಗಿತ್ತು ಎಂದು ಐಸಿಸಿ ತಿಳಿಸಿದೆ.



ವಿರಾಟ್ ಕೊಹ್ಲಿ

ಭಾರತದ ಶ್ರೇಯಸ್ ಅಯ್ಯರ್ ಐದು ಸ್ಥಾನಗಳ ಏರಿಕೆಯೊಂದಿಗೆ ಜೀವನಶ್ರೇಷ್ಠ 26ನೇ ಸ್ಥಾನಕ್ಕೆ ಏರಿದ್ದಾರೆ. ಸೂರ್ಯಕುಮಾರ್ ಯಾದವ್ ಮತ್ತು ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ರಿಷಭ್ ಪಂತ್ ಕೂಡ ಉತ್ತಮ ಸಾಧನೆ ಮಾಡಿದ್ದಾರೆ. ಪಂತ್ 11 ಸ್ಥಾನಗಳ ಏರಿಕೆಯೊಂದಿಗೆ 69ಕ್ಕೇರಿದ್ದರೆ ಸೂರ್ಯಕುಮಾರ್ ಯಾದವ್ ಪಟ್ಟಿಯಲ್ಲಿ 66ನೇ ಸ್ಥಾನದಲ್ಲಿದ್ದಾರೆ.

ವೇಗಿ ಭುವನೇಶ್ವರ್ ಕುಮಾರ್ 21 ಸ್ಥಾನಗಳ ಏರಿಕೆಯೊಂದಿಗೆ 24ರಲ್ಲಿದ್ದಾರೆ. ಹಾರ್ದಿಕ್ ಪಾಂಡ್ಯ 47 ಸ್ಥಾನಗಳ ಏರಿಕೆ ಕಂಡಿದ್ದು 78ರಲ್ಲಿದ್ದಾರೆ.

ಏಕದಿನ ರ‍್ಯಾಂಕಿಂಗ್‌ನಲ್ಲಿ ಶಿಖರ್ ಧವನ್ 15 ಹಾಗೂ ಭುವನೇಶ್ವರ್ ಕುಮಾರ್ 20ನೇ ಸ್ಥಾನದಲ್ಲಿದ್ದಾರೆ. ಇಬ್ಬರೂ ಕ್ರಮವಾಗಿ ಎರಡು ಹಾಗೂ ಐದು ಸ್ಥಾನಗಳ ಏರಿಕೆ ಕಂಡಿದ್ದಾರೆ.

ಏಕದಿನ ಸರಣಿ: ಶ್ರೇಯಸ್ ಅಲಭ್ಯ

ಪುಣೆ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭುಜದ ಗಾಯಕ್ಕೆ ತುತ್ತಾಗಿರುವ ಭಾರತದ ಶ್ರೇಯಸ್ ಅಯ್ಯರ್, ಉಳಿದೆರಡು ಪಂದ್ಯಗಳಲ್ಲಿ ಆಡುವುದಿಲ್ಲ. ಅಲ್ಲದೆ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲೂ ಅವರು ಕಣಕ್ಕಿಳಿಯುವುದು ಅನುಮಾನವಾಗಿದೆ.

ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಇನಿಂಗ್ಸ್‌ನ 8ನೇ ಓವರ್‌ನಲ್ಲಿ ಜಾನಿ ಬೆಸ್ಟೊ ಹೊಡೆದ ಚೆಂಡನ್ನು ತಡೆಯುವ ವೇಳೆ ಶ್ರೇಯಸ್ ಭುಜಕ್ಕೆ ಪೆಟ್ಟಾಗಿತ್ತು. ಗಾಯ ಗಂಭೀರವಾಗಿದ್ದರಿಂದ ಅವರು ಕ್ರೀಡಾಂಗಣ ತೊರೆದಿದ್ದರು.

‘ಶ್ರೇಯಸ್ ಅವರಿಗೆ ಸರ್ಜರಿ ಅಗತ್ಯವಿದ್ದು, ಇದರಿಂದಾಗಿ ಅವರು ನಾಲ್ಕು ತಿಂಗಳು ಕ್ರಿಕೆಟ್‌ನಿಂದ ದೂರ ಉಳಿಯಬೇಕಾಗಬಹುದು’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

‘ಶ್ರೇಯಸ್ ಎಡ ಭುಜದಲ್ಲಿ ಮೂಳೆ ಸರಿದಿದೆ. ಇನ್ನಷ್ಟು ತಪಾಸಣೆಗಳನ್ನು ಮಾಡಲಾಗುತ್ತದೆ’ ಎಂದು ಬಿಸಿಸಿಐ ಮಂಗಳವಾರ ಹೇಳಿತ್ತು.

REGIONAL INSTITUTE OF EDUCATION
National Council of Educational Research and Training, New Delhi
Department of Education, Government of India, MYSURU - 570006
Email: principal@riemysore.ac.in, website: www.riemysore.ac.in

WALK-IN-INTERVIEW

The Regional Institute of Education, Mysuru will conduct Walk-in-Interview on the dates as shown against each post purely on contractual basis for the Academic Session 2021-22.

Sl. No.	Name of the Post	Posts	Consolidated Remuneration per Month	Date of Interview and Time
1	Assistant Professor in Mathematics	02	Rs. 45,000/-	29.03.2021 at 10:00 am
2	Assistant Professor in Pedagogy of Social Science	01	Rs. 45,000/-	29.03.2021 at 11:30 am
3	Assistant Professor in Psychology/ Guidance Counselling	01	Rs. 45,000/-	29.03.2021 at 02:30 pm
4	Assistant Professor in Special Education (Hearing Impairment, Guidance & Counselling)	01	Rs. 45,000/-	29.03.2021 at 04:00 pm
5	Assistant Professor in Chemistry	01	Rs. 45,000/-	30.03.2021 at 10:00 am
6	Lab Assistant in Botany	01	Rs. 17,000/-	30.03.2021 at 12:00 noon
7	Lab Assistant in Physics	01	Rs. 17,000/-	30.03.2021 at 02:30 pm
8	Lab Assistant in Psychology	01	Rs. 17,000/-	30.03.2021 at 03:30 pm
9	Lab Assistant in Chemistry	01	Rs. 17,000/-	30.03.2021 at 04:30 pm

FOR MORE DETAILS PLEASE LOG ON TO www.riemysore.ac.in

SD/-
PRINCIPAL

ಅಥ್ಲೆಟಿಕ್ಸ್: ಉಷಾ, ರಾಂಧವಾ ನೇಮಕ

ನವದೆಹಲಿ (ಪಿಟಿಐ): ಹಿರಿಯ ಅಥ್ಲೀಟ್‌ಗಳಾದ ಪಿ.ಟಿ. ಉಷಾ ಹಾಗೂ ಗುರುಬಚನ್ ಸಿಂಗ್ ರಾಂಧವಾ ಅವ ರನ್ನು ಕ್ರಮವಾಗಿ ಜೂನಿಯರ್ ಮತ್ತು ಸೀನಿಯರ್ ಆಯ್ಕೆ ಸಮಿತಿಗಳಿಗೆ ಮುಖ್ಯ ಸ್ಥರಾಗಿ ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಬುಧವಾರ ನೇಮಿಸಿದೆ.

56 ವರ್ಷದ ಉಷಾ, ಏಷ್ಯನ್ ಗೇಮ್ಸ್‌ನ 100, 200, 400 ಹಾಗೂ 4X400 ಮೀಟರ್ ವಿಭಾಗಗಲ್ಲಿ ಪದಕಗಳನ್ನು ಗೆದ್ದುಕೊಂಡಿದ್ದರು. 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ 400 ಮೀ. ವಿಭಾಗದಲ್ಲಿ 4ನೇ ಸ್ಥಾನ ಗಳಿಸಿದ್ದರು.

81 ವರ್ಷದ ರಾಂಧವಾ 1962ರ ಏಷ್ಯನ್ ಗೇಮ್ಸ್‌ನ ಡೆಕಾಥ್ಲಾನ್‌ನಲ್ಲಿ ಚಿನ್ನ ಗೆದ್ದಿದ್ದರು.

ಐಎಸ್‌ಎಸ್‌ಎಫ್ ವಿಶ್ವಕಪ್: ತೋಮರ್ ಐತಿಹಾಸಿಕ ಸಾಧನೆ

ಚಿಂಕಿಗೆ ಚಿನ್ನ; ರಾಹಿಗೆ ಬೆಳ್ಳಿ

ನವದೆಹಲಿ (ಪಿಟಿಐ): ಚಿಂಕಿ ಯಾದವ್ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಇಲ್ಲಿಯ ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬುಧವಾರ 25 ಮೀಟರ್ ಪಿಸ್ತೂಲ್ ವಿಭಾಗದಲ್ಲಿ ಅವರು ಅಗ್ರಸ್ಥಾನ ಗಳಿಸಿದರು.

ಫೈನಲ್ಸ್ ಹಣಾಹಣಿಯಲ್ಲಿ ಚಿಂಕಿ, ಸಹ ಶೂಟರ್‌ಗಳಾದ ರಾಹಿ ಸರ್ನೋಬತ್ ಹಾಗೂ ಮನು ಭಾಕರ್ ಅವರನ್ನು ಹಿಂದಿಕ್ಕಿದರು. ಪದಕದ ಸುತ್ತಿನಲ್ಲಿ ಚಿಂಕಿ ಹಾಗೂ ಸರ್ನೋಬತ್ ತಲಾ 32 ಪಾಯಿಂಟ್ಸ್ ಗಳಿಸಿದ್ದರು. ಇದರಿಂದಾಗಿ ಶೂಟ್ ಆಫ್ ಮೊರೆ ಹೋಗಲಾಯಿತು. ಇಲ್ಲಿ 4-3ರಿಂದ ಗೆದ್ದ ಚಿಂಕಿ ಚಿನ್ನದ ಪದಕದ ಒಡತಿಯಾದರು. 28 ಪಾಯಿಂಟ್ಸ್ ಕಲೆಹಾಕಿದ ಮನು ಭಾಕರ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಭಾರತದ ಈ ಮೂವರು ಶೂಟರ್‌ಗಳು ಈಗಾಗಲೇ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿದ್ದಾರೆ. ಚಿಂಕಿ ಅವರು 2019ರಲ್ಲಿ ದೋಹಾದಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ 14 ಪಾಯಿಂಟ್ಸ್ ಗಳಿಸಿ, ಎರಡನೇ ಸ್ಥಾನ ಪಡೆಯುವ ಮೂಲಕ ಈ ಸಾಧನೆ ಮಾಡಿದ್ದರು. ಅದೇ ಕೂಟದಲ್ಲಿ ಮನು 13 ಪಾಯಿಂಟ್ಸ್ ಸಂಗ್ರಹಿಸಿ ಟೋಕಿಯೊ ಟಿಕೆಟ್ ಪಡೆದಿದ್ದರು.

ತೋಮರ್ ಪಾರಮ್ಯ: 50 ಮೀ. ರೈಫಲ್ 3 ಪೊಸಿಷನ್ಸ್‌ನಲ್ಲಿ ಯುವ ಶೂಟರ್ ಐಶ್ವರಿಪ್ರತಾಪ್ ಸಿಂಗ್ ತೋಮರ್ ಚಿನ್ನದ ಪದಕಕ್ಕೆ ಗುರಿಯಿಟ್ಟರು. ಭೋಪಾಲ್‌ನ 20 ವರ್ಷದ ತೋಮರ್, ಈ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಅತಿ ಕಿರಿಯ ಶೂಟರ್ ಎನಿಸಿಕೊಂಡರು. ಫೈನಲ್ಸ್ ಹಣಾಹಣಿಯಲ್ಲಿ ತೋಮರ್ 462.5 ಪಾಯಿಂಟ್ಸ್ ಕಲೆಹಾಕಿದರು. ಬೆಳ್ಳಿ ಪದಕ ಗೆದ್ದ ಹಂಗರಿಯ ಇಸ್ತವಾನ್ ಪೆನಿ 461.6 ಮತ್ತು ಕಂಚು ವಿಜೇತ ಡೆನ್ಮಾರ್ಕ್‌ನ ಸ್ಟೆಫನ್ ಓಲ್ಸೆನ್ 450.9 ಪಾಯಿಂಟ್ಸ್ ಗಳಿಸಿದರು.

ಈ ವಿಭಾಗದ ಫೈನಲ್ಸ್‌ಗೆ ಅರ್ಹತೆ ಗಿಟ್ಟಿಸಿದ್ದ ಭಾರತದ ಸಂಜೀವ್ ರಜಪೂತ್ ಹಾಗೂ ನೀರಜ್ ಕುಮಾರ್ ಕ್ರಮವಾಗಿ ಆರು ಮತ್ತು ಎಂಟನೇ ಸ್ಥಾನ ಗಳಿ ಸಿದರು. ತೋಮರ್ ಅವರು 2019ರಲ್ಲಿ ನಡೆದ ಏಷ್ಯನ್ ಶೂಟಿಂಗ್ ಚಾಂಪಿ ಯನ್‌ಷಿಪ್‌ನ 50 ಮೀ. ರೈಫಲ್ 3 ಪೊಸಿಷನ್ಸ್‌ನಲ್ಲಿ ಕಂಚಿನ ಪದಕ ಗೆದ್ದು ಒಲಿಂಪಿಕ್ ಕೂಟಕ್ಕೆ ಅರ್ಹತೆ ಪಡೆದಿದ್ದಾರೆ.

ಚಿನ್ನದ ಪದಕ ಗೆದ್ದ ಚಿಂಕಿ ಯಾದವ್

50 ಮೀ. ರೈಫಲ್ 3 ಪೊಸಿಷನ್ಸ್‌ನಲ್ಲಿ ಚಿನ್ನ ಗೆದ್ದ ಐಶ್ವರಿಪ್ರತಾಪ್ ಸಿಂಗ್ ತೋಮರ್

ಸೈನಾ, ಶ್ರೀಕಾಂತ್‌ಗೆ ಜಯ

ಪ್ಯಾರಿಸ್ (ಪಿಟಿಐ): ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ, ಭಾರತದ ಸೈನಾ ನೆಹ್ವಾಲ್ ಹಾಗೂ ಕಿದಂಬಿ ಶ್ರೀಕಾಂತ್ ಅವರು ಆರ್ಲಿಯನ್ಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ನಾಲ್ಕನೇ ಶ್ರೇಯಾಂಕ ಪಡೆದಿರುವ ಸೈನಾ, ಬುಧವಾರ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ 21–9, 21–5ರಿಂದ ಐರ್ಲೆಂಡ್‌ನ ರಚೆಲ್ ಡಾರಾಗ್ ಅವರನ್ನು ಪರಾಭವಗೊಳಿಸಿದರು. ಸೈನಾ ಅವರಿಗೆ ಈ ಪಂದ್ಯ ಗೆಲ್ಲಲು ಕೇವಲ 21 ನಿಮಿಷಗಳು ಸಾಕಾದವು.

ಪುರುಷರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಶ್ರೀಕಾಂತ್, ಎರಡನೇ ಸುತ್ತಿನ ಪಂದ್ಯದಲ್ಲಿ 21-15, 21-10ರಿಂದ ಸಹ ಆಟಗಾರ ಅಜಯ್ ಜಯರಾಮ್ ಅವರನ್ನು ಸೋಲಿಸಿದರು. ಮೊದಲ ಪಂದ್ಯದಲ್ಲಿ ಅವರಿಗೆ ಬೈ ಲಭಿಸಿತ್ತು.

ಮೊದಲ ಸುತ್ತಿನ ಸೆಣಸಾಟದಲ್ಲಿ ಜಯರಾಮ್ 19–21, 23-21, 21-16ರಿಂದ ಭಾರತದವರೇ ಆದ ಆಲಾಪ್ ಮಿಶ್ರಾ ಅವರನ್ನು ಸೋಲಿಸಿದ್ದರು.

ಮಿಶ್ರ ವಿಭಾಗದಲ್ಲಿ ಪ್ರಣವ್ ಜೆರಿ ಚೋಪ್ರಾ–ಎನ್. ಸಿಕ್ಕಿ ರೆಡ್ಡಿ ಜೋಡಿಯು 21-7 21-18ರಿಂದ ಆಸ್ಟ್ರಿಯಾದ ಡಾಮಿನಿಕ್ ಸ್ಟಿಪ್‌ಸಿಟ್ಸ್–ಸೆರೆನಾ ವು ಯೊಂಗ್ ಜೋಡಿಯನ್ನು ಮಣಿಸಿ ಮುನ್ನಡೆದರು.

ಸೈನಾ ನೆಹ್ವಾಲ್

ಎರಡನೇ ಸುತ್ತಿನ ಪಂದ್ಯದಲ್ಲಿ ಭಾರತದ ಕಿರಣ್ ಜಾರ್ಜ್ 13-21, 21-16, 23-21ರಿಂದ ಭಾರತದವರೇ ಆದ ಎಚ್.ಎಸ್. ಪ್ರಣಯ್ ಅವರಿಗೆ ಆಘಾತ ನೀಡಿದರು.

ಚಿರಾಗ್ ಸೇನ್ 21-13. 21-12ರಿಂದ ಇಂಡೊನೇಷ್ಯಾದ ಚಿಕೊ ಔರಾ ದ್ವಿ ವಾರ್ಡೊಯೊ ಅವರನ್ನು ಮಣಿಸಿ, ಮೂರನೇ ಸುತ್ತು ತಲುಪಿದರು. ಪರುಪಳ್ಳಿ ಕಶ್ಯಪ್ 7–21, 7-21ರಿಂದ ಫ್ರಾನ್ಸ್‌ನ ತೋಮಾ ಜೂನಿಯರ್ ಪೊಪೊವ್ ಅವರಿಗೆ ಸೋತರು.

ಮಿಶ್ರ ಡಬಲ್ಸ್‌ನಲ್ಲಿ ಕನ್ನಡತಿ ಅಶ್ವಿನಿ ಪೊನ್ನಪ್ಪ–ಧ್ರುವ ಕಪಿಲ ಜೋಡಿಯು 21–8, 21–12ರಿಂದ ಬಲ್ಗೇರಿಯಾದ ಇಲಿಯಾನ್ ಸ್ಟೊಯನೊವ್–ಹ್ರಿಸ್ಟೊಮಿರಾ ಪೊಪೊವ್‌ಸ್ಕಾ ಅವರ ಸವಾಲು ಮೀರಿದರು.

ಐಪಿಎಲ್: ಸಿಎಸ್‌ಕೆಗೆ ಹೊಸ ಪೋಷಾಕು

ಚೆನ್ನೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಹೊಸ ಜೆರ್ಸಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಸೈನಿಕರಿಗೆ ಗೌರವ ಸಲ್ಲಿಸುವ ಲಾಂಛನ ಜೆರ್ಸಿಯಲ್ಲಿದೆ. ಜೆರ್ಸಿಯ ಭುಜದ ಭಾಗದಲ್ಲಿ ಮೂರು ನಕ್ಷತ್ರಗಳಿವೆ. ಮೂರು ಬಾರಿ ಪ್ರಶಸ್ತಿ ಗೆದ್ದದ್ದನ್ನು ಅವು ಸೂಚಿಸುತ್ತವೆ.

‘ಸೈನಿಕರ ಸೇವೆಯನ್ನು ಸ್ಮರಿಸಲು ಬಯಸಿದ್ದೇವೆ. ಅದು, ಅವರಿಗೆ ನಮ್ಮ ಫ್ರಾಂಚೈಸ್ ಸಲ್ಲಿಸುವ ಗೌರವ’ ಎಂದು ಸಿಎಸ್‌ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಸ್.ವಿಶ್ವನಾಥನ್ ತಿಳಿಸಿದ್ದಾರೆ.

ಮುಂಬೈನಲ್ಲಿ ಜಮಾಯಿಸಿದ ಕ್ಯಾಪಿಟಲ್ಸ್ ಆಟಗಾರರು: ವೇಗಿಗಳಾದ ಇಶಾಂತ್ ಶರ್ಮಾ ಮತ್ತು ಉಮೇಶ್ ಯಾದವ್ ಒಳಗೊಂಡ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರರು ಮುಂಬೈ ಸೇರಿದ್ದು ಕ್ವಾರಂಟೈನ್‌ಗೆ ಸಿದ್ಧವಾಗುತ್ತಿದ್ದಾರೆ. ಯುಎಇಯಲ್ಲಿ ನಡೆದ ಕಳೆದ ಬಾರಿಯ ಟೂರ್ನಿಯಲ್ಲಿ ಕ್ಯಾಪಿಟಲ್ಸ್ ಫೈನಲ್ ಪ್ರವೇಶಿಸಿತ್ತು.

ವರ್ಷದ ಬಳಿಕ ಅಂತರರಾಷ್ಟ್ರೀಯ ಪಂದ್ಯ: ಒಮಾನ್ ಎದುರಾಳಿ

ಫುಟ್‌ಬಾಲ್: ಭಾರತಕ್ಕೆ ಜಯದ ನಿರೀಕ್ಷೆ

ದುಬೈ (ಪಿಟಿಐ): ಒಂದು ವರ್ಷದ ನಂತರ ಅಂತರರಾಷ್ಟ್ರೀಯ ಸ್ಪರ್ಧಾ ಕಣಕ್ಕೆ ಇಳಿಯಲಿರುವ ಭಾರತ ಫುಟ್‌ಬಾಲ್ ತಂಡ ಸ್ನೇಹಪರ ಪಂದ್ಯದಲ್ಲಿ ಒಮಾನ್ ಎದುರು ಗುರುವಾರ ಸೆಣಸಲಿದೆ. ದುಬೈನಲ್ಲಿ ನಡೆಯಲಿರುವ ಪಂದ್ಯದಲ್ಲಿ ಭಾರತ ತಂಡವನ್ನು ಮುನ್ನಡೆಸಲು ನಾಯಕ ಸುನಿಲ್ ಚೆಟ್ರಿ ಇಲ್ಲ. ಆದರೆ ಯುವ ಆಟಗಾರರು ಗೆಲುವಿನ ಭರವಸೆಯಲ್ಲಿದ್ದಾರೆ. ಚೆಟ್ರಿ ಕೋವಿಡ್–19 ಸೋಂಕಿಗೆ ಒಳಗಾಗಿ ಭಾರತದಲ್ಲಿ ಸ್ವಯಂ ಪ್ರತ್ಯೇಕತಾವಾಸದಲ್ಲಿದ್ದಾರೆ.

2019ರ ನವೆಂಬರ್‌ನಲ್ಲಿ ಭಾರತ ತಂಡ ಕೊನೆಯದಾಗಿ ಅಂತರರಾಷ್ಟ್ರೀಯ ಪಂದ್ಯ ಆಡಿತ್ತು. ಈಗ ತಂಡದಲ್ಲಿ ಯುವ ಆಟಗಾರರೇ ತುಂಬಿದ್ದು ಅವರೆಲ್ಲ ಇಂಡಿಯನ್ ಸೂಪರ್ ಲೀಗ್ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರಿದ್ದಾರೆ. ಮುಕ್ತವಾಗಿ ಮತ್ತು ನಿರಾತಂಕವಾಗಿ ಆಡುವಂತೆ ಕೋಚ್ ಇಗರ್ ಸ್ಟಿಮ್ಯಾಚ್ ಆಟಗಾರರಿಗೆ ಸೂಚಿಸಿದ್ದಾರೆ.

ಒಮಾನ್ ಕಳೆದ ಶನಿವಾರ ಜೋರ್ಡಾನ್ ವಿರುದ್ಧ ಸೌಹಾರ್ದ ಪಂದ್ಯ ಆಡಿದ್ದು ಅದು ಗೋಲು ರಹಿತ ಡ್ರಾದಲ್ಲಿ ಕೊನೆಗೊಂಡಿತ್ತು. ಅದಕ್ಕೂ ಮೊದಲು ಆ ತಂಡ 2019ರ ಡಿಸೆಂಬರ್‌ನಲ್ಲಿ ಕೊನೆಯ ಪಂದ್ಯ ಆಡಿತ್ತು.

ಭಾರತದ 27 ಮಂದಿಯ ತಂಡಲ್ಲಿರುವ ಬಹುತೇಕರು ಹೊಸಬರು. ಕೆಲವರು ಮೊದಲ ಬಾರಿ ತಂಡಕ್ಕೆ ಆಯ್ಕೆಯಾಗಿದ್ದರೆ ಇನ್ನು ಕೆಲವರು ತಂಡದಲ್ಲಿದ್ದರೂ ಈ ಹಿಂದಿನ ಪಂದ್ಯಗಳಲ್ಲಿ ಕಣಕ್ಕೆ ಇಳಿಯಲು ಅವಕಾಶ ಸಿಕ್ಕಿರಲಿಲ್ಲ. ಐಎಸ್‌ಎಲ್‌ನಲ್ಲಿ ಮಿಂಚಿರುವ ಆಟಗಾರರು ಒಮಾನ್ ವಿರುದ್ಧ ಉತ್ತಮ ಸಾಮರ್ಥ್ಯ ತೋರುವ ಭರವಸೆಯಲ್ಲಿದ್ದಾರೆ.

ಭಾರತ ತಂಡ: ಗುರುಪ್ರೀತ್ ಸಿಂಗ್ ಸಂಧು, ಅಮರಿಂದರ್ ಸಿಂಗ್, ಸುಭಾಷಿಷ್ ರಾಯ್ ಚೌಧರಿ, ಧೀರಜ್ ಸಿಂಗ್, ಅಶುತೋಷ್ ಮೆಹ್ತಾ, ಆಕಾಶ್ ಮಿಶ್ರಾ, ಪ್ರೀತಂ ಕೊತಾಲ್, ಸಂದೇಶ್ ಜಿಂಗಾನ್, ಚಿಂಗ್ಲೆನ್ಸಾನ ಸಿಂಗ್, ಆದಿಲ್ ಖಾನ್, ಮಂದಾರ್ ರಾವ್ ದೇಸಾಯಿ, ಮಶೂರ್ ಶರೀಫ್, ರಾವ್ಲಿನ್ ಬೋರ್ಜೆಸ್, ಲಾಲೆಂಗ್ಮಾವಿಯ, ಜೀಕ್ಸನ್ ಸಿಂಗ್, ರೇನಿಯರ್ ಫರ್ನಾಂಡಿಸ್, ಅನಿರುದ್ಧ ಥಾಪಾ, ಬಿಪಿನ್ ಸಿಂಗ್, ಯಾಸಿರ್ ಮೊಹಮ್ಮದ್, ಸುರೇಶ್ ಸಿಂಗ್, ಹಲಿಚರಣ್, ಲಾಲಿಯಂಗ್ಜುವಲ ಚಾಂಗ್ಟೆ, ಆಶಿಕ್ ಕುರುಣಿಯನ್, ಮನ್ವೀರ್ ಸಿಂಗ್, ಇಶಾನ್ ಪಂಡಿತ, ಹಿತೇಶ್ ಶರ್ಮಾ, ಲಿಸ್ಟನ್ ಕೊಲ್ಯಾಕೊ.

ಆರಂಭ: ಸಂಜೆ 7.15. **ನೇರ ಪ್ರಸಾರ:** ಯೂರೊ ಸ್ಪೋರ್ಟ್.

ಕರ್ನಾಟಕದ ಮಧ್ಯಮವೇಗಿಗೆ ಬ್ರಿಸ್ಬೇನ್‌ನ ಕ್ರಿಕೆಟ್ ಅಕಾಡೆಮಿಯಲ್ಲಿ ಥಾಮ್ಸನ್ ತರಬೇತಿ

ಪ್ರಸಿದ್ಧ ಪ್ರತಿಭೆ ಮೇಲೆ ಆಸ್ಟ್ರೇಲಿಯಾ ಕೋಚ್ ಪ್ರಭಾವ

ಚೆನ್ನೈ (ಪಿಟಿಐ): ವೇಗದ ಬೌಲರ್ ಬ್ರೆಟ್ ಲೀ ಮತ್ತು ಬೆಂಗಳೂರಿನ ಮಸಾಲೆ ದೋಸೆಯನ್ನು ಇಷ್ಟಪಡುವ ಮಧ್ಯಮ ವೇಗಿ ಪ್ರಸಿದ್ಧ ಕೃಷ್ಣ ಅವರ ಪ್ರತಿಭೆ ಬೆಳಗಿದವರಲ್ಲಿ ಪ್ರಮುಖರು ಆಸ್ಟ್ರೇಲಿಯಾದ ಜೆಫ್ ಥಾಮ್ಸನ್. ಇಂಗ್ಲೆಂಡ್ ಎದುರಿನ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಪದಾರ್ಪಣೆ ಮಾಡಿದ ಪ್ರಸಿದ್ಧ ಕೃಷ್ಣ ಮಂಗಳವಾರ ರಾತ್ರಿಯಿಂದ ಕ್ರಿಕೆಟ್ ಪ್ರಪಂಚದ ಗಮನ ಸೆಳೆದಿದ್ದಾರೆ.

ಪುಣೆಯಲ್ಲಿ ನಡೆದ ಪಂದ್ಯದಲ್ಲಿ ಪ್ರಸಿದ್ಧ 54 ರನ್‌ಗಳಿಗೆ ನಾಲ್ಕು ವಿಕೆಟ್ ಕಬಳಿಸಿದ್ದರು. ಇದು, ಪದಾರ್ಪಣೆ ಪಂದ್ಯದಲ್ಲಿ ಭಾರತೀಯ ಆಟಗಾರನೊಬ್ಬನ ಶ್ರೇಷ್ಠ ಸಾಧನೆಯಾಗಿದೆ. ಅವರ ಅಮೋಘ ಬೌಲಿಂಗ್ ಭಾರತ ತಂಡಕ್ಕೆ ಭರ್ಜರಿ ಜಯವನ್ನೂ ಗಳಿಸಿಕೊಟ್ಟಿತ್ತು.

ಪ್ರಸಿದ್ಧ ಕೃಷ್ಣ –ರಾಯಿಟರ್ಸ್ ಚಿತ್ರ

ಮೊದಲ ಸ್ಪೆಲ್‌ನ ಮೂರು ಓವರ್‌ಗಳಲ್ಲಿ 37 ರನ್ ಬಿಟ್ಟುಕೊಟ್ಟಿದ್ದರೂ ನಂತರ ಎದುರಾಳಿಗಳನ್ನು ಕಾಡಿದ್ದರಿಂದ ಈ ಪಂದ್ಯ ಅವರಿಗೆ ಹೆಚ್ಚು ‘ಪ್ರಸಿದ್ಧಿ’ ತಂದುಕೊಟ್ಟಿತ್ತು.

‘ನನ್ನ ಮೊದಲ ಪಂದ್ಯ ಏಳುಬೀಳುಗಳಿಂದ ಕೂಡಿತ್ತು. ನನ್ನ ಪಾಲಿನ ಕೊನೆಯ ಓವರ್‌ನ ಕೊನೆಯ ಎಸೆತದ ವರೆಗೂ ಏನನ್ನೂ ಹೇಳಲಾಗದ ಪರಿಸ್ಥಿತಿ ಇತ್ತು. ಅಂತೂ ಎಲ್ಲವೂ ಸುಸೂತ್ರವಾಗಿ ಮುಕ್ತಾಯಗೊಂಡಿತು. ಇನ್ನಷ್ಟು ಸಾಧನೆ ಮಾಡುವ ಹುಮ್ಮಸ್ಸು ಇದೆ’ ಎಂದು ಅವರು ಬುಧವಾರ ಟ್ವೀಟ್ ಮಾಡಿದ್ದಾರೆ.

ಮುಖ್ಯಾಂಶಗಳು

- ಪದಾರ್ಪಣೆ ಪಂದ್ಯದಲ್ಲಿ ನಾಲ್ಕು ವಿಕೆಟ್ ಕಬಳಿಸಿದ್ದ ಪ್ರಸಿದ್ಧ
- ಪ್ರಸಿದ್ಧ ಕೃಷ್ಣಗೆ ಮಸಾಲೆ ದೋಸೆ ಹಾಗೂ ಬ್ರೆಟ್ ಲೀ ಎಂದರೆ ಇಷ್ಟವಂತೆ

ಕರ್ನಾಟಕದ ಪ್ರತಿಭೆ ಪ್ರಸಿದ್ಧ ಕೃಷ್ಣ ಅವರಿಗೆ ಮಸಾಲೆ ದೋಸೆ ಮತ್ತು ಆಸ್ಟ್ರೇಲಿಯಾದ ಬ್ರೆಟ್ ಲೀ ಇಷ್ಟ ಎಂಬ ವಿಷಯವನ್ನು ಬಹಿರಂಗ ಮಾಡಿದವರು ತಂದೆ ಮುರಳಿ ಕೃಷ್ಣ. ಜೆಫ್ ಥಾಮ್ಸನ್ ಅವರು ಪ್ರಸಿದ್ಧ ವೃತ್ತಿ ಬದುಕಿನಲ್ಲಿ ಪ್ರಭಾವ ಬೀರಿದ್ದಾರೆ ಎಂದೂ ಮುರಳಿ ಕೃಷ್ಣ ತಿಳಿಸಿದರು. 2017ರಲ್ಲಿ ಐಡಿಬಿಐ ಫೆಡರಲ್ ಬೌಲಿಂಗ್ ಫೌಂಡೇಷನ್‌ನ ಯೋಜನೆಯ ಅಂಗವಾಗಿ ತುಷಾರ್ ದೇಶಪಾಂಡೆ ಜೊತೆ ಪ್ರಸಿದ್ಧ ಕೃಷ್ಣ ಆಸ್ಟ್ರೇಲಿಯಾಗೆ ಪಯಣಿಸಿದ್ದರು. ಅಲ್ಲಿ ಥಾಮ್ಸನ್ ಬಳಿ ತರಬೇತಿ ಪಡೆದಿದ್ದರು. ಬ್ರಿಸ್ಬೇನ್‌ನಲ್ಲಿರುವ ಕ್ರಿಕೆಟ್ ಆಸ್ಟ್ರೇಲಿಯಾ ಅಕಾಡೆಮಿಯಲ್ಲಿ ನಡೆದ ತರಬೇತಿ ಅವರ ಪಾಲಿಗೆ ಮಹತ್ವದ್ದಾಗಿತ್ತು. ಗ್ಲೆನ್ ಮೆಗ್ರಾ ಸಲಹೆಗಳನ್ನು ನೀಡಿದ್ದರು. ವಿಶೇಷ ತಂತ್ರಗಳನ್ನು ಕಲಿಯಲು ಪ್ರಸಿದ್ಧಗೆ ಅದು ಅನುಕೂಲವಾಯಿತು.

ಎಂಆರ್‌ಎಫ್ ಪೇಸ್ ಫೌಂಡೇಷನ್‌ನಲ್ಲೂ ಪ್ರಸಿದ್ಧ ತರಬೇತಿ ಪಡೆದುಕೊಂಡಿದ್ದಾರೆ. ಅಲ್ಲಿನ ಮುಖ್ಯ ಕೋಚ್ ಎಂ.ಸೆಂಥಿಲ್ ನಾಥನ್ ಪ್ರಕಾರ ಪ್ರಸಿದ್ಧ ಕೃಷ್ಣ ಅವರಿಗೆ ಬೌಲಿಂಗ್‌ನಲ್ಲಿದ್ದ ಚಾಣಾಕ್ಷತನವೇ ಆಸ್ಟ್ರೇಲಿಯಾದಲ್ಲಿ ತರಬೇತಿಗೆ ಆಯ್ಕೆಯಾಗಲು ಕಾರಣ.

‘11ನೇ ವಯಸ್ಸಿನಲ್ಲೇ ಪ್ರಸಿದ್ಧ ಕ್ರಿಕೆಟ್ ಆಡಲು ಆರಂಭಿಸಿದ್ದ. ಶಾಲಾ ಕ್ರಿಕೆಟ್‌ನಲ್ಲಿ ಆಲ್‌ರೌಂಡರ್ ಪಾತ್ರ ವಹಿಸಿದ್ದ. 14ನೇ ವಯಸ್ಸಿನಲ್ಲಿ ವೇಗದ ಬೌಲಿಂಗ್ ಬಗ್ಗೆ ಹೆಚ್ಚು ಆಸಕ್ತಿ ತಾಳಿದ. ಆತನ ಆಶಯಕ್ಕೆ ನಾವು ಬೆಂಬಲವಾಗಿ ನಿಂತೆವು’ ಎಂದು ಕಾಲೇಜು ತಂಡದಲ್ಲಿ ಕ್ರಿಕೆಟ್ ಆಡಿದ್ದ ಮುರಳಿ ಕೃಷ್ಣ ಹೇಳಿದರು.

ಕೀಲು ನೋವು, ಸ್ನಾಯು ನೋವು, ಸೊಂಟ ನೋವು, ತಲೆಶೂಲೆ, ಸ್ನಾಯು ಸೆಳೆತ, ಉಳುಕು, ಊತ, ಹಳೆಯ ಗಾಯದ ನೋವು, ಕತ್ತು ಸೆಳೆತ, ಮೀನಗಂಡ ನೋವು, ಭುಜದ ನೋವು, ಹಿಮ್ಮಡಿ ನೋವು, ಮಣಿಕಟ್ಟು ನೋವು, ಸಂಧಿವಾತ, ನರಗಳಿಗೆ ಸಂಬಂಧಿತ ಎಲ್ಲಾ ಸಮಸ್ಯೆಗಳು, ತೀವ್ರತರ ಶೀತದಿಂದ ಉಂಟಾಗುವ ನೋವು, ನೋವಿನಿಂದಾಗಿ ಕಾರ್ಯಕ್ಷಮತೆ ಕುಗ್ಗುವಿಕೆ ಮತ್ತು ಇನ್ನಿತರ ಎಲ್ಲಾ ರೀತಿಯ ನೋವುಗಳ ನಿವಾರಣೆಗೆ ಇದು ಬಹು ಪ್ರಯೋಜನಕಾರಿ ಹಾಗೂ ಪರಿಣಾಮಕಾರಿಯಾಗಿದೆ.

ಸೂಚನೆ : ಈ ಮಾಹಿತಿಯನ್ನು ಸಮುದಾಯದ ಒಳಿತಿಗಾಗಿ ನೀಡಲಾಗುತ್ತಿದ್ದು, ತಕ್ಷಣವೇ ಲಾಭ ಪಡೆದುಕೊಳ್ಳಬೇಕೆಂದು ಕೋರಲಾಗಿದೆ.

ಬಳಸುವ ವಿಧಾನ : ಪ್ರತಿದಿನ ೮–೧೦ ಮಿ.ಲೀ ತೈಲವನ್ನು ಮೂರು ಬಾರಿ ತೆಗೆದುಕೊಳ್ಳಿ ಮತ್ತು ೧೫–೨೦ ನಿಮಿಷ ಮಸಾಜ್ ಮಾಡಿಕೊಳ್ಳಿ. ತೈಲವನ್ನು ಧಾರಾಳವಾಗಿ ಬಳಸಲು ಹಿಂಜರಿಯದಿರಿ. ಸಾಕಷ್ಟು ಪ್ರಮಾಣದ ತೈಲವನ್ನು ತೆಗೆದುಕೊಳ್ಳಿ ಮತ್ತು ತೈಲವು ಕೀಲುಗಳ, ಮೂಳೆಗಳ, ಸ್ನಾಯುಗಳ ಆಳಕ್ಕೆ ಇಳಿಯುವಂತೆ ಮಸಾಜ್ ಮಾಡಿರಿ. ಏಕೆಂದರೆ ನೋವು ಕೀಲು, ಮೂಳೆ, ಸ್ನಾಯುಗಳಲ್ಲಿ ಉಂಟಾಗುತ್ತದೆಯೆ ಹೊರತು ತ್ವಚೆಯ ಮೇಲ್ಭಾಗದಲ್ಲಿ ಅಲ್ಲ. ಕಡಿಮೆ ಪ್ರಮಾಣದ ತೈಲದಿಂದ ಮಸಾಜ್ ಮಾಡಿದಲ್ಲಿ ಅದು ಆಳದವರೆಗೆ ಪರಿಣಾಮ ಬೀರಲಾರದು. ಉತ್ತಮ ಪರಿಣಾಮ ಪಡೆಯಲು ಚತುರ್ಭುಜ ತೈಲದ ಜೊತೆಗೆ, ಬೆಳಿಗ್ಗೆ 1 ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಕೂಡ ಸೇವಿಸಿರಿ. ಇದನ್ನು ನಿಯಮಿತವಾಗಿ ಬಳಸಿರುವ ರೋಗಿಗಳು ಸಾಕಷ್ಟು ಪ್ರಯೋಜನ ಗಳನ್ನು ಪಡೆದಿದ್ದಾರೆ.

ಎಲ್ಲಾ ಮೆಡಿಕಲ್ ಮತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ